ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಂಜು ಸ್ಫೋಟ, ಭಾರತ 253/7

ಮುಂಬೈನ ವಾಂಖೇಡೆಯಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್‌ನ 2ನೇ ಸೆಮಿಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ಬೃಹತ್ ಮೊತ್ತ ಗಳಿಸಿದೆ. ಸಂಜು ಸ್ಯಾಮ್ಸನ್ ಮತ್ತೆ ಸ್ಫೋಟಕ ಬ್ಯಾಟಿಂಗ್ ನಡೆಸಿ 89 ರನ್ ಚಚ್ಚಿದರು. ಭಾರತ 7 ವಿಕೆಟ್‌ಗೆ 253 ರನ್ ಗಳಿಸಿತು.

ಸೊಂಪಾದ ಪುಟಗಳು

ಶ್... ಗುಟ್ಟಿನ ಗುಟ್ಟನ್ನು ಹೇಳುತ್ತೇನೆ, ಯಾರಿಗೂ ಹೇಳ್ಬೇಡಿ
ಶಿಶಿರಕಾಲ
ಶಿಶಿರ್ ಹೆಗಡೆ 6

ಕುದುರೆಯ ಬಾಲ ಮನೆ ಯಂಗಳದಲ್ಲಿ!
ಶತಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ದೀಪವು ಎಷ್ಟೇ ಚಿಕ್ಕದಾಗಿರಲಿ, ಅದು ಮೈಲುಗಟ್ಟಲೆ ಹರಡಿರುವ ಕತ್ತಲೆಯನ್ನು ಸೀಳುವ ಶಕ್ತಿ ಹೊಂದಿದೆ. ಹಾಗೆಯೇ, ನಮ್ಮ ದೊಡ್ಡ ಸಮಸ್ಯೆಗೆ ನಮ್ಮ ಒಂದು ಪುಟ್ಟ ಸಕಾರಾತ್ಮಕ ಬದಲಾವಣೆ ಅಥವಾ ಪ್ರಯತ್ನವು ಇಡೀ ಜೀವನದ ದಿಕ್ಕನ್ನೇ ಬದಲಿಸಬಹುದು.

ವಕ್ರತುಂಡೋಕ್ತಿ



ಸಾಲ ಕೊಟ್ಟವರಿಗೆ ಯಾವತ್ತೂ ಪ್ರೀತಿ, ಕಾಳಜಿ. ಫೋನ್ ರಿಸೀವ್ ಮಾಡದಿದ್ದರೆ ಸಾಕು, ಮನೆಗೇ ಬಂದು ಕ್ಷೇಮ ಸಮಾಚಾರ ವಿಚಾರಿಸುತ್ತಾರೆ.

ಮಾ.9ಕ್ಕೆ ಲೋಕಸಭಾ ಸ್ಪೀಕರ್ ಬಿರ್ಲಾ ವಿರುದ್ಧ 'ಅವಿಶ್ವಾಸ' ಮತದಾನ

ದೆಹಲಿ: ಮಾರ್ಚ್ 9ರ ಸೋಮವಾರ ಲೋಕ ಸಭೆ ಅಪರೂಪದ ಕ್ಷಣಕ್ಕೆ ಸಾಕ್ಷಿಯಾಗಲಿದೆ. ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ವಿರೋಧ ಪಕ್ಷಗಳು ವ'ಂ೦ಡಿಸಿರ'ಂವ' ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಮತ್ತು ಮತದಾನ ಸೋಮವಾರ ನಡೆಯಲಿದೆ. ಚರ್ಚೆ ಮತ್ತು ಮತದಾನ ನಡೆಯುವಾಗ ಓಂ ಬಿರ್ಲಾ ಅವರು ಸಭೆಯ ಅಧ್ಯಕ್ಷತೆ ವಹಿಸುವುದಿಲ್ಲ. ಬದಲಾಗಿ ಸದಸ್ಯರ ನಡುವೆ ಕುಳಿತುಕೊಳ್ಳಲಿದ್ದಾರೆ. ಬಿರ್ಲಾ ಅವರು ಪಕ್ಷಪಾತ ಮಾಡುತ್ತಿದ್ದಾರೆ ಎಂದು ಆರೋಪಿಸಿ ಇಂಡಿ ಒಕ್ಕೂಟ ಅವಿಶ್ವಾಸ ನಿರ್ಣಯ ಮಂಡಿಸಿತ್ತು.

ಮಗುವಿಗೆ ಜನ್ಮ ನೀಡಿದ ಪರೀಕ್ಷೆಗೆ ತೆರಳಿದ 16 ವರ್ಷದ ವಿದ್ಯಾರ್ಥಿನಿ

ಹೈದರಾಬಾದ್: ತೆಲಂಗಾಣದ ನಾಗರ್ ಕರ್ನೂಲ್‌ನಲ್ಲಿ ಪರೀಕ್ಷೆ ಬರೆಯಲು ಶಾಲೆಗೆ ಬಂದಿದ್ದ 16 ವರ್ಷದ ಬಾಲಕಿ ಮಗುವಿಗೆ ಜನ್ಮ ನೀಡಿದ್ದಾಳೆ. ಬಾಲಕಿಯರ ವಸತಿ ಶಾಲೆಯ ವಿದ್ಯಾರ್ಥಿನಿಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾದಾಗ ತೀವ್ರವಾದ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಕೂಡಲೇ ಈ ಬಗ್ಗೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾಳೆ. ನಂತರ ಆಕೆಯ ತಾಯಿ ಅವಳನ್ನು ಪಟ್ಟಣದ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಈ ವೇಳೆ ವೈದ್ಯರು ಸ್ಕ್ಯಾನ್ ಮಾಡಿಸಲು ಸೂಚಿಸಿದ್ದರು. ಈ ವೇಳೆ ಬಾಲಕಿ ಶೌಚಾಲಯಕ್ಕೆ ತೆರಳಿದ್ದಳು. ಅಲ್ಲಿ ಅವಳು ಮಗುವಿಗೆ ಜನ್ಮ ನೀಡಿದ್ದಾಳೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಇಂಧನ ಸಿಗದ ಭೀತಿ, ಪೆಟ್ರೋಲ್ ಬಂಕ್‌ಗಳಲ್ಲಿ ಜನಜಂಗುಳಿ
ಸುದ್ದಿ



ದಾಖಲೆಯ 17ನೇ ಬಾರಿಗೆ ಬಜೆಟ್ ಮಂಡಿಸಲು ಸಿಎಂ ಸಿದ್ದು ಸಜ್ಜು
ಗ್ಯಾರಂಟಿ ಭಾರ, ಅಭಿವೃದ್ಧಿ, ರಾಮ್ ಜಿಗೂ ಹಣ ಕೊಡುವ ಹೊಣೆ

ಸಿದ್ದು 4.5 ಲಕ್ಷ ಕೋಟಿ ರು. ಗ್ಯಾರಂಟಿ ಬಜೆಟ್ ಇಂದು

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿರುವ ನಾಯಕತ್ವ ಗೊಂದಲ, ಗ್ಯಾರಂಟಿ ಅನುಷ್ಠಾನದ ಸವಾಲು, ಕೇಂದ್ರ ಸರಕಾರದ ಅನುದಾನ ಅಸಹಕಾರದ ನಡುವೆಯೇ, ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸಲು ಸಿದ್ಧತೆ ನಡೆಸಿದ್ದಾರೆ. 2025-26ರಲ್ಲಿ 19262 ಕೋಟಿ ರು. ಆದಾಯ ಕೊರತೆಯ 4,09,549 ಕೋಟಿ ರು. ಮೊತ್ತದ ಬಜೆಟ್‌ಅನ್ನು ಸಿಎಂ ಸಿದ್ದರಾಮಯ್ಯ ಮಂಡಿಸಿದ್ದರು. ಆಗ ಅದು ದಾಖಲೆಯಾಗಿತ್ತು. ಈ ಬಾರಿ ಕರ್ನಾಟಕದ ಬಜೆಟ್ 4.50 ಲಕ್ಷ ಕೋಟಿ ರು. ಆಸುಪಾಸಿನಲ್ಲಿರಲಿದೆ ಎಂದು ನಿರೀಕ್ಷಿಸಲಾಗಿದೆ. ಪಂಚ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಹೊಂದಿಸುವ ಜತೆಜತೆಗೆ ಅಭಿವೃದ್ಧಿಗೂ ಒತ್ತು ನೀಡಬೇಕಾದ ಒತ್ತಡದಲ್ಲಿ ರಾಜ್ಯ ಸರಕಾರವಿದೆ.

ಹೊಸ ಜನಪರ ಕಾರ್ಯಕ್ರಮಗಳನ್ನು ಘೋಷಿಸಿ ಅವುಗಳಿಗೂ ಸಂಪನ್ಮೂಲ ಒದಗಿಸುವ ಸವಾಲನ್ನು ಯಾವ ರೀತಿ ನಿಭಾಯಿಸುತ್ತಾರೆ ಎನ್ನುವ ಕುತೂಹಲ ವಿದೆ. ಬಜೆಟ್‌ನಲ್ಲಿ ಗ್ಯಾರಂಟಿ ಅನುಷ್ಠಾನಕ್ಕೆ ಅನುದಾನದೊಂದಿಗೆ ವಿಧಾನಸಭಾ ಚುನಾವಣಾ ಸಮಯದಲ್ಲಿ ಘೋಷಿಸಿದ್ದ, ಒಪಿಎಸ್ ಮರು ಜಾರಿ, ಗುತ್ತಿಗೆದಾರರ ಬಿಲ್ ಪಾವತಿ ಸೇರಿದಂತೆ ಕೃಷ್ಣಾ ಮೇಲ್ದಂಡೆ 3ನೇ ಹಂತದ ಭೂಸ್ವಾಧೀನಕ್ಕೆ ಅನುದಾನ ಮೀಸಲಿಡ ಬೇಕಾಗಿದೆ. ಇದರೊಂದಿಗೆ ಆರೋಗ್ಯ ಇಲಾಖೆ ವತಿಯಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಕ್ಯಾನಿಂಗ್, ಎಂಆರ್‌ಐ ಯಂತ್ರಗಳನ್ನು ಸರಕಾರ ಅಳವಡಿಸಲು ಚರ್ಚೆಗಳು ನಡೆದಿವೆ.

230 ಬಸ್ ನಿಲ್ದಾಣಗಳಲ್ಲಿ ನೇರಪ್ರಸಾರ

ರಾಜ್ಯದ ಬಸ್ ನಿಲ್ದಾಣಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಾಖಲೆಯ ಬಜೆಟ್ ಮಂಡನೆಯ ನೇರಪ್ರಸಾರವಾಗಲಿದೆ. ಆಯ್ದ 230 ಬಸ್ ನಿಲ್ದಾಣದ ಟಿವಿಗಳಲ್ಲಿ ನೇರಪ್ರಸಾರ ಮಾಡಲಾಗುತ್ತದೆ. ನೇರಪ್ರಸಾರವನ್ನು ವೃತ್ತಿ ಸೊಲ್ಯೂಷನ್ಸ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗ ದೊಂದಿಗೆ ಡಿಜಿಟಲ್ ಪರದೆಗಳ ಮೂಲಕ ಪ್ರಸಾರ ಮಾಡಲಾಗುತ್ತದೆ. ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ಮುಖ್ಯಮಂತ್ರಿಗಳ ಸುದ್ದಿಗೋಷ್ಠಿ ನೇರಪ್ರಸಾರದಲ್ಲಿ ಸೇರಿರುತ್ತದೆ.

ನಿರೀಕ್ಷೆಗಳೇನು?

- ಶುಕ್ರವಾರ ಬೆಳಗ್ಗೆ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಬಜೆಟ್‌ಗೆ ಅನುಮೋದನೆ
- ಬೆಳಗ್ಗೆ 10.15ಕ್ಕೆ ಸಿಎಂ ಸಿದ್ದರಾಮಯ್ಯನವರಿಂದ ವಿಧಾನಸೌಧದಲ್ಲಿ ಬಜೆಟ್ ಮಂಡನೆ
- ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಭೂಸ್ವಾಧೀನಕ್ಕೆ ದೊಡ್ಡ ಅನುದಾನದ ನಿರೀಕ್ಷೆ
- ಸ್ಥಳೀಯ ಸಂಸ್ಥೆ ಚುನಾವಣೆ ಹಿನ್ನೆಲೆಯಲ್ಲಿ ಜನಪ್ರಿಯ ಘೋಷಣೆ ಸಾಧ್ಯತೆ
- ಜಿ ರಾಮ್ ಜಿಗೆ 10000 ಕೋಟಿ ರು. ಅನುದಾನ ಮೀಸಲಿಡುವ ಸವಾಲು

ಸಿದ್ದರಾಮಯ್ಯ ಬಜೆಟ್ ಇತಿಹಾಸ

	1995-96	1997-98	1999-2000	2004-05	2013-14
ಬಜೆಟ್ ಗಾತ್ರ:	10,859 ಕೋಟಿ ರು.	13,456.68 ಕೋಟಿ ರು.	17,818.63 ಕೋಟಿ ರು.	31,591.88 ಕೋಟಿ ರು.	1,21,611 ಕೋಟಿ ರು.
ಆದಾಯ ಕೊರತೆ:	83 ಕೋಟಿ ರು.	96.85 ಕೋಟಿ ರು.	71.27 ಕೋಟಿ ರು.	72.83 ಕೋಟಿ ರು.	596 ಕೋಟಿ ರು.
ಸಾಲ:	1,309 ಕೋಟಿ ರು.	1,610.52 ಕೋಟಿ ರು.	3,173 ಕೋಟಿ ರು.	3,910 ಕೋಟಿ ರು.	18,801 ಕೋಟಿ ರು.

	2016-17	2023-24	2025-26
ಬಜೆಟ್ ಗಾತ್ರ:	1,63,419 ಕೋಟಿ ರು.	3,27,747 ಕೋಟಿ ರು.	4,09,549 ಕೋಟಿ ರು.
ಆದಾಯ ಕೊರತೆ:	522 ಕೋಟಿ ರು.	12,523 ಕೋಟಿ ರು.	19,262 ಕೋಟಿ ರು.
ಸಾಲ:	31,036ಕೋಟಿ ರು.	85,818 ಕೋಟಿ ರು.	1,16,000 ಕೋಟಿ ರು.

ಮೊದಲ ಅವಧಿಯಲ್ಲಿ ಉಳಿತಾಯ, ಈಗ ಕೊರತೆ

ಸಿದ್ದರಾಮಯ್ಯ ಅವರು ಮೊದಲ ಅವಧಿಗೆ ಮುಖ್ಯಮಂತ್ರಿಯಾಗಿ ಐದು ವರ್ಷ ಆಡಳಿತ ನಡೆಸಿ, ಬಜೆಟ್ ಮಂಡಿಸಿದಾಗ ಉಳಿತಾಯದ ಬಜೆಟ್ ಮಂಡಿಸಿದ್ದರು. ಆದರೆ ಎರಡನೇ ಅವಧಿಯಲ್ಲಿ ಸಾಲದ ಮೊತ್ತ ಭಾರಿ ಏರಿಕೆಯಾಗಿದ್ದರಿಂದ ಹಾಗೂ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಹೊಂದಿಸುವ ಇಕ್ಕಟ್ಟಿಗೆ ಸಿಲುಕಿಸಿದ್ದರಿಂದ ಆದಾಯ ಕೊರತೆಯ ಬಜೆಟ್ ಜತೆಜತೆಗೆ ಸಾಲದ ಪ್ರಮಾಣವೂ ಹೆಚ್ಚಾಗಿದೆ ಎನ್ನುವ ಮಾತುಗಳು ಕೇಳಿಬಂದಿವೆ.

→ 4

ಭಯಾನಕ ಡೂಮ್ಸ್ ಡೇ ಕ್ಷಿಪಣಿ ಪರೀಕ್ಷೆ ನಡೆಸಿದ ಅಮೆರಿಕ
ಇರಾನ್ ಮೇಲೆ ಪರಮಾಣು ಬಾಂಬ್ ದಾಳಿ ಸಂದೇಶ ರವಾನೆ

ಎಲ್ಲೆಲ್ಲೂ ಸ್ಫೋಟ, ಡೂಮ್ಸ್ ಡೇ ಆತಂಕ, ಯುದ್ಧ ಇನ್ನೂ ಕರಾಳ

ದೆಹಲಿ: ಅಮೆರಿಕ-ಇಸ್ರೇಲ್-ಇರಾನ್ ಯುದ್ಧ 6ನೇ ದಿನಕ್ಕೆ ಕಾಲಿಟ್ಟಿದೆ. ಸಾವಿನ ಸಂಖ್ಯೆ 1500 ಅನ್ನು ಸಮೀಪಿಸುತ್ತಿದೆ. ಯುದ್ಧ ಭಾರತದ ಕಾಲಬಳಿಗೇ ಬಂದಿದೆ. ಇರಾನಿನ ಒಂದು ನೌಕೆಯನ್ನು ಅಮೆರಿಕ ಹಿಂದೂ ಮಹಾಸಾಗರದಲ್ಲಿ ಹೊಡೆದು ಮುಳುಗಿಸಿದೆ, ಇದರ ಬೆನ್ನಲ್ಲೇ ಇನ್ನೊಂದು ಇರಾನ್ ನೌಕೆಗೂ ಭೀತಿಯಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ನಾಯಕತ್ವವನ್ನು ಯಾರೇ ವಹಿಸಿದರೂ ಅವರಿಗೆ ಸಾವು ಕಾದಿದೆ ಎಂದು ನೇರಾನೇರವಾಗಿ ಹೇಳಿದ್ದಾರೆ. ಇದು ಖಮೇನಿ ಪುತ್ರ ಮೊಜ್ತಬಾರಿಗೆ ಎದುರಾದ ನೇರ ಸವಾಲು.

ಯುದ್ಧ ಭಾರತಕ್ಕೂ ಹತ್ತಾರು ರೀತಿಯಲ್ಲಿ ಸಮಸ್ಯೆ ತಂದೊಡ್ಡಿದೆ. ಸದ್ಯ ಭಾರತದ ಬಳಿ 20ಕ್ಕೂ ಅಧಿಕ ದಿನಗಳಿಗಾಗುವಷ್ಟು ತೈಲಸಂಗ್ರಹವಿದ್ದರೂ, ಯುದ್ಧ ಮುಂದುವರಿದಂತೆ ತೈಲಪೂರೈಕೆ ಕಡಿಮೆಯಾಗುತ್ತದೆ. ಆಗ ಸಮಸ್ಯೆ ಖಚಿತ. ಸದ್ಯ ಭಾರತದ ನೆರವಿಗೆ ರಷ್ಯಾ ಧಾವಿಸಿದ್ದು, ತಕ್ಷಣವೇ 22.25 ಕೋಟಿ ಲೀಟರ್ ತೈಲಪೂರೈಕೆ ಸಜ್ಜಾಗಿದೆ ಎಂದು ಮೂಲಗಳು ಹೇಳಿವೆ. ಇನ್ನು ಕೇಂದ್ರ ತೈಲ ಸಂಸ್ಥೆಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಹೆಚ್ಚಿಸುವುದು ಖಾತ್ರಿಯಾಗಿದೆ. ಹೋಟೆಲ್ ಗ್ರಾಹಕರಿಗೆ ಬಿಸಿ ಖಚಿತ.

ಇದೇ ಮೊದಲ ಬಾರಿಗೆ ಭಾರತ ಸರ್ಕಾರ ಇರಾನ್ ಮಾಜಿ ಪರಮೋಚ್ಚ ಧಾರ್ಮಿಕ ನಾಯಕ ಆಯ ತೊಲ್ಲ ಅಲಿ ಖಮೇನಿ ಹತ್ಯೆಗೆ ಸಂತಾಪ ಸೂಚಿಸಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿ, ಯಾವುದೇ ಸಮಸ್ಯೆ ಪರಿಹಾರಕ್ಕೆ ಯುದ್ಧಮಾರ್ಗವಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಿಗೆ ಭಾರತ ಯುದ್ಧದ ಪರವಾಗಿಲ್ಲ ಎಂಬ ಸಂದೇಶ ನೀಡಿದ್ದಾರೆ. ಇದು ಅಮೆರಿಕ-ಇಸ್ರೇಲ್ ಸೇರಿದಂತೆ ಯುದ್ಧದಾಹಿ ದೇಶಗಳಿಗೆ ಭಾರತ ನೀಡಿದ ಸಂದೇಶ.

ಅಮೆರಿಕ ಜಗತ್ತಿನ ಯಾವುದೇ ಮೂಲೆಗಳಿಗೆ ತಲುಪಬಹುದಾದ ಡೂಮ್ಸ್‌ಡೇ ಪರಮಾಣು ಕ್ಷಿಪಣಿಯ ಪರೀಕ್ಷೆ ನಡೆಸುವ ಮೂಲಕ ಇರಾನ್‌ಗೆ ಪರೋಕ್ಷ ಎಚ್ಚರಿಕೆ ನೀಡಿದೆ. ಇದು ಇಡೀ ಜಗತ್ತಿಗೇ ಆತಂಕ ಹುಟ್ಟಿಸಿದೆ. ಇರಾನ್‌ನ ಡ್ರೋನ್ ಒಂದು ಅಜರ್ಬೈಜಾನ್‌ಗೆ ಅಪ್ಪಳಿಸಿದೆ, ಕುವೈತ್‌ನಲ್ಲಿರುವ ಅಮೆರಿಕ ಸೇನಾನೆಲೆಗಳ ಮೇಲೆ ದಾಳಿ ಮಾಡಲಾಗಿದೆ, ಇಸ್ರೇಲ್‌ನಲ್ಲಿರುವ ರಾಡಾರ್ ಕೇಂದ್ರದ ಮೇಲೆ ದಾಳಿ ಮಾಡಲಾಗಿದೆ ಎಂದು ಇರಾನ್ ಹೇಳಿಕೊಂಡಿದೆ.

ಜಗತ್ತಿನ ಯಾವುದೇ ಮೂಲೆ ತಲುಪುತ್ತೆ ಡೂಮ್ಸ್ ಡೇ ಕ್ಷಿಪಣಿ

ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಮಂಗಳವಾರ ರಾತ್ರಿ ವಿನಾಶಕಾರಿ ಡೂಮ್ಸ್ ಡೇ ಕ್ಷಿಪಣಿಯನ್ನು ಅಮೆರಿಕ ಪರೀಕ್ಷಿಸಿದೆ. ಮಿನುಟ್‌ಮ್ಯಾನ್-3 ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಸಾಂಟಾ ಬಾರ್ಬರಾ ಬಳಿಯ ವ್ಯಾಂಡೆನ್‌ಬರ್ಗ್ ಬಾಹ್ಯಾಕಾಶ ಪಡೆ ನೆಲೆಯಿಂದ ರಾತ್ರಿ 11 ಗಂಟೆಗೆ ಉಡಾಯಿಸಿದೆ. ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಬೀಳಿಸಿದ ಪರಮಾಣು ಬಾಂಬ್‌ಗಿಂತಲೂ 20 ಪಟ್ಟು ಹೆಚ್ಚು ಶಕ್ತಿಶಾಲಿ ಪರಮಾಣು ಸಿಡಿತಲೆ ಹೊತ್ತೊಯ್ಯುವ ಸಾಮರ್ಥ್ಯವನ್ನು ಇದು ಹೊಂದಿದೆ.

ಎಲ್ಲಿ, ಯಾರ ದಾಳಿ?

ಇರಾಖ್‌ಗೂ ನುಗ್ಗಿದ ಇರಾನ್ ಡ್ರೋನ್ ನಾಶ

ಬುಧವಾರ ತಡರಾತ್ರಿ, ಇರಾನ್ ಡ್ರೋನ್ ಒಂದು ಇರಾಖ್‌ನೊಳಕ್ಕೆ ನುಗ್ಗಿದೆ. ಬಾಗ್ದಾದ್ ವಿಮಾನ ನಿಲ್ದಾಣಕ್ಕೆ ಸನಿಹವಿರುವ ಅಮೆರಿಕ ಸೇನಾನೆಲೆ ಗುರಿಯಾಗಿಸಿಕೊಂಡು ಮಾಡಿದ ದಾಳಿಯನ್ನು ಇರಾಖ್ ಸೇನಾಪಡೆಗಳು ವಿಫಲಗೊಳಿಸಲು ಯಶಸ್ವಿಯಾಗಿವೆ.

ಬೈರೂತ್ ತೊರೆಯಿರಿ: ಇಸ್ರೇಲ್ ಸೂಚನೆ

ಲೆಬನಾನ್ ರಾಜಧಾನಿ ಬೈರೂತ್ ಮೇಲಿನ ದಾಳಿ ತೀವ್ರಗೊಳಿಸಿರುವ ಇಸ್ರೇಲ್, ಅಲ್ಲಿನ ಹೆಜ್ಬುಲ್ಲಾ ಉಗ್ರ ನಿಯಂತ್ರಿತ ಪ್ರದೇಶಗಳನ್ನು ತೊರೆಯುವಂತೆ ಜನರಿಗೆ ಸೂಚಿಸಿದೆ. ಪೂರ್ವ ಇಲ್ಲ ಉತ್ತರಕ್ಕೆ ತೆರಳಿ ಎಂದು ತಿಳಿಸಿದೆ.

ಅಜರ್ಬೈಜಾನ್‌ನಲ್ಲಿ 2 ಡ್ರೋನ್ ಸ್ಫೋಟ

ಇರಾನ್‌ನ ಡ್ರೋನ್‌ವೊಂದು ಅಜರ್‌ಬೈಜಾನ್‌ನ ಸ್ವಾಯತ್ತ ಪ್ರದೇಶ ನಕ್ಷಿವನ್ ಪ್ರದೇಶಕ್ಕೆ ಅಪ್ಪಳಿಸಿದೆ. ಅಲ್ಲಿಗೆ ಮಧ್ಯಪ್ರಾಚ್ಯದಲ್ಲಿ ಇನ್ನೊಂದು ಅರಬ್ ದೇಶ ದಾಳಿ ವ್ಯಾಪ್ತಿಗೆ ಬಂದಿದೆ. ಗುರುವಾರ ಮಧ್ಯಾಹ್ನ 12 ಗಂಟೆ ಹೊತ್ತಿಗೆ ಅಮೆರಿಕದ ಸೇನಾನೆಲೆ ಗುರಿ ಮಾಡಿ ಈ ದಾಳಿ ನಡೆದಿದೆ. ಇನ್ನೊಂದು ಸನಿಹದ ಶಾಲೆಯೊಂದಕ್ಕೆ ಬಡಿದಿದೆ. ಇದರಿಂದ ಇಬ್ಬರು ನಾಗರಿಕರಿಗೆ ಗಾಯವಾಗಿದೆ.

ಕುವೈತ್ ಮೇಲೆ ಮತ್ತೆ ಡ್ರೋನ್ ದಾಳಿ

ಕುವೈತ್‌ನ ಉದೈರಿಯಲ್ಲಿರುವ ಅಮೆರಿಕ ಸೇನಾನೆಲೆ ಮೇಲೆ ಮತ್ತೆ ಡ್ರೋನ್‌ನಿಂದ ದಾಳಿ ಮಾಡಲಾಗಿದೆ ಎಂದು ಇರಾನ್ ತಿಳಿಸಿದೆ. ಇದರಿಂದ ಆಗಿರುವ ಹಾನಿ ಬಗ್ಗೆ ಮಾಹಿತಿ ತಿಳಿದುಬಂದಿಲ್ಲ. → 4

ವಾಣಿಜ್ಯ ಸಿಲಿಂಡರ್ ರಿಯಾಯ್ತಿ ರದ್ದು, ಬೆಲೆಯೇರಿಕೆ ಭೀತಿ

ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಅನಿಲ ಪೂರೈಕೆ ಮೇಲೂ ಪರಿಣಾಮ ಬೀರಿದೆ. ಹೀಗಾಗಿ ವಾಣಿಜ್ಯ ಸಿಲಿಂಡರ್‌ಗಳಿಗೆ ನೀಡಲಾಗಿದ್ದ ರಿಯಾಯಿತಿಗಳನ್ನು ಸ್ಥಗಿತಗೊಳಿಸಿರು ವುದಾಗಿ ಇಂಡಿಯನ್ ಆಯಿಲ್ ನಿಗಮ ತಿಳಿಸಿದೆ. 19 ಕೆಜಿ ಮತ್ತು 47 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ರಿಯಾಯಿತಿಗಳನ್ನು ರದ್ದು ಮಾಡಿ ರುವುದರಿಂದ ಹೋಟೆಲ್‌ಗಳಲ್ಲಿ ಬೆಲೆಯೇರ ಲಿದೆ. ಸದ್ಯ ಬೆಂಗಳೂರಿನಲ್ಲಿ 19 ಕೆಜಿಯ ಸಿಲಿಂಡರ್ ದರ 1,814 ರು. ಮತ್ತು 47.5 ಕೆಜಿ ಸಿಲಿಂಡರ್ ದರ 4,532 ರು. ಇದೆ.

95 ಮಿಲಿಯನ್ ಬ್ಯಾರೆಲ್ ರಷ್ಯಾ ತೈಲ ಭಾರತಕ್ಕೆ

ಯುದ್ಧದಿಂದ ತೈಲ ಕೊರತೆಯ ಭೀತಿ ಎದುರಿಸುತ್ತಿರುವ ಭಾರತಕ್ಕೆ ರಷ್ಯಾ ನೆರವಾಗಿದೆ. ಸುಮಾರು 95 ಮಿಲಿಯನ್ ಬ್ಯಾರೆಲ್ ರಷ್ಯನ್ ಕಚ್ಚಾ ತೈಲ ಈಗಾಗಲೇ ಭಾರತೀಯ ಸಮುದ್ರ ಗಡಿಯ ಸಮೀಪದಲ್ಲಿರುವ ಹಡಗುಗಳಲ್ಲಿ ಲಭ್ಯವಿದ್ದು, ಇದು ಕೆಲವು ವಾರಗಳಲ್ಲಿ ಭಾರತಕ್ಕೆ ತಲುಪುವ ಸಾಧ್ಯತೆ ಇದೆ. ಮೊದಲ ಹಂತವಾಗಿ 22.25 ಕೋಟಿ ಲೀಟರ್ ಹೊತ್ತ 2 ತೈಲ ಟ್ಯಾಂಕರ್‌ಗಳು ಭಾರತದತ್ತ ಹೊರಟಿವೆ.

ಬಿಹಾರ ಸಿಎಂ ನಿತೀಶ್ ರಾಜ್ಯಸಭೆಗೆ

ಪಾಟ್ನಾ: ನಿರೀಕ್ಷೆಯಂತೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಗುರುವಾರ ಎನ್‌ಡಿಎ ರಾಜ್ಯಸಭಾ ಅಭ್ಯರ್ಥಿಯಾಗಿ ಪಾಟ್ನಾದಲ್ಲಿ ನಾಮಪತ್ರ ಸಲ್ಲಿಕೆ ಮಾಡಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ನಿತೀಶ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಉಪೇಂದ್ರ ಕುಶ್ವಾಹ ಮತ್ತು ಶಿವೇಶ್ ಕುಮಾರ್ ನಾಮಪತ್ರ ಸಲ್ಲಿಸಿದರು. ಅಲ್ಲಿಗೆ ಬಿಹಾರಕ್ಕೆ ಬಿಜೆಪಿ ನಾಯಕರೊಬ್ಬರು ಮುಖ್ಯ ಮಂತ್ರಿಯಾಗುವುದು ಖಚಿತವಾಗಿದೆ.

ನಾಮಪತ್ರ ಸಲ್ಲಿಕೆಗೂ ಮೊದಲು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ನಿತೀಶ್, ನನ್ನ ಸಂಸದೀಯ ಪ್ರಯಾಣದ ಆರಂಭದಲ್ಲೇ ಬಿಹಾರ ವಿಧಾನಸಭೆಯ ಎರಡೂ ಸದನಗಳ ಹಾಗೂ ಸಂಸತ್ತಿನ ಎರಡೂ ಸದನಗಳ ಸದಸ್ಯನಾಗುವ ಬಯಕೆಯನ್ನು ಹೊಂದಿದ್ದೆ. ಈ ಆಕಾಂಕ್ಷೆಯಂತೆ ಈ ಬಾರಿ ನಡೆಯುತ್ತಿರುವ ಚುನಾವಣೆಯಲ್ಲಿ ರಾಜ್ಯಸಭೆಯ ಸದಸ್ಯನಾಗಲು ನಾನು ಬಯಸುತ್ತೇನೆ ಎಂದು ಬರೆದಿದ್ದಾರೆ. → 4

ಬಿಎಸ್‌ವೈ- ಸಿದ್ದೇಶ್ವರ ಭಿನ್ನರಾಗ

ದಾವಣಗೆರೆ: ರಾಜ್ಯ ಬಿಜೆಪಿಯಲ್ಲಿ ಒಳಗೊಳಗೇ ಆಂತರಿಕ ಕಲಹವೊಂದು ಶುರುವಾಗಿದೆ. ದಾವಣಗೆರೆ ಜಿಲ್ಲೆಯ ಪ್ರಭಾವಿ ನಾಯಕ, ಮಾಜಿ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಣಗಳ ನಡುವೆ ಸಂಘರ್ಷ ತೀವ್ರಗೊಂಡಿದೆ. ಎಂದು ಮೂಲಗಳು ಹೇಳಿವೆ. ಒಂದು ಜಿಲ್ಲೆಗೆ ಸೀಮಿತ ಎನ್ನಲಾದ ಈ ಜಗಳವನ್ನು ತಿಳಿಗೊಳಿಸಲು ಸ್ವತಃ ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ ದಾಸ್ ಅಗರವಾಲ್ ಅವರೇ ಆಗಮಿಸಿದ್ದಾರೆ. ಯಡಿಯೂರಪ್ಪ ಪುತ್ರ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಗರದ ಜಿಎಂಐಟಿ ಅತಿಥಿ ಗೃಹದಲ್ಲಿ ಗುರುವಾರ ಸಿದ್ದೇಶ್ವರರನ್ನು ಭೇಟಿ ಮಾಡಿ, ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚಿಸಿದ್ದಾರೆ. ಭಿನ್ನಮತ ತುಸು ಶಮನವಾಗಿದೆ ಎನ್ನಲಾಗಿದೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೂ 2 ವರ್ಷಗಳಿಗೂ ಅಧಿಕ ಸಮಯವಿದೆ. ಹಾಗಿದ್ದರೂ ದಾವಣಗೆರೆ ದಕ್ಷಿಣ ಉಪ ಚುನಾವಣೆ ಹಾಗೂ ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಧಾನಸಭಾ ಕ್ಷೇತ್ರಗಳಿಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಹೊನ್ನಾಳ್ಳಿಯಲ್ಲಿ ಅಭ್ಯರ್ಥಿ ಘೋಷಣೆ ಮಾಡಿದ್ದಾರೆ. → 4

ಪ.ಬಂಗಾಳ ರಾಜ್ಯಪಾಲ ಬೋಸ್ ರಾಜೀನಾಮೆ

ದೆಹಲಿ: ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ.ಆನಂದ ಬೋಸ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ನವೆಂಬರ್ 2022ರಲ್ಲಿ ಅಧಿಕಾರ ಸ್ವೀಕರಿಸಿದ್ದ ಆನಂದ ಬೋಸ್ ರಾಜ್ಯ ವಿಧಾನಸಭಾ ಚುನಾವಣೆಗೆ ಮುನ್ನ ತಮ್ಮ ಸ್ಥಾನಕ್ಕೆ ದೆಹಲಿಯಲ್ಲಿ ರಾಜೀ ನಾಮೆ ಸಲ್ಲಿಸಿದ್ದಾರೆ. ರಾಜೀನಾಮೆ ನೀಡಿದ ಬಳಿಕ ಪ್ರತಿಕ್ರಿಯಿಸಿದ ಅವರು, ರಾಜ್ಯಪಾಲರ ಕಚೇರಿಯಲ್ಲಿ ಸಾಕಷ್ಟು ಸಮಯ ಕಳೆದಿರುವುದರಿಂದ ಮುಂದೆ ಮುಂದುವರಿಯಲು ಬಯಸುವುದಿಲ್ಲ ಎಂದು ಹೇಳಿದರು. ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿ, ಗೃಹ ಸಚಿವ ಅಮಿತ್ ಶಾ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿಯನ್ನು ರಾಜ್ಯಪಾಲರನ್ನಾಗಿ ನೇಮಿಸಲಿದ್ದಾರೆ ಎನ್ನುವ ಮೂಲಕ ಕಿಡಿಕಾರಿದ್ದಾರೆ.

ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ್ದ ಮುಸ್ಲಿಮರ ವಿರುದ್ಧ ಕ್ರಮ
ಮೌಲ್ವಿಗಳ ಮೇಲೆ ದಾಳಿ ಪ್ರಕರಣ: ಐವರಿಗೆ ನ್ಯಾಯಾಂಗ ಬಂಧನ

ಬೀದರ್ ಸಂಘರ್ಷ: 20 ಬಂಧನ

ಬೀದರ್: ಇಬ್ಬರು ಮೌಲ್ವಿಗಳ ಮೇಲೆ ಅನ್ಯಕೋಮಿನ ಜನರು ಬುಧವಾರ ಹಲ್ಲೆ ಮಾಡಿದ್ದಾರೆ ಎನ್ನಲಾದ ಪ್ರಕರಣದಲ್ಲಿ 20 ಮಂದಿಯನ್ನು ಬೀದರ್ ಪೊಲೀಸರು ಬಂಧಿಸಿದ್ದಾರೆ. ಹಲ್ಲೆ ಆರೋಪದ ಹಿನ್ನೆಲೆಯಲ್ಲಿ ಸಾವಿರಾರು ಮುಸ್ಲಿಮರು ಬುಧವಾರ ಬೀದರ್‌ನ ಬಸವಕಲ್ಯಾಣ ಪೊಲೀಸ್ ಠಾಣೆಯೆದುರು ತೀವ್ರ ಸಂಘರ್ಷ ನಡೆಸಿದ್ದರು. ಪೊಲೀಸರ ಮೇಲೆಯೇ ಕಲ್ಲೆಸೆದಿದ್ದಾರೆ ಎನ್ನಲಾಗಿತ್ತು. ಈ ಘಟನೆಯಲ್ಲಿ ಎಎಸ್‌ಐ ಮುಕ್ತಾರ ಪಟೇಲ್‌ಗೂ ಗಾಯಗಳಾಗಿದ್ದರಿಂದ ಸಂಘರ್ಷ ನಡೆಸಿದವರ ಪೈಕಿ 49 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಬಸವಕಲ್ಯಾಣ ನಗರ ಠಾಣೆ ಮೇಲೆ ಉದ್ರಿಕ್ತರು ಕಲ್ಲು ತೂರಾಟ ನಡೆಸಿದ್ದು, ಠಾಣೆ ಮುಂದೆ ನಿಂತಿದ್ದ ಡಿಎಆರ್ ವ್ಯಾನ್‌ಗೆ ಹಾನಿಯಾಗಿತ್ತು. ಪೊಲೀಸ್ ಇಲಾಖೆಯ ಆಸ್ತಿಪಾಸ್ತಿ ಹಾನಿ ಹಾಗೂ ಪೊಲೀಸರ ಮೇಲೆ ಹಲ್ಲೆಗೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಲಾಗಿದೆ. ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಘಟನೆಯಾದ ಸ್ಥಳದ ಸುತ್ತಲಿನ ಸಿಸಿಟಿವಿ ದೃಶ್ಯ ಆಧರಿಸಿ ಬಸವಕಲ್ಯಾಣ ಪೊಲೀಸರು ಇನ್ನಷ್ಟು ಆರೋಪಿಗಳನ್ನು ಪತ್ತೆ ಹಚ್ಚುತ್ತಿದ್ದಾರೆ. ಮೌಲ್ವಿಗಳ ಮೇಲೆ ಹಲ್ಲೆ ಮಾಡಿದ್ದಾರೆ ಎನ್ನಲಾದ 5 ಅನ್ಯಕೋಮಿನ ವ್ಯಕ್ತಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಘಟನೆಯಾದ ಸ್ಥಳದ ಸುತ್ತಲಿನ ಸಿಸಿಟಿವಿ ದೃಶ್ಯ ಆಧರಿಸಿ ಬಸವಕಲ್ಯಾಣ ಪೊಲೀಸರು ಆರೋಪಿಗಳ ಪತ್ತೆ ಹಚ್ಚುತ್ತಿದ್ದಾರೆ.

ರಾಜ್ಯ ಸಚಿವ ಸಂಪುಟ ಸಭೆಯಲ್ಲಿಯೂ ದಲಿತ ನಾಯಕರ ನಡುವೆಯೇ ತಕರಾರು
ಶೇ.15 ಮೀಸಲಿನಲ್ಲೇ ಒಳಮೀಸಲಿಗೆ ಎಡಗೈ ಆಗ್ರಹ | ಈ ದಾರಿಗೆ ಬಲಗೈ ವಿರೋಧ

ದಲಿತರ ಒಳಮೀಸಲು: ಭಿನ್ನಮತ ಇನ್ನೂ ಹೆಚ್ಚಳ

ಬೆಂಗಳೂರು: ದಲಿತ ಸಮುದಾಯ ಎಡಗೈ, ಬಲಗೈ ಗುಂಪಿಗೆ ಒಳಮೀಸಲು ಹಂಚಿಕೆ ವಿಷಯದಲ್ಲಿ ಸಚಿವ ಸಂಪುಟದಲ್ಲಿಯೇ ಉದ್ಭವಿಸಿರುವ ಭಿನ್ನಾಭಿಪ್ರಾಯದ ಇಕ್ಕಟ್ಟಿಗೆ ರಾಜ್ಯ ಸರಕಾರ ಸಿಲುಕಿದೆ. ಈ ಸಂಬಂಧ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಯಾವುದೇ ರೀತಿಯ ತೀರ್ಮಾನವಾಗಿಲ್ಲ, ಗೊಂದಲದಲ್ಲಿಯೇ ಸಭೆಯನ್ನು ಮುಂದೂಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲು ವಿಷಯದಲ್ಲಿ ಎಡಗೈ ಹಾಗೂ ಬಲಗೈ ಸಮುದಾಯದ ಸಚಿವರು ಒಮ್ಮತದ ತೀರ್ಮಾನಕ್ಕೆ ಬರಲಿಲ್ಲ. ಮಧ್ಯಸೂತ್ರವೂ ಸಿಗದ ಕಾರಣ ಸಚಿವರ ಅಭಿಪ್ರಾಯ ಸಂಗ್ರಹಿಸಿರುವ ಮುಖ್ಯಮಂತ್ರಿಗಳು ಮುಂದಿನ ಸಚಿವ ಸಂಪುಟದಲ್ಲಿ ಯಾವ ರೀತಿಯ ತೀರ್ಮಾನ ಕೈಗೊಳ್ಳಬೇಕು ಎಂದು ತೀರ್ಮಾನಿಸೋಣ ಎನ್ನುವ ಮಾತನ್ನು ಹೇಳಿದ್ದರಿಂದ ಇದೀಗ ಗೊಂದಲಕ್ಕೆ ಪರಿಹಾರ ಸಿಕ್ಕಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ಗೊಂದಲವೇನು?: ಎಸ್‌ಸಿ ಮೀಸಲಾತಿಯನ್ನು ಶೇ.15ರಿಂದ ಶೇ.17 ಹಾಗೂ ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸುವ ನಿರ್ಧಾರಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಆದ್ದರಿಂದ ಸರಕಾರ ರಾಜ್ಯ ಸರಕಾರ ಹಿಂದಿನ ಶೇ.15ರಷ್ಟು ಎಸ್‌ಸಿ ಮೀಸಲಾತಿ ಅನ್ವಯವೇ ಖಾಲಿ ಹುದ್ದೆಗಳ ಭರ್ತಿಗೆ ಮುಂದಾಗಿದೆ. ಈ ವೇಳೆ ಶೇ.15 ಮೀಸಲಾತಿ ಇಟ್ಟುಕೊಂಡರೂ, ಅದರಲ್ಲೇ ಒಳ ಮೀಸಲಾತಿ ಕಲ್ಪಿಸುವಂತೆ ಎಡಗೈ ಸಮುದಾಯದ ಸಚಿವರು, ಮುಖಂಡರು ಪಟ್ಟು ಹಿಡಿದಿದ್ದಾರೆ. ಆದರೆ, ರೋಸ್ಟರ್ ಗೊಂದಲ, ನ್ಯಾಯಾಲಯದ ಅಡೆತಡೆ ನಿವಾರಣೆ ಆಗುವರೆಗೆ ಒಳ ಮೀಸಲಾತಿರಹಿತವಾಗಿ ಶೇ.15 ಮೀಸಲಾತಿ ಜಾರಿಗೊಳಿಸಬೇಕು ಎಂದು ಬಲಗೈ ಸಮುದಾಯ ಒತ್ತಡ ಹೇರಿದೆ.

ಒಳ ಮೀಸಲಾತಿ ಹಂಚಿಕೆ ಮಾಡಿ ಈಗಾಗಲೇ ನಿಗದಿಪಡಿಸಿರುವ ರೋಸ್ಟರ್ ಬಿಂದು ಪ್ರಕಾರ ನೇಮಕಾತಿ ಪ್ರಕ್ರಿಯೆ ನಡೆದರೆ ಎಡಗೈ ಸಂಬಂಧಿತ ಜಾತಿಗಳಿಗೆ ಅವಕಾಶ ಹೆಚ್ಚು ಸಿಗುತ್ತಿದೆ. ಬಲಗೈ ಸಂಬಂಧಿತ ಜಾತಿ, ಅಲೆಮಾರಿ, ಅರೆ ಅಲೆಮಾರಿ ಜಾತಿಗಳಿಗೆ ಅವಕಾಶ ಕಡಿಮೆ ಎನ್ನುವುದು ಬಲಗೈ ಸಮುದಾಯದ ನಾಯಕರ ಆಕ್ಷೇಪ.

ಪ್ರತಿಯೊಬ್ಬರಿಂದಲೂ ಅಭಿಪ್ರಾಯ ಸಂಗ್ರಹ

ಒಳಮೀಸಲು ವಿಷಯದಲ್ಲಿ ಸಚಿವ ಸಂಪುಟದಲ್ಲಿಯೇ ಭಿನ್ನ ನಿಲುವು ಇರುವುದರಿಂದ ಹಾಗೂ ಬಹಿರಂಗವಾಗಿಯೇ ಸಚಿವರು ಹೇಳಿಕೆ ನೀಡುತ್ತಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಸಚಿವರಿಂದ ಅಭಿಪ್ರಾಯ ಸಂಗ್ರಹಿಸಿದರು. ಸಚಿವರಾದ ಡಾ.ಜಿ.ಪರಮೇಶ್ವರ, ಆರ್.ಬಿ.ತಿಮ್ಮಾಪುರ, ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಶಿವರಾಜ್ ತಂಗಡಗಿ, ಎಚ್.ಸಿ.ಮಹದೇವಪ್ಪ ಅವರು ತಮ್ಮ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಎಡಗೈ-ಬಲಗೈ ಸಮುದಾಯದ ಸಚಿವರು ತಮ್ಮದೇಯಾದ ವಾದ ಮಂಡಿಸುತ್ತಿರುವುದು ತೀವ್ರ ಗೊಂದಲಕ್ಕೆ ಕಾರಣವಾಗಿದೆ.

ಸಮಾಚಾರ ಸಣ್ಣದಲ್ಲ

ತಾತ್ಕಾಲಿಕ ನೇಮಕಾತಿಗೆ ಅರ್ಜಿ ಆಹ್ವಾನ

ದಾವಣಗೆರೆ: ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ಪಿಎಂ-ಎಬಿಎಚ್‌ಐಎಂ ಕಾರ್ಯಕ್ರಮದಡಿ ಆಯು ಷ್ಮತಿ ಕ್ಲಿನಿಕ್ ಗಳಿಗೆ ಸಮಾಲೋಚನೆ ಆಧಾರದ ಮೇಲೆ ತಾತ್ಕಾಲಿಕ ತಜ್ಞ ವೈದ್ಯರ ಹುದ್ದೆಗಳ ಆಯ್ಕೆ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಚೇರಿ, ಶ್ರೀರಾಮನಗರ ರಸ್ತೆ ದಾವಣಗೆರೆ ಎಸ್.ಎಸ್.ಆಸ್ಪತ್ರೆ ಹಿಂಭಾಗ, ಎನ್.ಸಿ.ಸಿ ಕ್ಯಾಂಪ್ ಪಕ್ಕ ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ದೂ: 9060520789 ಸಂಪರ್ಕಿಸಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಷಣ್ಮುಖಪ್ಪ ತಿಳಿಸಿದ್ದಾರೆ.

ಕಾರ್ಯಕರ್ತರ ಸಮಸ್ಯೆ ಶೀಘ್ರ ಇತ್ಯರ್ಥ

ದಾವಣಗೆರೆ: ಜಿಲ್ಲಾ ಬಿಜೆಪಿಯಲ್ಲಿರುವ ಎಲ್ಲಾ ಸಮಸ್ಯೆಗಳ ಬಗ್ಗೆ ಅರಿವಿದ್ದು, ಎಲ್ಲರೊಂದಿಗೆ ಚರ್ಚಿಸಿ ಬಗೆಹರಿಸಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಬಿಜೆಪಿ ಕಾರ್ಯಕರ್ತರಲ್ಲಿ ಇರುವ ಸಣ್ಣ-ಪುಟ್ಟ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಲಾಗುವುದು. ಅದಕ್ಕಾಗಿ ನಾವು ಮತ್ತು ರಾಜ್ಯ ಉಸ್ತುವಾರಿ ರಾಧಾ ಮೋಹನದಾಸ್ ಅಗರವಾಲ ಸಹ ಆಗಮಿಸಿದ್ದಾರೆ. ದಾವಣಗೆರೆ ದಕ್ಷಿಣಾ ವಿಧಾನಸಭಾ ಕ್ಷೇತ್ರ ಚುನಾವಣೆಗೆ ಈಗಾಗಲೇ 8-10 ಆಕಾಂಕ್ಷಿಗಳು ಇದ್ದಾರೆ. ಈ ಕುರಿತು ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರ ಜೊತೆ ಚರ್ಚೆ ಮಾಡಲಾಗುವುದು ಎಂದರು. ಜಿಲ್ಲೆಯಲ್ಲಿ ಈಗಾಗಲೇ 150 ವಿಸ್ತಾರಕರು ಈಗಾಗಲೇ ಸಂಘಟನೆ ಮಾಡುತ್ತಿದ್ದಾರೆ. ಬೂತ್ ಮಟ್ಟದ ಹಾಗೂ ಕಾರ್ಯಕರ್ತರ ಸಮಸ್ಯೆಗಳ ಬಗ್ಗೆ ಆಲಿಸುವ ಕೆಲಸ ಮಾಡುತ್ತಿದ್ದಾರೆ. ಈ ಬಾರಿ ಎಲ್ಲಾ ಸರಿ ಪಡಿಸಿಕೊಂಡು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ಗೆಲ್ಲುವ ಪಣ ತೊಟ್ಟಿದ್ದೇವೆ ಎಂದರು.

ಜೀವಿತಾವಧಿ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

ದಾವಣಗೆರೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಷ್ಟಪರಿಸ್ಥಿತಿಯಲ್ಲಿದ್ದು ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರು ತಮ್ಮ ಆಧಾರ್‌ಕಾರ್ಡ್, ಪಿಂಚಣಿ ಪುಸ್ತಕದ ಪ್ರತಿ , ಪಾಸ್ ಪೋರ್ಟ್ ಸೈಜ್ ಫೋಟೋ, ಬ್ಯಾಂಕ್ ಪುಸ್ತಕದೊಂದಿಗೆ ಜೀವಿತಾವಧಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಬ್ಯಾಂಕ್ ಮ್ಯಾನೇಜರ್‌ಸಹಿ ಪಡೆದು ನಿಗದಿತ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ: 27, ದಾವಣಗೆರೆ ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಮಾ. 31 ರೊಳಗಾಗಿ ಕಳುಹಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

ಉಚಿತ ಸಮಗ್ರ ಕೃಷಿ ತರಬೇತಿಗೆ ಅರ್ಜಿ

ದಾವಣಗೆರೆ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಹಸು, ಕುರಿ – ಕೋಳಿ ಸಾಕಾಣಿಕೆ ಕುರಿತ 13 ದಿನಗಳ ಉಚಿತ ಸಮಗ್ರ ಕೃಷಿ ತರಬೇತಿಯು ಏ. 6 ರಿಂದ ಆರಂಭವಾಗಲಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಮಾ. 20 ಕೊನೆಯ ದಿನವಾಗಿದೆ. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್ ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9740982585, 9241482541, 9113880324 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ಅವರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸೊರಬ
ಸಿ.ಮಿಸ್ 49/2026
ಅರ್ಜಿದಾರರು:
ರೇಣುಕಮ್ಮ ಕೋಂ ಹನುಮಂತಪ್ಪ ಮೂರೇರ್
– ವಿರುದ್ಧ –
ಎದುರುದಾರರು: ತಹಶೀಲ್ದಾರ್‌ರವರು ತಾಲ್ಲೂಕು ಕಛೇರಿ ಸೊರಬ
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ 30.04.2026 ರಂದು ಬೆಳಿಗ್ಗೆ 11 ಗಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.
ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ
ಅರ್ಜಿದಾರರ ಗಂಡನಾದ ಹನುಮಂತಪ್ಪ ಮೂರೇರ್ ಬಿನ್ ನಿಂಗಪ್ಪ ಇವರು ಸೊರಬ ತಾಲ್ಲೂಕು, ಅನವಟ್ಟಿ ಹೋಬಳಿ, ಲಕ್ಕವಳ್ಳಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ದಿನಾಂಕ 08.06.1983 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರು ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಅರ್ಜಿದಾರರ ಪರ ವಕೀಲರು
ಮಂಜುನಾಥ ಎಸ್, ಬಿ.ಕಾಂ, ಎಲ್.ಎಲ್.ಬಿ, ಎಂ.ಬಿ.ಎ, ಎಂ.ಎಸ್.ಡಬ್ಲ್ಯೂ, ಡಿ.ಐ.ಜಿ,
ವಕೀಲರು, ಸೊರಬ
ರೋಲ್ ನಂ. ಕೆ.ಎ.ಆರ್.2705/2023
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/–
ಶಿರಸ್ತೇದಾರರು
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ

ನಾಯಕನಹಟ್ಟಿ ಪುಣ್ಯಕ್ಷೇತ್ರದಲ್ಲಿ ವಿಶೇಷ ಉತ್ಸವ | ಒಳಮಠ, ಹೊರಮಠ ಮತ್ತು ಏಕಾಂತೇಶ್ವರ ಮಠಗಳಲ್ಲಿ ಸಾಂಪ್ರದಾಯಿಕ ಪೂಜೆ

ಶ್ರೀ ತಿಪ್ಪೇರುದ್ರಸ್ವಾಮಿ ರಥೋತ್ಸವ ಇಂದು

ಹರೀಶ್ ತಿಮ್ಮಪ್ಪಯ್ಯನಹಳ್ಳಿ, ನಾಯಕನಹಟ್ಟಿ

ನಾಯಕನಹಟ್ಟಿ ಪುಣ್ಯಕ್ಷೇತ್ರದಲ್ಲಿ ಶ್ರೀ ಗುರು ತಿಪ್ಪೇರುದ್ರಸ್ವಾಮಿಗಳು ಪವಾಡಗೈದ ಒಳಮಠ, ಹೊರಮಠ ಮತ್ತು ಏಕಾಂತೇಶ್ವರ ಮಠಗಳನ್ನು ಇಲ್ಲಿ ಕಾಣಬಹುದು.

ಶ್ರೀಗುರು ತಿಪ್ಪೇರುದ್ರಸ್ವಾಮಿಯ ಬೃಹತ್ ಮಟ್ಟದ ರಥೋತ್ಸವ ಮಾ.06 ರಂದು ಜರುಗಲಿದೆ.

ಒಳಮಠ ಐತಿಹಾಸಿಕ ಹಿನ್ನಲೆ :

ಊರ ಮಧ್ಯದಲ್ಲಿರುವ ಮಠವೇ ಒಳಮಠ, ಊರ ಒಳಗೆ ಈ ಮಠವಿರುವದರಿಂದ ಒಳಮಠವೆಂದು ಕರೆಯುವ ವಾಡಿಕೆ. ಈ ಮಠಕ್ಕೆ ಹಿರೇಮಠ, ದರ್ಬಾಟ ಮಠವೆಂತಲೂ ಕರೆಯಲಾಗುತ್ತಿದೆ. ಶ್ರೀಗಳ ಜೀವಿತ ಕಾಲದಲ್ಲಿ ಈ ಮಠದಲ್ಲಿಯೇ ಇದ್ದು ರಾಜ- ಮಹಾರಾಜರಿಗೆ, ಭಕ್ತಾದಿಗಳಿಗೆ ದರ್ಶನ ನೀಡುವುದಲ್ಲದೆ ಅವರ ಕಷ್ಟ-ಸುಖಗಳನ್ನು ವಿಚಾರಿಸುತ್ತಿದ್ದರು. ಅವುಗಳಿಗೆ ಪರಿಹಾರವನ್ನು ಸೂಚಿಸಿ, ಆಶೀರ್ವದಿಸುತ್ತಿದ್ದರು. ಹೀಗಾಗಿ ಈ ಮಠವನ್ನು ದರ್ಬಾರು ಮಠವೆಂದು ಕರೆಯುವ ವಾಡಿಕೆಗೆ ಕಾರಣವಾಗಿದೆ.

ವಿಶೇಷ ಉತ್ಸವಾದಿಗಳು, ಪೂಜಾ ವಿಧಾನ ಸಲ್ಲಿಕೆ:

ಈ ಮಠವು ಈ ಕ್ಷೇತ್ರದ ಕೇಂದ್ರಬಿಂದುವಾಗಿದೆ, ಈ ಕ್ಷೇತ್ರದ ಆರಾಧ್ಯ ದೈವವಾದ ದಿವ್ಯ ಶಿವಲಿಂಗ ಈ ಮಠದಲ್ಲಿಯೇ ಇದೆ, ಸ್ಥಳೀಯ ಸಂಪ್ರದಾಯ ಪದ್ಧತಿಗಳಂತೆ ಅದ್ದೂರಿಯಾದ ದೈನಂದಿನ ಪೂಜಾ ಕಾರ್ಯಗಳು ನಡೆಯುತ್ತಿವೆ. ಈ ಸ್ಥಳದಿಂದಲೇ ಶ್ರೀಸ್ವಾಮಿಯ ಉತ್ಸವ ಮೂರ್ತಿ ಹೊರಡುತ್ತದೆ.

ಸಕಲ ಬಿರುದಾವಳಿಯೊಂದಿಗೆ ಶ್ರೀಸ್ವಾಮಿಯವರ ಜೀವೈಕ್ಯ ಸಮಾಧಿಯಾದ ಹೊರಮಠಕ್ಕೆ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ನಾಯಕನಹಟ್ಟಿ ಪುಣ್ಯಕ್ಷೇತ್ರದಲ್ಲಿರುವ ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ

ಶ್ರಾವಣ ನವರಾತ್ರಿ, ಕಾರ್ತಿಕ ಮಾಸ, ಪಾಲ್ಗುಣ, ಧನರ್ಮಾಸದಲ್ಲಿ ವಿಶೇಷ ಉತ್ಸವಾ ದಿಗಳು ಪೂಜೆಗಳು ಸಂಪ್ರದಾಯ ಬದ್ಧವಾಗಿ ನಡೆಯುವುದು.

ಶಿಲ್ಪ ಕಾಲಾಕೃತಿಯಲ್ಲಿ ಗರ್ಭಗುಡಿ ವಿನ್ಯಾಸ:

ಈ ಮಠದ ಗರ್ಭಗುಡಿಯ ಮುಖಭಾಗದಲ್ಲಿಯ ಪ್ರಕಾ ರ ದಲ್ಲಿ 18 ಶಿಲಾಕಂಬಗಳಿದ್ದು, ಪ್ರತಿಯೊಂದು ಕಂಬಗಳಲ್ಲಿ ವಿಶೇಷವಾದ ಶಿಲ್ಪ ಕಾಲಾ ಕೆತ್ತನೆಯ ಕೆಲಸ ವಡಗಿದೆ, ಅವುಗಳಲ್ಲಿ ವಿಷ್ಣು ಅವತಾರ, ಶಿವಪಾರ್ವತಿ, ಭರತನಾಟ್ಯ, ಮಾಡುವ ದೃಶ್ಯಗಳನ್ನು ಸುಂದರವಾಗಿ ಬಿಡಿಸಲಾಗಿದೆ.

ಈ ಕಂಬವೊಂದರಲ್ಲಿಯ ತುಂಬಾ ಆಕರ್ಷಣೀಯವಾಗಿದೆ. ಹಲ್ಲು ಚಿತ್ರವನ್ನು ವಿಭಿನ್ನ ದೃಷ್ಟಿ ಕೋನದಿಂದ ನೋಡಿದರು ಕಾಣುವ ಚಿತ್ರ ಒಂದೇಯಾಗಿದೆ.

ಮಧ್ಯ ಮಂಟಪಕ್ಕೆ ಬಂದಾಗ ನವನಾಡಿ ಕುಂಜರ ಎಂದು ಕರೆಯಲ್ಪಡುವ ಕಂಬವೊಂದರಲ್ಲಿಯ ಚಿತ್ರ ಒಂದೇ ಆನೆಯ ಗರ್ಭದಲ್ಲಿ 9 ನಾರೆಯರ ಆನೆ ಚಿತ್ರ ಆ ಆನೆಯ ಮೇಲೆ ಮನ್ಮಥನ ಆರೋಹಣ ಮಾಡಿದ ಚಿತ್ರಕ್ಕೆ ಗಜರ್ಭ ಎಂತಲೂ ಕರೆಯುವ ವಾಡಿಕೆ ಇದೇ.

ಈ ಚಿತ್ರದ ಬಗ್ಗೆ ಪ್ರತಿಯೊಂದು ಈಗಲೂ ಚಾಲ್ತಿಯಲ್ಲಿದೆ. ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ನೋವು ಕಾಣಿಸಿಕೊಂಡು ಹೆರಿಗೆ ವಿಳಂಭವಾದಾಗ ಈ ನವನಾರಿ ಕಂಬಕ್ಕೆ ಭಕ್ತಿಯಿಂದ ಪೂಜೆ ಸಲ್ಲಿಸಿದರೆ ಹೆರಿಗೆ ಬೇಗನೆ ಸರಳವಾಗಿ ಆಗುತ್ತದೆ ಎಂಬ ನಂಬಿಕೆಯಿದ್ದು, ಈಗಲೂ ಗರ್ಭಿಣಿ ಸ್ತ್ರೀಯರನ್ನು ಹೆಚ್ಚಾಗಿ ಆಕರ್ಷಿಸುತ್ತದೆ.

ಮಧ್ಯ ಮಂಟಪ ದಲ್ಲಿ ನಿಂತ ಮೇಲೆ ಮುಖಮಾಡಿ ಮಧ್ಯದ ಮೇಲ್ಚಾವಣಿಯನ್ನು ನೋಡಿದಾಗ ಶಿಲ್ಪಕಲಾ

> **ಯೂರೋಪಿಯನ್ನರ ಗಾರೆ ಶಿಲ್ಪ**
>
> **ಈ ಒಳಮಠದ ಪ್ರಕಾರದ ರಾಜಗೋಪುರವು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದ್ದು, ಹೊರ ಗೋಡೆಗಳ ಮೇಲಿರುವ ಗಾರೆ ಶಿಲ್ಪಗಳಲ್ಲಿ ಯೂರೋಪಿಯನ್ನರ ಗಾರೆ ಶಿಲ್ಪ ವು ಮನಮೋಹಕವಾಗಿದೆ. ಈ ಶಿಲ್ಪದ ಸನ್ನಿವೇಶ ಒಂದರಲ್ಲಿ ಒಬ್ಬ ಫ್ರೆಂಚ್ ಅಧಿಕಾರಿಯನ್ನು ಮತ್ತು ಅವನ ಕುಟುಂಬದವರನ್ನು ದೇಶಿಯವರು ಸ್ವಾಗತಿಸುತ್ತಿರುವ ಚಿತ್ರವಿದ್ದಂತಿದೆ. ಏಕೆಂದರೆ ಅವರು ಧರಿಸುವ ಉಡುಪು ಸೊಂಟದಲ್ಲಿರುವ ಕೀರುಗತ್ತಿ ಮುಂತಾದವು ಫ್ರೇಂಚರು 18 ಶತಮಾನದಲ್ಲಿ ಧರಿಸುತ್ತಿದ್ದ ಉಡುಪುಗಳನ್ನು ಹೋಲುತ್ತವೆ.**

ಚಾತುರ್ಯದ ಸಂಗಮವೇ ಆಗಿರುವ ಭೂಮಿಗೆ ಮುಖಮಾಡಿಕೊಂಡು ಬಾಳೆಯ ಮುಖವನ್ನು ಹೊರಚಾ ಚಿದಂತಿರುವ ಭುವನೇಶ್ವರಿ ಕಮಲ, ಶಿಲ್ಪಕಲಾ, ಚಾತುರ್ಯದ ಪರಾಕಾಷ್ಠೆಯನ್ನು ತಲುಪಿದೆ. ಕಮಲವು 5 ಸುತ್ತುಳ್ಳ ದಳಗಳನ್ನು ಹೊಂದಿದ್ದು, ಪ್ರತಿಯೊಂದು ಸುತ್ತಿನಲ್ಲಿ ಮನಮೋಹಕರವಾದ ಪೌರಾಣಿಕ ಹಿನ್ನಲೆಯ ಸನ್ನಿವೇಶಗಳನ್ನು ಸುಂದರವಾಗಿ ಬಿಡಿಸಲಾಗಿದೆ. ಅವು ಶಿವನ ಅವತಾರ, ಗಿರಿಜ ಕಲ್ಯಾಣ, ತ್ರಿಪುರಸಂಹಾರ, ಹಾಗೂ ವೈವಿದ್ಯಮಯ ವಾದ ಸನ್ನಿವೇಶಗಳ ಚಿತ್ರಣಗಳಿವೆ.

ಯೂರೋಪಿಯನ್ನರ ಗಾರೆ ಶಿಲ್ಪವು ಮನಮೋಹಕ:

ಈ ಒಳಮಠದ ಪ್ರಕಾರದ ರಾಜಗೋಪುರವು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದ್ದು, ಹೊರ ಗೋಡೆಗಳ ಮೇಲಿರುವ ಗಾರೆ ಶಿಲ್ಪಗಳಲ್ಲಿ ಯೂರೋಪಿಯನ್ನರ ಗಾರೆ ಶಿಲ್ಪವು ಮನಮೋಹಕವಾಗಿದೆ. ಈ ಶಿಲ್ಪದ ಸನ್ನಿವೇಶ ಒಂದರಲ್ಲಿ ಒಬ್ಬ ಫ್ರೆಂಚ್ ಅಧಿ ಕಾರಿಯನ್ನು ಮತ್ತು ಅವನ ಕುಟುಂಬದವರನ್ನು ದೇಶಿ ಯವರು ಸ್ವಾಗತಿಸುತ್ತಿರುವ ಚಿತ್ರವಿದ್ದಂತಿದೆ.

ಈ ಚಿತ್ರಗಳಲ್ಲದೆ ನಮ್ಮ ಪೌರಾಣಿಕ ಸನ್ನಿವೇಶಗಳನ್ನು ತಿಳಿಸುವಂತೆ ಮಹಿಶಮರ್ದಿನಿ ವಿಷ್ಣು ಅವತಾರ, ಉಗ್ರ ನರಸಿಂಹ, ಸೀತಾರಾಮಾಂಜನೇಯ, ಗಣೇಶ, ಆಂಜನೇಯ ಹಾಗೂ ಯುದ್ಧದ ಸನ್ನಿವೇಶಗಳು ಅಷ್ಟೆ ಮೋಹಕವಾಗಿರುವುದು ವಿಶೇಷವಾಗಿದೆ.

ರಾಜಗೋಪುರದ ಹೊರ ಮತ್ತು ಒಳಗೊ ಡೆಗಳಲ್ಲಿ ಯೂರೋಪಿಯನ್ನರ ಗಾರೆಯ ಉಬ್ಬು ಶಿಲ್ಪಗಳನ್ನು ಕರ್ನಾಟಕದ ಬೇರೆ ದೇವಾಲಯಗಳಲ್ಲಿ ಕಾಣುವುದು ಅಪರೂಪವಾಗಿದೆ.

ಹೊರಮಠ ಹಿನ್ನಲೆ:

ಊರ ಹೊರಗಿರುವ ಮಠಕ್ಕೆ ಹೊರ ಮಠವೆಂದು ಕರೆಯುವ ವಾಡಿಕೆ ಚಿಕ್ಕ ಕೆರೆ ಪಕ್ಕದಲ್ಲಿರುವ ಹೊರಮಠ ಶ್ರೀಗಳು ಜೀವೈಕ್ಯ ಸಮಾಧಿಹೊಂದಿರುವ ಸ್ಥಳವಾಗಿದೆ. ಸಮಾಧಿಯ ಮೇಲೆ ನಿರ್ಮಿತವಾದ ಅರ್ಧ ಗೋಳಾಕಾರದ ಇಂಡೋ-ಇಸ್ಲಾಮಿಕ್ ಶೈಲಿಯ ಗುಮ್ಮಟ್ಟ ಹಿಂದು-ಮುಸ್ಲಿಂರ ಭಾವೈಕ್ಯತೆಯ ಸಂದೇಶ ಸಾರುವ ಸಂಕೇತವಾಗಿದೆ.

ಏಕಾಂತಸ್ವಾಮಿ ಮಠ:

ಚಳ್ಳಕೆರೆಗೆ ಹೋಗುವ ಮಾರ್ಗದಲ್ಲಿರುವುದೇ ಏಕಾಂತ ಸ್ವಾಮಿಯ ಮಠ. ಶ್ರೀಗಳು ಅನುಷ್ಠಾನಕೈದ ಸ್ಥಳವಾಗಿದೆ. ಧಾರ್ಮಿಕ ಕ್ಷೇತ್ರದಲ್ಲಿ ಉತ್ಸವಗಳ ರಾಜ ನೆಂದು ಕರೆಯಲ್ಪಡುವ ದೊಡ್ಡರಥೋತ್ಸವ ಪಾಲ್ಗುಣ ಮಾಸದ ಚಿತ್ತಾ ನಕ್ಷತ್ರದ ಮದ್ಯಾಹ್ನ ಜರುಗತ್ತದೆ. ಅಂದು ಪ್ರಾಥಕಾಲ 9 ಗಂಟೆಯಿಂದ ವೃಷಭವಾಹನ ಯುಕ್ತ ಚಿಕ್ಕ ರಥೋತ್ಸವ ನಡೆ ಯುತ್ತದೆ ಮದ್ಯಾಹ್ನ 12:00 ಗಂಟೆಯಿಂದ ದೊಡ್ಡ ರಥೋತ್ಸವಕ್ಕೆ ಸಿದ್ಧತೆಗಳು ನಡೆಯುತ್ತವೆ.

ಮಹಿಳೆಯರಿಗೆ ಆರೋಗ್ಯದ ಅರಿವಿನ ಕೊರತೆ

ಚಿತ್ರದುರ್ಗ: ಇಂದಿನ ಕಾಲಘಟ್ಟದಲ್ಲಿ ಶೇ. 50ರಷ್ಟು ಮಹಿಳೆಯರು ಹತ್ತಾರು ಆರೋಗ್ಯ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಜೊತೆಗೆ ಅರಿವಿನ ಕೊರತೆಯಿಂದಾಗಿ ದೈಹಿಕ ಹಾಗೂ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿರುವುದು ವಿಷಾದನೀಯ ಎಂದು ಸರಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ. ಜೆ. ಕರಿಯಪ್ಪ ಮಾಳಿಗೆ ತಿಳಿಸಿದರು.

ನಗರದ ಸರಕಾರಿ ಕಲಾ ಕಾಲೇಜಿನ ಅಂಬೇಡ್ಕರ್ ಸಭಾಂಗಣದಲ್ಲಿ ಕಾಲೇಜಿನ ಮಹಿಳಾ ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರ ಸಮಸ್ಯೆಗಳ ಕುರಿತು ಸಮರ್ಪಕ ಚರ್ಚೆಗಳಾಗಬೇಕಿದೆ. ಆರೋಗ್ಯದ ಬಗ್ಗೆ ಇರುವ ಅಜ್ಞಾನವೇ ಹಲವು ಕಾಯಿಲೆಗಳಿಗೆ ಮೂಲಕಾರಣ. ವಿದ್ಯಾರ್ಥಿನಿಯರು ತಮ್ಮ ಸಮಸ್ಯೆಗಳನ್ನು ಮುಚ್ಚಿಡದೆ, ವೈದ್ಯರೊಂದಿಗೆ ಮುಕ್ತವಾಗಿ ಚರ್ಚಿಸಿ ಸೂಕ್ತ ಸಲಹೆ ಪಡೆಯಬೇಕು ಎಂದು ಹೇಳಿದರು.

ಬಸವೇಶ್ವರ ಮೆಡಿಕಲ್ ಕಾಲೇಜಿನ ಸ್ತ್ರೀರೋಗ ತಜ್ಞೆ ಡಾ. ಸೌಮ್ಯ ಉಪನ್ಯಾಸ ನೀಡಿ, ಕ್ಯಾನ್ಸರ್ ಎನ್ನುವುದು ಜೀವನ ಶೈಲಿಯಿಂದ ಬರುವ ಕಾಯಿಲೆಯಾಗಿದೆ ಎಂದು ತಿಳಿಸಿದರು.

ನಗರದ ಸರಕಾರಿ ಕಲಾ ಕಾಲೇಜಿನ ಅಂಬೇಡ್ಕರ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಪ್ರಾಂಶುಪಾಲ ಡಾ. ಜೆ. ಕರಿಯಪ್ಪ ಮಾಳಿಗೆ ಉದ್ಘಾಟಿಸಿದರು. ಡಾ. ತಾರಿಣಿ ಶುಭದಾಯಿನಿ, ಸಲ್ಮಾ ಸೇರಿದಂತೆ ಇತರರಿದ್ದರು.

> **ಮಹಿಳೆಯರ ಸಮಸ್ಯೆಗಳ ಕುರಿತು ಸಮರ್ಪಕ ಚರ್ಚೆಗಳಾಗಬೇಕಿದೆ. ಆರೋಗ್ಯದ ಬಗ್ಗೆ ಇರುವ ಅಜ್ಞಾನವೇ ಹಲವು ಕಾಯಿಲೆಗಳಿಗೆ ಮೂಲಕಾರಣ. ವಿದ್ಯಾರ್ಥಿನಿಯರು ತಮ್ಮ ಸಮಸ್ಯೆಗಳನ್ನು ಮುಚ್ಚಿಡದೆ, ವೈದ್ಯರೊಂದಿಗೆ ಮುಕ್ತವಾಗಿ ಚರ್ಚಿಸಿ ಸೂಕ್ತ ಸಲಹೆ ಪಡೆಯಬೇಕು.**
> **-ಡಾ. ಜೆ. ಕರಿಯಪ್ಪ ಮಾಳಿಗೆ,** ಪ್ರಾಂಶುಪಾಲ

ಗರ್ಭಕೋಶ ಮತ್ತು ಸ್ತನ ಕ್ಯಾನ್ಸರ್ ಬರದಂತೆ ತಡೆಗಟ್ಟಲು ಈಗ ಪೂರ್ವಭಾವಿ ಲಸಿಕೆಗಳು ಲಭ್ಯವಿದ್ದು, ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ದಿನಪ್ರತಿ ವ್ಯಾಯಾಮ, ನಡಿಗೆಯಂತಹ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಕ್ಯಾನ್ಸರ್ ತಡೆಗಟ್ಟಬಹುದು ಎಂದರು.

ಋತುಚಕ್ರದ ಅವಧಿಯಲ್ಲಿ ಅನುಸರಿಸಬೇಕಾದ ಸ್ವಚ್ಛತೆ, ಹರ್ಮೋನ್ ಸಮಸ್ಯೆಗಳು ಹಾಗೂ ಸ್ಯಾನಿಟರಿ ಪ್ಯಾಡ್‌ಗಳ ವೈಜ್ಞಾನಿಕ ಬಳಕೆಯ ಕುರಿತು ಅವರು ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸರಕಾರಿ ಕಲಾ ಕಾಲೇಜಿನ ಐಕ್ಯೂಎಸಿ ಸಂಚಾಲಕಿ ಡಾ. ತಾರಿಣಿ ಶುಭದಾಯಿನಿ, ಮಹಿಳಾ ಸಬಲೀಕರಣ ಘಟಕದ ಸಂಚಾ ಲಕಿ ಸಲ್ಮಾ, ಚೇರ್ಮನ್ ಪೋಷ್ ಸಮಿತಿ ಸಂಚಾಲಕಿ ಪ್ರೊ.ಯಶೋಧಾ ಉಪಸ್ಥಿತರಿದ್ದರು.

ವಿವಿಧತೆಯಲ್ಲಿ ಏಕತೆ ಬೆಳೆಸುವ ಹೋಳಿ

ದಾವಣಗೆರೆ: ದ್ವೇಷ, ಅಸೂಯೆ, ಕೆಟ್ಟ ಭಾವನೆಗಳನ್ನು ಬೆಂಕಿಗೆ ಹಾಕಿ ಸುಡುವ ಮೂಲಕ ಪರಸ್ಪರ ಪ್ರೀತಿ, ಸೌಹಾರ್ಧತೆ, ಏಕತೆಯನ್ನು ಬೆಳೆಸುವುದೇ ಹೋಳಿ ಹಬ್ಬದ ಆಚರಣೆಯ ಪ್ರಮುಖ ಉದ್ದೇಶ ಎಂದು ದೂಡಾ ಅಧ್ಯಕ್ಷ ದಿನೇಶ್.ಕೆ.ಶೆಟ್ಟಿ ಹೇಳಿದರು.

ನಗರದ ಪ್ರವಾಸಿ ಮಂದಿರ ಬಳಿ ಇರುವ ದಾವಣಗೆರೆ ಕ್ಲಬ್ ನಲ್ಲಿ ಲಯನ್ಸ್ ಕಲಾಸಿರಿ ವತಿಯಿಂದ ಆಯೋಜಿಸಲಾಗಿದ್ದ ಹೋಳಿ ಸಂಭ್ರಮ ಕಾರ್ಯಕ್ರಮಕ್ಕೆ ಪರಸ್ಪರ ಬಣ್ಣ ಹಚ್ಚುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಮಾನವರು ತಮ್ಮಲ್ಲಿನ ಕೆಟ್ಟತನವನ್ನು ದಹನ ಮಾಡುವ ಮೂಲಕ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಬೇಕು. ಅದರ ಮೂಲ ಸಂಕೇತವೇ ಕಾಮ ದಹನ, ಹೋಳಿ ಹಬ್ಬದ ಆಚರಣೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಕಲಾಸಿರಿಯ ಅಧ್ಯಕ್ಷ ವಾಸುದೇವ ರಾಯ್ಕರ್‌ಮಾತನಾಡಿ, ಹೋಳಿ ಹಬ್ಬವು ಕೇವಲ ಆಚರಣೆ ಆಗಿರದೆ ಇದು ನಮ್ಮ ಹಿಂದೂ ಸಂಪ್ರದಾಯದ ಕೊನೆಯ ಹಬ್ಬವಾಗಿದೆ.

ಅಲ್ಲದೇ ಮುಂಬರುವ ವಸಂತೋತ್ಸವ ಹಾಗೂ ಹಿಂದೂಗಳ ಹೊಸ ವರ್ಷ ಅಂದರೆ ಯುಗಾದಿಯನ್ನು ಸ್ವಾಗತಿಸುವ ಹಬ್ಬವಾಗಿದೆ. ಬಣ್ಣಗಳ ಹಬ್ಬವನ್ನು ಒಂದು ರೀತಿ ಯಲ್ಲಿ ವಸಂತೋತ್ಸವ ಎಂದು ಕರೆಯಲಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರೀತಿ ಸೌಹಾರ್ಧತೆಯಿಂದ ವಸಂತ ಕಾಲದ ಆಗಮನವನ್ನು ಸಂಕೇತಿಸುವ ಹಬ್ಬ ಹೋಳಿ ಹಬ್ಬವಾಗಿದೆ. ಕರ್ನಾಟಕದಲ್ಲಿ ಹೋಳಿ ಹಬ್ಬದ ಆಚರಣೆಯೇ ವಿಶೇಷವಾಗಿದೆ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಂತೂ ಎಲ್ಲಾ ವಯಸ್ಸಿನವರು ಬಣ್ಣಗಳನ್ನು ಎರಚಿಕೊಳ್ಳುವ ಮೂಲಕ ಸಡಗರ ಸಂಭ್ರಮದಿಂದ ಬಣ್ಣದ ಹಬ್ಬ ಆಚರಿಸುತ್ತಾರೆ ಎಂದು ತಿಳಿಸಿದರು.

ಫಲಕ ಉದ್ಘಾಟನೆ ಮಾಡಿದ ಜಿಲ್ಲಾ ಗವರ್ನರ್ ಆರ್.ಜಿ. ಶ್ರೀನಿವಾಸ್‌ಮೂರ್ತಿ ಮಾತನಾಡಿ, ಹೋಳಿ ಹಬ್ಬವು ಕೆಟ್ಟದ್ದರ ವಿರುದ್ಧ ಒಳ್ಳೆತನದ ವಿಜಯವನ್ನು ಸೂಚಿಸುತ್ತದೆ. ಇದಕ್ಕೆ ಪುರಾಣ ಕಥೆಗಳ ಹಲವಾರು ಪುರಾವೆಗಳಿವೆ. ಹೋಳಿ ಹಬ್ಬವನ್ನು ಭಾರತದಲ್ಲಿ ಮಾತ್ರವಲ್ಲದೇ ಏಷ್ಯಾ ಖಂಡದ ವಿವಿಧ ಭಾಗಗಳಲ್ಲಿ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಆಚರಿಸಲಾಗುತ್ತದೆ. ಚಳಿಗಾಲದ ಅಂತ್ಯ ವಸಂತ ಕಾಲದ ಆಗಮನದ ಸಂಕೇತವೇ ಹೋಳಿ ಹಬ್ಬದ ಆಚರಣೆ ಎಂದರು.

ಈ ವೇಳೆ ಬೆಳ್ಳೂಡಿ ಶಿವಕುಮಾರ್,ಎಸ್.ಜಿ.ಉಳುವಯ್ಯ, ವೈ.ಬಿ.ಸತೀಶ್, ಹೆಚ್.ಎಂ.ನಾಗರಾಜ್, ಎಸ್.ನಾಗರಾಜ್, ಆನೆಕೊಂಡ ರವಿಕುಮಾರ್,ಮತ್ತಿಹಳ್ಳಿ ಬಸಣ್ಣ, ಮುರಳಿ ಗುಪ್ತ, ಕಾಸಲ್ ರತನ್, ಹೇಮಣ್ಣ, ಜಗದೀಶ್, ರುದ್ರೇಶ್, ರಮೇಶ್ ಸೇರಿದಂತೆ ಇನ್ನಿತರ ಸದಸ್ಯರು ಇದ್ದರು.

ನಗರದ ಕ್ಲಬ್‌ನಲ್ಲಿ ಲಯನ್ಸ್ ಕಲಾಸಿರಿ ವತಿಯಿಂದ ಹಮ್ಮಿಕೊಂಡ ಹೋಳಿ ಸಂಭ್ರಮ ಕಾರ್ಯಕ್ರಮದಲ್ಲಿ ಪರಸ್ಪರರು ಬಣ್ಣ ಹಚ್ಚುವ ಮೂಲಕ ಹಬ್ಬವನ್ನು ಆಚರಿಸಿದರು.

ವೀರಭದ್ರೇಶ್ವರಸ್ವಾಮಿ ರಥೋತ್ಸವದ ವೈಭವ

ಹೊಸದುರ್ಗ: ತಾಲೂಕಿನ ಕಸಬಾ ಹೋಬಳಿಯ ಶೆಟ್ಟಿಹಳ್ಳಿ ಗ್ರಾಮದ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮ, ಸಡಗರದಿಂದ ನಡೆಯಿತು.

ರಥೋತ್ಸವದ ಪ್ರಯುಕ್ತ ದೇಗುಲ ಹಾಗೂ ಗ್ರಾಮದ ರಾಜಬೀದಿಯನ್ನು ಹಸಿರು ತಳಿರು, ತೋರಣ, ಬಗೆ ಬಗೆಯ ಹೂವುಗಳಿಂದ ಸುಂದರವಾಗಿ ಅಲಂಕರಿಸಲಾಯಿತು.

ಕಳೆದ ಒಂದು ವಾರದಿಂದಲೇ ಗಂಗಾಪೂಜೆ, ಧ್ವಜಾರೋಹಣದೊಂದಿಗೆ ಜಾತ್ರೋತ್ಸವಕ್ಕೆ ಚಾಲನೆ ನೀಡಲಾಗಿದ್ದು, ಮಧುವಣಿಗೆಶಾಸ್ತ್ರ, ನಂದಿವಾಹನ, ಅಶ್ವವಾಹನೋತ್ಸವ, ಸಿಂಹವಾಹನೋತ್ಸವ, ಅನ್ನಸಂತರ್ಪಣೆಗೆ ಮೀಸಲು ಹಾಕುವ, ದೀಪಾಲಂಕಾರ ಹಾಗೂ ಅನ್ನದಾಸೋಹ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ಜರುಗಿದವು.

ಬಗೆ, ಬಗೆಯ ಬಟ್ಟೆ, ತಳಿರು ತೋರಣ, ಹೂವು ಮಾಲೆ, ಅರಿಶಿಣ, ಕುಂಕುಮ, ಬಲೂನುಗಳಿಂದ ಎರಡು ತೇರನ್ನು ಸಿಂಗಾರಗೊಳಿಸಲಾಯಿತು.

ಒಂದು ತೇರಿಗೆ ಶ್ರೀ ವೀರಭದ್ರಸ್ವಾಮಿ ಉತ್ಸವ ಮೂರ್ತಿಯನ್ನು ಹಾಗೂ ಇನ್ನೊಂದು ತೇರಿಗೆ ಶ್ರೀ ಕರಿಯಮ್ಮ ದೇವಿಯನ್ನು ಪ್ರತಿಷ್ಠಾಪಿಸಿ, ಮಹಾಮಂಗಳಾರತಿ ಸಲ್ಲಿಸಿದ ಬಳಿಕ ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿ ತೇರನ್ನು ಎಳೆದರು. ಭಕ್ತರು ಬಾಳೆ ಹಣ್ಣು ತೇರಿಗೆ ತೂರಿ ಹಾಗೂ ವಿಶೇಷ ಪೂಜೆ ಸಲ್ಲಿಸುವ ಮೂಲಕ ತಮ್ಮ ಹರಕೆ ಅರ್ಪಿಸಿದರು.

ರಥೋತ್ಸವದ ನಂತರ ಪಾನಕ ಬಂಡಿ ಉತ್ಸವ, ಓಕಳಿ ಆಡುವ ಕಾರ್ಯಕ್ರಮಗಳು ಜರುಗಿದವು.

ಶೆಟ್ಟಿಹಳ್ಳಿ ಸೇರಿ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ರಥೋತ್ಸವದ ಯಶಸ್ಸಿಗೆ ಸಾಕ್ಷಿಯಾದರು.

ತಾಲೂಕಿನ ಕಸಬಾ ಹೋಬಳಿಯ ಶೆಟ್ಟಿಹಳ್ಳಿ ಗ್ರಾ ಮ ದ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮ, ಸಡಗರದಿಂದ ನಡೆಯಿತು.

ಸರ್ವಾಧಿಕಾರಿ ಹತ್ಯೆ: ಪ್ರತಿಭಟನೆ ಖಂಡನೀಯ

ಹೊನ್ನಾಳಿ: ಬೇರೆ ದೇಶದ ಸರ್ವಾಧಿಕಾರಿ ಖಮೇನಿ ಹತ್ಯೆಯನ್ನು ಖಂಡಿಸಿ ಚಿಕ್ಕಬಳ್ಳಾಪುರ ಸೇರಿದಂತೆ ದೇಶದ ನಾನಾ ಕಡೆ ಪ್ರತಿಭಟನಾ ಮೆರವಣಿಗೆ ಮಾಡಿರುವುದು ಖಂಡನಿಯ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ಹೇಳಿದರು.

ತಾಲೂಕಿನ ಕತ್ತಿಗೆ ಗ್ರಾಮದಲ್ಲಿ ವಿಬಿ-ರಾಮ್-ಜಿ ಬಗ್ಗೆ ಗ್ರಾಮದಲ್ಲಿ ಜನಜಾಗೃತಿ ಮುಡಿಸುವ ಪಾದಯಾತ್ರೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇರಾನ್ ಸರ್ವಾಧಿಕಾರಿ ಖಮೇನಿಯ ಹತ್ಯೆಯನ್ನು ಖಂಡಿಸಿ ನಮ್ಮ ದೇಶದಲ್ಲಿ ಪ್ರತಿಭಟನೆ ಮಾಡುವುದು ಅರ್ಥಹೀನ, ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವು ಯುದ್ಧಕ್ಕೂ ನಮ್ಮ ದೇಶಕ್ಕೂ ಏನು ಸಂಬಂಧ. ಮೊದಲು ನಮ್ಮ ದೇಶದ ಮಣ್ಣಿಗೆ ಗೌರವ ಕೊಡುವುದನ್ನು ಕಲಿಯಲಿದೆ, ಅದನ್ನು ಬಿಟ್ಟು ಬೇರೆ ದೇಶದ ಸರ್ವಾಧಿಕಾರಿಯ ಹತ್ಯೆಯಾದರೆ ಇಲ್ಲಿ ಪ್ರತಿಭಟನೆ ಮಾಡುವುದು ಸರಿಯಲ್ಲ ಎಂದರು.

ಪುಲ್ವಾಮದಲ್ಲಿ ನಮ್ಮ ಸೈನಿಕರು ಹತ್ಯೆಯಾದಾಗ, ಕಾಶ್ಮೀರದಲ್ಲಿ ಉಗ್ರಗಾಮಿಗಳಿಂದ ನಮ್ಮ ಹಿಂದುಗಳು ಹತ್ಯೆಯಾದಾಗ ಪಕ್ಕದ ಬಾಂಗ್ಲಾದಲ್ಲಿ ಹಿಂದುಗಳ ನರಮೇಧ ಆದಾಗ ಮಾಡದ ಪ್ರತಿಭಟನೆಯನ್ನು ಈಗ ಇರಾನ್ ಸರ್ವಾಧಿಕಾರಿ ಹತ್ಯೆಯಾದಾಗ ಮಾಡುವುದು ಸರಿಯೇ ಎಂದು ಅವರು ಪ್ರಶ್ನಿಸಿದರು.

ಈ ದೇಶದಲ್ಲಿ ವಾಸಿಸುತ್ತ,ಇಲ್ಲಿ ಜೀವನ ಕಂಡು ಕೊಂಡಿರುವ ಕೆಲವರು ಬೇರೆ ದೇಶಕ್ಕೆ ನಿಷ್ಠೆ ತೋರಿಸುತ್ತಿರುವುದು ಖಂಡನಿಯ, ಈಗಲಾದರು ಎಚ್ಚೆತ್ತುಕೊಂಡು ತಾಯಿ ಭಾರತಮಾತೆಗೆ ನಿಷ್ಠೆ ತೋರಬೇಕು, ಯಾರು ಈ ದೇಶದ ಬಗ್ಗೆ ನಿಷ್ಠೆ ಇಲ್ಲವೋ ಅಂತಹ ನಿಷ್ಠೆ ತೋರಿಸುವ ದೇಶಕ್ಕೆ ಹೋಗಲಿ ಎಂದರು.

ಇರಾನ್ ದೇಶದ ಸರ್ವಾಧಿಕಾರಿ ಖಮೇನಿ ಹತ್ಯೆಯಾದರೆ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಪ್ರತಿಭಟನೆ ಮಾಡಿ ಅವರ ಪ್ರತಿಕೃತಿ ದಹನ ಮಾಡು ತ್ತಿರುವುದು ಖಂಡನಿಯ ಎಂದರು. ದುಬೈ, ಕುವೈತ್ನಲ್ಲಿ ಸಿಲುಕಿಕೊಂಡಿರುವ ಕನ್ನಡಿಗರನ್ನು ಸುರಕ್ಷಿತವಾಗಿ ಕರೆ ತರಲು ಕೇಂದ್ರ ವ್ಯವಸ್ಥೆ ಮಾಡಿದೆ ಎಂದರು.

ವಿಬಿ-ರಾಮ್-ಜಿ ಅಂಗವಾಗಿ ಹಮ್ಮಿಕೊಂಡಿ ರುವ ಜನಜಾಗೃತಿ ಬಗ್ಗೆ ಕೋನಾಯಕನಹಳ್ಳಿ, ಬಳ್ಳೇಶ್ವರ,ಹನುಸಾಗರ, ಘಂಟ್ಯಾಪುರ, ತರಹಗನಹಳ್ಳಿಯಿಂದ ಪ್ರಾರಂಭವಾದ ಪಾದಯಾತ್ರೆ ಇಂದು ಕತ್ತಿಗೆ ಗ್ರಾಮಕ್ಕೆ ತಲುಪಿದೆ, ಇಂದಿಗೆ 45 ಕಿಮಿ ಪಾದಯಾತ್ರೆ ಕ್ರಮಿಸಿ ಗ್ರಾಮಸ್ಥರಲ್ಲಿ ಕೂಲಿ ಕಾರ್ಮಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ ಎಂದರು.

ಪಾದಯಾತ್ರೆ ಮೂಲಕ ಹಾಗೂ ಶುಭ ಸಮಾರಂಭ ಸೇರಿದಂತೆ ಹಲವಾರು ವಿವಿಧ ಕಡೆಗಳಲ್ಲಿ ವಿಬಿ-ರಾಮ್-ಜಿ ಬಗ್ಗೆ ಜಾಗೃತಿ ಮೂಡಿಸಿದ್ದು, ಈಗಾಗಲೇ ಸುಮಾರು 217 ಕಡೆಗಳಲ್ಲಿ ನಾವು ಜಾಗೃತಿ ಮೋಡಿಸಿ ಕಾಂಗ್ರೆಸ್‌ನವರ ಆರೋಪ ಹಸಿ ಸುಳ್ಳು ಎಂದು ಕೂಲಿ ಕಾರ್ಮಿಕರಲ್ಲಿ ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದು ಹೇಳಿದರು.

ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಜೆ.ಕೆ.ಸುರೇಶ್, ಶಿವಾನಂದ್, ಮಾದೇನಹಳ್ಳಿ ನಾಗರಾಜ್ ,ರಮೇಶ್ ಹಾಗೂ ಗ್ರಾಮಸ್ಥರು ಸೇರಿದಂತೆ ಇತರರಿದ್ದರು.

ಹೊನ್ನಾಳಿ ತಾಲೂಕಿನ ಕತ್ತಿಗೆ ಗ್ರಾಮದಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು ವಿಬಿ-ರಾಮ್-ಜಿ ಬಗ್ಗೆ ಜಾಗೃತಿ ಮೂಡಿಸಿದರು.

ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಿಂದ ಜಿಲ್ಲಾ ಮಟ್ಟದ ಕಾರ್ಯಾಗಾರ | ಸಚಿವ ಮಲ್ಲಿಕಾರ್ಜುನ್ ಚಾಲನೆ

ಸರಕಾರದ ಪಂಚ ಗ್ಯಾರಂಟಿಗಳು ಬಡವರ ಬದುಕಿಗೆ ಆರ್ಥಿಕ ಶಕ್ತಿ

ದಾವಣಗೆರೆ: ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಕೇವಲ ಭರವಸೆಗಳಲ್ಲ, ಬಡವರ ಪಾಲಿನ ಆರ್ಥಿಕ ಶಕ್ತಿಯಾಗಿ ಮಾರ್ಪಟ್ಟಿದ್ದಲ್ಲದೇ ಅವು ಪಂಚಾಮೃತವಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

ಜಿಲ್ಲಾಡಳಿತ, ಜಿಪಂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಇಂಧನ ಇಲಾಖೆ, ಸಾರಿಗೆ ಇಲಾಖೆ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಜಿಲ್ಲಾ , ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳ ಸಂಯುಕ್ತಾಶ್ರಯದಲ್ಲಿ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ಜಿಲ್ಲಾ ಮಟ್ಟದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದಾವಣಗೆರೆ ಜಿಲ್ಲೆಯ 12.42 ಲಕ್ಷ ಜನರಿಗೆ 5 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ ಅಕ್ಕಿ ಬದಲು ಹಣ ನೀಡಲು ಒಟ್ಟು 347.54 ಕೋಟಿ ರು. ಅನ್ನಭಾಗ್ಯ ಯೋಜನೆಯಡಿ ವ್ಯಯಿಸಲಾಗಿದೆ, ಮನೆ ಯಜಮಾನಿಯರ ಸಬಲೀಕರಣಕ್ಕಾಗಿ 3,74,581 ಮಹಿಳೆಯರ ಖಾತೆಗೆ 1835 ಕೋಟಿ ರು. ಗೃಹಲಕ್ಷ್ಮಿ ಯೋಜನೆಯಡಿ ಜಮೆ ಮಾಡಲಾಗಿದೆ. ಮಹಿಳೆಯರ ಉಚಿತ ಪ್ರಯಾಣ ಮಾಡಲು ಜಿಲ್ಲೆಯಲ್ಲಿ 12.82 ಕೋಟಿ ಬಾರಿ ಉಚಿತ ಪ್ರಯಾಣ ಮಾಡಿದ್ದು ಸರಕಾರದಿಂದ 377 ಕೋಟಿ ರು. ಶಕ್ತಿ ಯೋಜನೆಗೆ ಭರಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯ 519963 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ಸಿಕ್ಕಿದ್ದು, ಸರಕಾರ 200 ಯುನಿಟ್ ಮಿತಿಯೊಳಗಿನ ಗ್ರಾಹಕರಿಗೆ 603 ಕೋಟಿ ರು. ಗೃಹಜ್ಯೋತಿ ಯೋಜನೆಯಡಿ ವೆಚ್ಚ ಮಾಡಿದೆ. ನಿರುದ್ಯೋಗಿ ಯುವಶಕ್ತಿಗೆ ಆಸರೆಯಾಗಿ 10630 ಫಲಾನುಭವಿಗಳಿಗೆ 33.23 ಕೋಟಿ ರು. ಯುವನಿಧಿ ಯೋಜನೆಯಡಿ ತಲುಪಿಸಲಾಗಿದೆ ಎಂದರು.

ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ. ರೇವಣ್ಣ ಮಾತನಾಡಿ, ಜಿಲ್ಲೆಯು ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಶೇ. 98ರಷ್ಟು ಪ್ರಗತಿ ಸಾಧಿಸುವ ಮೂಲಕ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿದೆ. ಗದಗದ ತಿಮ್ಮಾಪುರ ಗ್ರಾಮದ ಮಹಿಳೆಯರು ಗ್ಯಾರಂಟಿ ಹಣದಿಂದ ರು. 17.00 ಲಕ್ಷಗಳ ವೆಚ್ಚದಲ್ಲಿ ದೇವಸ್ಥಾನ ಕಟ್ಟಿಸಿರುವುದು ಯೋಜನೆಗಳ ಯಶಸ್ಸಿಗೆ ಸಾಕ್ಷಿಯಾಗಿದೆ.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಮಾತನಾಡಿ, ರಾಜ್ಯಾದ್ಯಂತ ಗ್ಯಾರಂಟಿ ಯೋಜನೆಗಳು 1,24,10,625 ಮಹಿಳೆಯರಿಗೆ ತಲುಪುತ್ತಿದೆ, ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯದ 1.24 ಕೋಟಿ ಮಹಿಳೆಯರಿಗೆ ಇದುವರೆಗೆ 26 ಕಂತುಗಳ ಮೂಲಕ ಒಟ್ಟು 68,628 ಕೋಟಿ ರು. ನೀಡಲಾಗಿದೆ.

ಪ್ರತಿ ಮಹಿಳೆಯ ಖಾತೆಗೆ ಒಟ್ಟು 52,000 ರು. ತಲುಪಿದೆ. 681 ಕೋಟಿ ಉಚಿತ ಟಿಕೆಟ್ ವಿತರಿಸಲಾಗಿದ್ದು, 17, 606 ಕೋಟಿ ರು. ಶಕ್ತಿ ಯೋಜನೆಗೆ ವೆಚ್ಚ ಮಾಡಲಾಗಿದೆ. ಅನ್ನಭಾಗ್ಯ ಯೋಜನೆಯಡಿ 4,50, 00,626 ಕಾರ್ಡ್‌ಗಳಿಗೆ 18 ಸಾವಿರ ಕೋಟಿ ವ್ಯಯಿಸಲಾಗಿದೆ, ಗೃಹಜ್ಯೋತಿ ಯೋಜನೆಯಡಿ 157 ಕೋಟಿ ಮನೆಗಳಿಗೆ 27,600 ಕೋಟಿ ಬಿಡುಗಡೆ ಮಾಡಿದೆ, ಯುವನಿಧಿ ಯೋಜನೆ ಯಡಿ 916 ಕೋಟಿ ಬಿಡುಗಡೆ ಮಾಡಲಾಗಿದೆ.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ ಮಾತನಾಡಿ, 2023 ರಿಂದ ಜಾರಿಗೆ ಬಂದ ಗ್ಯಾರಂಟಿ ಯೋಜನೆಗಳು ಸ್ವಾವಲಂಭನೆ ಮತ್ತು ಆರ್ಥಿಕ ಅಭಿವೃದ್ದಿಗೆ ಒತ್ತು ನೀಡಿದೆ. ಗ್ಯಾರಂಟಿ ಟೀಕಾಕಾರರಿಗೆ ಜಾರಿಗೆ ತಂದಿರುವ ಯೋಜನೆಗಳ ಯಶಸ್ಸು ಪ್ರತ್ಯುತ್ತರವಾಗಿದೆ ಎಂದರು.

ಶಾಸಕರಾದ ಡಿ.ಜಿ. ಶಾಂತ ನಗೌಡ, ಬಸವಂತಪ್ಪ ಕೆ. ಎಸ್., ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ್, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳು ಜಗದೀಶ್, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಎಚ್.ಬಿ.ಮಂಜಪ್ಪ ಸೇರಿದಂತೆ ಅಧಿಕಾರಿಗಳು ಇದ್ದರು.

ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ಗುಂಡಿ ಜಿಲ್ಲಾ ಮಟ್ಟದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಚಾಲನೆ ನೀಡಿದರು.

> **ದಾವಣಗೆರೆ ಜಿಲ್ಲೆಯ 12.42 ಲಕ್ಷ ಜನರಿಗೆ 5 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ ಅಕ್ಕಿ ಬದಲು ಹಣ ನೀಡಲು ಒಟ್ಟು 347.54 ಕೋಟಿ ರು. ಅನ್ನಭಾಗ್ಯ ಯೋಜನೆಯಡಿ ವ್ಯಯಿಸಲಾಗಿದೆ, ಮನೆ ಯಜಮಾನಿಯರ ಸಬಲೀಕರಣಕ್ಕಾಗಿ 3,74,581 ಮಹಿಳೆಯರ ಖಾತೆಗೆ 1835 ಕೋಟಿ ರು. ಗೃಹಲಕ್ಷ್ಮಿ ಯೋಜನೆಯಡಿ ಜಮೆ ಮಾಡಲಾಗಿದೆ. ಮಹಿಳೆಯರ ಉಚಿತ ಪ್ರಯಾಣ ಮಾಡಲು ಜಿಲ್ಲೆಯಲ್ಲಿ 12.82 ಕೋಟಿ ಬಾರಿ ಉಚಿತ ಪ್ರಯಾಣ ಮಾಡಿದ್ದು, ಸರಕಾರದಿಂದ 377 ಕೋಟಿ ರು. ಶಕ್ತಿ ಯೋಜನೆಗೆ ಭರಿಸಲಾಗಿದೆ.**
> **-ಎಸ್.ಎಸ್. ಮಲ್ಲಿಕಾರ್ಜುನ್,** ಸಚಿವ

ಸಮಾಚಾರ ಸಣ್ಣದಲ್ಲ

ಸಿಎಂ ಸಿದ್ದರಾಮಯ್ಯ ಜಿಲ್ಲಾ ಪ್ರವಾಸ ಮಾ. 7ಕ್ಕೆ

ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 7ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಅಂದು ಸಂಜೆ 5:45ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಅವರು, ಅಲ್ಲಿಂದ ನೇರವಾಗಿ ಬಂಟ್ವಾಳ ತಾಲೂಕಿನ ನಾವೂರು ಗ್ರಾಮಕ್ಕೆ ತೆರಳಲಿದ್ದಾರೆ. ನಾವೂರಿನ ಕೂಡಿಬೈಲು ಎಂಬಲ್ಲಿ ಆಯೋಜಿಸಲಾಗಿರುವ ''15ನೇ ವರ್ಷದ ಹೊನಲು ಬೆಳಕಿನ ಮೂಡೂರು ಪಡೂರು ಜೋಡುಕರೆ ಬಯಲು ಕಂಬಳ'' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ. ಈ ಕಂಬಳ ಉತ್ಸವದಲ್ಲಿ ಪಾಲ್ಗೊಂಡ ನಂತರ, ರಾತ್ರಿ 8:40ಕ್ಕೆ ಮಂಗಳೂರು ವಿಮಾನ ನಿಲ್ದಾಣದ ಮೂಲಕ ಬೆಂಗಳೂರಿಗೆ ಹಿಂತಿರುಗಲಿದ್ದಾರೆ.

ಪರಿಶಿಷ್ಟರಿಗೆ ಕುರಿ ಮೇಕೆ ಘಟಕ: ಅರ್ಜಿ ಆಹ್ವಾನ

ಮಂಗಳೂರು: ಪಶುಪಾಲನಾ ಇಲಾಖೆ ಹಾಗೂ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಎಸ್ಸಿ/ಎಸ್ಟಿ ಫಲಾನುಭವಿಗಳಿಗೆ 10+1 ಕುರಿ ಅಥವಾ ಮೇಕೆ ಘಟಕ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಒಂದು ಲಕ್ಷ ರೂಪಾಯಿ ಘಟಕ ವೆಚ್ಚದ ಈ ಯೋಜನೆಗೆ ಶೇ 90ರಷ್ಟು ಸಹಾಯಧನ ನೀಡಲಾಗುತ್ತದೆ. ಜಿಲ್ಲೆಯ ಗ್ರಾಮೀಣ ಭಾಗದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು ಹಾಗೂ ಪಶುಸಂಗೋಪನೆಯಲ್ಲಿ ತೊಡಗಿರುವ ರೈತರು ಈ ಸೌಲಭ್ಯ ಪಡೆಯಬಹುದು. ಆಯಾ ತಾಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳ ಕಚೇರಿಯಿಂದ ಅರ್ಜಿ ಪಡೆದು, ಅಗತ್ಯ ದಾಖಲೆಗಳೊಂದಿಗೆ ಮಾರ್ಚ್ 11ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸ್ಥಳೀಯ ಪಶುವೈದ್ಯರನ್ನು ಸಂಪರ್ಕಿಸಲು ಕೋರಲಾಗಿದೆ.

ಲೋಕ ಅದಾಲತ್ ಮಾ. 14ರಂದು

ಮಂಗಳೂರು: ತ್ವರಿತ ನ್ಯಾಯಕ್ಕಾಗಿ ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಮಾ. 14ರಂದು ''ರಾಷ್ಟ್ರೀಯ ಲೋಕ ಅದಾಲತ್'' ಹಮ್ಮಿಕೊಳ್ಳಲಾಗಿದೆ. ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಮೂಡುಬಿದರೆ ನ್ಯಾಯಾಲಯಗಳಲ್ಲಿ ಈ ಅದಾಲತ್ ನಡೆಯಲಿದೆ. ಬಾಕಿ ಇರುವ ಅಥವಾ ದಾಖಲಾಗದ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಇದು ಉತ್ತಮ ಅವಕಾಶ. ಇಲ್ಲಿ ಪ್ರಕರಣ ಇತ್ಯರ್ಥವಾದಲ್ಲಿ ಪಾವತಿಸಿದ ಕೋರ್ಟ್ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುತ್ತದೆ. ಇಲ್ಲಿನ ಆದೇಶದ ವಿರುದ್ಧ ಮೇಲ್ಮನವಿಗೆ ಅವಕಾಶ ಇರುವುದಿಲ್ಲ. ಉಚಿತ ಕಾನೂನು ಸಲಹೆಗಾಗಿ 15100 ಸಂಖ್ಯೆಗೆ ಕರೆ ಮಾಡಬಹುದು.

ಕಪ್ಪೆಕೆರೆ ಸುಬ್ರಾಯರಿಗೆ ಯಕ್ಷಮಂಗಳ ಪ್ರಶಸ್ತಿ

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ''ಯಕ್ಷಮಂಗಳ'' ಪ್ರಶಸ್ತಿಗಳನ್ನು ಘೋಷಿಸಲಾಗಿದ್ದು, ಮಾ. 7ರಂದು ಬೆಳಗ್ಗೆ 11ಕ್ಕೆ ವಿವಿ ಆವರಣದ ಯು.ಆರ್. ರಾವ್ ಸಭಾಂಗಣದಲ್ಲಿ ಪ್ರದಾನ ಸಮಾರಂಭ ನಡೆಯಲಿದೆ. ಹಿರಿಯ ಕಲಾವಿದ ಕಪ್ಪೆಕೆರೆ ಸುಬ್ರಾಯ ಭಾಗವತ, ಮಾಂಬಾಡಿ ಸುಬ್ರಹ್ಮಣ್ಯ ಭಟ್ ಮತ್ತು ಜಬ್ಬಾರ್‌ಸಮೊ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಯಕ್ಷಗಾನ ಸಂಶೋಧಕ ಕೃಷ್ಣ ಪ್ರಕಾಶ್ ಉಳಿತ್ತಾಯ ಅವರಿಗೆ ''ಯಕ್ಷಮಂಗಳ ಕೃತಿ ಪ್ರಶಸ್ತಿ'' ನೀಡಲಾಗುವುದು. ವಿವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ ಅಧ್ಯಕ್ಷತೆ ವಹಿಸಲಿದ್ದು, ಹಾವೇರಿ ಜಾನಪದ ವಿವಿ ವಿಶ್ರಾಂತ ಕುಲಪತಿ ಪ್ರೊ. ಚಿನ್ನಪ್ಪ ಗೌಡ ಅಭಿನಂದನಾ ಭಾಷಣ ಮಾಡಲಿದ್ದಾರೆ. ಇದೇ ವೇಳೆ ದಾನಿ ಡಾ. ದಯಾನಂದ ಪೈ ಅವರಿಗೆ ಗೌರವಾಭಿನಂದನೆ ಸಲ್ಲಿಸಲಾಗುವುದು.

ಭಾರತೀಯ ಸೇನೆಯ ಹುದ್ದೆಗೆ ಅರ್ಜಿ ಆಹ್ವಾನ

ಮಂಗಳೂರು: ಭಾರತೀಯ ಸೇನೆಯ ''ಅಗ್ನಿವೀರ್'' ಮತ್ತು ಶಾಶ್ವತ ವರ್ಗದ ಹುದ್ದೆಗಳಿಗೆ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ವೆಬ್ಸೈಟ್ ಮೂಲಕ ಜೂನ್ 1ರವರೆಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಜೂನ್ 1 ರಿಂದ 15ರವರೆಗೆ ಆನ್ಲೈನ್ ಪರೀಕ್ಷೆ ನಡೆಯಲಿದೆ. ಅಗ್ನಿವೀರ್‌ಜನರಲ್ ಡ್ಯೂಟಿ, ಕ್ಲರ್ಕ್, ಟೆಕ್ನಿಕಲ್ ಹಾಗೂ ಟ್ರೇಡ್ಸ್‌ಮನ್ ಹುದ್ದೆಗಳಿಗೆ ಬೇರೆ ಬೇರೆ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ. ಜನರಲ್ ಡ್ಯೂಟಿಗೆ 10ನೇ ತರಗತಿ ಹಾಗೂ ಟೆಕ್ನಿಕಲ್ ಹುದ್ದೆಗೆ ವಿಜ್ಞಾನ ವಿಭಾಗದ ಪಿಯುಸಿ ಅಥವಾ ಐಟಿಐ ಉತ್ತೀರ್ಣರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಕೂಳೂರಿನಲ್ಲಿರುವ ಸೇನಾ ನೇಮಕಾತಿ ಕಚೇರಿಯನ್ನು (0824-2951276) ಸಂಪರ್ಕಿಸಬಹುದು.

ವಿರಾಮ
ಪ್ರತಿ ಭಾನುವಾರ

{ಡಾ.ಎಂ.ಸಿ.ಸುಧಾಕರ್} ಸಚಿವ

ಕುಸುಮ್ ಸಿ ಯೋಜನೆಯಡಿ ಸೌರ ವಿದ್ಯುತ್ ಅನ್ನು ಉತ್ಪಾದನೆ ಮಾಡಿ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಅತಿ ಕಡಿಮೆ ಬೆಲೆಗೆ ನೀಡಲಾಗುತ್ತದೆ, ಈ ಯೋಜನೆಯಡಿ ರೈತರಿಗೆ ಉಚಿತವಾಗಿ ಹಗಲು ವೇಳೆಯಲ್ಲೆ ಸಾಕಷ್ಟು ತೃಪ್ತಿದಾಯಕವಾಗಿ ವಿದ್ಯುತ್ ನೀಡುವ ಯೋಜನೆ ಇದಾಗಿದೆ. ಇಂತಹ ಯೋಜನೆಗಳು 2047ಕ್ಕೆ ಭಾರತವನ್ನು ವಿಶ್ವದ ಸಂಪತ್ ಭರಿತ ದೇಶವನ್ನಾಗಿ ಹೊರಹೊಮ್ಮಿಸಲು ಕಾರಣವಾಗಲಿವೆ.

ಆಳ್ವಾಸ್ ಅಂತರ್ ಕಾಲೇಜು ಫೆಸ್ಟ್ | ಶಾಸಕ ಉಮಾನಾಥ ಚಾಲನೆ

ಸಾಧನೆಗೆ ಸ್ಪಷ್ಟ ಗುರಿ ಇರಲಿ

ಮೂಡುಬಿದಿರೆ: ಆಳ್ವಾಸ್ ಸ್ವಾಯತ್ತ ಕಾಲೇಜಿನ ಮ್ಯಾನೇಜ್ಮೆಂಟ್ ವಿಭಾಗದ ವತಿಯಿಂದ ರಾಜ್ಯಮಟ್ಟದ ಅಂತರ್ಕಾಲೇಜು ಫೆಸ್ಟ್ 'ಎಂಥುಸಿಯಾ' ಗುರುವಾರ ಸಂಸ್ಥೆಯ ಕೃಷಿಸಿರಿ ಆವರಣದ ಮೋಹಿನಿ ಅಪ್ಪಾಜಿ ನಾಯಕ್ ವೇದಿಕೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮುಲ್ಕಿ–ಮೂಡಬಿದಿರೆ ಕ್ಷೇತ್ರದ ಶಾಸಕ ಉಮಾನಾಥ ಕೋಟ್ಯಾನ್, ಜೀವನದಲ್ಲಿ ವ್ಯಕ್ತಿಯೊಬ್ಬನು ಯಾವ ಎತ್ತರವನ್ನು ತಲುಪಬೇಕು ಎಂಬುದರ ಬಗ್ಗೆ ಸ್ಪಷ್ಟ ಗುರಿ ಹೊಂದಿರುವುದು ಅತ್ಯಂತ ಮುಖ್ಯ. ಗುರಿಯನ್ನು ಸಾಧಿಸುವ ಮಾರ್ಗದಲ್ಲಿ ಸ್ಪರ್ಧೆಗಳು ಪ್ರಮುಖ ಹಂತಗಳಾಗಿ ಕಾರ್ಯನಿರ್ವಹಿಸುತ್ತವೆ. ವಿದ್ಯಾರ್ಥಿಗಳು ಕೇವಲ ಪುಸ್ತಕದ ಒಳಗಿನ ಜ್ಞಾನಕ್ಕೆ ಸೀಮಿತರಾಗದೆ ಬದುಕಿನ ಅನುಭವಗಳ ಮೂಲಕವೂ ಕಲಿಯಬೇಕು. ಪುಸ್ತಕಗಳಲ್ಲಿ ದೊರೆಯುವ ಜ್ಞಾನ ಸೀಮಿತವಾಗಿದ್ದು, ಅದರಾಚೆಯೂ ಬದುಕಿನ ಅನೇಕ ಪಾಠಗಳು ಅಡಗಿವೆ. ಪರೀಕ್ಷೆಯಲ್ಲಿ ಪಡೆಯುವ ಅಂಕಗಳು ಮಾತ್ರವೇ ಜೀವನದ ಸಾಧನೆ ಅಲ್ಲ, ಬಯಲು ಶಾಲೆಯ ಶಿಕ್ಷಣ ಬದುಕಿನ ನಿಜವಾದ ಕಲಿಕೆ ಎಂದರು.

ನೂರಕ್ಕೆ ನೂರು ಅಂಕ ಜೀವನ ಪಾಠ ಕಲಿಸದು

ಹಲವು ಬಾರಿ ನೂರಕ್ಕೆ ನೂರು ಅಂಕ ಪಡೆದ ಮಕ್ಕಳ ಪೋಷಕರೇ ವೃದ್ಧಾಶ್ರಮದಲ್ಲಿ ಜೀವನ ಸಾಗಿಸುತ್ತಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿದೆ. ಆದ್ದರಿಂದ ಬದುಕಿನ ವಿದ್ಯೆ ಪುಸ್ತಕಗಳಾಚೆಯೂ ಇದೆ ಎಂಬುದನ್ನು ವಿದ್ಯಾರ್ಥಿಗಳು ಮನಗಾಣಬೇಕು ಎಂದು ತಿಳಿಸಿದರು.

ಸ್ಥಳೀಯ ಪ್ರತಿಭೆ ಸಾಧನೆ: ಲೆಕ್ಸಾ ಲೈಟಿಂಗ್ ಟೆಕ್ನಾಲಜೀಸ್ ನ ಕಾರ್ಯನಿರ್ವಾಹಕ ನಿರ್ದೇಶಕ ರೋನಾಲ್ಡ್ ಸಿಲ್ವಾ ಡಿಸೋಜಾ ಮಾತನಾಡಿ, ಲೆಕ್ಸಾ ಸಂಸ್ಥೆ ಲೈಟಿಂಗ್ ಕ್ಷೇತ್ರದಲ್ಲಿ ಇಂದು ದೇಶದಲ್ಲೇ ಮುಂಚೂಣಿಯ ಸ್ಥಾನವನ್ನು ಗಳಿಸಿದೆ. ಬಹುರಾಷ್ಟ್ರೀಯ ಕಂಪನಿಗಳು ಈ ಕ್ಷೇತ್ರದಲ್ಲಿ ಅನೇಕ ಉತ್ಪನ್ನಗಳನ್ನು ತಯಾರಿಸುತ್ತಿದ್ದರೂ ಗುಣಮಟ್ಟದಲ್ಲಿ ನಮ್ಮ ಮಟ್ಟಕ್ಕೆ ತಲುಪಲು ಸಾಧ್ಯವಾಗಿಲ್ಲ. ಈ ಸಾಧನೆ ಸಾಧ್ಯವಾಗಲು ಸ್ಥಳೀಯ ಪ್ರತಿಭೆಗಳ ಸಹಕಾರವೇ ಪ್ರಮುಖ ಕಾರಣ ಎಂದು ಹರ್ಷ ವ್ಯಕ್ತಪಡಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯ ಅಭಿವೃದ್ಧಿಪಡಿಸಿಕೊಂಡು ಸಮಾಜಕ್ಕೆ ಮತ್ತು ದೇಶಕ್ಕೆ ಕೊಡುಗೆ ನೀಡುವ ದಿಕ್ಕಿನಲ್ಲಿ ಮುಂದುವರಿಯಬೇಕು ಎಂದರು. ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಅಸೋಸಿಯೇಷನ್ನ ಉಪಾಧ್ಯಕ್ಷ ಅವಿನಾಶ್ ಸುವರ್ಣ ಮಾತನಾಡಿ, ಜಗತ್ತಿನ ಹಲವು ದೇಶಗಳಲ್ಲಿ ಜೆನ್ ಝಿ ಪೀಳಿಗೆ ದೇಶದ ವ್ಯವಸ್ಥೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ ದಂಗೆಯಲ್ಲಿ ತೊಡಗಿದ್ದರೆ, ನಮ್ಮ ದೇಶದಲ್ಲಿ ಜೆನ್ ಝಿ ಯುವಕರು ತಮ್ಮ ಪ್ರತಿಭೆ, ಪರಿಶ್ರಮಗಳ ಮೂಲಕ ದೇಶದ ಅಭಿವೃದ್ಧಿಗೆ ಕೈಜೋಡಿಸುತ್ತಾ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಸಂತಸದ ವಿಷಯ ಎಂದರು. ಆಳ್ವಾಸ್ ಕಾಲೇಜಿನ ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ, ವಿಭಾಗದ ಮುಖ್ಯಸ್ಥೆ ಸುರೇಖಾ ರಾವ್, ಕರ್ಯಕ್ರಮ ಸಂಯೋಜಕರಾದ ಪ್ರವೀಣ್ ಕುಮಾರ್ ಬಿಜೆ, ಪ್ರಜ್ನಾ ಎಸ್ಸಿ, ನಮಿತಾ, ವಿದ್ಯಾರ್ಥಿ ಸಂಯೋಜಕರಾದ ಜಾಹ್ನವಿ ಶೆಟ್ಟಿ, ಆಶೀಶ್ ಪೂಜಾರಿ, ಖುಷಿ ಇದ್ದರು. ಸಪ್ತಶ್ರೀ ನಿರೂಪಿಸಿ, ಶ್ರೀಶ್ ಸ್ವಾಗತಿಸಿ, ಭೂಮಿಕ ವಂದಿಸಿದರು.

ಆಳ್ವಾಸ್ ಸ್ವಾಯತ್ತ ಕಾಲೇಜಿನ ಮ್ಯಾನೇಜ್ಮೆಂಟ್ ವಿಭಾಗದ ವತಿಯಿಂದ ರಾಜ್ಯಮಟ್ಟದ ಅಂತರ್ಕಾಲೇಜು ಫೆಸ್ಟ್ 'ಎಂಥುಸಿಯಾ' ಗುರುವಾರ ನಡೆಯಿತು.

257 ರೂ.ಗಳಿಂದ 100 ಕೋಟಿ ವ್ಯವಹಾರ !

ಲೆಕ್ಸಾ ಲೈಟಿಂಗ್ ಟೆಕ್ನಾಲಜೀಸ್ ನ ರೋನಾಲ್ಡ್ ಸಿಲ್ವಾ ಡಿಸೋಜಾ ಮಾತನಾಡಿ, ತಾನು ಈ ಸಂಸ್ಥೆಯನ್ನು ಆರಂಭಿಸಿದಾಗ ತನ್ನ ಬಳಿ ಕೇವಲ 257 ರೂಪಾಯಿ ಮಾತ್ರ ಇತ್ತು. ಆದರೆ ದೃಢ ಸಂಕಲ್ಪ, ಶ್ರಮ ಹಾಗೂ ಹೋರಾಟದಿಂದ ಸಂಸ್ಥೆ ಎಂಟು ವರ್ಷಗಳನ್ನು ಪೂರೈಸಿ ಸುಮಾರು ನೂರು ಕೋಟಿ ರೂ.ವ್ಯವಹಾರ ಮಾಡುವ ಮಟ್ಟಕ್ಕೆ ಬೆಳೆದಿದೆ. ಯಶಸ್ಸು ಸಾಧಿಸಲು ನಾವು ಯಾವಾಗಲೂ ಇತರರನ್ನು ಉದಾಹರಣೆಯಾಗಿ ನೋಡಬಾರದು, ನಾವು ನಮ್ಮದೇ ಸಾಧನೆಯ ಮೂಲಕ ಇತರರಿಗೆ ಉದಾಹರಣೆಯಾಗಬೇಕು ಎಂದರು.

ಆಹ್ವಾನ ಅಲಕ್ಷ್ಯ : ಶಾಸಕ ಆಕ್ರೋಶ

ಕಾವೂರು: ನಗರದ ಪಚ್ಚನಾಡಿ ಎಸ್ ಟಿ ಪಿ ಬಳಿ ಒಳಚರಂಡಿ ಕಾಮಗಾರಿ, ಉನ್ನತೀಕರಣ ಯೋಜನೆಗೆ ಹಾಗೂ ಸುರತ್ಕಲ್ ಮತ್ತು ದಕ್ಷಿಣ ಕ್ಷೇತ್ರದ ಎಸ್ ಟಿ ಪಿ ಮೇಲ್ದರ್ಜೆ ಚಾಲನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಬುಧವಾರ ನೀಡಿದ್ದು, ಸ್ಥಳೀಯ ಶಾಸಕನಾಗಿ ಆಹ್ವಾನ ನೀಡದೆ ಇರುವುದಕ್ಕೆ ಶಾಸಕ ಡಾ. ಭರತ್ ಶೆಟ್ಟಿ ತೀವ್ರ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಕೇಂದ್ರದ ಸ್ವಚ್ಛ ಭಾರತ್ ಹಾಗೂ ಎನ್ ಜಿ ಟಿ ಅನುದಾನ 40 ಕೋಟಿ ಅನುದಾನ ಬಂದಿದೆ. ರಾಜ್ಯ ಸರಕಾರದ ಪಾತ್ರ ಕೇವಲ ಅನುಷ್ಠಾನ ಮಾತ್ರ.ಒಳಚರಂಡಿ ಯೋಜನೆಗೆ ನನ್ನ ಪ್ರಥಮ ಅವಧಿಯಲ್ಲಿ ಕಾಮಗಾರಿಗೆ ಸಂಬಂಧಿಸಿದಂತೆ ಪತ್ರ ಬರೆದು ಅನುದಾನ ತರಲು ಕ್ರಮ ವಹಿಸಲಾಗಿತ್ತು ಎಂದಿದ್ದಾರೆ.

ಸಚಿವ ಗುಂಡೂರಾವ್ ಉಸ್ತುವಾರಿ ಸಚಿವರಾಗಿ ಜಿಲ್ಲೆಗೆ ಬರುವುದೇ ಅಪರೂಪ. ಇದರ ನಡುವೆ ಸರ್ಕಾರದ ಸಭೆ, ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕ್ರಮ ಎಂಬಂತೆ ಬಿಂಬಿಸಿ ಹೋಗುತ್ತಾರೆ. ಸ್ಥಳೀಯ ಶಾಸಕನ್ನಾಗಿ ಪಚ್ಚನಾಡಿಯಲ್ಲಿ ನನ್ನ ಉಪಸ್ಥಿಯಲ್ಲಿ ನಡೆಯಬೇಕಿತ್ತು.ಸ್ಥಳೀಯ ಕಾಂಗ್ರೆಸ್ ನಾಯಕರ ಕುಮ್ಮಕ್ಕುನಿಂದ ಅಧಿಕಾರಿಗಳು ಕೂಡ ಮಾಹಿತಿ ನೀಡಿಲ್ಲ. ಜಿಲ್ಲೆಯಲ್ಲಿ ಬಿಜೆಪಿ ಶಾಸಕರ ಪ್ರಾಬಲ್ಯ ಹಾಗೂ ಉತ್ತಮ ಕೆಲಸ ಕಾರ್ಯ ವನ್ನು ಕಾಂಗ್ರೆಸ್ ಗೆ ಸಹಿಸಿ ಕೊಳ್ಳ ಲಾಗುತ್ತಿಲ್ಲ.ಇದೀಗ ತಮ್ಮದೇ ಸಾಧನೆ ಎಂಬಂತೆ ಕ್ರೆಡಿಟ್ ಪಡೆಯಲು ಹವಣಿಸುತ್ತಿದೆ ಎಂದು ವ್ಯಂಗ್ಯ ವಾಡಿದರು. ಸಂಬಂಧ ಪಟ್ಟವರ ಮೇಲೆ ಹಕ್ಕು ಚ್ಯುತಿ ಮಂಡನೆ ಮಾಡುವೆ ಎಂದು ಹೇಳಿದ್ದಾರೆ.

ಶಾಸಕ ಡಾ. ಭರತ್ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸಹಕಾರ ಸಂಘಕ್ಕೆ ಅಧ್ಯಕ್ಷ ಆಯ್ಕೆ

ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಎಸ್. ಮಂಜುನಾಥ್ ಅವಿರೋಧವಾಗಿ ಆಯ್ಕೆಯಾದರು.

ಅಜ್ಜಂಪುರ : ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಎಸ್. ಮಂಜುನಾಥ್ ಅವಿರೋಧವಾಗಿ ಆಯ್ಕೆಯಾದರು.

ಕಾಂತಾಮಣಿ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಎಂ ಎಸ್ ಮಂಜುನಾಥ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾ ಅಧಿಕಾರಿಯಾಗಿ ಸುನಂದಮ್ಮ ಕಾರ್ಯ ನಿರ್ವಹಿಸಿದರು. ಬಳಿಕ ಮಾತನಾಡಿದ ನೂತನ ಅಧ್ಯಕ್ಷ ಎಂ.ಎಸ್. ಮಂಜುನಾಥ್, ಸರ್ವ ನಿರ್ದೇಶಕರ ಸಹಕಾರದೊಂದಿಗೆ ಸಂಘದ ಸದಸ್ಯರಿಗೆ ಸರಕಾರದಿಂದ ದೊರೆಯುವ ಸೌಲಭ್ಯ ಸೌಕರ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸಲಾಗುವುದು ಎಂದು ಎಂದು ತಿಳಿಸಿದರು. ಸಂಘದ ಉಪಾಧ್ಯಕ್ಷ ನವೀನ್, ನಿರ್ದೇಶಕ ನಂಜುಂಡಪ್ಪ, ರಂಗಸ್ವಾಮಿ, ಎಸ್. ಬಿ ನಾಗೇಂದ್ರಪ್ಪ, ಗಿರೀಶ್ ಚೌವ್ದನ್, ನಾಗರಾಜ್, ಟಿಟಿ ತಿಪ್ಪೇಶ್, ಶಿವರಾಜ್, ಕಾರ್ಯದರ್ಶಿ ಸತೀಶ್ ಇದ್ದರು.

ವಿವಿಧ ಬೇಡಿಕೆಗಾಗಿ ದಲಿತ ಹಕ್ಕುಗಳ ಸಮಿತಿ ಧರಣಿ

ಉಡುಪಿ : ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾ ದಲಿತ ಹಕ್ಕುಗಳ ಸಮಿತಿ ವತಿಯಿಂದ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಯಿತು.

ದಲಿತ ಹಕ್ಕುಗಳ ಸಮಿತಿಯ ಜಿಲ್ಲಾಧ್ಯಕ್ಷ ಸಂಜೀವ ಬಳ್ಕೂರು ಮಾತನಾಡಿ, ದಲಿತರಿಗೆ ದೇವಸ್ಥಾನ ಪ್ರವೇಶ ತಡೆ, ಅಸ್ಪೃಶ್ಯತೆ ಮತ್ತು ತಾರತಮ್ಯ ತಡೆಗಟ್ಟಲು ಜಿಲ್ಲೆಗೊಂದು ತ್ವರಿತ ನ್ಯಾಯಾಲಯ ಸ್ಥಾಪಿಸಬೇಕು. ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಉಪಯೋಜನೆಯ ಸಾಧಕ– ಬಾಧಕ ಕುರಿತು ವಿಧಾನಸಭೆಯ ವಿಶೇಷ ಅಧಿವೇಶನ ಕರೆದು ಚರ್ಚೆ ನಡೆಸಬೇಕು ಎಂದು ಒತ್ತಾಯಿಸಿದರು.

ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 28ರಷ್ಟಿರುವ ದಲಿತ ಸಮುದಾಯ ಇಂದಿಗೂ ಅಪಮಾನ, ದೌರ್ಜನ್ಯ, ದಬ್ಬಾಳಿಕೆಗೆ ಬಲಿಯಾಗುತ್ತಿವೆ. ರಾಜ್ಯದಲ್ಲಿರುವ ಒಟ್ಟು ದಲಿತ ಕುಂಟುಂಬಗಳಲ್ಲಿ ಶೇ. 9ರಷ್ಟು ಕುಟುಂಬಗಳು ಮಾತ್ರ ಕೃಷಿಭೂಮಿ ಹೊಂದಿವೆ. ಉಳಿದ ಶೇ. 91ರಷ್ಟು ಕುಟುಂಬಗಳು ಕೃಷಿ ಕೂಲಿಕಾರರಾಗಿ ಮತ್ತು ಅಸಂಘಟಿತರಾಗಿ ತೊಡಗಿಸಿಕೊಂಡಿದ್ದಾರೆ ಎಂದರು. ಧರಣಿಯಲ್ಲಿ ಸಮಿತಿಯ ಮುಖಂಡರಾದ ರವಿ ವಿ.ಎಂ., ನಾಗರತ್ನ ನಾಡಾ, ಕೃಷ್ಣ ಇನ್ನಾ, ಸುಶೀಲಾ ಬಳ್ಕೂರು, ಇತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ವತಿಯಿಂದ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಯಿತು.

ಡ್ರಗ್ಸ್ ಮಾರಾಟ :ಆರು ಮಂದಿ ಬಂಧನ

ಮಂಗಳೂರು: ನಗರದ ವಿವಿಧೆಡೆ ಕಾಲೇಜು ವಿದ್ಯಾರ್ಥಿಗಳು ಹಾಗೂ ಮಹಿಳೆಯರಿಗೆ ನಿಷೇಧಿತ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರು ಮಂದಿ ಆರೋಪಿಗಳನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ. ಮಂಗಳೂರು ದಕ್ಷಿಣ ಮತ್ತು ಉತ್ತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ದಾಳಿಗಳಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದ್ದು, ಬಂಧಿತರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಎಂಡಿಎಂಎ ಮತ್ತು ಹೈಡ್ರೋ ವೀಡ್ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

ದಕ್ಷಿಣ ಪೊಲೀಸ್ ಠಾಣಾ ವ್ಯಾಪ್ತಿಯ ಕ್ಲಾಸಿಕ್ ಕಂಫರ್ಟ್ ಲಾಡ್ಜ್‌ನಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಮೊಹಮ್ಮದ್ ಸಯ್ಯದ್ ಅಫ್ರೀದಿ, ಮಕ್ಸೂದ್ ಸಾಗ್, ಅಹಮ್ಮದ್ ಅಲಿ ಅರ್ಫಾನ್ ಮತ್ತು ಫೆಲಿಕ್ಸ್ ಅವರನ್ನು ಬಂಧಿಸಲಾಗಿದೆ. ಇವರಿಂದ 53.87 ಗ್ರಾಂ ಎಂಡಿಎಂಎ, 103.20 ಗ್ರಾಂ ಹೈಡ್ರೋ ವೀಡ್ ಗಾಂಜಾ ಜಪ್ತಿ ಮಾಡಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಉತ್ತರ ಠಾಣಾ ಪೊಲೀಸರು ಗ್ರೀನ್ ಪಾರ್ಕ್ ಮೈದಾನದ ಬಳಿ ದಾಳಿ ನಡೆಸಿ ಇಬ್ಬರನ್ನು ಬಂಧಿಸಿ 1 ಕೆಜಿಗೂ ಅಧಿಕ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಕೊಲೆ: ಆರೋಪಿಗೆ ಶಿಕ್ಷೆ

ಮಂಗಳೂರು: ಕ್ಷುಲ್ಲಕ ಹಣಕಾಸಿನ ದ್ವೇಷಕ್ಕಾಗಿ ವ್ಯಕ್ತಿಯೊಬ್ಬನನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದ ಆರೋಪಿಗೆ ಇಲ್ಲಿನ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂಪಾಯಿ ದಂಡ ವಿಧಿಸಿ ತೀರ್ಪು ನೀಡಿದೆ. ಮುಲ್ಕಿ ನಿವಾಸಿ ಮುರುಗನ್ ಶಿಕ್ಷೆಗೊಳಗಾದ ಆರೋಪಿ. ನ್ಯಾಯಾಧೀಶರಾದ ಜಗದೀಶ್ ವಿ.ಎನ್. ಅವರು ಈ ಮಹತ್ವದ ತೀರ್ಪು ಪ್ರಕಟಿಸಿದ್ದಾರೆ. ಪ್ರಕರಣದ ಹಿನ್ನೆಲೆ: 2022ರ ಮಾರ್ಚ್ 19ರಂದು ರಾತ್ರಿ ಮುಲ್ಕಿಯ ಬಪ್ಪನಾಡು ಗ್ರಾಮದ ಟೂರಿಸ್ಟ್ ಕಾರ್ ಪಾರ್ಕಿಂಗ್ ಬಳಿ ಈ ಘಟನೆ ನಡೆದಿತ್ತು. ಉಲ್ಲಂಜೆಯ ಹರೀಶ್ ಸಾಲ್ಯಾನ್ (47) ಎಂಬುವವರ ಮುಖಕ್ಕೆ ಆರೋಪಿ ಮುರುಗನ್ ಸಿಮೆಂಟ್ ಕಾಂಕ್ರೀಟ್ ಮಿಶ್ರಿತ ಕೆಂಪು ಕಲ್ಲಿನಿಂದ ಜಜ್ಜಿ ಬರ್ಬರವಾಗಿ ಕೊಲೆ ಮಾಡಿದ್ದ. ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ಉಂಟಾಗಿದ್ದ ವೈಷಮ್ಯವೇ ಈ ಕೃತ್ಯಕ್ಕೆ ಕಾರಣವಾಗಿತ್ತು. ಈ ಸಂಬಂಧ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು.ತನಿಖೆ ಮತ್ತು ವಾದ: ಪ್ರಕರಣದ ಗಂಭೀರತೆ ಅರಿತ ಇನ್‌ಸ್ಪೆಕ್ಟರ್‌ಕುಸುಮಾಧರ್‌ಅವರು ಸಮಗ್ರ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ತನಿಖಾ ಸಮಯದಲ್ಲಿ ಎಎಸ್‌ಐ ಸಂಜೀವ್ ಅವರು ಸಹಕರಿಸಿದ್ದರು. ವಿಚಾರಣೆ ವೇಳೆ ಸರಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಜ್ಯೋತಿ ಪ್ರಮೋದ್ ನಾಯಕ್ ಅವರು ಪ್ರಬಲ ವಾದ ಮಂಡಿಸಿದ್ದರು. ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ನ್ಯಾಯಾಲಯ ಆರೋಪಿ ಮೇಲಿನ ಕೊಲೆ ಆರೋಪ ಸಾಬೀತಾಗಿದೆ ಎಂದು ತೀರ್ಮಾನಿಸಿ ಶಿಕ್ಷೆ ಪ್ರಕಟಿಸಿದೆ.

ಮಾ.7ರಿಂದ ನಾಟಕೋತ್ಸವ

ಶಿವಮೊಗ್ಗ: ಸಹ್ಯಾದ್ರಿ ಕಲಾತಂಡ ಶಿವಮೊಗ್ಗ ಇವರ ವತಿಯಿಂದ ಮಾ.7ರಿಂದ ಮಾ.10ರವರೆಗೆ ಪ್ರತಿದಿನ ಸಂಜೆ 6.30ಕ್ಕೆ ಕುವೆಂಪು ರಂಗಮಂದಿರದಲ್ಲಿ ಸಹ್ಯಾದ್ರಿ ನಾಟಕೋತ್ಸವವನ್ನು ಆಯೋಜಿಸಲಾಗಿದೆ ಎಂದು ರಂಗ ನಿರ್ದೇಶಕ ಡಾ. ಲವ ಜಿ.ಆರ್. ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮೊದಲ ದಿನ ಮಾ.7ರಂದು ಚಂದ್ರಶೇಖರ ಕಂಬಾರರ ಡಾ.ಲವ ಜಿ.ಆರ್. ನಿರ್ದೇಶನದ ಸಹ್ಯಾದ್ರಿ ಕಲಾ ತಂಡ ಅರ್ಪಿಸುವ 'ಜೋಕುಮಾರಸ್ವಾಮಿ' ನಾಟಕ ಪ್ರದರ್ಶನದೊಂದಿಗೆ ಚಾಲನೆ ನೀಡಲಾಗುವುದು. ಮಾ.8ರಂದು ಸುಮನಸ ಕೊಡವೂರು ಉಡುಪಿ ಇವರಿಂದ ಈದಿ(ಕನ್ನಡ) ನಾಟಕ, ಮಾ.9ರಂದು ರಂಗಾಯಣ ಕಲ್ಬುರ್ಗಿ ಇವರಿಂದ ಕಾಲಚಕ್ರ, ನಾಟಕ ಮಾ.10ರಂದು ಕರಾವಳಿಯ ನಿರ್ದಿಂಗತ ಇವರಿಂದ ರಾಮ, ಕೃಷ್ಣ, ಶಿವ (ಕನ್ನಡ)ನಾಟಕಗಳು ಪ್ರದರ್ಶನಗೊಳ್ಳಲಿವೆ ಎಂದರು.

ಜಗತ್ತು ಇಂದು ತಲ್ಲಣದಲ್ಲಿದೆ. ಯುದ್ಧಭೀತಿ, ಭಯೋತ್ಪಾದನೆ, ಅಸುರಕ್ಷತೆಯ ಮಾತುಗಳು ಕೇಳಿ ಬರುತ್ತಿರುವ ಈ ಹೊತ್ತಿನಲ್ಲಿ ಜಗತ್ತನ್ನು ನೋಡುವ, ಅವುಗಳಿಗೆ ಹೊಸ ಭರವಸೆಯ ಬೆಳಕನ್ನು ಹುಡುಕುವ ಅಗತ್ಯ ಯಾವುದೇ ಸಾಂಸ್ಕೃತಿಕ ಚಳುವಳಿಗೆ ಇರುತ್ತದೆ. ಅದರ ಭಾಗವೇ ರಂಗಭೂಮಿಯಾಗಿದೆ ಎಂದರು.

ಇಲ್ಲಿ ಪ್ರದರ್ಶನ ಕಾಣುವ ನಾಲ್ಕೂ ನಾಟಕಗಳು ಮಾನವ ಸಂಘರ್ಷದ ಜೊತೆಗೆ ಅಂತಃಸತ್ವವನ್ನು ಬಹಿರಂಗಗೊಳಿಸುತ್ತದೆ. ಉಳುವವನೇ ನೆಲದೊಡೆಯ ಕಾನೂನಿನ ಸಂಗತಿಯನ್ನು ಜೋಕುಮಾರ ಸ್ವಾಮಿ ನಾಟಕ ಹೇಳಿದರೆ, ಈದಿ ಧರ್ಮಗಳ ಪರಿಧಿಯಾಚೆಗಿರುವ ಭ್ರಾತೃತ್ವದ ಬೇರುಗಳನ್ನು ಶೋಧಿಸುತ್ತದೆ. ಕಾಲಚಕ್ರ ನಾಟಕ ಮನೆ ಮನೆ ಕಥೆಯಾಗಿದೆ. ರಾಮ, ಕೃಷ್ಣ, ಶಿವ ನಾಟಕ ಇಂಡಿಯಾದ ಮಹಾಸ್ವಪ್ನಗಳು ಮತ್ತು ಮಹಾ ದುಃಖಗಳು ಎಂಬುದನ್ನು ಶೋಧಿಸುತ್ತದೆ. ಹೀಗೆ ಸಹ್ಯಾದ್ರಿ ನಾಟಕೋತ್ಸವ ವಿಭಿನ್ನ ವೈವಿಧ್ಯಮಯವಾಗಿರುತ್ತವೆ ಎಂದರು.

ನಾಟಕಗಳು ಪ್ರತಿದಿನ ಸಂಜೆ6.30ಕ್ಕೆ ಪ್ರಾರಂಭವಾಗುತ್ತದೆ. ರಂಗಗೀತೆ, ಬೀದಿಗೀತೆ, ಬಳಿಕ ನಾಟಕ ಸರಿಯಾಗಿ ಸಂಜೆ 7.15ಕ್ಕೆ ಆರಂಭವಾಗುತ್ತವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಕೆ.ಎಸ್. ಮಂಜಪ್ಪ, ರಜನೀಶ್ ನಾವುಡ, ರಕ್ಷಿತ, ಪ್ರಜ್ವಲ್, ನವೀನ್ ಇದ್ದರು.

ಪುರಸಭೆ ಮುಖ್ಯಾಧಿಕಾರಿಗೆ ಮುಂಬಡ್ತಿ

ಉಡುಪಿ: ಕಾರ್ಕಳ ಪುರಸಭೆಯ ಮುಖ್ಯಾಧಿಕಾರಿಯಾಗಿ ಲೀನಾ ಬ್ರಿಟ್ಟೋ ಅವರನ್ನು ಒಂದು ದಿನದ ಮಟ್ಟಿಗೆ ಪುತ್ತೂರು ನಗರಸಭೆಯ ಪೌರಾಯುಕ್ತರ ಹುದ್ದೆಗೆ ನಿಯುಕ್ತಿಗೊಳಿಸಲಾಗಿದ್ದು ಆ ಬಳಿಕ ಅವರನ್ನು ಕಾರ್ಕಳ ಪುರಸಭೆ ಮುಖ್ಯಾಧಿಕಾರಿಯಾಗಿ ಮುಂದುವರಿಸಿ ಆದೇಶ ಹೊರಡಿಸಲಾಗಿದೆ.

ಮುಖ್ಯಾಧಿಕಾರಿ ಶ್ರೇಣಿ- 1 ವೃಂದದ ಅಧಿಕಾರಿಗಳಿಗೆ ಪೌರಾಯುಕ್ತರು ಶ್ರೇಣಿ-2 ವೃಂದಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958ರ ನಿಯಮ 42ರಡಿ ಸ್ಥಾನಪಲ್ಲಟ ಆಧಾರದ ಮೇಲೆ ಮುಂಬಡ್ತಿ ನೀಡಿ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಟಿ. ಮಂಜುನಾಥ ಅವರು ಆದೇಶಿಸಿದ್ದಾರೆ. ಕಾರ್ಕಳ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿದ್ದ ಲೀನಾ ಬ್ರಿಟ್ಟೋ ಅವರಿಗೆ ಮುಂಬಡ್ತಿ ನೀಡಲಾಗಿದ್ದು ಅವರನ್ನು ಒಂದು ದಿನದ ಮಟ್ಟಿಗೆ ಪುತ್ತೂರು ನಗರಸಭೆಯ ಪೌರಾಯುಕ್ತರ ಹುದ್ದೆಗೆ ನಿಯುಕ್ತಿಗೊಳಿಸಿ ತದನಂತರ ಕಾರ್ಕಳ ಪುರಸಭೆಯ ಮುಖ್ಯಾಧಿಕಾರಿ ಹುದ್ದೆಯಲ್ಲಿ ಮುಂದುವರೆಸಿ ಆದೇಶಿಸಲಾಗಿದೆ.

ಲೀನಾ ಬ್ರಿಟ್ಟೋ ಅವರು ಪುತ್ತೂರು ಸಾಮೆತ್ತಡ್ಕ ನಿವಾಸಿಯಾಗಿದ್ದು ಪ್ರಸ್ತುತ ಬಂಟ್ವಾಳದಲ್ಲಿ ವಾಸವಾಗಿದ್ದಾರೆ. ಪುತ್ತೂರು ನಗರಸಭೆ, ಬಂಟ್ವಾಳ ಪುರಸಭೆ, ಮುಳಬಾಗಿಲು ಪುರಸಭೆ, ಮಂಗಳೂರು ಮಹಾನಗರ ಪಾಲಿಕೆ, ಬಂಟ್ವಾಳ ಪುರಸಭೆ, ಮತ್ತಿತರ ಕಡೆ ಕಾರ್ಯನಿರ್ವಹಿಸಿದ್ದಾರೆ.

ಶಾಸಕರ ಆಸ್ಪತ್ರೆ ಭೇಟಿಗೆ ಟೀಕೆ: ಖಂಡನೆ

ಪತ್ರಿಕಾಗೋಷ್ಠಿಯಲ್ಲಿಸುಬ್ರಹ್ಮಣ್ಯ ಬಿಜೆಪಿ ಶಕ್ತಿ ಕೇಂದ್ರ ಪ್ರಮುಖರಾದ ರಾಜೇಶ್ ಎನ್.ಎಸ್. ಮಾತನಾಡಿದರು.

ಸುಬ್ರಹ್ಮಣ್ಯ : ಸುಬ್ರಹ್ಮಣ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಸಾರ್ವಜನಿಕರ ದೂರಿನ ಹಿನ್ನಲೆಯಲ್ಲಿ ಭೇಟಿ ನೀಡಿ ಪರಿಶೀಲಿಸಿ ಅಲ್ಲಿನ ವೈದ್ಯರು, ಸಿಬ್ಬಂದಿಗಳಿಂದ ಮಾಹಿತಿ ಪಡೆದಿರುವುದನ್ನು ತಿರುಚಿ ಟೀಕಿಸಿರುವ ಕಾಂಗ್ರೆಸ್ನ ಪ್ರಮುಖರ ಹೇಳಿಕೆಯನ್ನು ಸುಬ್ರಹ್ಮಣ್ಯ ಬಿಜೆಪಿ ಖಂಡಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುಬ್ರಹ್ಮಣ್ಯ ಬಿಜೆಪಿ ಶಕ್ತಿ ಕೇಂದ್ರ ಪ್ರಮುಖರಾದ ರಾಜೇಶ್ ಎನ್.ಎಸ್. ಅವರು, ಸಾರ್ವಜನಿಕರ ದೂರಿನ ಹಿನ್ನಲೆಯಲ್ಲಿ ಇತ್ತೀಚೆಗೆ ಸುಳ್ಯ ಶಾಸಕರು ಸುಬ್ರಹ್ಮಣ್ಯ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಶಾಸಕರು ಆಸ್ಪತ್ರೆಯಲ್ಲಿ ಉತ್ತಮ ರೀತಿಯಲ್ಲಿ ಸೇವೆ ನೀಡಬೇಕು ಎಂದು ವೈದ್ಯರು, ಸಿಬ್ಬಂದಿಗಳಿಗೆ ಸೂಚನೆ, ಮಾರ್ಗದರ್ಶನಗಳನ್ನು ನೀಡಿದ್ದರು, ನಗುಮುಖದ ಸೇವೆ ನೀಡಬೇಕು, ಇಲ್ಲಿನ ಆಸ್ಪತ್ರೆ ಮೇಲ್ದರ್ಜೆಗೇರಿಸಲು ಇಲ್ಲಿ ಸಂದರ್ಶಕರ ಸಂಖ್ಯೆ ಹೆಚ್ಚಿರಬೇಕಾಗುತ್ತದೆ ಎಂದು ದಾಖಲೆ ಪರಿಶೀಲನೆ ನಡೆಸಿ ಸೂಚಿಸಿದ್ದರು. ಬಳಿಕದ ಬೆಳವಣಿಗೆಯಲ್ಲಿ ಡಾಕ್ಟರ್ಗೆ ಶಾಸಕರು ಜೋರು ಮಾಡಿದ್ದಾರೆ, ಡಾಕ್ಟರ್ ಕಣ್ಣೀರು ಹಾಕಿದ್ದಾರೆ ಎಂದು ಶಾಸಕರ ವಿರುದ್ಧ ಆರೋಪಗಳನ್ನು ಮಾಡಿ ಕಾಂಗ್ರೆಸ್ನ ಕೆಲವರು ಪ್ರಚಾರ ಮಾಡಿದ್ದಾರೆ. ಆದರೆ ಇದು ಸುಳ್ಳು. ಶಾಸಕರು ಡಾಕ್ಟರ್‌ಜೊತೆ ಬಳಿಕವೂ ಮಾತನಾಡಿದ್ದಾರೆ. ವೈದ್ಯರು ತರಬೇತಿಗೆ ತೆರಳಿದ್ದು, ತರಬೇತಿ ಮುಗಿಸಿ ಕರ್ತವ್ಯಕ್ಕೆ ಮರಳಲಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ಬಿಜೆಪಿ ಪ್ರಮುಖ್ ದಿನೇಶ್ ಸಂಪ್ಯಾಡಿ ಮಾನಾಡಿ, ಸುಳ್ಯ ಶಾಸಕರು ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿರುವುದನ್ನು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಪುತ್ತೂರು ಶಾಸಕರು ಮಹಿಳಾ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಅತ್ಯಂತ ಕೀವಲವಾಗಿ ಮಾತನಾಡಿದ್ದರು. ಇದು ಕಾಂಗ್ರೆಸ್ನವರಿಗೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ಆಸ್ಪತ್ರೆಗಾಗಿ ಪ್ರತಿಭಟನೆ:

ಕುಕ್ಕೆ ಸುಬ್ರಹ್ಮಣ್ಯಕ್ಕೆ ಸುಸಜ್ಜಿತ ಆಸ್ಪತ್ರೆ ನಮ್ಮೆಲ್ಲರ ಬೇಡಿಕೆಯಾಗಿದೆ. ಅದರಂತೆ ಎಸ್.ಅಂಗಾರ ಅವರ ಅವಧಿಯಲ್ಲಿ ಆಸ್ಪತ್ರೆಯ ಹೊರಹೋಗಿ ವಿಭಾಗ ಕಟ್ಟಡ ಆಗಿದೆ. ಸುಬ್ರಹ್ಮಣ್ಯ ಆಸ್ಪತ್ರೆ ಮೇಲ್ದರ್ಜೆಗೇರಿಸಬೇಕು, ಇದಕ್ಕಾಗಿ ಸಾರ್ವಜನಿಕರು ನಡೆಸುವ ಪ್ರತಿಭಟನೆಗೆ ನಾವೂ ಕೈಜೋಡಿಸುತ್ತೇವೆ ಎಂದು ರಾಜೇಶ್ ಎನ್.ಎಸ್. ತಿಳಿಸಿದರು.

ಬಿಜೆಪಿ ಸುಳ್ಯ ಒಬಿಸಿ ಮೋರ್ಚಾ ಅಧ್ಯಕ್ಷ ಗಿರೀಶ್ ಆಚಾರ್ಯಮಾತನಾಡಿದರು. ಸುಬ್ರಹ್ಮಣ್ಯ ಗ್ರಾ.ಪಂ. ಮಾಜಿ ಅಧ್ಯಕ್ಷೆ ಸುಜಾತ ಕಲ್ಲಾಜೆ, ಎನ್ಸಿ ಬ್ಯಾಂಕ್ ನಿರ್ದೇಶಕ ಅಚ್ಚುತ ಗೌಡ ಕುಕ್ಕಪನಮನೆ, ಬಿಜೆಪಿ ಯುವ ಮೋರ್ಚಾ ಸದಸ್ಯ ದಿಲೀಪ್ ಕಲ್ಲಾಜೆ, ಮಹಿಳಾ ಮೋರ್ಚಾ ಸದಸ್ಯೆ ಭಾರತಿದಿನೇಶ್, ಸುಬ್ರಹ್ಮಣ್ಯ ಐನೆಕಿದು ಸಹಕಾರ ಸಂಘದ ಅಧ್ಯಕ್ಷ ವೆಂಕಟೇಶ್ ಎಚ್.ಎಲ್. ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಚೂರಿ ಇರಿತ: ಆರೋಪಿಗಳ ಬಂಧನ

ಉಡುಪಿ: ಪ್ರೀತಿ ಸಂಬಂಧ ರಾಜಿ ಪಂಚಾಯತಿ ನಡೆಸಲು ತೆರಳಿದ್ದ ವೇಳೆ ಹಿಂದು ಸಂಘಟನೆಯ ಮುಖಂಡ ಉಡುಪಿ ನಗರಸಭೆ ಮಾಜಿ ಉಪಾಧ್ಯಕ್ಷೆ ಲಕ್ಷ್ಮೀ ಅವರ ಪತಿ ಮಂಜು ಕೊಳ ಅವರಿಗೆ ಯುವಕನೊಬ್ಬ ಚೂರಿ ಇರಿದ ಘಟನೆ ಮಲ್ಪೆಯಲ್ಲಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಜು ಕೊಳ ಅವರು ಮಂಗಳವಾರ ಸಂಜೆ ಮಲ್ಪೆ ಬೀಚ್ ಬಳಿ ಪಲಿಮಾರು ಭಾಗ ಜೋಡಿಯೊಂದರ ಪ್ರೀತಿಯ ವಿಚಾರದಲ್ಲಿ ರಾಜಿ ಪಂಚಾಯತಿ ನಡೆಸಲು ಕರೆದಿದ್ದರು ಎನ್ನಲಾಗಿದೆ. ಈ ವೇಳೆ ಪರಸ್ಪರ ಮಾತಿಗೆ ಮಾತು ಬೆಳೆದು ಮಂಜು ಕೊಳ ಅವರಿಗೆ ಯುವಕ ಚೂರಿ ಇರಿದಿದ್ದಾನೆ. ಕೂಡಲೇ ಉಡುಪಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಘಟನೆಗೆ ಯಾವುದೇ ಕೋಮು ಹಿನ್ನೆಲೆ ಇಲ್ಲ. ಆದ್ದರಿಂದ ಯಾರೂ ಸಹ ವದಂತಿಗಳನ್ನು ಹರಡಬಾರದು. ಗಾಯಗೊಂಡ ಮಂಜು ಕೊಳ ಅಪಾಯದಿಂದ ಪಾರಾಗಿದ್ದು, ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್‌ತಿಳಿಸಿದ್ದಾರೆ.

ನಿಲ್ದಾಣಗಳಲ್ಲಿ ಬಜೆಟ್ ವೀಕ್ಷಣೆ ಇಂದು

ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಮಂಡಿಸಲಿರುವ 2026-27ನೇ ಸಾಲಿನ ರಾಜ್ಯ ಬಜೆಟ್ ಅನ್ನು ಸಾರ್ವಜನಿಕರು ಬಸ್ ನಿಲ್ದಾಣಗಳಲ್ಲಿ ನೇರ ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಾರ್ತಾ ಇಲಾಖೆಯ ಸಹಯೋಗದೊಂದಿಗೆ ರಾಜ್ಯದ 230 ಪ್ರಮುಖ ಬಸ್ ನಿಲ್ದಾಣಗಳ ಎಲ್‌ಇಡಿ ಪರದೆಗಳಲ್ಲಿ ಈ ಪ್ರಸಾರ ನಡೆಯಲಿದೆ.17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ದಾಖಲೆ ಬರೆಯಲಿದ್ದು ಅವರ ಬಜೆಟ್ ಹಾಗೂ ನಂತರದ ಪತ್ರಿಕಾಗೋಷ್ಠಿ ನೇರವಾಗಿ ತಲುಪಿಸುವ ಉದ್ದೇಶವಾಗಿದೆ.

ಜೆಸ್ಕಾಂ ಅಧಿಕಾರಿ ಮನೆ ಮೇಲೆ ಲೋಕಾ ದಾಳಿ

ಯಾದಗಿರಿ: ನಗರದಲ್ಲಿ ಜೆಸ್ಕಾಂ ಅಧಿಕಾರಿಯೊಬ್ಬರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಮೇರೆಗೆ ಜೆಸ್ಕಾಂ ಉಪ ವಿದ್ಯುತ್ ಪರಿಶೀಲಕ ವೀರೇಶ್ ಹಿರೇಮಠ ಅವರ ಯಾದಗಿರಿ ಹಾಗೂ ಬೆಂಗಳೂರಿನ ನಿವಾಸಗಳ ಮೇಲೂ ಲೋಕಾಯುಕ್ತ ಅಧಿಕಾರಿಗಳು ಗುರುವಾರ ಬೆಳಗ್ಗೆ ದಾಳಿ ನಡೆಸಿದ್ದಾರೆ. ಪ್ರಾಥಮಿಕ ಮಾಹಿತಿಯಂತೆ ವೀರೇಶ್ ಹೆಸರಿನಲ್ಲಿ ಯಾದಗಿರಿ, ಸುರಪುರ ಮತ್ತು ಕಲಬುರಗಿಯಲ್ಲಿ 6 ಪ್ಲಾಟ್‌ಗಳು ಹಾಗೂ ಸುಮಾರು 14 ಎಕರೆ ಕೃಷಿ ಭೂಮಿ ಇರುವುದಾಗಿ ತಿಳಿದುಬಂದಿದೆ.

ಬಿಎಸ್‌ವೈ- ಸಿದ್ದೇಶ್ವರ ಭಿನ್ನರಾಗ ಶಮನಕ್ಕೆ ರಾಧಾಮೋಹನ್ ಯತ್ನ

← ಮೊದಲಪುಟದಿಂದ

ಇದನ್ನು ತಕ್ಷಣ ಹಿಂಪಡೆಯಬೇಕು. ಮೊದಲು ಜಿಲ್ಲಾ ಪದಾಧಿಕಾರಿಗಳ ಬದಲಾವಣೆ ಮಾಡಬೇಕು ಎಂದು ಸಿದ್ದೇಶ್ವರ ವಿಜಯೇಂದ್ರ ಅವರಿಗೆ ನೇರವಾಗಿ ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ. ಹೀಗೆ ಅಭ್ಯರ್ಥಿ ಘೋಷಣೆ ಮಾಡುವುದು ಸರಿಯಲ್ಲ, ಇದರಿಂದ ಮುಖಂಡರು, ಕಾರ್ಯಕರ್ತರಲ್ಲೂ ಗೊಂದಲವಾಗುತ್ತದೆ ಎಂದು ಸಭೆಯಲ್ಲಿದ್ದ ಮುಖಂಡರು ರಾಷ್ಟ್ರೀಯ ನಾಯಕರಿಗೆ ಮನವಿ ಮಾಡಿದರು ಎನ್ನಲಾಗಿದೆ.

ನಗರದ ಜಿಎಂಐಟಿ ಅತಿಥಿ ಗೃಹಕ್ಕೆ ಆಗಮಿಸಿದ್ದ ರಾಧಾಮೋಹನದಾಸ್ ಅಗರವಾಲ್, ಬಿ.ವೈ.ವಿಜಯೇಂದ್ರ, ಪ್ರೀತಂ ಗೌಡ ಅವರು ಜಿ.ಎಂ.ಸಿದ್ದೇಶ್ವರ, ಹರಿಹರ ಶಾಸಕ ಬಿ.ಪಿ.ಹರೀಶ, ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ, ಯಶವಂತರಾವ್ ಜಾಧವ್, ಚನ್ನಗಿರಿ ತುಮ್ಕೋಸ್ ಅಧ್ಯಕ್ಷ ಎಚ್.ಎಸ್.ಶಿವಕುಮಾರ, ಮಾಜಿ ಶಾಸಕ ಎಚ್.ಪಿ.ರಾಜೇಶ ಇತರರ ಜೊತೆಗೆ ಸುಮಾರು ಹೊತ್ತಿನವರೆಗೆ ಚರ್ಚೆ ನಡೆಸಿ, ಭಿನ್ನಾಭಿಪ್ರಾಯ ಶಮನಕ್ಕೆ ಪ್ರಯತ್ನಿಸಿದರು. ಹೀಗೆ ಅಭ್ಯರ್ಥಿ ಘೋಷಣೆ ಮಾಡುತ್ತಾ, ಗುಂಪುಗಾರಿಕೆ ಮಾಡುತ್ತಾ ಪಕ್ಷವನ್ನೇ ಕೆಲವರು ಹಾಳುಗೆಡವುತ್ತಿದ್ದಾರೆ. ಕೆಲವೇ ಕೆಲವರನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಮಾಜಿ ಸಿಎಂ ಯಡಿಯೂರಪ್ಪ ಸಹ ಅಭ್ಯರ್ಥಿಗಳ ಘೋಷಣೆ ಮಾಡಿ, ಮತ್ತಷ್ಟು ವಾತಾವರಣ ಕೆಡುವಂತೆ ಮಾಡುತ್ತಿದ್ದಾರೆ. ಮಾಯಕೊಂಡದಲ್ಲಿ ಕಳೆದ ಚುನಾವಣೆಯಲ್ಲಿ 3-4ನೇ ಸ್ಥಾನಕ್ಕೆ ಹೋದ ವ್ಯಕ್ತಿಗೆ ಟಿಕೆಟ್ ಘೋಷಿಸುತ್ತಾರೆ. ಜಗಳೂರು, ಹರಪನಹಳ್ಳಿ ಸೇರಿದಂತೆ ವಿವಿಧ ಕ್ಷೇತ್ರಕ್ಕೆ ಅಭ್ಯರ್ಥಿ ಘೋಷಣೆ ಮಾಡಿರುವುದಕ್ಕೆ ಮುಖಂಡರು ಆಕ್ಷೇಪಿಸಿದರು ಎನ್ನಲಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯ ನಾಲ್ವರು ಆಕಾಂಕ್ಷಿಗಳಾದ ಯಶವಂತರಾವ್ ಜಾಧವ್, ಟಿ.ಶ್ರೀನಿವಾಸದಾಸ ಕರಿಯಪ್ಪ, ದೇವರಮನಿ ಶಿವಕುಮಾರ, ರಾಜನಹಳ್ಳಿ ಶಿವಕುಮಾರಗೆ ಪಕ್ಷದಲ್ಲಿ ಎಷ್ಟು ವರ್ಷದಿಂದ ಕಾರ್ಯಕರ್ತರಾಗಿದ್ದೀರಿ ಅಂತೆಲ್ಲಾ ಮಾಹಿತಿ ಪಡೆದರು. ಮತ್ತೊಂದು ಬಣದಿಂದ ಬಿ.ಜಿ.ಅಜಯಕುಮಾರ ಹೆಸರು ಇದೆಯೆಂದು ರಾಜ್ಯ ನಾಯಕರು ಅಗರವಾಲ್ ಗಮನಕ್ಕೆ ತಂದರು. ಸದ್ಯ ದಾವಣಗೆರೆ ದಕ್ಷಿಣದ ವಾತಾವರಣ ಏನಿದೆಯೆಂಬುದಾಗಿ ಕೇಳಿದಾಗ ಆರ್ಥಿಕವಾಗಿ ಬಲಿಷ್ಠವಾಗಿರುವ ಎದುರಾಳಿಗಳಿದ್ದಾರೆಂಬುದಾಗಿ ಟಿಕೆಟ್ ಆಕಾಂಕ್ಷಿಗಳಲ್ಲೊಬ್ಬರಾದ ಯಶವಂತ ರಾವ್ ಅಗರವಾಲ್ ಗಮನಕ್ಕೆ ತಂದರು. ಯಶವಂತರಾವ್ ನಾಲ್ಕು ಸಲ ಸೋತಿದ್ದೇನೆಂದಾಗ, ಅತೀ ಕನಿಷ್ಠ ಮತ್ತು ಗರಿಷ್ಠ ಮತಗಳ ಅಂತರವೆಷ್ಟು, ಕಳೆದ ಚುನಾವಣೆಯಲ್ಲಿ ಬಿಜೆಪಿ ಸೋತಿದ್ದು 28 ಸಾವಿರ ಮತಗಳ ಅಂತರದಿಂದ ಎಂಬೆಲ್ಲಾ ಮಾಹಿತಿ ಅಗರವಾಲ್ ಕಲೆ ಹಾಕಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ, ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ, ಹರಿಹರ ಶಾಸಕ ಬಿ.ಪಿ.ಹರೀಶ, ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ನಾಗಪ್ಪ, ಯಶವಂತರಾವ್ ಜಾಧವ್, ತುಮ್ಕೋಸ್ ಅಧ್ಯಕ್ಷ ಎಚ್.ಎಸ್.ಶಿವಕುಮಾರ, ಜಿ.ಎಸ್.ಅನಿತಕುಮಾರ, ಎಸ್.ಎಂ.ವೀರೇಶ ಹನಗವಾಡಿ, ಬಿ.ಎಸ್.ಜಗದೀಶ, ಟಿ.ಶ್ರೀನಿವಾಸ ದಾಸಕರಿಯಪ್ಪ, ದೇವರಮನಿ ಶಿವಕುಮಾರ, ರಾಜನಹಳ್ಳಿ ಶಿವಕುಮಾರ, ಎಸ್.ಟಿ.ಯೋಗೇಶ್ವರ, ಶಿವನಗೌಡ ಪಾಟೀಲ, ಟಿಂಕರ್ ಮಂಜಣ್ಣ, ಜಗದೀಶ ಕುಮಾರ ಪಿಸೆ, ಅಣಬೇರು ಜೀವನಮೂರ್ತಿ ಇದ್ದರು.

ಸಿದ್ದೇಶ್ವರ ಪ್ರಶ್ನೆಗಳ ಸುರಿಮಳೆ

ರಾಜ್ಯಾಧ್ಯಕ್ಷನಾದ ನಂತರ ಎಷ್ಟು ಸಲ ಇಲ್ಲಿ ಬಂದಿದ್ದೀರಿ, ಎಷ್ಟು ಸಲ ಭೇಟಿಯಾಗಿದ್ದೀರಿ ಎಂದು ಪಕ್ಷದ ಹಿರಿಯ ಮುಖಂಡ ಜಿ.ಎಂ.ಸಿದ್ದೇಶ್ವರ ರಾಜ್ಯಾಧ್ಯಕ್ಷ ವಿಜಯೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿಗೆ ಪ್ರಶ್ನಿಸಿದ್ದಾರೆ. ಹೀಗೆ ಚುನಾವಣೆ ಇನ್ನೂ 2 ವರ್ಷವಿದ್ದಾಗಲೇ ಅಭ್ಯರ್ಥಿ ಘೋಷಿಸುತ್ತಾ ಹೋದರೆ ಏನರ್ಥ? ಎಂಬುದಾಗಿ ಪ್ರಶ್ನಿಸಿದ್ದಾರೆ. ಅದಕ್ಕೆ ವಿಜಯೇಂದ್ರ, ವೇದಿಕೆಯಲ್ಲಿ ಯಾರೋ ಚೀಟಿ ಬರೆದು ಕೊಟ್ಟದ್ದನ್ನು ಯಡಿಯೂರಪ್ಪನವರು ಓದಿದ್ದಾರೆಂಬುದಾಗಿ ಹೇಳಿ ಸಮಾಧಾನಿಸಿದ್ದಾರೆ ಎನ್ನಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1.	ಪೂರ್ವ-1	ಬೆಂಜಮಂ/ಕಾನಿಅ(ಪೂರ್ವ)-1/ಯೋ.ವಿ/5506/2025-26 ದಿನಾಂಕ:04.03.2026	₹ 58,60,201/- / ₹ 1,17,205/-	13.03.2026ರ ಸಂಜೆ 4:00 ಗಂಟೆಯವರೆಗೆ	16.03.2026ರ ಸಂಜೆ 5:00 ಗಂಟೆಯ ನಂತರ
2.	ಪೂರ್ವ-1	ಬೆಂಜಮಂ/ಕಾನಿಅ(ಪೂರ್ವ)-1/ಯೋ.ವಿ/5506/2025-26 ದಿನಾಂಕ:04.03.2026	₹ 81,84,533.43 / ₹ 1,63,700/-	13.03.2026ರ ಸಂಜೆ 4:00 ಗಂಟೆಯವರೆಗೆ	16.03.2026ರ ಸಂಜೆ 5:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲೆ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಡಿಐಪಿಆರ್/ಸಿಪಿ/6012/ಸಿಸಿಎಲ್/2025–26

ಕರ್ನಾಟಕ ಸರ್ಕಾರ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ

ಎಂ.ಜಿ.ರೋಡ್, ಕಾರವಾರ–581301, ದೂರವಾಣಿ ಸಂ: 08382–226292
ಇ–ಮೇಲ್ ಐಡಿ: ceozpkwr@nic.in

Letter No:ZP/ADM/DESKTOPCOMP/E- 117290/2025-26 ದಿನಾಂಕ: 04–03–2026

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಷಯ: ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಅವಶ್ಯವಿರುವ ಡೆಸ್ಕಟಾಪ್ ಕಂಪ್ಯೂಟರ್ ಅನ್ನು ಪೂರೈಸುವ ಕುರಿತು.

ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಅವಶ್ಯವಿರುವ ಡೆಸ್ಕ ಟಾಪ್ ಕಂಪ್ಯೂಟರ್‌ಗಳನ್ನು ಖರೀದಿಸಲು ಉದ್ದೇಶಿಸಲಾಗಿದ್ದು, ಅವಶ್ಯವಿರುವ ಡೆಸ್ಕ ಟಾಪ್ ಕಂಪ್ಯೂಟರ್‌ಗಳನ್ನು, KTPP ಅಧಿನಿಯಮ 1999 ಹಾಗೂ ನಿಯಮಗಳು 2000ರ ಪ್ರಕಾರ, ದ್ವಿ–ಲಕೋಟೆಯಲ್ಲಿ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೀಡಿರುವ ವಿವರಗಳಂತೆ ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳ ಪೂರೈಕೆಗೆ ಅರ್ಹ ಏಜೆನ್ಸಿಗಳಿಂದ ಆನ್‌ಲೈನ್ ಮರು–ಟೆಂಡರ ಅನ್ನು ಆಹ್ವಾನಿಸಲಾಗುತ್ತದೆ.

ನಿಗದಿತ ಇಎಂಡಿ ಮೊತ್ತ: ರೂ. 22,500/– ಆಗಿರುತ್ತದೆ. ಟೆಂಡರ್ ದಾಖಲೆಗಳನ್ನು ದಿನಾಂಕ: 12.03.2026 ರಂದು 11.00 AM ಗಂಟೆಯೊಳಗಾಗಿ ಆನ್‌ಲೈನ್ ಮೂಲಕ ಸಲ್ಲಿಸಬೇಕು. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 13.03.2026 ರಂದು 12.00 PM ಗಂಟೆಗೆ ಹಾಗೂ ಆರ್ಥಿಕ ಬಿಡ್ ದಿನಾಂಕ: 14.03.2026 ರಂದು 12.30 PM ಗಂಟೆಗೆ ತೆರೆಯಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪಂಚಾಯತ ಕಾರ್ಯಾಲಯದ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು. ಟೆಂಡರ್ ದಸ್ತಾವೇಜುಗಳನ್ನು http://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ

DIPR/KWR/KSMCA/1173/25-26 Dt. 05.03.2026

KARNATAKA NEERAVRI NIGAM LIMITED

(A Government of Karnataka Enterprise)
Office of The Executive Engineer, KNNL, TLBC Division No. 3, Sindhanur-584128

No.EE-3/KNNL/TS/SLIS/Weir/BCB/Corrigendum/2025-26/2345 Date:04.03.2026.
No.EE-3/KNNL/TS/SLIS/Weir/BCB/Corrigendum/2025-26/2350 Date:04.03.2026.

Corrigendum Notification (Through e-procurement only)

Ref: 1) This office Short term Tender Notification Letter No.: 2101&2102 dated: 27.01.2026.

The calendar of events in above tender notification is modified as Below.

Sl. No	Calendar of events	Original Date and Time	As per modified Date and Time
A	The Last date of Submission of completed Tender Documents through e-portal.	05.03.2026 @ 16.00 Hrs	20.03.2026 @16.00 Hrs
B	Date of Opening of Technical Bid (Cover -I)	06.03.2026@ 16.10 Hrs	24.03.2026 @ 16.10 Hrs
C	The Financial bid of pre-qualified Contractor will be opened on (i.e., Cover II).	13.03.2026 @ 16.00 Hrs	30.03.2026 @ 16.00 Hrs

Other terms and conditions remain unaltered. Further information can be obtained from the Office of the Executive Engineer, KNNL, TLBC Division No.3, Sindhanur During office hours. Or Through website https://kppp.karnataka.gov.in/#/portal/ portal-home Contact number 9620191362.

Sd/- Executive Engineer,
KNNL, TLBC Division No.3,
Sindhanur.

DIP/RCR/740/KSMCA/743/2025-26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ ಸಂಖ್ಯೆ 15/2025–26
ದಿನಾಂಕ : 03–03–2026

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ ಧಾರವಾಡ, ಗದಗ, ಹಾನಗಲ್ ಮತ್ತು ರಾಣಿಬೆನ್ನೂರು ಉಪವಿಭಾಗಗಳ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಮಂಜುರಾದ ಕಾಮಗಾರಿಗಳನ್ನು ಕೆ.ಡಬ್ಲೂ – **1,2,3,4** (ದ್ವಿಲಕೋಟೆ) ಪದ್ದತಿಯಲ್ಲಿ **"ಇ–ಪ್ರೊಕ್ಯೂರ್‌ಮೆಂಟ್"** ಮುಖಾಂತರ ಟೆಂಡರ್ ಕರೆಯಲಾಗಿದೆ. ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. **950.00** ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ : **14.25** ಲಕ್ಷಗಳು; ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. **2.00** ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ : **5000.00** ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ : https://kppp.karnataka.gov.in ನಲ್ಲಿ ದಿನಾಂಕ : **06/03/2026** ರಿಂದ ಮುಂದಿನ 30 ದಿನಗಳೊಳಗಾಗಿ ಹಂತ ಹಂತವಾಗಿ ಡೌನಲೋಡ್ ಮಾಡಿಕೊಳ್ಳುವುದು ಹಾಗೂ ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ.

ವಿ.ಸೂ : ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.

ವಾಸಾಸಂಇ/ಹಾವೇರಿ/ಕೆ.ಎಸ್.ಎಂ.ಸಿ.ಎ/771/2025–26

ಸಿದ್ದು 4.5 ಲಕ್ಷ ಕೋಟಿ ರು. ಗ್ಯಾರೆಂಟಿ ಬಜೆಟ್ ಇಂದು

← ಮೊದಲಪುಟದಿಂದ

ಕೃಷಿ ಇಲಾಖೆಯಲ್ಲಿ ರೈತ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಹಲವಾರು ಯೋಜನೆಗಳು ಚರ್ಚೆಯಾಗಿವೆ. ಮುಂಬರಲಿರುವ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮತದಾರರ ಓಲೈಕೆಗೂ ಮತ್ತಷ್ಟು ಜನಪ್ರಿಯ ಯೋಜನೆಗಳನ್ನು ಘೋಷಿಸಲು ಸಿದ್ದರಾಮಯ್ಯ ತಯಾರಿ ನಡೆಸಿದ್ದಾರೆ ಎನ್ನಲಾಗಿದೆ.

ಸೆಸ್ ಹೊರೆಯ ಆತಂಕ: ಆದಾಯ ಸಂಗ್ರಹವನ್ನು ಹೆಚ್ಚಿಸಿಕೊಳ್ಳಬೇಕಾದ ಒತ್ತಡದಲ್ಲಿ ಸರಕಾರವಿದೆ. ಆದರೆ ಈಗಾಗಲೇ ಇಲಾಖೆಗಳಿಗೆ ನೀಡಿರುವ ರಾಜಸ್ವ ಸಂಗ್ರಹಣೆಯ ಗುರಿ ಹೆಚ್ಚಾಗಿದೆ. ಆದ್ದರಿಂದ ಪುನಃ ಗುರಿಯನ್ನು ಇನ್ನಷ್ಟು ಹೆಚ್ಚಿಸಲು ಸಾಧ್ಯವಿಲ್ಲ, ಆದ್ದರಿಂದ ಹೊಸ ಆದಾಯದ ಮೂಲವಾಗಿ ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ಹೆಚ್ಚಿಸಲು ಸರಕಾರ ತೀರ್ಮಾನಿಸಿದೆ ಎನ್ನಲಾ ಗಿದೆ. ಸಿದ್ದರಾಮಯ್ಯ ಅವರು ತಮ್ಮ ಬಜೆಟ್‌ನಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ಪ್ರತಿ ಲೀಟರ್‌ಗೆ ಒಂದು ರುಪಾಯಿ ಸೆಸ್ ವಿಧಿಸುವ ಸಾಧ್ಯತೆಯಿದೆ ಎನ್ನಲಾಗಿದೆ. ಇದರೊಂದಿಗೆ 16ನೇ ಹಣಕಾಸು ಆಯೋಗದಿಂದ ನಿರೀಕ್ಷಿದಷ್ಟು ತೆರಿಗೆ ಪಾಲು ಶಿಫಾರಸು ಆಗಿಲ್ಲವಾದರೂ, 15ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ ಹೆಚ್ಚುವರಿ 7,387 ಕೋಟಿ ರು. ಸಿಕ್ಕಿದೆ. ಆದರೆ ಸಾಲದ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಹಾಗೂ ವಿತ್ತೀಯ ಕೊರತೆ ಹೆಚ್ಚಾಗುವ ಆತಂಕವನ್ನು ಯಾವ ರೀತಿಯಲ್ಲಿ ನಿಭಾಯಿಸಲಿ ದ್ದಾರೆ ಎನ್ನುವ ಕುತೂಹಲ ಅನೇಕರಲ್ಲಿದೆ.

ನಿತೀಶ್ ರಾಜ್ಯಸಭೆಗೆ, ಬಿಹಾರಕ್ಕೆ ಬಿಜೆಪಿ ಸಿಎಂ

← ಮೊದಲಪುಟದಿಂದ

ನಿಮ್ಮೊಂದಿಗಿನ ನನ್ನ ಬಾಂಧವ್ಯವು ಭವಿಷ್ಯದಲ್ಲಿಯೂ ಸಹ ಉಳಿಯುತ್ತದೆ. ಅಭಿವೃದ್ಧಿ ಹೊಂದಿದ ಬಿಹಾರವನ್ನು ನಿರ್ಮಿಸಲು ನಿಮ್ಮೊಂದಿಗೆ ಕೆಲಸ ಮಾಡುವ ನನ್ನ ಸಂಕಲ್ಪ ಎಂದೆಂದಿಗೂ ಸ್ಥಿರವಾಗಿರುತ್ತದೆ ಎಂದು ನಾನು ನಿಮಗೆ ಸಂಪೂರ್ಣ ಭರವಸೆ ನೀಡುತ್ತೇನೆ. ರಚನೆಯಾಗಲಿರುವ ಹೊಸ ಸರ್ಕಾರಕ್ಕೆ ನನ್ನ ಸಂಪೂರ್ಣ ಸಹಕಾರ ಮತ್ತು ಮಾರ್ಗದರ್ಶನವಿರುತ್ತದೆ ಎಂದು ಹೇಳಿ ದ್ದಾರೆ. ಎರಡು ದಶಕಗಳಿಗೂ ಹೆಚ್ಚು ಕಾಲ, ನೀವು ನಿರಂತರವಾಗಿ ನನ್ನ ಮೇಲೆ ನಿಮ್ಮ ನಂಬಿಕೆ ಮತ್ತು ಬೆಂಬಲವನ್ನು ಇರಿಸಿದ್ದೀರಿ. ನಿಮ್ಮ ನಂಬಿಕೆ ಮತ್ತು ಬೆಂಬಲದ ಶಕ್ತಿಯಿಂದ ಇಂದು ಬಿಹಾರವು ಅಭಿವೃದ್ಧಿಯಾಗುತ್ತಿದೆ. ಈ ಕಾರಣಕ್ಕೆ ಹಲವಾರು ಸಂದರ್ಭಗಳಲ್ಲಿ ನಾನು ನಿಮಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದೇನೆ ಎಂದು ಬರೆದಿದ್ದಾರೆ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2025–26/1442 ದಿನಾಂಕ: 04.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿತೀಯ & ತೃತೀಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2025–26 ನೇ ಸಾಲಿನ MVS O & M Non SDP ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟನಲ್ಲಿ ದಿನಾಂಕ: **05/03/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **05/03/2026** ಸಮಯ 10:00 ಗಂಟೆಯಿಂದ **16/03/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **05/03/2026** ಸಮಯ 16:00 ಗಂಟೆಯಿಂದ **16/03/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **17/03/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **20/03/2026** ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/730/ಕೆಎಸ್ಎಂಸಿಎ/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಶಾಕಾ, ನಿಮಪೋ,
ವಿಭಾಗ ಸಂ–8, ಝಳಕಿ – 586204. ತಾ:ಇಂಡಿ, ಜಿ: ವಿಜಯಪುರ.
ದೂರವಾಣಿ ಸಂ: 08422–282227ಇ–ಮೇಲ್:eezalakidiv8@gmail.com

ಸಂ:ಕೃಭಾಜನಿನಿ/ಇಂಶಾಕಾವಿ–8/ಝಳಕಿ/ಡಿಬಿ/ಟೆಂಡರ–13/ಸೇವಿಂಗ್ಸ್/2025–26/1989 ದಿನಾಂಕ:03.03.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ: 8 ಝಳಕಿ ತಾ: ಇಂಡಿ ಇವರು ಶೇಕಡಾವಾರು ಟೆಂಡರನ್ನು ಆಹ್ವಾನಿಸಿರುತ್ತಾರೆ. ಕೆಟಿಪಿಪಿ ಕಾಯ್ದೆ ನಿಯಮ–28 ರನ್ವಯ ಕೆ.ಡಬ್ಲೂ– 1 ರಡಿ ಒಂದು ಲಕೋಟೆ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಭದ್ರತಾ ಠೇವಣಿ ಹೊರತು ಪಡಿಸಿ ಒಂದು ಲಕೋಟೆಯಲ್ಲಿ ಟೆಂಡರ್‌ನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಕೆ.ಪಿ.ಡಬ್ಲ್ಯೂ.ಡಿ ದಡಿ ನೊಂದಣಿಯಾದ ಕ್ಲಾಸ್–4 ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು, 2025–26 ನೇ ಸಾಲಿನ ಕ್ಲೋಜರ್ ಮತ್ತು ವಿಶೇಷ ದುರಸ್ಥಿ ಕಾಮಗಾರಿಗಳಿಗೆ ಹಂಚಿಕೆಯಾದ ಅನುದಾನ ಉಳಿತಾಯ ಮೊತ್ತದಡಿ 2 ಸಂಖ್ಯೆ ಕ್ಲೋಜರ್ ಕಾಮಗಾರಿಗಳ ಮೊತ್ತ 26.69 ಲಕ್ಷ ಜಿ.ಎಸ್.ಟಿ ಹೊರತುಪಡಿಸಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಮೊತ್ತದ ವಿವರ :
ಗರಿಷ್ಠ ಮೊತ್ತ ರೂ: **16.95** ಲಕ್ಷ – ಕನಿಷ್ಠ ಮೊತ್ತ ರೂ: **9.75** ಲಕ್ಷ
ಗರಿಷ್ಠ ಇ.ಎಂ.ಡಿ ರೂ: **42400/–** – ಕನಿಷ್ಠ ಇ.ಎಂ.ಡಿ ರೂ: **24400/–**

ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕೆಳಕಂಡ ಕಚೇರಿಯಿಂದ ಅಥವಾ ವೆಬ್‌ಸೈಟನಲ್ಲಿ www.kppp.karnataka.gov.in ಪಡೆದುಕೊಳ್ಳಬಹುದು. **ಟೆಂಡರಿನ ಹಂತಗಳು;**

1] ಟೆಂಡರ ಡಾಕ್ಯುಮೆಂಟನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ ಮತ್ತು ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿಯು ದಿನಾಂಕ: **06.03.2026 ರಿಂದ 13.03.2026 ರ ಸಾಯಂಕಾಲ 4.30 ಗಂಟೆ. 2]** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **16.03.2026** ಬೆಳಗ್ಗೆ 11.00 ಗಂಟೆಗೆ. **3]** ಪಿ.ಡಬ್ಲೂ.ಡಿ ಕ್ಲಾಸ್–3 ಹಾಗೂ ಮೇಲ್ಪಟ್ಟ ಗುತ್ತಿಗೆದಾರರ ನೊಂದಣಿ ಪ್ರಮಾಣ ಪತ್ರ (ಪಿ.ಡಬ್ಲೂ.ಡಿ ಕ್ಲಾಸ್–3 ನೊಂದಣಿಯನ್ನು ಅಧೀಕ್ಷಕ ಇಂಜಿನೀಯರರು ಬೆಳಗಾವಿ ಹಾಗೂ ಪಿ.ಡಬ್ಲೂ.ಡಿ ಕ್ಲಾಸ್–4 ದರ್ಜೆ ನೊಂದಣಿಯನ್ನು ಕಾರ್ಯಪಾಲಕ ಇಂಜಿನೀಯರರು ವಿಜಯಪೂರನಲ್ಲಿ ನೊಂದಣಿ ಮಾಡಿದ ಪ್ರಮಾಣ ಪತ್ರ ಮಾತ್ರ ಪರಿಗಣಿಸಲಾಗುವುದು) ಇ.ಪಿ.ಎಫ್, ಜಿ.ಎಸ್.ಟಿ, ಬಿಡ್ ಕೆಪ್ಯಾಸಿಟಿ, ಯು.ಡಿ.ಐ.ಎನ್ ನಮೂದಿತ ಟರ್ನ ಓವರ್ ಪತ್ರ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ. **4]** ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಯಾವುದೇ ಕಾಮಗಾರಿ/ಗಳ ಒಪ್ಪಿಗೆ/ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ:8,ಝಳಕಿ

ವಾಸಾಸಂಇ/ವಿಜಯಪುರ/773/ಕೆಎಸ್ಎಂಸಿಎ/2025–26

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1.	**(1) ಮೆ॥ ಜೈ ಪ್ರಕಾಶ್ ಟ್ರೇಡರ್ಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಎಂ ವಿಜಯನ್,** **(2) ಶ್ರೀ ವಿಜಯನ್** ಬಿನ್ ಶ್ರೀ ಮುನಿಸಾಮಿ, **ಇವರಿಬ್ಬರ ವಿಳಾಸ:** ನಂ.20, ನೆಲ ಮಹಡಿ, 1ನೇ ಕ್ರಾಸ್. 4ನೇ ಮುಖ್ಯ ರಸ್ತೆ, ಕೃಷ್ಣಾನಂದ ನಗರ, ನಂದಿನಿ ಲೇಔಟ್, ಬೆಂಗಳೂರು–560096. **ಮತ್ತೊಂದು ವಿಳಾಸ:** ನಂ.41, 7ನೇ ಕ್ರಾಸ್, ಎಪಿಎಂಸಿ ಯಾರ್ಡ್, ಯಶವಂತಪುರ, ಬೆಂಗಳೂರು–560022.	**ಶ್ರೀ ವಿಜಯನ್ ಅವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಮುನಿಸಿಪಲ್ ನಂ.20, ಪಿಐಡಿ ನಂ.10–2–20, ಹಿಂದಿನ ಬಿಡಿಎ ನಿವೇಶನ ನಂ.20, ಬಿಡಿಎನಿಂದ ರೂಪಿಸಲಾಗಿದೆ, ಈ ಆಸ್ತಿಯು ಕೃಷ್ಣಾನಂದನಗರ ಸ್ಲಮ್, ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ವಾರ್ಡ್ ನಂ.44, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 15 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: (41+40)/2 ಅಡಿ, ಒಟ್ಟು ವಿಸ್ತೀರ್ಣ 607.5 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.20/ಎ, ಪಶ್ಚಿಮಕ್ಕೆ: ಆಸ್ತಿ ನಂ.19, ಉತ್ತರಕ್ಕೆ: ಆಸ್ತಿ ನಂ.16, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ನಂದೀಶ್ ಕೆ ಬಿ, ಕಲೆಕ್ಷನ್ ಮ್ಯಾನೇಜರ್, ನಂ. +91 9986043776ನ್ನು ಸಂಪರ್ಕಿಸಿ.**	09.02.2026 ಎನ್‌ಪಿಎ ದಿನಾಂಕ: 06.02.2026	Over Draft-KISANMITRA-AVCP Loan A/c No. 923030009938488 Amount : Rs.50,00,000/- ಒಟ್ಟು ಬಾಕಿ ಮೊತ್ತ: ರೂ. 50,97,260/– ದಿನಾಂಕ: 07.02.2026ರಂದು ಇದ್ದಂತೆ.
2.	(1) ಶ್ರೀಮತಿ ನಿವೇದಿತಾ ಎಸ್. ಕೋಂ ಶ್ರೀ ಕಾರ್ತಿಕ್ ಕೆ ಕೆ, (2) ಶ್ರೀ ಕಾರ್ತಿಕ್ ಕೆ ಕೆ. ಬಿನ್ ಶ್ರೀ ಕುಮಾರ್ ವಿ **ಇವರಿಬ್ಬರ ವಿಳಾಸ:** ಫ್ಲಾಟ್ ನಂ.ಟಿ–14, 3ನೇ ಮಹಡಿ, ಟೆಂಪಲ್ ವ್ಯೂ ಅಪಾರ್ಟ್‌ಮೆಂಟ್, ಪಿಆರ್ ನಂ.25/ಇ & 25/ಇಎ, 3ನೇ ಹಂತ, ಇಂಡಸ್ಟ್ರಿಯಲ್ ಸಬ್‌ಅರ್ಬ್, ಪೋರ್ಟ್ ಮೊಹಲ್ಲಾ, ಮೈಸೂರು–570008.	**ಶ್ರೀಮತಿ ನಿವೇದಿತಾ ಎಸ್ ಮತ್ತು ಶ್ರೀ ಕಾರ್ತಿಕ್ ಕೆ ಕೆ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್–ಎ** : ಷೆಡ್ಯೂಲ್ ಆಸ್ತಿಯ ನಂಬರ್ಸ್.25/ಇ & 25/ಇ1, ಈ ಆಸ್ತಿಯು 3ನೇ ಹಂತ, ಇಂಡಸ್ಟ್ರಿಯಲ್ ಸಬ್‌ಅರ್ಬ್, ಖಿಲ್ಲೆ ಮೊಹಲ್ಲಾ, ಮೈಸೂರು ಸಿಟಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 296+292/2 ಅಡಿ, ಉತ್ತರದಿಂದ ದಕ್ಷಿಣಕ್ಕೆ: 150 ಅಡಿ, ಒಟ್ಟು ವಿಸ್ತೀರ್ಣ 44,100 ಚದರ ಅಡಿ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿಯ ನಂ.23/ಇ & 23/ಎಫ್, ಉತ್ತರಕ್ಕೆ: ಆಸ್ತಿ ನಂ.25/ಡಿ, ದಕ್ಷಿಣಕ್ಕೆ: ಆಸ್ತಿ ನಂ.25/ಎಫ್. **ಷೆಡ್ಯೂಲ್–ಬಿ : (ಷೆಡ್ಯೂಲ್–ಎ ಆಸ್ತಿಯ ಭೂಮಿಯ ಅವಿಭಾಜಿತ ಭಾಗ)** 506 ಚದರ ಅಡಿ ಅವಿಭಾಜಿತ ಭೂಮಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಒಳಗೊಂಡಿದೆ. **ಷೆಡ್ಯೂಲ್–ಸಿ** : ಫ್ಲಾಟ್ ನಂ.ಟಿ 14, ಮೂರನೇ ಮಹಡಿಯನ್ನು "Temple View" ಎಂದು ಕರೆಯಲ್ಪಡುವ ಕಟ್ಟಡದಲ್ಲಿದ್ದು, ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, ಹಾಲ್ ಕಮ್ ಡೈನಿಂಗ್, 2 ಬೆಡ್‌ರೂಮ್‌ಗಳು, ಅಡುಗೆಮನೆ, ಶೌಚಾಲಯಗಳು, ಬಾಲ್ಕನಿಗಳು ಮತ್ತು ಸಾಮಾನ್ಯ ಪ್ರದೇಶಗಳನ್ನು ಒಳಗೊಂಡಿದೆ ಜೊತಗೆ 1126 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ ಮತ್ತು ತಳಮಹಡಿಯಲ್ಲಿ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಕೆ, ಮೊಬೈಲ್ ನಂ.9620703099ನ್ನು ಸಂಪರ್ಕಿಸಿ.**	12.02.2026 ಎನ್‌ಪಿಎ ದಿನಾಂಕ: 08.02.2026	POWER HOME BRE Loan A/c No. PHR015110456652 Amount : Rs.30,39,090/- Total Amount: Rs.30,14,079/- ASSET POWER ASHA BRE Loan A/c No. LTR015110456655 Amount : Rs.27,08,100/- Total Amount: Rs.26,36,346/- ಒಟ್ಟು ಬಾಕಿ ಮೊತ್ತ: ರೂ.56,50,425/– ದಿನಾಂಕ: 10.02.2026ರಂದು ಇದ್ದಂತೆ.
3.	**(1) ಶ್ರೀ ಜಗದೀಶ್ ಎಸ್ ಅಡ್ಡಣಗಿ** ಬಿನ್ ಶ್ರೀ ಶಂಕರಪ್ಪ ಅಡ್ಡಣಗಿ, **(2) ಶ್ರೀಮತಿ ಪೂಜಾ ಜೆ ಅಡ್ಡಣಗಿ** ಕೋಂ ಶ್ರೀ ಜಗದೀಶ್ ಎಸ್ ಅಡ್ಡಣಗಿ, **ಇವರಿಬ್ಬರ ವಿಳಾಸ:** 3518/6, ಲಿಂಗರಾಜ ನಗರ, ದಕ್ಷಿಣ ಹುಬ್ಬಳ್ಳಿ, ಕಟ್ಟಿ ಮಂಗಲ ದೇವಸ್ಥಾನದ ಹತ್ತಿರ, ಕರ್ನಾಟಕ–580031. **ಮತ್ತೊಂದು ವಿಳಾಸ:** ಶಿರೂರು ಪಾರ್ಕ್, ಉಣಕಲ್ ಗ್ರಾಮ, ವಿದ್ಯಾ ನಗರ, ಹುಬ್ಬಳ್ಳಿ–580031.	**ಶ್ರೀ ಜಗದೀಶ್ ಎಸ್ ಅಡ್ಡಣಗಿ & ಶ್ರೀಮತಿ ಪೂಜಾ ಜೆ ಅಡ್ಡಣಗಿ ಅವರಿಗೆ ಸೇರಿದ ಆಸ್ತಿಯ ವಿವರ.** **ಷೆಡ್ಯೂಲ್–ಎ ಆಸ್ತಿ** : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ತೆರೆದ ಭೂಮಿ (1) ಆರ್.ಎಸ್.ನಂ.588 ಇ ಪ್ಲಾಟ್ ನಂ.1 ವಿಸ್ತೀರ್ಣ 2 ಗುಂಟೆಗಳು, 10.75 ಅನ್ನಾಸ್ ಅಂದರೆ 2.67 ಗುಂಟೆಗಳಿಗೆ ಸಮ ಅಂದರೆ 2,910 ಚದರ ಅಡಿಗೆ ಸಮ, (2) ಆರ್.ಎಸ್.ನಂ.588 ಇ ಪ್ಲಾಟ್ ನಂ.3, ವಿಸ್ತೀರ್ಣ 3 ಗುಂಟೆಗಳು, 11.00 ಅನ್ನಾಸ್ ಅಂದರೆ 3.69 ಗುಂಟೆಗಳಿಗೆ ಸಮ ಅಂದರೆ 4,016 ಚದರ ಅಡಿಗೆ ಸಮ ಮತ್ತು (3) ಆರ್.ಎಸ್.ನಂ.588 ಡಿ ಪ್ಲಾಟ್ ನಂ.3 ವಿಸ್ತೀರ್ಣ 2 ಗುಂಟೆಗಳು, 06.5 ಅನ್ನಾಸ್ ಅಂದರೆ 2.40 ಗುಂಟೆಗಳಿಗೆ ಸಮ ಅಂದರೆ 2,620 ಚದರ ಅಡಿಗೆ ಸಮ, ಈ ಎಲ್ಲಾ ಪ್ಲಾಟ್‌ಗಳು ಒಂದಕ್ಕೊಂದು ಹೊಂದಿಕೊಂಡಿವೆ ಮತ್ತು ಒಟ್ಟು ಪ್ರದೇಶ 9,546 ಚದರ ಅಡಿ ಅಂದರೆ 8.77 ಗುಂಟೆಗಳು ಮತ್ತು ಈ ಆಸ್ತಿಯು ಉಣಕಲ್ ಗ್ರಾಮ, ಹುಬ್ಬಳ್ಳಿ ತಾಲ್ಲೂಕಿನಲ್ಲಿದೆ. (1) ಆರ್.ಎಸ್.ನಂ.588 ಇ ಪ್ಲಾಟ್ ನಂ.1 ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆರ್.ಎಸ್.ನಂ.588/2, ಉತ್ತರಕ್ಕೆ: ಆರ್.ಎಸ್.ನಂ.588ಡಿ ಪ್ಲಾಟ್ ನಂ.3, ದಕ್ಷಿಣಕ್ಕೆ: ಆರ್.ಎಸ್.ನಂ.588 ಇ–ಪ್ಲಾಟ್ ನಂ.3, (2) ಆರ್.ಎಸ್.ನಂ.588 ಇ ಪ್ಲಾಟ್ ನಂ.3 ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆರ್.ಎಸ್.ನಂ.588/2, ಉತ್ತರಕ್ಕೆ: ಆರ್.ಎಸ್.ನಂ.588ಇ ಪ್ಲಾಟ್ ನಂ.1, ದಕ್ಷಿಣಕ್ಕೆ: ಆರ್.ಎಸ್.ನಂ.588 ಇ ಪ್ಲಾಟ್ ನಂ.1 (ಮಾರಾಟಗಾರರು 3.00% ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಒಳಗೊಂಡಿರುವ ಷೆಡ್ಯೂಲ್ ಎ ಆಸ್ತಿಯನ್ನು ಖರೀದಿಸಿದ್ದಾರೆ). **ಷೆಡ್ಯೂಲ್–ಬಿ** : ಸಂಪೂರ್ಣ ಸಿದ್ಧವಾಗಿರುವ ವಾಸಯೋಗ್ಯ ಫ್ಲಾಟ್‌ನ ಬ್ಲಾಕ್ ನಂ.03, ವಿಸ್ತೀರ್ಣ 940 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನೊಳಗೊಂಡಿರುವ ನೆಲಮಹಡಿಯು Mahalaxmi Elegance ಎಂದು ಕರೆಯಲ್ಪಡುವ ಕಟ್ಟಡದಲ್ಲಿದ್ದು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ. ಬ್ಲಾಕ್‌ಗಳ ನಡುವಿನ ಎಲ್ಲಾ ಮಹಡಿಗಳು/ಛಾವಣಿಗಳು ಹಾಗೂ ಪಕ್ಕದ ಬ್ಲಾಕ್‌ಗಳ ನಡುವಿನ ಗೋಡೆಗಳು ಜಂಟಿಯಾಗಿ ಆಯಾ ಪಕ್ಕದ ಬ್ಲಾಕ್‌ಗಳಿಗೆ ಸೇರಿದ್ದು, ಅವುಗಳು ಖರೀದಿದಾರರಿಗೆ ಸೇರಿವೆ. **ಯಾವುದೇ ಮಾಹಿತಿಗಾಗಿ ಸುದರ್ಶನ್ ಕೆ, ಮೊಬೈಲ್ ನಂ. 9620703099ನ್ನು ಸಂಪರ್ಕಿಸಿ.**	10.02.2026 ಎನ್‌ಪಿಎ ದಿನಾಂಕ: 03.02.2026	POWER HOME VANILLA BRE Loan A/c No. PHR012903402458 Amount : Rs. 23,58,390/- ಒಟ್ಟು ಬಾಕಿ ಮೊತ್ತ: ರೂ.18,24,509/– ದಿನಾಂಕ: 07.02.2026 ರಂದು ಇದ್ದಂತೆ.
4.	**(1) ಶ್ರೀ.ಪ್ರಶಾಂತ್ ಪವಾರ್** ಬಿನ್ ಶ್ರೀ.ಸುದಾನಂದ ಪವಾರ್, **(2) ಶ್ರೀಮತಿ.ದಿವ್ಯಾ ಪವಾರ್** ಬಿನ್ ಶ್ರೀ.ಪ್ರಶಾಂತ್ ಪವಾರ್, **ಇವರಿಬ್ಬರ ವಿಳಾಸ:** ದೋಡ್ ಡೋನಿ, ಉಗ್ನಿಕೇರಿ ಉಗ್ಗಿನಕೇರಿ ಧಾರವಾಡ–581204. **ಮತ್ತೊಂದು ವಿಳಾಸ:** ಪ್ಲಾಟ್ ನಂ.48, ಸರ್ವೆ ನಂ.151300201000120302, ಆಸ್ತಿ ನಂ.1495, ಮೂಪ್ಲಿ ಗ್ರಾಮ, ಹುಬ್ಬಳ್ಳಿ–580028.	**ಶ್ರೀ ಪ್ರಶಾಂತ್ ಪವಾರ್ ಅವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪ್ಲಾಟ್ ನಂ.48, ಖಾತಾ ನಂ.151300201000120302, ಮುನಿಸಿಪಲ್ ನಂ.1495, ಆರ್‌ಎಸ್ ನಂ.840+842ರ ಭೂಮಿಯಲ್ಲಿ ಸಂಯೋಜಿಸಲಾಗಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.00 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 9.50 ಮೀಟರ್‌ಗಳು, ಅಂದರೆ 85.50 ಚದರ ಮೀಟರ್‌ಗಳೂ, ಅಂದರೆ 13.50 ಅನ್ನಾಸ್, ಜೊತೆಗೆ ತೆರೆದ ಜಾಗದಲ್ಲಿ ಆರ್‌ಸಿಸಿ ಕಟ್ಟಡವನ್ನು ಒಳಗೊಂಡಿದೆ, ಈ ಆಸ್ತಿಯು ನೂಲ್ವಿ ಗ್ರಾಮ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.47, ಪಶ್ಚಿಮಕ್ಕೆ: ಪ್ಲಾಟ್ ನಂ.49, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಬ್ಲಾಕ್ ನಂ.843. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಕೆ, ಮೊಬೈಲ್ ನಂ. 9620703099ನ್ನು ಸಂಪರ್ಕಿಸಿ.**	12.02.2026 ಎನ್‌ಪಿಎ ದಿನಾಂಕ: 08.02.2026	POWER HOME BRE Loan A/c No. PHR012908542593 Amount : Rs. 21,49,112/- ಒಟ್ಟು ಬಾಕಿ ಮೊತ್ತ: ರೂ. 20,43,441/– ದಿನಾಂಕ: 10.02.2026ರಂದು ಇದ್ದಂತೆ.

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯುವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 05.03.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಎಲ್ಲೆಲ್ಲೂ ಸ್ಫೋಟ, ಡೂಮ್ಸ್ ಡೇ ಆತಂಕ, ಯುದ್ಧ ಇನ್ನೂ ಕರಾಳ

← ಮೊದಲಪುಟದಿಂದ

23000 ವಿಮಾನ ರದ್ದು: ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆಯಿಂದಾಗಿ ಕಳೆದ 6 ದಿನಗಳಲ್ಲಿ 23,000ಕ್ಕೂ ಅಧಿಕ ವಿಮಾನಗಳು ರದ್ದಾಗಿದ್ದು, ಜಾಗತಿಕ ವಿಮಾನಯಾನ ಉದ್ಯಮದ ಮೇಲೆ ಆರ್ಥಿಕವಾಗಿ ಪರಿಣಾಮ ಬೀರಿದೆ. ಕೊಲ್ಲಿ ಹಾಗೂ ಅಲ್ಲಿಂದ ಬೇರೆಡೆಗೆ ಹೋಗಲು ನಿಗದಿಯಾಗಿದ್ದ 23,000ಕ್ಕೂ ಅಧಿಕ ವಿಮಾನಗಳು ರದ್ದಾಗಿದ್ದು, 44 ಲಕ್ಷ ಆಸನಗಳು ಖಾಲಿ ಹೊಡೆದಿವೆ. ವಿಮಾನಗಳಿಗೆ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಏರ್ ಇಂಡಿಯಾ ಹೆಚ್ಚುವರಿ ವಿಮಾನ ಸೇರ್ಪಡೆಗೆ ಮುಂದಾಗಿದೆ.

ಯುದ್ಧ ಪರಿಹಾರವಲ್ಲ: ಯಾವುದೇ ಸಮಸ್ಯೆಗೆ ಯುದ್ಧ ಪರಿಹಾರವಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತಕ್ಕೆ ಆಗಮಿಸಿರುವ ಫಿನ್‌ಲೆಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಅವರೊಂದಿಗೆ ಗುರುವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೋದಿ, ರಾಜತಾಂತ್ರಿಕ ಮಾರ್ಗದ ಮೂಲಕವೇ ಸಂಘರ್ಷಗಳನ್ನು ಪರಿಹರಿಸಬೇಕು. ಉಕ್ರೇನ್ ಆಗಿರಲಿ ಅಥವಾ ಪಶ್ಚಿಮ ಏಷ್ಯಾವಾಗಲೀ ಸಂಘರ್ಷದ ತ್ವರಿತ ಅಂತ್ಯಕ್ಕಾಗಿ ನಾವು ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸುವುದನ್ನು ಮುಂದುವರಿಸುತ್ತೇವೆ ಎಂದು ತಿಳಿಸಿದರು.

36 ಕೋಟಿ ರು. ರಾಕೆಟ್‌ಗೆ 18 ಲಕ್ಷ ರು. ಡ್ರೋನ್ ಸಡ್ಡು

ಇರಾನ್ ಬರೀ 18.35 ಲಕ್ಷ ರು.ನಲ್ಲಿ ಶಾಹಿದ್ ಹೆಸರಿನಲ್ಲಿ ತಯಾರಿಸಿರುವ ಡ್ರೋನ್ ಅಮೆರಿಕ ಮತ್ತು ಇಸ್ರೇಲ್‌ನ ತಂತ್ರಜ್ಞಾನವನ್ನೇ ವಂಚಿಸಿ ದಾಳಿ ಮಾಡುತ್ತಿವೆ. 40ರಿಂದ 50 ಕೆಜಿ ಸ್ಫೋಟಕಗಳನ್ನು ಇವು ಹೊತ್ತು ಸಾಗಬಲ್ಲವು. ವಿಶೇಷವೆಂದರೆ 36 ಕೋಟಿ ರು. ವೆಚ್ಚ ಮಾಡಿ ಅಮೆರಿಕ ತಯಾರಿಸಿರುವ ರಾಕೆಟ್‌ಗಳನ್ನು ವಂಚಿಸಿ ಈ ಡ್ರೋನ್‌ಗಳು ಸಾಗುತ್ತಿವೆ. ಒಂದು ವೇಳೆ ಈ ಡ್ರೋನ್‌ಗಳು ನಾಶವಾದರೂ ಇರಾನ್‌ಗೆ ಚಿಂತೆಯಿಲ್ಲ. ಬರೀ 18.35 ಲಕ್ಷ ರು. ಡ್ರೋನ್ ನಾಶಕ್ಕೆ, ಅಮೆರಿಕ ವೆಚ್ಚ ಮಾಡುವುದು 36 ಕೋಟಿ ರು.ಗಳನ್ನು!

ಸಮಾಚಾರ ಸಣ್ಣದಲ್ಲ

ಸಿದ್ದರಾಮಯ್ಯ ದಾಖಲೆ ಬಜೆಟ್‌ಗೆ ಚಿತ್ರದ ಹಾರೈಕೆ



ಮೈಸೂರು: ದಾಖಲೆಯ 17ನೇ ಬಜೆಟ್ ಮಂಡನೆಗೆ ಸಿದ್ಧವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತವರಿನಲ್ಲಿ, ಅವರ ದೊಡ್ಡ ಚಿತ್ರ ಬಿಡಿಸುವ ಮೂಲಕ ಅಭಿನಂದನೆ ಸಲ್ಲಿಸಲಾಯಿತು. ಇಲ್ಲಿನ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ 8,125 ಚದರ ಅಡಿಯ ಚಿತ್ರವನ್ನು ಕಲಾವಿದರಿಂದ ಬಿಡಿಸಲಾಗಿದೆ. ಕನ್ನಡ ಬಾವುಟದ ಬಣ್ಣದಿಂದ ಸಿದ್ಧಪಡಿಸಿದ ರಾಜ್ಯದ ನಕ್ಷೆಯ ಹಿನ್ನೆಲೆಯಲ್ಲಿ, ಸಿದ್ದರಾಮಯ್ಯ ಅವರು ಬಜೆಟ್ ಪುಸ್ತಕದ ಬ್ರೀಫ್‌ಕೇಸ್ ಹಿಡಿದು ನಿಂತಿರುವಂತೆ ಚಿತ್ರ ಬಿಡಿಸಿ ಗಮನಸೆಳೆಯಲಾಗಿದೆ. ಈ ಚಿತ್ರವನ್ನು ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯಕುಮಾರ್ ಅನಾವರಣಗೊಳಿಸಿದರು. ಪಕ್ಷದ ಮುಖಂಡರಾದ ಬಸಪ್ಪ, ಕಂಸಾಳೆ ರವಿ, ಸಂತೋಷ್ ಮಳಿಯೂರು, ಹೇಮಂತ್, ಕೆಂಪರಾಜು ಜತೆಗಿದ್ದರು.

ಮರಕ್ಕೆ ವಾಹನ ಡಿಕ್ಕಿ: ಸ್ಥಳದಲ್ಲೇ ಇಬ್ಬರ ಸಾವು

ಗದಗ: ಕಾಮಣ್ಣನ ಉತ್ಸವ ಮುಗಿಸಿ ಬರುವ ವೇಳೆ ಟಾಟಾ ಏಸ್ ಗೂಡ್ಸ್ ವಾಹನ ಮರಕ್ಕೆ ಡಿಕ್ಕಿ ಹೊಡೆದು, ಇಬ್ಬರು ಸ್ಥಳದಲ್ಲೆ ಸಾವನ್ನಪ್ಪಿದ್ದು, 8 ಜನರಿಗೆ ಗಾಯವಾದ ಘಟನೆ ಗದಗ ತಾಲೂಕಿನ ಹರ್ತಿ ಬಳಿ ನಡೆದಿದೆ. ಮುತ್ತಪ್ಪ ಸುಟಗೇರಿ (35), ನಿಂಗಪ್ಪ ಯಳವತ್ತಿ (36) ಸ್ಥಳದಲ್ಲೆ ಮೃತಪಟ್ಟಿದ್ದಾರೆ. ಇನ್ನುಳಿದ 8 ಜನರ ಪೈಕಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಆ ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಮೃತ ಹಾಗೂ ಗಾಯಾಳುಗಳು ಗದಗ ತಾಲೂಕಿನ ಹಿರೇಕೊಪ್ಪ ಗ್ರಾಮದ ನಿವಾಸಿಗಳು. ಗೋಜನೂರು ಕಾಮಣ್ಣ ಉತ್ಸವ ಡಿಜೆ ಮೆರವಣಿಗೆ ನೋಡಲು 10 ಜನ ಹೋಗಿದ್ದರು. ಡಿಜೆ ಉತ್ಸವ ಮುಗಿಸಿ ಬೆಳಗಿನ ಜಾವ ಗೋಜನೂರಿನಿಂದ ಹಿರೇಕೊಪ್ಪಕ್ಕೆ ಬರುವ ವೇಳೆ ನಿದ್ದೆ ಮಂಪರಿನಲ್ಲಿ ಮರಕ್ಕೆ ಡಿಕ್ಕಿಯಾಗಿದೆ.

ವಿಷಕಾರಿ ಮೇವು ತಿಂದು 70 ಕುರಿ ಸಾವು

ಹಾಸನ: ವಿಷಕಾರಿ ಮೇವು ತಿಂದು 70ಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿದ ಘಟನೆ ಅರಸೀಕೆರೆ ತಾಲೂಕಿನ ಜಾವಗಲ್ ಬಳಿಯ ದೊಡ್ಡಘಟ್ಟ ಗ್ರಾಮದಲ್ಲಿ ನಡೆದಿದೆ. ತುಮಕೂರಿನ ಶಿರಾದಿಂದ 800 ಕುರಿಗಳನ್ನು ಮೇಯಿಸಲು ಕುರಿಗಾಹಿಗಳು ದೊಡ್ಡಘಟ್ಟಕ್ಕೆ ಬಂದಿದ್ದರು. ಈ ವೇಳೆ ವಿಷಕಾರಿ ಮೇವು ತಿಂದು ಕುರಿಗಳು ಸಾವನ್ನಪ್ಪಿವೆ. ಹೊಲಗಳ ತುಂಬೆಲ್ಲಾ ಕುರಿಗಳು ಸತ್ತು ಬಿದ್ದಿವೆ. ಮೆಕ್ಕೆಜೋಳದ ಚಿಗುರು ತಿಂದು ಕುರಿಗಳು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ. ಮತ್ತಷ್ಟು ಕುರಿಗಳು ತೀವ್ರ ಅಸ್ವಸ್ಥಗೊಂಡಿವೆ. ಹಾಸನದಿಂದ ಮೂವರು ಪಶು ವೈದ್ಯರ ತಂಡ ಸ್ಥಳಕ್ಕೆ ತೆರಳಿ ಚಿಕಿತ್ಸೆ ನೀಡಿದೆ. ರಾಜಣ್ಣ ಎಂಬುವವರಿಗೆ ಲಕ್ಷಾಂತರ ರುಪಾಯಿ ನಷ್ಟ ಆಗಿದ್ದು, ಸರಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಲಾಗಿದೆ.

ನಾಯಕರ ಬಳಿ ಚರ್ಚಿಸುವೆ, ಮಾಧ್ಯಮಗಳ ಮುಂದಲ್ಲ

ದಾವಣಗೆರೆ: ಸಮಸ್ಯೆ ಏನೇ ಇದ್ದರೂ ರಾಜ್ಯ ಮತ್ತು ರಾಷ್ಟ್ರೀಯ ನಾಯಕರ ಬಳಿ ಕುಳಿತು ನಾನು ಮಾತನಾಡಿ, ಚರ್ಚಿಸುವವನೇ ಹೊರತು ಮಾಧ್ಯಮಗಳ ಮುಂದೆ ಹೇಳಿಕೆ ಕೊಟ್ಟು ಹಗುರವಾಗಲ್ಲ ಎಂದು ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ ಹೇಳಿದರು. ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ ದಾಸ್ ಅಗರವಾಲ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಜತೆಗಿನ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದಲ್ಲಿ ಏನೇ ಇದ್ದರೂ ನಮ್ಮ ರಾಜ್ಯ ಮತ್ತು ರಾಷ್ಟ್ರೀಯ ನಾಯಕರೊಂದಿಗೆ ಕುಳಿತು, ಚರ್ಚಿಸಿ, ಮಾತನಾಡುತ್ತೇನೆ. ಮಾಧ್ಯಮಗಳ ಮುಂದೆ ಹೇಳಿಕೆ ಕೊಟ್ಟು ಹಗುರವಾಗುವುದಕ್ಕ ಸಾಧ್ಯವಿಲ್ಲ ಎಂದರು. ಮೊದಲು ನಮ್ಮೆಲ್ಲಾ ಮುಖಂಡರು, ಕಾರ್ಯಕರ್ತರ ಜೊತೆಗೆ ಕುಳಿತು, ಚರ್ಚಿಸುತ್ತೇನೆ. ಉಪ ಚುನಾವಣೆಗೆ ಅಭ್ಯರ್ಥಿ ಯಾರಾದರೂ ಘೋಷಣೆ ಮಾಡಿದ ನಂತರ ನಾನು ಮಾತ ನಾಡುತ್ತೇನೆ. ರಾಧಾಮೋಹನ ದಾಸ್ ಅಗರವಾಲ್, ವಿಜಯೇಂದ್ರರ ಜತೆಗೆ ಯಾವುದೇ ಮೀಟಿಂಗ್ ಇಲ್ಲ ಜನರಲ್ ಆಗಿ ಮಾತನಾಡಿದೆವು ಎಂದು ತಿಳಿಸಿದರು.

ದಿನ ವಿಶೇಷ

06 ಮಾರ್ಚ್ 2026 ಶುಕ್ರವಾರ

» ಸೂರ್ಯೋದಯ	:	06-32
» ಸೂರ್ಯಾಸ್ತ	:	06-29
» ತಿಥಿ	:	ತೃತೀಯಾ
» ನಕ್ಷತ್ರ	:	ಹಸ್ತ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಸೌರ ವಸಂತ
» ಮಾಸ	:	ಫಾಲ್ಗುಣ
» ಪಕ್ಷ	:	ಕೃಷ್ಣಪಕ್ಷ

ವೀರಶೈವ ಲಿಂಗಾಯತ ಧರ್ಮೋತ್ಥಾನ ಸಮ್ಮೇಳನದಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್, ರಾಜ್ಯಪಾಲ ಗೆಹ್ಲೋತ್ ಭಾಗಿ

ರಾಜ್ಯಕ್ಕೆ ಮಠ, ಮಂದಿರಗಳ ಕೊಡುಗೆ ಅಪಾರ

ಚಿಕ್ಕೋಡಿ: ವೀರಶೈವ ಮಠ, ಮಂದಿರಗಳು ರಾಜ್ಯದಲ್ಲಿ ಅಪಾರ ಕೊಡುಗೆ ನೀಡಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರಯತ್ನದಿಂದ ಇದೀಗ ಭಾರತ ಜಗತ್ತಿನಲ್ಲಿಯೇ ಪ್ರಭಾವಶಾಲಿಯಾಗಿದೆ. ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಸಾಕಷ್ಟು ಬೆಳೆದಿದೆ. ವಿಕಾಸದ ಕಡೆಗೆ ಭಾರತ ಹೆಜ್ಜೆ ಇಡುತ್ತಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ತಾಲೂಕಿನ ಯಡೂರ ಗ್ರಾಮದಲ್ಲಿ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕಾಡಸಿದ್ದೇಶ್ವರ ಮಠದಿಂದ ಗುರುವಾರ ಹಮ್ಮಿಕೊಂಡ ರಾಜಗೋಪುರಗಳ ಲೋಕಾರ್ಪಣೆಗೊಳಿಸಿ ಹಾಗೂ ವೀರಶೈವ ಲಿಂಗಾಯತ ಧರ್ಮೋತ್ಥಾನ ಸಮ್ಮೇಳನದಲ್ಲಿ ಮಾತನಾಡಿದ ಅವರು, ಹಿಂದೂ ಪ್ರಜ್ಞೆ ಕೇವಲ ಧಾರ್ಮಿಕ ವಿಧಿ-ವಿಧಾನ ಮಾತ್ರವಲ್ಲ. ಜೀವನದಲ್ಲಿ ಅನುಸರಿಸಿಕೊಂಡು ಹೋಗಬೇಕಾಗಿರುವ ಪದ್ಧತಿಯೇ ಆಗಿದೆ. ನದಿ, ಪರ್ವತ, ಪ್ರಾಣಿ ಸೇರಿದಂತೆ ಪ್ರತಿಯೊಂದರಲ್ಲಿಯೂ ಮನುಷ್ಯ ದೈವತ್ವ ನೋಡುವುದು ಇದರ ಉದ್ದೇಶವಾಗಿದೆ ಎಂದರು.

ಪವಿತ್ರ ಕೃಷ್ಣಾ ನದಿಯ ದಡದಲ್ಲಿ ವೀರಭದ್ರೇಶ್ವರ ಹಾಗೂ ಕಾಡಸಿದ್ದೇಶ್ವರ ದೇವಸ್ಥಾನದ ಧಾರ್ಮಿಕ ಹಿನ್ನೆಲೆ ಈ ವೀರಭದ್ರೇಶ್ವರ ಹಾಗೂ ಈ ಪವಿತ್ರ ಸ್ಥಾನದ ಮಹತ್ವ ಶಿವ ಪುರಾಣಗಳಲ್ಲಿ ಉಲ್ಲೇಖವಾಗಿದೆ. ವೇದ ಆಗಮ ಪಾಠಶಾಲೆ ಪ್ರತೀ ವರ್ಷ

ಚಿಕ್ಕೋಡಿ ತಾಲೂಕಿನ ಯಡೂರ ಗ್ರಾಮದಲ್ಲಿ ಗುರುವಾರ ನಡೆದ ವೀರಶೈವ ಲಿಂಗಾಯತ ಧರ್ಮೋತ್ಥಾನ ಸಮ್ಮೇಳನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರು ದೀಪ ಬೆಳಗಿಸಿದರು. ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಉಪರಾಷ್ಟ್ರಪತಿ ರಾಧಾಕೃಷ್ಣನ್, ಪ್ರಕಾಶ ಹುಕ್ಕೇರಿ, ಪ್ರಭಾಕರ ಕೋರೆ ಪಾಲ್ಗೊಂಡಿದ್ದರು.

ನೂರಾರು ಜನರಿಗೆ ವಿದ್ಯಾಧಾನ ಮಾಡುತ್ತಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ 1 ಕೋಟಿಗೂ ಅಧಿಕ ಜನ ವಾಸಿಸುತ್ತಿರುವುದು ವಿಶೇಷ. ಇಂತಹ ಧಾರ್ಮಿಕ ಕಾರ್ಯಾಯದಲ್ಲಿ ಭಾಗವಹಿಸಲು ಆಹ್ವಾನಿಸಿರುವುದು ಹಾಗೂ ವಿಶ್ವ ಚೇತನ್ ಪ್ರಶಸ್ತಿಗೆ ಶ್ರೀ ಮಠ ಪ್ರಶಂಸಿಸುತ್ತೇನೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಮಾತನಾಡಿ, ವಿಶ್ವ ಕಲ್ಯಾಣಕ್ಕಾಗಿ ಜಗತ್ತಿನ ಹಲವು ದೇಶಗಳು ಭಾರತದತ್ತ ನೋಡುತ್ತಿವೆ ಎಂದರು. ಕರ್ನಾಟಕ ಸರಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಅವರಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮಠದಿಂದ ಕೊಡಮಾಡಿದ 'ವಿಕಾಸವೀರ ಪ್ರಶಸ್ತಿ' ಪ್ರದಾನ ಮಾಡಿದರು.

ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ, ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಶಾಸಕ ಗಣೇಶ ಹುಕ್ಕೇರಿ ಇತರರು ಇದ್ದರು.

> ಇರಾನ್-ಇಸ್ರೇಲ್, ಅಮೆರಿಕ ಮುಂತಾದ ಕಡೆಗೆ ನಡೆಯುತ್ತಿರುವ ಯುದ್ಧ ನಿಲ್ಲಿಸಲು ಭಾರತ ಮಧ್ಯಸ್ಥಿಕೆ ವಹಿಸುವುದು ತುರ್ತು ಅಗತ್ಯವಾಗಿದೆ.
> – **ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ,** ಶ್ರೀಶೈಲ ಪೀಠ

> ಸಾವಿರಾರೂ ವರ್ಷಗಳ ಧಾರ್ಮಿಕತೆ ಇತಿಹಾಸ ಹೊಂದಿರುವ ನಮ್ಮ ದೇಶ ವಸುದೈವ ಕುಟುಂಬವಾಗಿದೆ. ಈ ದೇಶದ ನದಿ, ಪರ್ವತ ಸೇರಿದಂತೆ ಎಲ್ಲವನ್ನೂ ನೋಡುವುದೇ ನಮ್ಮ ಹಿಂದುತ್ವ. ಭಗವದ್ಗೀತೆಯು ಆಳವಾದ ಸಂದೇಶ ನಮಗೆ ಕಲಿಸಿದ ಪವಿತ್ರ ಗ್ರಂಥವಾಗಿದೆ.
> –**ಸಿ.ಪಿ.ರಾಧಾಕೃಷ್ಣನ್,** ಉಪರಾಷ್ಟ್ರಪತಿ

ಖಾಸಗಿ ಶಾಲೆ ಶಿಕ್ಷಕನಿಂದ ಲಕ್ಷ ರು. ಬಹುಮಾನ ಘೋಷಣೆ | ಶಿವಾನಂದ ಕೊಪ್ಪದ್‌ಗೆ ಮೆಚ್ಚುಗೆ

ಎಸ್‌ಎಸ್‌ಎಲ್‌ಸಿ ರ‍್ಯಾಂಕ್ ವಿದ್ಯಾರ್ಥಿಗೆ 1 ಲಕ್ಷ ರು.

ರಾಯಬಾಗ: ಉದ್ಯಮಿಗಳು, ರಾಜಕಾರಣಿಗಳು ಮಕ್ಕಳ ಶೈಕ್ಷಣಿಕ ಉನ್ನತಿಗೆ ಬಹುಮಾನ ಘೋಷಣೆ ಮಾಡುವುದು ಸಹಜ. ಆದರೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೊಬ್ಬರು ಪ್ರಥಮ ರ‍್ಯಾಂಕ್ ಪಡೆಯುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗೆ 1 ಲಕ್ಷ ರು.ನಗದು ಬಹುಮಾನ ಘೋಷಣೆ ಮಾಡಿರುವುದು ವಿಶೇಷ.

ಹೌದು. ಇಂಥದೊಂದು ಅಪರೂಪದ ಸನ್ನಿವೇಶಕ್ಕೆ ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಪರಮಾನಂದವಾಡಿ ಎಸ್.ಆರ್.ಡಿ ಪರೀಕ್ಷಾ ಕೇಂದ್ರ ಸಾಕ್ಷಿಯಾಗಿದೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಈ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುವ ಎಲ್ಲ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ಶಿಕ್ಷಕ ಶಿವಾನಂದ ಶ್ರೀಶೈಲ ಕೊಪ್ಪದ ಭರ್ಜರಿ ಆಫರ್ ನೀಡಿದ್ದಾರೆ. ಪರಮಾನಂದವಾಡಿ ಎಸ್.ಆರ್.ಡಿ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದು ರ‍್ಯಾಂಕ್ ಬರುವ ಓರ್ವ ವಿದ್ಯಾರ್ಥಿಗೆ 1 ಲಕ್ಷ ರುಪಾಯಿ ನಗದು ಬಹುಮಾನ ಘೋಷಣೆ ಮಾಡಿದ್ದಾರೆ. ಶಿಕ್ಷಕರ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ದೈಹಿಕ ಶಿಕ್ಷಕರ ಹಿನ್ನೆಲೆ ಏನು?: ಪರಮಾನಂದವಾಡಿ ಗ್ರಾಮದ ಶ್ರೀ ಹಾಲಸಿದ್ದೇಶ್ವರ ಶಿಕ್ಷಣ ಸಂಸ್ಥೆಯ ಎಸ್.ಆರ್.ಡಿ ಪ್ರೌಢಶಾಲೆಯಲ್ಲಿ ಶಿವಾನಂದ ಶ್ರೀಶೈಲ ಕೊಪ್ಪದ ಸದ್ಯ ದೈಹಿಕ ಶಿಕ್ಷಣ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೂಲತಃ ಮುಗಳಖೋಡ ಪಟ್ಟಣದ ಇವರು, ರೈತಾಪಿ ಕುಟುಂಬದವರು.

> ಪರಮಾನಂದೂಡಿ ಗ್ರಾಮದ ಎಸ್.ಆರ್.ಡಿ ಪ್ರೌಢಶಾಲೆಯಲ್ಲಿ ಈ ವರ್ಷ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷಾ ಕೇಂದ್ರದಲ್ಲಿ ನಮ್ಮ ಶಾಲೆಯ 44 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದೂ, ನಮ್ಮ ಪಕ್ಕ ಕೇಂದ್ರದಲ್ಲಿ 8 ವಿವಿಧ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, ಅವರೆಲ್ಲರೂ ಲಕ್ಷ ರು. ಬಹುಮಾನಕ್ಕೆ ಅರ್ಹರು.
> –**ಶಿವಾನಂದ ಕೊಪ್ಪದ,** ದೈಹಿಕ ಶಿಕ್ಷಕರು

> ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ವೈಯಕ್ತಿಕವಾಗಿ 1 ಲಕ್ಷ ರು.ನಗದು ಹಣ ಕೊಡುವುದಾಗಿ ದೈಹಿಕ ಶಿಕ್ಷಕ ಶಿವಾನಂದ ಕೊಪ್ಪದ ಘೋಷಣೆ ಮಾಡಿದ್ದು ನಿಜಕ್ಕೂ ನಮಗೆ ಹೆಮ್ಮೆ ತಂದಿದೆ. ಅವರ ಈ ಘೋಷಣೆಯಿಂದ ನಮಗೆ ಪ್ರೇರಣೆಯಾಗಿದೆ. ನಾನು ಕೂಡ ಮುಂದಿನ ವರ್ಷ ನಾನೂ ಕೂಡ ಬಹುಮಾನ ಘೋಷಣೆ ಮಾಡುವೆ.
> –**ವಸಂತ ಭರಮಪ್ಪ ದಳವಾಯಿ,** ಅಧ್ಯಕ್ಷರು, ಹಾಲಸಿದ್ದೇಶ್ವರ ಶಿಕ್ಷಣ ಸಂಸ್ಥೆ, ಪರಮಾನಂದವಾಡಿ

ಬಹುಮಾನಕ್ಕೆ ಅರ್ಹರ‍್ಯಾರು

- ಪರಮಾನಂದವಾಡಿ ಗ್ರಾಮದ ಎಸ್.ಆರ್.ಡಿ ಪ್ರೌಢಶಾಲೆ
- ಗುರುದೇವ ಪ್ರೌಢಶಾಲೆ, ಬಸವಗೋಪಾಲ ಪ್ರೌಢಶಾಲೆ
- ಶಿರಗೂರದ ಸರಕಾರಿ ಪ್ರೌಢಶಾಲೆ, ಗುಂಡವಾಡದ ಶ್ರೀ ವಿದ್ಯಾಲಯ
- ಹಾಲಶ್ರೀಗೂರದ ಸರಕಾರಿ ಪ್ರೌಢಶಾಲೆ, ಗಿರೀಶ ಪ್ರೌಢಶಾಲೆ
- ಖೇಮಲಾಪುರದ ಶಿವಾನಂದ ಭಾರತಿ ಪ್ರೌಢಶಾಲೆ

ಪರಮಾನಂದವಾಡಿ ಎಸ್.ಆರ್.ಡಿ ಶಾಲೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದೈಹಿಕ ಶಿಕ್ಷಕ ಶಿವಾನಂದ ಕೊಪ್ಪದ ಬಹುಮಾನ ಘೋಷಿಸಿದರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ವಸಂತ ದಳವಾಯಿ, ಉಪನ್ಯಾಸಕ ಶಿವಾನಂದ ಚೌಗಲಾ, ಅಶೋಕ ಶಿರಹಟ್ಟಿ, ಸುನೀಲ ಗಿಡವೀರ, ಸಿದ್ದು ಬಳೋಬಾಳ, ಜೆ.ಬಿ.ದಡ್ಡನವರ, ನಿಂಗಪ್ಪ ಬಂಡಗಾರ, ಎಸ್.ಕೆ.ಮಾನೆ, ಅಣ್ಣಪ್ಪ ಗುಳೆದಾರ, ನಾಗೇಶ ಬಸ್ಸಾಪುರ, ಸುಜಾತಾ ದಳವಾಯಿ, ಅಕ್ಷತಾ ಚೌಗಲಾ ಇದ್ದರು.

ಏ.26ರಂದು ಕುಮಟಾದಲ್ಲಿ ಸೌರಭದ ವಾರ್ಷಿಕೋತ್ಸವ

ವಿಶ್ವೇಶ್ವರ ಭಟ್ಟರಿಗೆ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ

ಕುಮಟಾ: ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರಿಗೆ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿಯನ್ನು ಕುಮಟಾದ ಸೌರಭ ಸಂಸ್ಥೆ ಪ್ರಕಟಿಸಿದೆ. ಏ.26ರಂದು ಕುಮಟಾದಲ್ಲಿ ನಡೆಯುವ ಸೌರಭದ ವಾರ್ಷಿಕೋತ್ಸವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಸೌರಭ ದ ಅಧ್ಯಕ್ಷ ಶ್ರೀಕಾಂತ ಕೆ. ಭಟ್ ಮತ್ತು ಕಾರ್ಯದರ್ಶಿ ಅರುಣ ಹೆಗಡೆಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

30 ವರ್ಷಗಳಿಂದ ಅಸ್ತಿತ್ವದಲ್ಲಿರುವ ಕುಮಟಾದ ಹಿರಿಯ ಸಾಂಸ್ಕೃತಿಕ ಸಂಘಟನೆಯಾಗಿರುವ ಸೌರಭದ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿಯನ್ನು ಘೋಷಿಸಿದ್ದು, ಉತ್ತರ ಕನ್ನಡದಲ್ಲಿ ಹುಟ್ಟಿ ಬೆಳೆದು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ವಿಶೇಷ ಸಾಧನೆಯಿಂದ ಮಾನ್ಯರಾದ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. 2026ನೇ ಸಾಲಿನ ಈ ಪ್ರಶಸ್ತಿಗೆ ಭಾರತದ ಪತ್ರಿಕಾ ರಂಗಕ್ಕೆ ಹಾಗೂ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ಕೊಟ್ಟಿರುವ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರಿಗೆ ನೀಡಲಾಗಿದೆ ಎಂದು ಸೌರಭದ ವಿಶ್ವಸ್ಥರು ತಿಳಿಸಿದ್ದಾರೆ.

ವಿಶ್ವೇಶ್ವರ ಭಟ್ಟರು ಕುಮಟಾ ತಾಲೂಕಿನ ಮೂರೂರಿನಲ್ಲಿ ಹುಟ್ಟಿ ಬೆಳೆದು, ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದು ಹಲವಾರು ಪತ್ರಿಕೆಗಳಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿ, ವಿಶ್ವವಾಣಿ ಪತ್ರಿಕಾ ಬಳಗ ಸೃಷ್ಟಿಸಿ, ಹಳ್ಳಿ ಹಳ್ಳಿಗಳಲ್ಲಿ ನೂರಾರು ಪತ್ರಕರ್ತರನ್ನು ಸೃಷ್ಟಿಸಿರುವ ಅವರು, ಸಾವಿರಾರು ಬರಹ, ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು, ವಿಶ್ವಾದ್ಯಂತ ಅಧ್ಯಯನಕ್ಕಾಗಿಯೇ ಸುತ್ತಿ, ಅನುಭವಗಳ ಮಹತ್ವಪೂರ್ಣ ಕೊಡುಗೆ ನೀಡುತ್ತಿದ್ದಾರೆ. ಆದ್ದರಿಂದ ಈ ವರ್ಷ ವಿಶ್ವೇಶ್ವರ ಭಟ್ಟರನ್ನು ಸೌರಭ ಸಮ್ಮಾನ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- ಸೌರಭ ದ ಅಧ್ಯಕ್ಷ ಶ್ರೀಕಾಂತ ಕೆ. ಭಟ್ ಮತ್ತು ಕಾರ್ಯದರ್ಶಿ ಅರುಣ ಹೆಗಡೆ ಪ್ರಕಟಣೆ
- ಸೌರಭ 30 ವರ್ಷಗಳಿಂದ ಅಸ್ತಿತ್ವದಲ್ಲಿರುವ ಕುಮಟಾದ ಹಿರಿಯ ಸಾಂಸ್ಕೃತಿಕ ಸಂಘಟನೆ

ಮುತ್ಯಾನ 4 ಮೊಬೈಲ್‌ಗಳು ವಶ

ಯಾದಗಿರಿ: ಮಹಲ್ ರೋಜಾದ ಮಲ್ಲಿಕಾರ್ಜುನ ಮುತ್ಯಾ ಪೊಲೀಸರ ವಿಚಾರಣೆ ಎದುರಿಸಿದ್ದು, ಅವರು ಬಳಸುತ್ತಿದ್ದ 4 ಮೊಬೈಲ್, ಶ್ರೀಮಠದ ಸಿಸಿ ಟಿವಿ ದೃಶ್ಯಾವಳಿಗಳನ್ನು ವಶಕ್ಕೆ ಪಡೆಯಲಾಗಿದೆ.ಬುಧವಾರ ರಾತ್ರಿ, ಶಹಾಪುರ ಸಿಪಿಐ ಕಚೇರಿಗೆ ಬಂದಿದ್ದ ಮುತ್ಯಾಗೆ ಗುರುವಾರ ವಿಚಾರಣೆಗೆ ಹಾಜರಾಗಲು ಪೊಲೀಸರು ಸೂಚಿಸಿದ್ದರು. ಅಂತೆಯೇ ಗುರುವಾರ ಮಧ್ಯಾಹ್ನ ಹಾಜರಾದ ಅವರನ್ನು ತನಿಖಾಧಿಕಾರಿ, ಶಹಾಪುರ ಗ್ರಾಮೀಣ ಸಿಪಿಐ ಶರಣಗೌಡ ನ್ಯಾಮಣ್ಣನವರ್ ವಿಚಾರಣೆಗೊಳಪಡಿಸಿದರು.ಅದಕ್ಕೂ ಮುನ್ನ ಮುತ್ಯಾ ವೈದ್ಯಕೀಯ ತಪಾಸಣೆ ನಡೆಸಲಾಗಿದ್ದು, ವಿಚಾರಣೆ ವೇಳೆ ಸಮಗ್ರ ಹೇಳಿಕೆ ಪಡೆಯಲಾಗಿದೆ. ಅಲ್ಲದೇ ಅಗತ್ಯವೆನಿಸಿದಲ್ಲಿ ಮತ್ತೊಮ್ಮೆ ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿದೆ. ಮುತ್ಯಾ ಅವರು ತನಿಖೆ ಸಹಕರಿಸುತ್ತಿದ್ದು, ಮತ್ತೆ ಬುಲಾವ್ ಮಾಡಿದಲ್ಲಿ ಬಂದು ಹಾಜರಾಗುವುದಾಗಿ ತಿಳಿಸಿದ್ದಾರೆ. ಮತ್ತೊಮ್ಮೆ ವಿಚಾರಣೆ ನಡೆಸಿ ಪೂರ್ಣ ಪ್ರಮಾಣದ ವರದಿ ನ್ಯಾಯಾಂಗಕ್ಕೆ ಸಲ್ಲಿಸಲಿದ್ದೇವೆ ಎಂದು ತನಿಖಾಧಿಕಾರಿ ಹೇಳಿದ್ದಾರೆ.

ಬುರ್ಖಾ ಧರಿಸಿ ಹೋಳಿ ಆಚರಣೆ: ಐವರ ವಿರುದ್ಧ ಎಫ್‌ಐಆರ್

ಕಲಬುರಗಿ: ಹೋಳಿ ಹಬ್ಬದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಬುರ್ಖಾ ಧರಿಸಿ ಅನ್ಯ ಧರ್ಮದ ಭಾವನೆಗಳಿಗೆ ಧಕ್ಕೆ ತಂದಿರುವ ಆರೋಪದ ಮೇಲೆ ಐವರು ವ್ಯಕ್ತಿಗಳು ಸೇರಿದಂತೆ ಇತರರ ವಿರುದ್ಧ ಕಲಬುರಗಿಯ ಆಳಂದ ತಾಲೂಕಿನ ನಿಂಬರ್ಗಾ ಪೊಲೀಸ್ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಾಗಿದೆ.

ಪ್ರಕರಣದ ಹಿನ್ನೆಲೆ: ನಿಂಬರ್ಗಾ ಗ್ರಾಮದಲ್ಲಿ ನಡೆದ ಹೋಳಿ ಆಚರಣೆಯ ವೇಳೆ ಕೆಲವು ಯುವಕರು ಬುರ್ಖಾ ಧರಿಸಿ ಅನ್ಯ ಧರ್ಮೀಯರನ್ನು ಅವಹೇಳನ ಮಾಡಿದ್ದಾರೆ ಎನ್ನಲಾಗಿದೆ. ಈ ಕೃತ್ಯವು ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಿದೆ ಎಂದು ಆರೋಪಿಸಿ ಕಲಬುರಗಿ ದಕ್ಷಿಣ ಮತಕ್ಷೇತ್ರದ ದಲಿತ ಸೇನೆಯ ಅಧ್ಯಕ್ಷ ಸಮೀರ್ ಅವಂಟಿ ಅವರು ಪೊಲೀಸರಿಗೆ ದೂರು ನೀಡಿದ್ದರು.

ದೂರಿನ ಅನ್ವಯ ಪೊಲೀಸರು ನಿಂಬರ್ಗಾ ಗ್ರಾಮದ ನಿವಾಸಿಗಳಾದ ಪ್ರಜ್ವಲ್ ಬೆಳಮಗಿ, ಶಾಂತಪ್ಪ ಮಠಪತಿ, ನಾಗರಾಜ್ ಗೋವಣಗೊಳ, ಅನಿಲ್ ನಾಡಗಡಿ ಮತ್ತು ಚನ್ನುದುಗೊಂಡ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ತನಿಖೆ ಚುರುಕುಗೊಳಿಸಿರುವ ಪೊಲೀಸರು, ತಲೆಮರೆಸಿಕೊಂಡಿರುವ ಆರೋಪಿಗಳ ಬಂಧನಕ್ಕಾಗಿ ಬಲೆ ಬೀಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



> ಹೋಳಿ ಹಬ್ಬದ ಶವ ಯಾತ್ರೆ ವೇಳೆ ನಿಂಬರ್ಗಾದಲ್ಲಿ ಬೇರೆ ಸಮುದಾಯದ ಮಹಿಳೆಯರ ಬುರ್ಖಾ ಧರಿಸಿ ಹಾಸ್ಯ ಪ್ರದರ್ಶನ ನೀಡಲಾಗಿದೆ ಎಂಬ ಆರೋಪದಡಿ ಕೆಲವು ಯುವಕರ ಮೇಲೆ ಪ್ರಕರಣ ದಾಖಲಾ ಗಿದೆ. ಈ ಬಗ್ಗೆ ಕಾನೂನು ಪ್ರಕಾರ ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಗ್ರಾಮದ 2 ಸಮುದಾಯದ ಮುಖಂಡರ ಸಮ್ಮುಖದಲ್ಲಿ ಶಾಂತಿ ಸಭೆ ನಡೆಸಿ, ಎಲ್ಲರೂ ಸಹೋದರತ್ವದ ಮನೋಭಾವದಿಂದ ನಡೆದುಕೊಳ್ಳಬೇಕು. ಅಹಿತಕರ ಘಟನೆಗೆ ಅವಕಾಶ ನೀಡಬಾರದು ಎಂದು ಸೂಚನೆ ನೀಡಲಾಗಿದೆ.
> –**ಜಗದೀಶ ಕೆ.ಜಿ,** ಸಿಪಿಐ, ಆಳಂದ

ಬಜೆಟ್ ಮೇಲೆ ಜಿಲ್ಲೆಯ ಎಲ್ಲರ ಕಣ್ಣು | ಕೈಗಾರಿಕಾ ಕ್ರಾಂತಿ, ಹೈಟೆಕ್ ಸ್ಪರ್ಶಕ್ಕೆ ಹಕ್ಕೊತ್ತಾಯ

ಕಲಬುರಗಿಗೆ ಸಿಗುವುದೇ ಸಿದ್ದು ವಿಶೇಷ ಅನುಗ್ರಹ?

ದೇವೇಂದ್ರ ಜಾಡಿ ಕಲಬುರಗಿ

ರಾಜ್ಯ ಸರಕಾರ ಮಂಡಿಸಲಿರುವ ಪ್ರಸಕ್ತ ಸಾಲಿನ ಬಜೆಟ್ ಮೇಲೆ ಕಲಬುರಗಿ ಜಿಲ್ಲೆ ಜನತೆ ಭಾರೀ ನಿರೀಕ್ಷೆ ಹೊಂದಿದ್ದಾರೆ. ಕಲ್ಯಾಣ ಕರ್ನಾಟಕದ ಹೆಬ್ಬಾಗಿಲಾಗಿರುವ ಈ ಭಾಗದ ಪ್ರಾದೇಶಿಕ ಅಸಮತೋಲನ ನೀಗಿಸಲು ಮತ್ತು ಸಮಗ್ರ ವಿಕಾಸದ ಹಾದಿ ಸುಗಮಗೊಳಿಸಲು ಸಿದ್ದ ರಾಮಯ್ಯನವರ ಸರಕಾರ ಈ ಬಾರಿ 'ಅಭಿವೃದ್ಧಿಯ ಬಂಪರ್ ಕೊಡುಗೆ' ನೀಡಲೇಬೇಕು ಎಂಬ ಒತ್ತಾಯ ಜಿಲ್ಲೆಯಾದ್ಯಂತ ಕೇಳಿಬರುತ್ತಿದೆ.

> ಕಲಬುರಗಿ ಜಿಲ್ಲೆಗೆ ಪ್ರತಿ ಬಜೆಟ್‌ನಲ್ಲೂ ಭರವಸೆಗಳ ಮಹಾಪೂರವೇ ಹರಿಯುತ್ತದೆ, ಆದರೆ ಅನುಷ್ಠಾನ ಶೂನ್ಯ. ಈ ಬಾರಿಯಾದರೂ ಸಿದ್ದರಾಮಯ್ಯನವರ ಸರಕಾರ ವಲಸೆ ಮತ್ತು ನಿರುದ್ಯೋಗದಂತಹ ಜೀವಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲಿ. ನಮ್ಮ ಭಾಗದ ದಶಕಗಳ ಬೇಡಿಕೆಗಳನ್ನು ಕಾಗದದ ಮೇಲಷ್ಟೇ ಉಳಿಸದೆ. ಅಭಿವೃದ್ಧಿಯ ಮೂಲಕ ಹಣೆಪಟ್ಟಿ ಬದಲಿಸಲಿ.
> – **ಸಂಗೀತಾ ಕಂತಿ,** ಕಲಬುರಗಿ

ಕೈಗಾರಿಕಾ ಕ್ರಾಂತಿಗೆ ಆಗ್ರಹ: ಜಿಲ್ಲೆಯ ಬಹುದೊಡ್ಡ ಶಾಪವೆಂದರೆ ನಿರಂತರವಾಗಿ ನಡೆಯುತ್ತಿರುವ 'ವಲಸೆ. ಉದ್ಯೋಗ ಅರಸಿ ಜನರು ಮುಂಬೈ, ಪುಣೆಯಂತಹ ನಗರಗಳಿಗೆ ಹೋಗುವುದನ್ನು ತಪ್ಪಿಸಲು ಸ್ಥಳೀಯವಾಗಿ ಬೃಹತ್ ಕೈಗಾರಿಕೆಗಳ ಸ್ಥಾಪನೆ ಅನಿವಾರ್ಯವಾಗಿದೆ. ಕೇಂದ್ರ ಘೋಷಿಸಿರುವ ಪಿ.ಎಂ.ಮಿತ್ರಾ ಜವಳಿ ಪಾರ್ಕ್‌ಗೆ ರಾಜ್ಯ ಸರಕಾರ ತುರ್ತಾಗಿ ಸೌಕರ್ಯ ಒದಗಿಸಬೇಕು. ಸಾವಿರ ಎಕರೆ ಪ್ರದೇಶದಲ್ಲಿ ಕೈಗಾರಿಕಾ ಹಬ್ ಹಾಗೂ ಸ್ಟಾರ್ಟಪ್ ಪಾರ್ಕ್‌ಗಳನ್ನು ನಿರ್ಮಿಸುವ ಮೂಲಕ ನಿರುದ್ಯೋಗ ನಿವಾರಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬುದು ಇಲ್ಲಿನ ಯುವಕರ ಬಲವಾದ ಬೇಡಿಕೆಯಾಗಿದೆ.

ಆರೋಗ್ಯ ಮತ್ತು ಶಿಕ್ಷಣದ ಬೇಡಿಕೆ: ಆರೋಗ್ಯ ಕ್ಷೇತ್ರದಲ್ಲಿ ಕಲಬುರಗಿಗೆ ತನ್ನದೇ ಆದ ಸ್ವಾಯತ್ತತೆ ಬೇಕಿದೆ. ಬೆಂಗಳೂರಿನ ಮೇಲಿನ ಅವಲಂಬನೆ ತಗ್ಗಿಸಲು ಇಲ್ಲಿ ನಿಮ್ಹಾನ್ಸ್ ಶಾಖೆ ಹಾಗೂ ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆಯ (AIISH) ಶಾಖೆಯನ್ನು ಆರಂಭಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ವಿಶ್ವವಿದ್ಯಾಲಯ ಹಾಗೂ ಅರಣ್ಯ ಕಾಲೇಜು ಸ್ಥಾಪನೆಯ ಮೂಲಕ ಹಿಂದುಳಿದ ಭಾಗದ ಶೈಕ್ಷಣಿಕ ಮಟ್ಟವನ್ನು ಎತ್ತರಿಸುವಂತೆ ಸರಕಾರಕ್ಕೆ ಒತ್ತಾಯಿಸಲಾಗಿದೆ.

ಕೃಷಿ ಮತ್ತು ನೀರಾವರಿಗೆ ಬೇಕಿದೆ ಕಾಯಕಲ್ಪ: ತೊಗರಿ ನಾಡಿನ ರೈತರ ಬದುಕು ಹಸನಾಗಲು ಕೆ.ಎಂ.ಎಫ್ ಮಾದರಿಯಲ್ಲೇ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯನ್ನು ಬಲಪಡಿಸಬೇಕು. ಜಿಲ್ಲೆಯ 6 ಅಣೆಕಟ್ಟುಗಳ ಕಾಲುವೆಗಳನ್ನು ದುರಸ್ತಿಗೊಳಿಸಿ ರೈತರ ಹೊಲಗಳಿಗೆ ನೀರು ಹರಿಸಬೇಕು. ಬರಗಾಲ ಪೀಡಿತ ಜಿಲ್ಲೆಯ ಪ್ರತಿ ಹಳ್ಳಿಯ ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ಹೆಚ್ಚಿಸಲು ಈ ಬಜೆಟ್‌ನಲ್ಲಿ ಆದ್ಯತೆ ನೀಡಬೇಕು.

ಸಿದ್ದರಾಮಯ್ಯನವರು 'ಅನುಗ್ರಹ' ತೋರಿ ಹಿಂದುಳಿದ ಹಣೆಪಟ್ಟಿ ಹೊತ್ತಿರುವ ಕಲಬುರಗಿ ಜಿಲ್ಲೆಗೆ ಬಜೆಟ್‌ನಲ್ಲಿ ಸಿಂಹಪಾಲು ನೀಡಬೇಕು. ಕೇವಲ ಘೋಷಣೆಗಳ ಬದಲಾಗಿ ಬಜೆಟ್‌ನಲ್ಲಿ ಈ ಭಾಗದ ಯೋಜನೆಗಳಿಗೆ ಭರಪೂರ ಅನುದಾನ ಹಂಚಿಕೆಯಾಗಬೇಕು ಎಂಬುದು ಜಿಲ್ಲೆಯ ಜನರ ಹಕ್ಕೊತ್ತಾಯವಾಗಿದೆ.

ಕಲ್ಯಾಣಸೌಧಕ್ಕೆ ಬೇಕಿದೆ ಆಸರೆ!

ಕಲಬುರಗಿ ನಗರದ ಸಮಗ್ರ ವಿಕಾಸಕ್ಕೆ ಸಚಿವ ಸಂಪುಟ ಸಭೆಯಲ್ಲಿ ಘೋಷಿಸಲಾದ 1,600 ಕೋಟಿ ರು. ಅನುದಾನವನ್ನು ಈ ಬಾರಿಯ ಬಜೆಟ್‌ನಲ್ಲಿ ಬಿಡುಗಡೆ ಮಾಡಬೇಕು ಎಂಬ ಒತ್ತಾಯ ಕೇಳಿಬಂದಿದೆ. ಸ್ಮಾರ್ಟ್‌ಸಿಟಿ ಯೋಜನೆಯಿಂದ ವಂಚಿತವಾಗಿರುವ ನಗರದ ಹಿತದೃಷ್ಟಿಯಿಂದ, ಎಲ್ಲಾ ವಿಭಾಗೀಯ ಕಚೇರಿಗಳನ್ನು ಒಂದೇ ಸೂರಿನಡಿ ತರಲು ಬೃಹತ್ 'ಕಲ್ಯಾಣ ಸೌಧ' ನಿರ್ಮಾಣವಾಗಬೇಕು. ಈ ಮೂಲಕ ಆಡಳಿತಾತ್ಮಕ ದಕ್ಷತೆ ಹೆಚ್ಚಿಸಿ, ಮಹಾನಗರಕ್ಕೆ ಹೈಟೆಕ್ ಸ್ಪರ್ಶ ನೀಡಲು ಸರಕಾರ ಈ ಬಾರಿ ಬಜೆಟ್‌ನಲ್ಲಿ ಅನುಗ್ರಹ ತೋರಬೇಕಿದೆ.

ಕೋಟೆಗಳ ಅಭಿವೃದ್ಧಿಗೆ ಆಗ್ರಹ

ಕಲಬುರಗಿ ಮತ್ತು ಮಳಖೇಡ ಕೋಟೆಗಳ ಸಮಗ್ರ ಪುನಶ್ಚೇತನಕ್ಕೆ ತಲಾ 100 ಕೋಟಿ ರು.ಅನುದಾನ ನೀಡಬೇಕು ಎಂಬ ಒತ್ತಾಯ ಕೇಳಿಬಂದಿದೆ. ಸನ್ನತಿ ಹಾಗೂ ನಾಗಾವಿ ಸ್ಮಾರಕಗಳನ್ನು ಯುನೆಸ್ಕೋ ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಹಂಪಿ-ವಿಜಯಪುರ ಪ್ರವಾಸಿ ಸರ್ಕ್ಯೂಟ್ ಅನ್ನು ಕಲಬುರಗಿ-ಬೀದರ್‌ವರೆಗೂ ವಿಸ್ತರಿಸಿ, ಈ ಭಾಗದ ಐತಿಹಾಸಿಕ ತಾಣಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಬಜೆಟ್‌ನಲ್ಲಿ ಸರಕಾರಕ್ಕೆ ಆಗ್ರಹಿಸಲಾಗಿದೆ.

ಪ್ರಮುಖ ನಿರೀಕ್ಷೆಗಳು

- **ಕೈಗಾರಿಕೆ:** ನಿರುದ್ಯೋಗ ನಿವಾರಣೆಗಾಗಿ ಬೃಹತ್ ಕೈಗಾರಿಕೆಗಳ ಸ್ಥಾಪನೆ.
- **ಉದ್ಯೋಗ:** ವಲಸೆ ತಡೆಗೆ ಸ್ಥಳೀಯವಾಗಿ ಉದ್ಯೋಗಾವಕಾಶಗಳ ಸೃಜನೆ.
- **ಆರೋಗ್ಯ:** ಕಲಬುರಗಿಯಲ್ಲಿ ನಿಮ್ಹಾನ್ಸ್ ಮತ್ತು ಎಐಐಎಸ್‌ಎಚ್ ಶಾಖೆಗಳ ಆರಂಭ.

- **ಕೃಷಿ:** ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ಹಾಗೂ ಬಲವರ್ಧನೆ.
- **ಆಡಳಿತ:** 'ಕಲ್ಯಾಣ ಸೌಧ' ನಿರ್ಮಾಣಕ್ಕೆ ಅಗತ್ಯ ಹಣ ಬಿಡುಗಡೆ.
- **ಪ್ರವಾಸೋದ್ಯಮ:** ಸನ್ನತಿ, ಮಳಖೇಡ ಮತ್ತು ಕಲಬುರಗಿ ಕೋಟೆಗಳ ಪುನಶ್ಚೇತನ.
- **ಶಿಕ್ಷಣ:** ಜಿಲ್ಲೆಯಲ್ಲಿ ಕೌಶಲಾಭಿವೃದ್ಧಿ ವಿಶ್ವವಿದ್ಯಾಲಯ ಸ್ಥಾಪನೆ.
- **ನೀರಾವರಿ:** ಕೆರೆ ತುಂಬಿಸುವ ಯೋಜನೆ ಮತ್ತು ಕಾಲುವೆಗಳ ದುರಸ್ತಿಗೆ ಆದ್ಯತೆ.

ಸಿಎಂ-ಡಿಸಿಎಂ ಯಾವತ್ತೂ ಒಂದಾಗಿಲ್ಲ ಎಂದಿಲ್ಲ: ಡಿಕೆಸು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾವು ಒಟ್ಟಾಗಿಲ್ಲ ಎಂದು ಎಲ್ಲಿಯೂ ಹೇಳಿಲ್ಲ. ಒಂದೇ ಪಕ್ಷದಲ್ಲಿದ್ದಾರೆ, ಸಿದ್ಧಾಂತ ಮತ್ತು ನಾಯಕತ್ವಕ್ಕೆ ಗೌರವ ನೀಡಲು ಬದ್ಧತೆಯಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಸ್ಪಷ್ಟಪಡಿಸಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿ, ಪದೇ ಪದೆ ಇಬ್ಬರು ನಾಯಕರೂ ಒಗ್ಗಟ್ಟು ಪ್ರದರ್ಶಿಸುತ್ತಿರುವ ಬಗ್ಗೆ ನನಗೆ ಹೆಚ್ಚಿನ ಮಾಹಿತಿಯಿಲ್ಲ. ಆದರೆ ಇಬ್ಬರೂ ನಾಯಕರು ಒಟ್ಟಾಗಿಯೇ ಕೆಲಸ ಮಾಡುತ್ತಿದ್ದಾರೆ. ಈ ಮೊದಲು ವಿರೋಧ ಪಕ್ಷದಲ್ಲಿ ಇದ್ದಾಗಿನಿಂದಲೂ ಜತೆಯಾಗಿಯೇ ಕೆಲಸ ಮಾಡಿದ್ದಾರೆ, ಚುನಾವಣೆಗಳಲ್ಲಿ ಒಟ್ಟಾಗಿ ದುಡಿದಿದ್ದಾರೆ. ತಾವು ಮತ್ತು ಡಿ.ಕೆ.ಶಿವಕುಮಾರ್ ಹಾಲು-ಜೇನಿನಂತೆ ಇದ್ದೇವೆ ಎಂದು ಸಿದ್ದರಾಮಯ್ಯ ಅವರು ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ಹಾಲು ಬೇಕಾದರೆ ಡೈರಿ ಸರ್ಕಲ್‌ಗೆ ಬನ್ನಿ. ಜೇನಿನ ಬಗ್ಗೆ ಮಾಹಿತಿಯಿಲ್ಲ. ಅದು ಕೊಡಗು ಮಳೆನಾಡು ಭಾಗದಲ್ಲಿ ದೊರೆಯುತ್ತದೆ. ಮೈಸೂರ್ ಪಾಕ್ ಅಥವಾ ಇನ್ನಾವುದಾದರೂ ಸಿಹಿ ಬೇಕಾದರೆ ಕೆಎಂಎಫ್‌ಗೆ ಬನ್ನಿ ಎಂದು ಮಾರ್ಮಿಕವಾಗಿ ಹೇಳಿದರು.

> ಕೆಪಿಎಸ್‌ಸಿ ನೇಮಕ ಅಕ್ರಮದ ಬಗ್ಗೆ ಶೀಘ್ರವೇ ಅಭ್ಯರ್ಥಿಗಳಿಗೆ ಸೂಕ್ತ ಮಾಹಿತಿ ನೀಡಬೇಕಿದೆ. ಒಂದೇ ಕೊಠಡಿಯಲ್ಲಿ ಅತಿ ಹೆಚ್ಚು ಜನ ಅಂಕ ಗಳಿಸಿ ಪಾಸಾಗಿದ್ದಾರೆ ಎಂದರೆ ಅನುಮಾನ ಬರುವುದು ಸಹಜ. ಅದಕ್ಕೆ ಅವಕಾಶವಾಗದಂತೆ ಸೂಕ್ತ ತನಿಖೆ ನಡೆಸಬೇಕು. ಕಷ್ಟಪಟ್ಟು ಓದಿ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು, ಉದ್ಯೋಗದ ನಿರೀಕ್ಷೆಯಲ್ಲಿದ್ದವರಿಗೆ ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಂದ ಅನುಮಾನ ಮೂಡುವಂತಾಗಿದೆ. ಇದನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
> –**ಡಿ.ಕೆ.ಸುರೇಶ್,** ಬಮೂಲ್ ಅಧ್ಯಕ್ಷ

ಸಂಪಾದಕೀಯ

ಅಲ್ಲಿ ನೆನಪಿನ ಶಕ್ತಿ ಬೇಡವಾ?

ಅನುಕೂಲಸಿಂಧು ರಾಜಕಾರಣಕ್ಕೆ ಯಾವುದೇ ಎಲ್ಲೆಯಿಲ್ಲ, ಕಾಲದ ಹಂಗಿಲ್ಲ ಎಂಬ ಗ್ರಹಿಕೆಗೆ ಕಾಲಾನುಕಾಲಕ್ಕೆ ಉದಾಹರಣೆಗಳು ಸಿಗುತ್ತಲೇ ಇರುತ್ತವೆ. ಅದಕ್ಕೆ ಇತ್ತೀಚೆಗೆ ಗ್ರಾಸ ಒದಗಿಸಿರುವುದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರರ ವಿಷಯದಲ್ಲಿ ಆಗಿರುವ ಬೆಳವಣಿಗೆ. 'ನಿತೀಶ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ರಾಜ್ಯಸಭೆಯ ಕಡೆಗೆ ಮುಖಮಾಡಲಿದ್ದಾರೆ ಮತ್ತು ಅವರ ಮಗ ನಿಶಾಂತ್ ಕುಮಾರ್ ಅವರು ಉಪಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ' ಎಂಬ ಸುದ್ದಿ ಮೊನ್ನೆ ಹರಿದಾಡಿದಾಗ, ಹಲವರ ಹುಬ್ಬೇರಿದ್ದು ನಿಜ. ಆದರೆ ಅದಕ್ಕಿಂತಲೂ ಅಚ್ಚರಿ ಮೂಡಿಸಿದ್ದು, ಈ 'ಸ್ಥಾನಪಲ್ಲಟ'ದ ಹಿಂದೆ ಹರಿದಾಡುತ್ತಿರುವ ಕಾರಣ. 'ನಿತೀಶರಿಗೆ ವಯಸ್ಸಾಗಿದ್ದು ನೆನಪಿನ ಶಕ್ತಿ ಕುಗ್ಗಿರುವುದರಿಂದ, ಅವರನ್ನು ಬದಲಾಯಿಸಲು ನಿರ್ಧರಿಸಲಾಗಿದೆ ಎನ್ನಲಾಗಿದೆ' ಎಂಬುದೇ ಆ ಕಾರಣವಂತೆ. ಇದೆಂಥಾ ಚೋದ್ಯ?! ವಯಸ್ಸಾಗಿರುವುದು ಮತ್ತು ನೆನಪಿನ ಶಕ್ತಿ ಕುಗ್ಗಿರುವುದು ನಿತೀಶರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಿಸುವುದಕ್ಕೆ ಹೇತುವಾಗಿವೆ ಎಂಬ 'ಗ್ರಹಿಕೆ' ಅಥವಾ 'ನೆಪ'ವನ್ನೇ ನಂಬೋಣವಂತೆ. ಹಾಗಾದರೆ, ರಾಜ್ಯಸಭಾ ಸದಸ್ಯರಾಗುವುದಕ್ಕೆ ಈ 'ವೃದ್ಧಾಪ್ಯ' ಮತ್ತು 'ನೆನಪಿನ ಶಕ್ತಿ ಕುಗ್ಗಿರುವುದು' ಅಡ್ಡಿಯಾಗುವುದಿಲ್ಲ ಎಂದು ನಮ್ಮಂಥವರು ಭಾವಿಸಬೇಕಾ? ಅಥವಾ ರಾಜ್ಯಸಭಾ ಸದಸ್ಯತ್ವ ಎಂಬುದು ಈ ಎರಡು ಕೊರತೆಗಳಿದ್ದರೂ ನಿರ್ವಹಿಸಬಹುದಾದ 'ಹೊಣೆಗಾರಿಕೆ' ಅಂದುಕೊಳ್ಳಬೇಕಾ? ಅಥವಾ ಇದಕ್ಕೆ ಅನುಕೂಲಸಿಂಧು ರಾಜಕಾರಣದ ಪರಮಾವಧಿ ಎಂಬ ಹಣೆಪಟ್ಟಿ ಲಗತ್ತಿಸಬೇಕಾ? ಮೇಲೆ ಉಲ್ಲೇಖಿಸಿರುವ ಆ ಎರಡು 'ಕೊರತೆಗಳು' ನಿತೀಶರ ಕೈಹಿಡಿದು ಕೆಳಗೆ ಎಳೆಯುತ್ತಿದ್ದಲ್ಲಿ ಅವರು ರಾಜಕೀಯದಿಂದ ನಿವೃತ್ತರಾಗಿ ಮತ್ತಾರಾದರೂ ಉತ್ಸಾಹಿ ಯುವಕರಿಗೆ ರಾಜ್ಯಸಭಾ ಸದಸ್ಯತ್ವದ ಅವಕಾಶವನ್ನು ನೀಡಬೇಕಲ್ಲವೇ? ಎಂಬೆಲ್ಲ ಪ್ರಶ್ನೆಗಳು ಇಲ್ಲಿ ಹುಟ್ಟುತ್ತವೆ. ಆದರೆ ಇವಕ್ಕೆ ಯಾರೂ ಉತ್ತರಿಸುವುದಿಲ್ಲ ಎಂಬುದೂ ಬಹಿರಂಗ ಸತ್ಯವೇ!

ಸೊಂಪಾದಕೀಯ

ಚಾಟ್ ಮಸಾಲಾ

ವಿಜ್ಞಾನ-ತಂತ್ರಜ್ಞಾನ ಮುಂದುವರಿದಂತೆ ಪ್ರತಿದಿನವೂ ವಿಶ್ವದಲ್ಲಿ ಮಾನವನ ಶ್ರಮ, ಪ್ರಯತ್ನಗಳ ಅವಶ್ಯಕತೆ ಕಡಿಮೆ ಆಗ್ತಾ ಇದೆ. ಈಗ ನಾವು ಬಳಸುವ ಮೊಬೈಲ್ ಫೋನ್‌ನಲ್ಲಿ ಡಿಎಸ್‌ಎಲ್‌ಆರ್ ಮಾದರಿಯ ಕ್ಯಾಮೆರಾ ಸೇರಿದಂತೆ ಕಂಡುಬರುವ ಹತ್ತು ಹಲವು ವಿಸ್ಮಯಗಳನ್ನು 20 ವರ್ಷಗಳ ಹಿಂದೆ ಯಾರೂ ಊಹೆ ಕೂಡಾ ಮಾಡಿರಲಿಲ್ಲ. ಈಗೆಲ್ಲ 'ಗೂಗಲ್ ಅಸಿಸ್ಟೆಂಟ್', 'ಸಿರಿ'ಯಂಥ ಮೊಬೈಲ್ ಸಹಾಯಕ ತಂತ್ರಾಂಶಗಳು ನಾವು ಸುಮ್ಮನೇ ಬಾಯಿಯಲ್ಲಿ ಹೇಳಿದ್ದನ್ನು ಕ್ಷಣಾರ್ಧದಲ್ಲಿ ಮಾಡಿ ತೋರಿಸುತ್ತವೆ. ಇಂದಿನ ಸ್ಮಾರ್ಟ್ ಫೋನ್‌ಗಳಲ್ಲಿ ನಿಜಕ್ಕೂ ನಂಬಲಾಗದ ಅನೇಕ ವಿಸ್ಮಯಕಾರಿ ಫೀಚರ್‌ಗಳು ಇವೆ. ಇದರ ಜತೆಗೆ ಇಂಟರ್‌ನೆಟ್ ಅನ್ನೋದೇ ಒಂದು ದೊಡ್ಡ ವಿಸ್ಮಯ. ಅದರಲ್ಲಿ ಏನೆಲ್ಲಾ ಮಾಡಬಹುದು ಅನ್ನೋದಕ್ಕೆ ಸಾಕ್ಷಿಯಾಗಿ ಅನೇಕ 'ರೈಟಿಂಗ್ ಅಸಿಸ್ಟೆಂಟ್' ತಂತ್ರಾಂಶಗಳು ಬಂದಿವೆ. ಇವು ಎಂಥದ್ದೇ ದೊಡ್ಡ ಕೆಲಸವನ್ನು 'ಇದೇನು ಮಹಾ' ಎನ್ನುವಂತೆ ಕಣ್ಣು ಬಿಟ್ಟು ತೆರೆಯುವಷ್ಟರಲ್ಲಿ ಮಾಡಿ ಮುಗಿಸುತ್ತವೆ. ಉದಾಹರಣೆಗೆ 'ನಾನು ಆಫೀಸಿಗೆ ಬರೋಕಾಗಲ್ಲ ಅಂತ ಇಂಥವರಿಗೆ ಒಂದ್ ಲೀವ್ ಲೆಟರ್ ಬರಿ' ಅಂದ್ರೆ, ಬರೆದು ಬಿಸಾಕಿಬಿಡುತ್ತವೆ. ಹಾಗೆಯೇ 'ಗೆಳತಿಗೆ ಒಂದು ಲವ್ ಲೆಟರ್ ಬರಿ' ಅಂದ್ರೂ, ಬರೆದುಬಿಡುತ್ತದೆ. ಆದ್ರೆ, ಅದು ಬರೆದ ಲೀವ್ ಲೆಟರ್‌ನಿಂದ ನಿಮಗೆ ರಜೆ ಸಿಗುತ್ತದೋ ಇಲ್ಲವೋ, ಅದು ಬರೆದ ಲವ್ ಲೆಟರ್‌ನಿಂದ ನಿಮಗೆ ಹುಡುಗಿ ಸಿಗುತ್ತಾಳೋ ಇಲ್ಲವೋ, ತನ್ನ ಕೆಲಸವನ್ನಂತೂ ಅದು ಪರಿಪೂರ್ಣವಾಗಿ ಮಾಡಿ ಮುಗಿಸುತ್ತದೆ. ಇದನ್ನು ಪರೀಕ್ಷೆ ಮಾಡೋಕೆ ಅಂತ 2000 ಪದಗಳ ಮಹಾಪ್ರಬಂಧ ಬರೆಯಲು ಸೂಚಿಸಿದಾಗ ಚಾಟ್ ಜಿಪಿಟಿ ಅದನ್ನು ಕೇವಲ 20 ನಿಮಿಷದಲ್ಲಿ ಬರೆದು ಮುಗಿಸಿತಂತೆ. ಆದರೆ ಇದು ಎಷ್ಟರ ಮಟ್ಟಿಗೆ ಪ್ರಭಾವಶಾಲಿಯಾಗಿ ಬರೆಯುತ್ತೆ ಅನ್ನೋದನ್ನು ನೋಡೋಕೆ ಅಂತಲೇ ತಜ್ಞರಿಂದ ಅದನ್ನು ಮೌಲ್ಯಮಾಪನ ಮಾಡಿಸಿದಾಗ ಈ ಪ್ರಬಂಧಕ್ಕೆ 100ಕ್ಕೆ 53 ಅಂಕ ಲಭಿಸಿತಂತೆ. ಹಾಗಾಗಿ ಇದು 'ಅಯ್ಯೋ, 35 ಬಂದ್ರೆ ಸಾಕು ಗುರೂ' ಅನ್ನೋ ಪಡ್ಡೆಗಳಿಗೆ ವರದಾನವೇ ಸರಿ!

ಸಂಪಾದಕರ ಸದ್ಯಶೋಧನೆ

ಇಲ್ಲಿ ಈಗಿರುವುದು ಒಂದೇ ಆನೆ!

ದಕ್ಷಿಣ ಆಫ್ರಿಕಾದ ಸುಪ್ರಸಿದ್ಧ 'ಗಾರ್ಡನ್ ರೂಟ್' ಹಾದಿಯಲ್ಲಿ ಸಾಗುವಾಗ ಸಿಗುವ 'ನೈಸ್ನಾ' ಅರಣ್ಯ ಪ್ರದೇಶವು ಪ್ರಕೃತಿ ಸೌಂದರ್ಯಕ್ಕೆ ಮಾತ್ರವಲ್ಲ, ಜಗತ್ತಿನ ಅತ್ಯಂತ ನಿಗೂಢ ಪ್ರಾಣಿಗಳಲ್ಲಿ ಒಂದಾದ 'ನೈಸ್ನಾ ಆನೆ'ಯ ಕಥೆಗೂ ಪ್ರಸಿದ್ಧಿಯಾಗಿದೆ. ಒಂದು ಕಾಲದಲ್ಲಿ ಸಾವಿರಾರು ಸಂಖ್ಯೆಯಲ್ಲಿದ್ದ ಆನೆಗಳ ಕುಲ ಇಂದು ಕೇವಲ 'ಒಂದೇ ಒಂದು' ಆನೆಗೆ ಬಂದು ನಿಂತಿದೆ ಎಂಬುದು ವಿಜ್ಞಾನ ಲೋಕದ ಅಚ್ಚರಿ ಮತ್ತು ನೋವಿನ ಸಂಗತಿ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ನೈಸ್ನಾ ಮತ್ತು ಅದರ ಸುತ್ತಮುತ್ತಲಿನ ದಟ್ಟವಾದ ಅರಣ್ಯಗಳು ಆನೆಗಳ ಪಾಲಿನ ಸ್ವರ್ಗವಾಗಿದ್ದವು. ಇತಿಹಾಸಕಾರರ ಪ್ರಕಾರ, ಈ ಪ್ರದೇಶದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಆನೆಗಳು ಮುಕ್ತವಾಗಿ ಸಂಚರಿಸುತ್ತಿದ್ದವು. ಇವುಗಳು ದಕ್ಷಿಣ ಆಫ್ರಿಕಾದ ಇತರ ಭಾಗಗಳ ಆನೆಗಳಿಗಿಂತ ಸ್ವಲ್ಪ ಭಿನ್ನವಾಗಿದ್ದವು. ದಟ್ಟ ಕಾಡಿನಲ್ಲಿ ಬದುಕಲು ಹೊಂದಿಕೊಂಡಿದ್ದರಿಂದ ಇವುಗಳು ಹೆಚ್ಚು ಬಲಿಷ್ಠವಾಗಿದ್ದವು. ಆದರೆ, ನಗರೀಕರಣ ಮತ್ತು ಮಾನವನ ದುರಾಸೆ ಇವುಗಳ ಅವನತಿಗೆ ಕಾರಣವಾಯಿತು. ದಂತಕ್ಕಾಗಿ ನಡೆದ ಅತಿಯಾದ ಬೇಟೆ ಮತ್ತು ಕೃಷಿಗಾಗಿ ಅರಣ್ಯ ನಾಶವಾಗಿದ್ದರಿಂದ ಆನೆಗಳ ಸಂಖ್ಯೆ ವೇಗವಾಗಿ ಕ್ಷೀಣಿಸಿತು. 1920ರ ಹೊತ್ತಿಗೆ ಇಲ್ಲಿ 10-15 ಆನೆಗಳು ಮಾತ್ರ ಉಳಿದುಕೊಂಡಿದ್ದವು. ಕಳೆದ ಕೆಲವು ದಶಕಗಳಿಂದ ವಿಜ್ಞಾನಿಗಳು ಮತ್ತು ಪರಿಸರ ಪ್ರೇಮಿಗಳು ನೈಸ್ನಾ ಕಾಡಿನಲ್ಲಿ ಎಷ್ಟು ಆನೆಗಳಿವೆ ಎಂಬ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. 2000ನೇ ಇಸವಿಯ ಸುಮಾರಿಗೆ ಅಲ್ಲಿ ಒಂದು ಸಣ್ಣ ಗುಂಪು ಇರಬಹುದು ಎಂದು ಭಾವಿಸಲಾಗಿತ್ತು. ಆದರೆ, ಅತ್ಯಾಧುನಿಕ ಕೆಮರಾ ಟ್ರ್ಯಾಪ್‌ಗಳು ಮತ್ತು ಡಿಎನ್‌ಎ ಪರೀಕ್ಷೆಗಳ ನಂತರ ವಿಜ್ಞಾನಿಗಳು ಒಂದು ಆಘಾತಕಾರಿ ಸತ್ಯವನ್ನು ಹೊರಹಾಕಿದರು. ಇಡೀ 600 ಚದರ ಕಿ.ಮೀ. ವಿಸ್ತೀರ್ಣದ ದಟ್ಟ ಕಾಡಿನಲ್ಲಿ ಇಂದು ಕೇವಲ ಒಂದೇ ಒಂದು ಹೆಣ್ಣು ಆನೆ ಉಳಿದುಕೊಂಡಿದೆ! ಇದನ್ನು ವಿಜ್ಞಾನಿಗಳು ಪ್ರೀತಿಯಿಂದ 'ದಿ ಓಲ್ಡ್ ಮ್ಯಾಟ್ರಿಯಾರ್ಕ್' ಎಂದು ಕರೆಯುತ್ತಾರೆ. ಆನೆಗಳನ್ನು ದಟ್ಟ ಕಾಡಿನಲ್ಲಿ ನೇರವಾಗಿ ಕಾಣುವುದು ಅಸಾಧ್ಯ. ಆದ್ದರಿಂದ ಸಂಶೋಧಕರು 'ಸಗಣಿ'ಯನ್ನು ಸಂಗ್ರಹಿಸಿ ಅದರ ಡಿಎನ್‌ಎ ಪರೀಕ್ಷೆ ಮಾಡಿದರು. ಈ ಪರೀಕ್ಷೆಯು ಕಾಡಿನ ಬೇರೆ ಬೇರೆ ಭಾಗಗಳಲ್ಲಿ ಸಿಕ್ಕಿದ ಎಲ್ಲ ಸಗಣಿಗಳೂ ಒಂದೇ ಹೆಣ್ಣು ಆನೆಗೆ ಸೇರಿದ್ದು ಎಂದು ಸಾಬೀತುಪಡಿಸಿತು. ಅಂದರೆ, ಆ ಒಂಟಿ ಆನೆ ಇಡೀ ಕಾಡಿನ ಉದ್ದಗಲಕ್ಕೂ ಆಹಾರ ಹುಡುಕುತ್ತಾ ಏಕಾಂಗಿಯಾಗಿ ಸಂಚರಿಸುತ್ತಿದೆ. ನೈಸ್ನಾ ಆನೆಯನ್ನು ನೋಡುವುದು ಲಾಟರಿ ಹೊಡೆದಂತೆ. ಇದಕ್ಕೆ ಕಾರಣಗಳು ಹಲವು. ಈ ಆನೆಗೆ ಮನುಷ್ಯರ ವಾಸನೆ ಬಹಳ ಬೇಗ ತಿಳಿಯುತ್ತದೆ. ಮನುಷ್ಯರು ಆ ಕಾಡಿಗೆ ಪ್ರವೇಶಿಸುತ್ತಿದ್ದಂತೆಯೇ ಅದು ದಟ್ಟವಾದ ಪೊದೆಗಳ ನಡುವೆ ಮರೆಯಾಗುತ್ತದೆ. ಇಷ್ಟು ದೊಡ್ಡ ಪ್ರಾಣಿಯಾಗಿದ್ದರೂ, ಅದು ಕಾಡಿನಲ್ಲಿ ಒಣ ಎಲೆಗಳ ಮೇಲೆ ನಡೆಯುವಾಗಲೂ ಸಣ್ಣ ಶಬ್ದವನ್ನೂ ಮಾಡುವುದಿಲ್ಲ ಎಂದು ಅಲ್ಲಿನ ಅರಣ್ಯ ರಕ್ಷಕರು ಹೇಳುತ್ತಾರೆ. ತನ್ನ ಗುಂಪಿನ ಎಲ್ಲ ಸದಸ್ಯರನ್ನು ಕಳೆದುಕೊಂಡಿರುವ ಈ ಆನೆ, ಮನುಷ್ಯರ ಬಗ್ಗೆ ಅಪಾರ ಅಪನಂಬಿಕೆ ಮತ್ತು ಭಯವನ್ನು ಹೊಂದಿದೆ. ಈ ಹೆಣ್ಣು ಆನೆಗೆ ಈಗ ಸುಮಾರು 45ರಿಂದ 50 ವರ್ಷ ವಯಸ್ಸು ಎನ್ನಲಾಗಿದೆ. ಸಾಮಾನ್ಯವಾಗಿ ಆನೆಗಳು ಸಾಮಾಜಿಕ ಪ್ರಾಣಿಗಳು, ಅವುಗಳು ಗುಂಪಿನಲ್ಲಿರಲು ಇಷ್ಟಪಡುತ್ತವೆ. ಆದರೆ ಈ ಆನೆ ಕಳೆದ 20 ವರ್ಷಗಳಿಂದ ಏಕಾಂಗಿಯಾಗಿ ಬದುಕುತ್ತಿದೆ. ವಿಜ್ಞಾನಿಗಳ ಪ್ರಕಾರ, ಇದು ತೀವ್ರವಾದ ಮಾನಸಿಕ ಒತ್ತಡದಲ್ಲಿರಬಹುದು. ಏಕೆಂದರೆ ಸಂವಹನ ನಡೆಸಲು ಅಥವಾ ಜತೆಗೂಡಲು ಇದಕ್ಕೆ ತನ್ನ ಜಾತಿಯ ಯಾವುದೇ ಪ್ರಾಣಿ ಅಕ್ಕಪಕ್ಕದಲ್ಲಿಲ್ಲ. 1994ರಲ್ಲಿ ಕ್ರೂಗರ್ ನ್ಯಾಷನಲ್ ಪಾರ್ಕ್‌ನಿಂದ ಮೂರು ಸಣ್ಣ ಆನೆಗಳನ್ನು ಈ ಕಾಡಿಗೆ ಬಿಡಲಾಗಿತ್ತು. ಆದರೆ ಆ ಪ್ರಯತ್ನ ವಿಫಲವಾಯಿತು. ಎರಡು ಆನೆಗಳು ಸಾವನ್ನಪ್ಪಿದವು ಮತ್ತು ಉಳಿದ ಒಂದು ಆನೆಯನ್ನು ವಾಪಸ್ ಕರೆದೊಯ್ಯಲಾಯಿತು. ನೈಸ್ನಾ ಕಾಡಿನ ಹವಾಮಾನ ಮತ್ತು ಅಲ್ಲಿನ ಸಸ್ಯವರ್ಗವು ಇತರ ಭಾಗಗಳ ಆನೆಗಳಿಗೆ ಒಗ್ಗಿಕೊಳ್ಳುವುದು ಕಷ್ಟ ಎಂಬುದು ಅರಿವಾಯಿತು. ಈಗ ಉಳಿದಿರುವ ಏಕೈಕ ಆನೆ ಸತ್ತರೆ, ನೈಸ್ನಾ ಆನೆಗಳ ಇತಿಹಾಸ ಶಾಶ್ವತವಾಗಿ ಅಂತ್ಯಗೊಳ್ಳುತ್ತದೆ. ಇದು ಪರಿಸರ ಪ್ರೇಮಿಗಳಿಗೆ ದೊಡ್ಡ ಕಳವಳದ ವಿಷಯವಾಗಿದೆ. ಗಾರ್ಡನ್ ರೂಟ್‌ನಲ್ಲಿ ಪ್ರಯಾಣಿಸುವ ಪ್ರವಾಸಿಗರು ನೈಸ್ನಾ ಎಲಿಫೆಂಟ್ ಪಾರ್ಕ್‌ಗೆ (ಇದು ಸಂರಕ್ಷಿತ ಪ್ರದೇಶ, ಇಲ್ಲಿ ಪಳಗಿಸಿದ ಆನೆಗಳಿವೆ) ಭೇಟಿ ನೀಡುತ್ತಾರೆ. ಆದರೆ ನೈಜ 'ಕಾಡು ಆನೆ'ಯನ್ನು ನೋಡುವ ಆಸೆ ಎಲ್ಲರಿಗೂ ಇರುತ್ತದೆ. ರಸ್ತೆಯಲ್ಲಿ ಹೋಗುವಾಗ ಆನೆಯ ಹೆಜ್ಜೆ ಗುರುತುಗಳು ಅಥವಾ ಮುರಿದ ಕೊಂಬೆಗಳನ್ನು ಕಂಡರೆ, ಅದು ಆ 'ಒಂಟಿ ರಾಣಿ'ಯದ್ದೇ ಇರಬಹುದು ಎಂದು ಜನ ಸಂಭ್ರಮಿಸುತ್ತಾರೆ.

ಶ್... ಗುಟ್ಟಿನ ಗುಟ್ಟನ್ನು ಹೇಳುತ್ತೇನೆ, ಯಾರಿಗೂ ಹೇಳ್ಬೇಡಿ

ಎಲ್ಲಾ ಸತ್ಯಗಳನ್ನೂ ಪ್ರಪಂಚಕ್ಕೆ ಕೂಗಿ ಹೇಳಬೇಕೆಂದಿಲ್ಲ. ಉತ್ತಮ ಜೀವನ ನಿರ್ವಹಣೆಗೆ ಗುಟ್ಟುಗಳು ಬೇಕು. ಅಷ್ಟೇ ಅಲ್ಲ- ಅದನ್ನು ಸರಿಯಾಗಿಯೇ ಬಳಸಿಕೊಳ್ಳಬೇಕು. ಯಾವ ಗುಟ್ಟು ವಿಶ್ವಾಸವನ್ನು ಬೆಳೆಸುತ್ತದೆಯೋ, ಸುರಕ್ಷತೆಯನ್ನು ಹೆಚ್ಚಿಸುತ್ತದೆಯೋ, ಘನತೆಯನ್ನು ಕಾಪಾಡಿಕೊಳ್ಳುತ್ತದೆಯೋ, ಪ್ರಾಮಾಣಿಕವೋ, ಇನ್ನೊಬ್ಬರಿಗೆ ಹಾನಿಯುಂಟುಮಾಡುವುದಿಲ್ಲವೋ ಅಂಥ ಗುಟ್ಟುಗಳು ನಮಗೆ ಹಾನಿಮಾಡುವುದಿಲ್ಲ.



ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಆ ದಿನ ನನ್ನ ಮಗಳು ಮೈನಾ ಶಾಲೆಯಲ್ಲಿ ಏನೋ ಒಂದು ತುಂಟತನದ ಕೆಲಸ ಮಾಡಿ ಮನೆಗೆ ಬಂದಿದ್ದಳು. ಅವಳ ಯಾವುದೇ ಮಾತು ''ಅಮ್ಮನಿಗೆ ಹೇಳಬೇಡ'' ಎಂದು ಶುರುವಾದರೆ ಅದೇನೋ ಖದೀಮಗಿರಿ ಪೂರೈಸಿ ಬಂದಾಗಿದೆ ಎಂದೇ ಅರ್ಥ. ಹಳ್ಳಿಯಲ್ಲಿ ಬೆಳೆದು, ಪೇಟೆಗೋ, ಇನ್ನೆಲ್ಲಿಗೋ ಪರಭಾರೆಯಾದ ನಮ್ಮಂಥ ಅಪ್ಪಂದಿರಿಗೆ ನಮ್ಮ ಮಕ್ಕಳು ಬೇಕಾದಷ್ಟು ತುಂಟತನವನ್ನು ಮಾಡುವುದಿಲ್ಲವಲ್ಲ ಎಂಬುದೇ ಕೊರಗು. ಮಕ್ಕಳ ಯಾವುದೇ ಕಿತಾಪತಿ ತಿಳಿದಾಗ ಸಂಭ್ರಮಿಸಬೇಕೋ, ಪೂರ್ತಿ ಕೇಳಿಸಿಕೊಳ್ಳುವುದಕ್ಕಿಂತ ಮೊದಲು ಬುದ್ಧಿವಾದಕ್ಕೆ ಇಳಿಯಬೇಕೋ ಅಥವಾ 'ಅವರ ಮುಂದೆ ನಿಮ್ಮದೇನು ಕಿಸುಬೋಕ್ಕೆ' ಎಂದು ನಮ್ಮ ಗತಕಾಲದ ಭುಜಬಲ ಪರಾಕ್ರಮ ಕೊಚ್ಚಿಕೊಳ್ಳಬೇಕೋ ಎಂಬಿತ್ಯಾದಿ ಬಹುವಿಕಲ್ಪ ನಮ್ಮ ತಲೆಮಾರಿನ ಅಪ್ಪ-ಅಮ್ಮಂದಿರದು. ಆದರೂ ''ಒಂದು ವಿಷಯ ಹೇಳ್ತೇನೆ, ಅಮ್ಮನಿಗೆ ಹೇಳಬೇಡ..'' ಎಂದ ಆ ಕ್ಷಣ ಅಪ್ಪನಾದವನಿಗೆ ಒಂದು ಸೊಕ್ಕು ಬರುತ್ತದೆ. 'ಬೇರೆಯವರಿಗೆ ಹೇಳಬೇಡ' ಎಂದು ಶುರುವಾಗುವ ಮಾತೇ ಹಾಗಲ್ಲವೇ. 'ಗುಟ್ಟು' ತಕ್ಷಣಕ್ಕೆ, ಕುತೂಹಲ, ಭರವಸೆ ಮತ್ತು ಆತ್ಮೀಯತೆಯ ಭಾವವನ್ನು ಎಲ್ಲರಲ್ಲೂ ಹುಟ್ಟಿಸುತ್ತದೆ. ಗುಟ್ಟನ್ನು ಯಾರೇ, ಅದರಲ್ಲೂ ಮಕ್ಕಳು ಹೇಳಲು ಮುಂದಾದಾಗ ಸುಮ್ಮನೆ ಕೇಳಿಸಿಕೊಳ್ಳಬೇಕು. ಬುದ್ಧಿವಾದಕ್ಕಂತೂ ಅದು ಸಮಯವೇ ಅಲ್ಲ.

ನಮಗೆಲ್ಲರಿಗೂ ಬಾಲ್ಯದ ಮೊದಲ ಹಂತದಲ್ಲಿ ಈ 'ಗುಟ್ಟು' ಎನ್ನುವ, ಮನುಷ್ಯ ಜಗತ್ತಿನ ಅತ್ಯಂತ ವಿಚಿತ್ರ ಸಾಮಾಜಿಕ ಸ್ವಭಾವ ಸುಲಭವಾಗಿ ಅರ್ಥವಾಗುವುದಿಲ್ಲ. ಕೆಲ ದಿನಗಳ ಹಿಂದಿನ ಮಾತು. ಸ್ನೇಹಿತನೊಬ್ಬನ ಮನೆಯಲ್ಲಿ ಪೂಜೆಯಿತ್ತು- ಹೋಗಿದ್ದೆ. ಪೂಜೆ ಮುಗಿಯಿತು, ಊಟ ಶುರುಮಾಡಬೇಕಿತ್ತು; ಆದರೆ ಇನ್ನೊಂದು ಆಹ್ವಾನಿತ ಕುಟುಂಬ ಬರುವುದಿತ್ತೆಂದು ಎಲ್ಲರೂ ಕಾಯುತ್ತಿದ್ದೆವು. ಸ್ವಲ್ಪವೇ ಹೊತ್ತಿನಲ್ಲಿ ಯುವ ತಂದೆ, ತಾಯಿ ಮತ್ತು ಸುಮಾರು ಮೂರು ವರ್ಷದ ಮಗು ಒಳಬಂದರು. ಎಲ್ಲರೂ ಅವರತ್ತ ನೋಡುತ್ತಿದ್ದಂತೆ, ಸೌಜನ್ಯಕ್ಕೆ ''ಬರುವಾಗ ತಡವಾಯಿತು, ಕ್ಷಮಿಸಿ'' ಎಂದು ಗಂಡ-ಹೆಂಡತಿ ಇಬ್ಬರೂ ಎಂಥದೋ ಒಂದು ಕಾರಣ ಕೊಟ್ಟು ಸಾರ್ವಜನಿಕ ಕ್ಷಮೆಯಾಚಿಸಿದರು. ಅಲ್ಲಿ ನೆರೆದಿದ್ದ ಉಳಿದವರಿಗೆ ಕಾರಣದ ಬಗ್ಗೆ ಅಷ್ಟೇನೂ ಕುತೂಹಲವಿರಲಿಲ್ಲ. ಅವರೆಲ್ಲ ಆಗಷ್ಟೇ 'ನಮ್ಮ ಮತ್ತು ಊಟದ ನಡುವಿನ ಗಂಡಾಂತರ ಕಳೆಯಿತು' ಎಂದು ನಿರಾಳವಾಗಿದ್ದರು. ಆ ಹೊತ್ತಿನಲ್ಲಿ ಅವರ ಕೈಯಲ್ಲಿದ್ದ ಮಗು ''ಇವತ್ತು ಅಮ್ಮ ಎದ್ದುಕೊಂಡದ್ದೇ ಲೇಟ್. ಅಪ್ಪ ಸ್ನಾನ ಮಾಡಿಲ್ಲ'' ಎಂದುಬಿಟ್ಟಿತು!! ಹೊಟ್ಟೆನೋವು ಮೂರು ದಿನ ಇತ್ತು, ಅಷ್ಟು ಅಲ್ಲಿ ಸೇರಿದ್ದ ಎಲ್ಲರೂ ನಗೆಯಾಡಿದ್ದರು. ಬಹುಶಃ ಬರುವಾಗ ಕಾರಿನಲ್ಲಿ ಇದನ್ನೇ ಅಪ್ಪ ಅಮ್ಮ ಮಾತನಾಡಿಕೊಂಡು ಬಂದದ್ದು ಮಗು ಕೇಳಿಸಿಕೊಂಡಿತ್ತು ಅನಿಸುತ್ತದೆ. ಆ ಮಗುವಿಗೆ ಆ ದಿನ ಮನೆಗೆ ಹೋದ ಕ್ಷಣವೇ 'ಗುಟ್ಟು' ಎಂದರೆ ಏನು, ಹೇಗೆ ಎಂಬ ಪಾಠ- ಗುಟ್ಟಿನ ಸಂಸ್ಕಾರ ಕಾರ್ಯಕ್ರಮ ನೆರವೇರಿರುತ್ತದೆ ಬಿಡಿ. ಎಲ್ಲರಿಗೂ ಗುಟ್ಟು- 'ಯಾವುದು ಯಾರಿಗೆ ಹೇಳಬೇಕು, ಹೇಳಬಾರದು' ಎನ್ನುವ ಪರಿಕಲ್ಪನೆಯ ಪರಿಧಿಯನ್ನು ಪರಿಚಯಿಸುವುದು ಅವರವರ ಅಪ್ಪ-ಅಮ್ಮಂದಿರು, ಕುಟುಂಬದವರು. ಅಲ್ಲಿಂದ ಮುಂದೆ ಅಸಂಖ್ಯ ಗುಟ್ಟುಗಳ ನಡುವೆ ವ್ಯಕ್ತಿ ಬದುಕುತ್ತಾ ಹೋಗುತ್ತಾನೆ. ಕೆಲವು ಚಿಕ್ಕಪುಟ್ಟವು, ಕೆಲವು ಕೆಲವೊಮ್ಮೆ ದೇಶದಷ್ಟು ಗಾತ್ರದವು. ಕೆಲವು ಚಿಲ್ಲರೆ, ಇನ್ನು ಕೆಲವು ಎದೆಯ ಮೇಲೆ ಕಲ್ಲಿಟ್ಟುಕೊಂಡಂತೆ ಮಣ ಭಾರದವು!

ನಮ್ಮೆಲ್ಲರ, ಪ್ರತಿಯೊಬ್ಬರ ಕುಟುಂಬದಲ್ಲೂ ಅದೆಷ್ಟು ಗುಟ್ಟುಗಳು. ಕುಟುಂಬದ ಗುಟ್ಟು ಬೇರೆ, ಕುಟುಂಬದ ಒಳಗಡೆ ಸಂಬಂಧಗಳಲ್ಲೂ ಗುಟ್ಟುಗಳು. ಸ್ವಲ್ಪ ಗ್ರಹಿಸಿದರೆ ಎಲ್ಲ ಸಂಬಂಧಗಳನ್ನು ಹೆಣೆದು ನಿಲ್ಲಿಸಿದ, ಕೆಲವೊಮ್ಮೆ ಕಟ್ಟಿ ಹಾಕುವ ದಾರವೇ ಗುಟ್ಟುಗಳು ಎನ್ನುವುದು ತಿಳಿಯುತ್ತದೆ. ನಿಮಗೆ ಅವರ ಯಾವ ಯಾವ ಗುಟ್ಟು ಗೊತ್ತು ಎನ್ನುವುದೇ ಸಂಬಂಧದ ಪ್ರಮಾಣ. ಕುಟುಂಬದಲ್ಲಿ ಅದೆಷ್ಟೋ ಗುಟ್ಟುಗಳು ಅನಿವಾರ್ಯ ಮತ್ತು ಕೆಲವು ತಾತ್ಕಾಲಿಕ. ಉದಾಹರಣೆಗೆ ಈಗೀಗ ಎಲ್ಲಾ ಕುಟುಂಬದಲ್ಲೂ ಹುಟ್ಟುಹಬ್ಬ ಇತ್ಯಾದಿ ಸಂಭ್ರಮಗಳಿಗೆ ಗುಟ್ಟಾಗಿ ತಿಳಿಯದಂತೆ ತಯಾರಿ ಮಾಡಿ, 'ಸರ್‌ಪ್ರೈಸ್' ಕೊಡುವ ಹೊಸ ತಲೆಮಾರಿನ ಆಚರಣೆಗಳ ರೀತಿ. ಇಂಥ ಸಮಯದಲ್ಲಿ ಮನೆಯೊಳಗೇ ಗುಟ್ಟನ್ನು ಕಾಪಾಡಿಕೊಳ್ಳುವುದು ಕೆಲವು ಗಂಡಸರ ಪಾಲಿಗಂತೂ ಸಿಂಹಸ್ವಪ್ನವೇ ಹೌದು. ಗುಟ್ಟು ಎಲ್ಲರಲ್ಲಿಯೂ ಸುಲಭದಲ್ಲಿ ಉಳಿಯುವುದಿಲ್ಲ. ಆದರೂ ಹೆಂಗಸರಲ್ಲಿ ಗುಟ್ಟು ಉಳಿಯುವುದಿಲ್ಲ ಎಂಬ ಲಿಂಗಭೇದ ನಂಬಿಕೆಯಂತೂ ಚಾಲ್ತಿಯಲ್ಲಿದೆ.

ಎಲ್ಲಾ ಗುಟ್ಟುಗಳು ಇಷ್ಟು ಲಘುವಲ್ಲ! ಕಪಾಟಿನೊಳಗೆ ಮಡಸಿಟ್ಟ ಆರೋಗ್ಯದ/ರೋಗದ ರಿಪೋರ್ಟ್, ಆರ್ಥಿಕ ಸ್ಥಿತಿಯನ್ನು ಹೇಳುವ ಪಾಸ್‌ಬುಕ್, ಸ್ಯಾಲರಿ, ಸಾಲ, ಹಳಸಿದ ಸಂಬಂಧ ಇಂಥ ನೂರೆಂಟು ವೈಯಕ್ತಿಕ ಹಂತದ ಗುಟ್ಟುಗಳು. ಪ್ರತಿಯೊಬ್ಬ ವ್ಯಕ್ತಿ ಅವನದೇ ಆದ ಗುಟ್ಟಿನ ತ್ರಿಜೋರಿಯನ್ನು ಹೊತ್ತುಕೊಂಡು ಓಡಾಡುತ್ತಿರುತ್ತಾನೆ. ಕಾರಣ? ಬದುಕಬೇಕೆಂದರೆ ಮನೆಯಲ್ಲಿ, ಉದ್ಯೋಗ-ವ್ಯಾಪಾರದಲ್ಲಿ, ಆಫೀಸಿನಲ್ಲಿ, ಸ್ನೇಹವರ್ಗದಲ್ಲಿ, ಶಾಲೆಯಲ್ಲಿ- ಒಟ್ಟಾರೆ ಸಮಾಜದಲ್ಲಿ ಬದುಕಬೇಕೆಂದರೆ ಯಾವ ವಿಷಯವನ್ನು ಯಾರಲ್ಲಿ ಹೇಳಬೇಕು, ಮುಚ್ಚಿಡಬೇಕು ಎನ್ನುವ ಕೌಶಲ ಅತ್ಯವಶ್ಯ. ಅದು ಸರಿಯಾಗಿ ತಿಳಿದವನು ಮಾತ್ರ ಇಲ್ಲಿ ಸುಲಭದಲ್ಲಿ ಬದುಕಿನ ಗಾಡಿ ಓಡಿಸಬಲ್ಲ. ಗುಟ್ಟೇ ಬೇರೆ, ಅಪ್ರಾಮಾಣಿಕತೆಯೇ ಬೇರೆ. ಮಾನವಶಾಸ್ತ್ರಜ್ಞರನ್ನು ಕೇಳಿದರೆ ಅಲ್ಲಿಂದಿಲ್ಲಿಗೂ ನಾಗರಿಕತೆ ಈ ರೀತಿಯಲ್ಲಿ ಬೆಳೆದದ್ದಕ್ಕೆ ಕಾರಣವೇ ನಮ್ಮಲ್ಲಿರುವ ಗುಟ್ಟುಮಾಡುವ ಕೌಶಲ ಅಂತಾರೆ. ಸರಕಾರಗಳು, ಇಂಟೆಲಿಜೆನ್ ಏಜನ್ಸಿ, ಬೇಹುಗಾರಿಕಾ ಸಂಸ್ಥೆ, ಕಾರ್ಪೊರೇಷನ್, ವ್ಯಾಪಾರ, ಕುಟುಂಬ- ಹೀಗೆ ರಾಷ್ಟ್ರೀಯ ಭದ್ರತೆಯಿಂದ ಕುಟುಂಬದ ಆತ್ಮೀಯತೆಯವರೆಗೆ ಎಲ್ಲವೂ ನಿಯಂತ್ರಿತ ಮಾಹಿತಿಯ ಆಧಾರದ ಮೇಲೆಯೇ ನಿಂತಿವೆ.

ಸಾಮಾನ್ಯವಾಗಿ ಗುಟ್ಟುಗಳೆಂದರೆ ಏನೋ ಒಂದು ಮಾಹಿತಿಯ ರಕ್ಷಣೆ ಅಲ್ಲವೇ? ಆದರೆ ಕೆಲವೊಂದು ಗುಟ್ಟುಗಳು ವ್ಯಕ್ತಿಯನ್ನು ಕಾಪಾಡುವುದಿಲ್ಲ, ರಕ್ಷಿಸುವುದಿಲ್ಲ, ಬದಲಿಗೆ ಅವನ ಬದುಕಿಗೇ ತುಕ್ಕುಹಿಡಿಸುತ್ತವೆ, ಅವನನ್ನೇ ತಿಂದುಹಾಕುತ್ತಿರುತ್ತವೆ. ಯಾರಿಗೂ ಹೇಳದೇ ಎಲ್ಲರಿಂದ ಬಚ್ಚಿಟ್ಟ ದುಶ್ಚಟ, ಅಕ್ರಮ ಸಂಬಂಧ, ಯಾವತ್ತೋ ಆಗಿಹೋದ ಅವಮಾನ, ಪ್ರತೀಕಾರದ ಭಾವ ಇತ್ಯಾದಿ. ಇಂಥ ಗುಟ್ಟುಗಳ ಮೇಂಟೆನೆನ್ಸ್- ನಿರ್ವಹಣೆ ಸುಲಭವಲ್ಲ. ಹೇಳುವ ಸುಳ್ಳು, ಕಥೆ, ಸಮಯ ಎಲ್ಲವೂ ಹೊಂದಿಕೆಯಾಗಬೇಕು. ಅದೆಲ್ಲದಕ್ಕಿಂತ ಹೆಚ್ಚಾಗಿ ಯಾವುದೇ ಗುಟ್ಟನ್ನು ಕಾಪಾಡಿಕೊಳ್ಳಲು ಬೇಕೆಂದು ಸುಳ್ಳು ಹೇಳುವ, ಸಮಾಜಾಯಿಷಿಯ 'ರಿಹರ್ಸಲ್' ಮಾಡಿಕೊಳ್ಳುವ ಪ್ರಕ್ರಿಯೆ.

ನಮ್ಮ ಇತಿಹಾಸವಂತೂ ಗುಟ್ಟುಗಳಿಂದಲೇ ತುಂಬಿಹೋಗಿವೆ. ರಾಮಾಯಣ, ಮಹಾಭಾರತದಿಂದ ಹಿಡಿದು 21ನೇ ಶತಮಾನದ ಇತಿಹಾಸದವರೆಗೆ ಎಲ್ಲ ಇತಿಹಾಸದ ಮೂಲಧಾತು ಗುಟ್ಟು, ಗೌಪ್ಯತೆ. ಯಾವ ದೇಶ ತನ್ನ ಗುಟ್ಟನ್ನು ಗುಟ್ಟಾಗಿಯೇ ಇಡುವಲ್ಲಿ ಸಮರ್ಥವೋ ಆ ದೇಶ ಮಾತ್ರ ಇಂದಿನ ಜಗತ್ತಿನಲ್ಲಿ ನೆಲೆನಿಲ್ಲಲು ಸಾಧ್ಯ. ಆಧುನಿಕ ಇತಿಹಾಸದಲ್ಲಿ ಗುಟ್ಟು ಎಂದಾಕ್ಷಣ ನನಗೆ ನೆನಪಾಗುವುದು ಅಮೆರಿಕದ 'ಮ್ಯಾನ್ಹಟನ್ ಪ್ರಾಜೆಕ್ಟ್'. ಎರಡನೇ ವಿಶ್ವಯುದ್ಧದ ಸಮಯ. ಸುಮಾರು 1,30,000 ಮಂದಿ ಅಮೆರಿಕದ ಆ ಗೌಪ್ಯ ಯೋಜನೆಯ ಭಾಗವಾಗಿದ್ದರು. ಆದರೆ ಅವರ್ಯಾರಿಗೂ ತಾವು ಏನು ಮಾಡುತ್ತಿದ್ದೇವೆ ಎನ್ನುವ ಪೂರ್ಣ ಮಾಹಿತಿಯಿರಲಿಲ್ಲ. ಲಾಸ್ ಅಲಮೋಸ್, ಓಕ್ ರಿಡ್ಜ್ ಎಂಬ ಎರಡು ನಗರದ ಬಹುತೇಕರು ಈ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಯಾರಿಗೂ ತಾವು ಮೊದಲ ಅಣ್ವಸ್ತ್ರ ತಯಾರಿಕೆಯಲ್ಲಿ ತೊಡಗಿದ್ದೇವೆ ಎಂದು ಗೊತ್ತೇ ಇರಲಿಲ್ಲ. ಅದೆಷ್ಟು ಗುಟ್ಟಿನಲ್ಲಿ ಇದೆಲ್ಲ ನಡೆದಿರಬೇಕು ಊಹಿಸಿಕೊಳ್ಳಿ. ಆಗ ಅಮೆರಿಕದ ಅಧ್ಯಕ್ಷರಾಗಿದ್ದವರು ಫ್ರಾಂಕ್‌ಲಿನ್ ರೂಸವೆಲ್ಟ್. ಅವರು ಎರಡನೇ ವಿಶ್ವಯುದ್ಧ ನಡೆಯುತ್ತಿರುವಾಗಲೇ 'ಸ್ಟ್ರೋಕ್' ಹೊಡೆದು ಸತ್ತುಹೋದರು. ಆಗ ಅಮೆರಿಕದ ಉಪಾಧ್ಯಕ್ಷರಾಗಿದ್ದ ಹೆನ್ರಿ ಟ್ರೂಮನ್ ಅಧ್ಯಕ್ಷರಾಗಿ ಅಧಿಕಾರ ಹಿಡಿದರು. ಅಲ್ಲಿಯವರೆಗೆ ಹೆನ್ರಿ ಟ್ರೂಮನ್- ದೇಶದ ಉಪಾಧ್ಯಕ್ಷರಾಗಿದ್ದವರಿಗೂ- ಈ ಅಣ್ವಸ್ತ್ರ ತಯಾರಾಗುತ್ತಿದೆ, ಒಂದೂ ಕಾಲು ಲಕ್ಷ ಮಂದಿ ಇದರ ಕೆಲಸದಲ್ಲಿ ವರ್ಷದಿಂದ ತೊಡಗಿಕೊಂಡಿದ್ದಾರೆ ಎಂಬ ಮಾಹಿತಿ ತಿಳಿದಿರಲಿಲ್ಲ. ನಂತರ ಟ್ರೂಮನ್ ಅಧ್ಯಕ್ಷರಾಗಿ ಎರಡೇ ವಾರಕ್ಕೆ ಅಣ್ವಸ್ತ್ರ ಚಲಾಯಿಸುವ ನಿರ್ಧಾರ ತೆಗೆದುಕೊಳ್ಳುತ್ತಾನೆ.

ಸದ್ಯದ ಜಗತ್ತಿನ ಅತ್ಯಂತ ಗುಟ್ಟಿನ ವಿಷಯ ಯಾವುದು ಗೊತ್ತೇ? ಮತ್ಯಾವುದು, ಅದೇ ಈ ಅಮೆರಿಕ ಅಧ್ಯಕ್ಷರ ಅಣ್ವಸ್ತ್ರ ಚಲಾಯಿಸಲು ಕೋಡ್ ಅಂತೆ. ಅಣ್ವಸ್ತ್ರದ ಬಹುತೇಕ ಮಾಹಿತಿಗಳು, ಬೇಹುಗಾರಿಕಾ ರೀತಿ, ಸಾಧ್ಯತೆ, ಕಾರ್ಯಾಚರಣೆಗಳು, ದೇಶದ ಸೈಬರ್ ಯುದ್ಧ ಸಾಮರ್ಥ್ಯ, ಯುದ್ಧ ನೀತಿ ಇವೆಲ್ಲ ಆಯಾದೇಶದ ಟಾಪ್ ಸೀಕ್ರೆಟ್. ಅದು ಬಿಟ್ಟು ಕೆಲವು ಕಮರ್ಷಿಯಲ್, ವಾಣಿಜ್ಯ ಗುಟ್ಟುಗಳು ಕೂಡ ಹೆಚ್ಚುಕಡಿಮೆ ಅಷ್ಟೇ ಗೌಪ್ಯದವು. ಕೋಕಾ-ಕೋಲಾ ತನ್ನ ಸಕ್ಕರೆ ಪಾನಕದ ಪಾಕಮಾಹಿತಿಯನ್ನು (recipe) ಅದರ ಮುಖ್ಯಕಚೇರಿಯ ಬಹುಭದ್ರತೆಯ ತ್ರಿಜೋರಿಯಲ್ಲಿಟ್ಟಿದೆಯಂತೆ. ಇಬ್ಬರಿಗೆ ಮಾತ್ರ ಅದರ ಪೂರ್ಣ ಮಾಹಿತಿ ಇದೆಯಂತೆ. ಇಂಥ ಕೆಲವು 'ದೊಡ್ಡ ಗುಟ್ಟಂತೆ' ಎಂದೇ ಜನಪ್ರಿಯವಾಗುವ ಗುಟ್ಟುಗಳಿವೆ. ಅವು ಸತ್ಯವೋ, ಗಿಮಿಕ್ಕೋ ಯಾರಿಗೂ ಗೊತ್ತಿರುವುದಿಲ್ಲ. ಅದೇ ಅಂಥ ಗುಟ್ಟುಗಳ ಗುಟ್ಟು.

ನಾಟಿವೈದ್ಯರಿಂದ ವ್ಯಾಪಾರಿಗಳು, ಕಂಪನಿಯ ಸಿಇಒ ಆದಿಯಾಗಿ ಎಲ್ಲರೂ ಅವರವರ ಟ್ರೇಡ್ ಸೀಕ್ರೆಟ್ ಎಂಬ ಗುಟ್ಟನ್ನು ನಿರ್ವಹಿಸುತ್ತಾರೆ. ಇದು ಕೂಡ ಇಂದು ನಿನ್ನೆಯದಲ್ಲ. ಶತಶತಮಾನಗಳ ಹಿಂದೆ ಚೀನಾದ ರಾಜಮನೆತನವೊಂದು ರೇಷ್ಮೆ ಉತ್ಪಾದನೆಯನ್ನು ಗೌಪ್ಯವಾಗಿ ಸುಮಾರು ಆರೇಳು ಶತಮಾನ ಕಾಪಾಡಿಕೊಂಡು ಬಂದಿತ್ತಂತೆ. ರೇಷ್ಮೆ ಜೀವಂತ ಹುಳು ಮತ್ತು ಹಿಪ್ಪುನೇರಳೆಯ ಬೀಜ ರಾಜ್ಯದಿಂದ ಹೊರಹೋಗದಂತೆ ಎಲ್ಲಿಲ್ಲದ ಭದ್ರತೆ, ಇಡೀ ತಯಾರಿಕೆಯ ಮಾಹಿತಿಯ ಗೌಪ್ಯತೆ. ಏಕಸ್ವಾಮ್ಯತ್ವ (Monopoly). ಆಮೇಲೆ ಅದೇ ಕುಟುಂಬದ ರಾಜಕುಮಾರಿಯೊಬ್ಬಳು ತನ್ನ ತವರಿಗೆ ಬಂದು ಮರಳುವಾಗ ತನ್ನ ಜಡೆಯಲ್ಲಿ ರೇಷ್ಮೆ ಗೂಡು ಮತ್ತು ಹಿಪ್ಪುನೇರಳೆ ಬೀಜ ಕದ್ದೊಯ್ದಳು ಎಂದು. ಈ ರೀತಿ ಗುಟ್ಟನ್ನು ಒಯ್ದು, ಇನ್ನೆಲ್ಲಿಗೋ ಕೊಟ್ಟು ಇತಿಹಾಸವೇ ಬದಲಾಗಿಹೋದ ಉದಾಹರಣೆಗಳು ಸಾಕಷ್ಟು.

ನೀವು 'ಎಡ್ವರ್ಡ್ ಸ್ನೋಡನ್' ಹೆಸರು ಕೇಳಿರುತ್ತೀರಿ. ಅಮೆರಿಕದ ಗುಪ್ತಚರ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದವನಿಗೆ ಅಮೆರಿಕ ತನ್ನದೇ ನಾಗರಿಕರ ಮೇಲೆ ಯಾವ ರೀತಿಯಲ್ಲಿ ಬೇಹುಗಾರಿಕೆ ನಡೆಸುತ್ತಿದೆ ಎನ್ನುವ ಮಾಹಿತಿ ತಿಳಿಯುತ್ತದೆ. ಅದು ಸರಕಾರದ ಗುಟ್ಟು. ವರ್ಲ್ಡ್ ಟ್ರೇಡ್ ಸೆಂಟರ್ ದಾಳಿಯ ನಂತರ ರೂಪಗೊಂಡ ವ್ಯವಸ್ಥೆ. ಯಾವುದೇ ಸರಕಾರ ಲೆಕ್ಕಾಚಾರದಂತೆ ತನ್ನದೇ ಜನರ ಮೇಲೆ ಬೇಹುಗಾರಿಕೆ ನಡೆಸುವಂತಿಲ್ಲ. ಆದರೆ ಅಮೆರಿಕ ಸರಕಾರ ತನ್ನ ನಾಗರಿಕರ ಮೊಬೈಲ್ ಸಂಖ್ಯೆ ಇತ್ಯಾದಿ ಸಂಪೂರ್ಣ ಮಾಹಿತಿಯನ್ನು ಕಲೆಹಾಕುತ್ತಿತ್ತು. ಅದೆಲ್ಲ ವಿಷಯವನ್ನು ಎಡ್ವರ್ಡ್ ಸ್ನೋಡನ್ ಥಂಬ್ ಡ್ರೈವ್‌ಗೆ ಇಳಿಸಿಕೊಂಡು ರಷ್ಯಾಗೆ ಪಲಾಯನಮಾಡಿದ. ಅಷ್ಟೇ ಅಲ್ಲ ಸುಮಾರು 15-20 ಲಕ್ಷ ಇಂಥ ಮಾಹಿತಿಯ ಫೈಲ್‌ಗಳನ್ನು ಬಹಿರಂಗಪಡಿಸಿಬಿಟ್ಟ. ಇಂಥ ಗುಟ್ಟು ರಟ್ಟಾಗಿಸುವ ಘಟನೆಗಳು ದೇಶವನ್ನೇ ಪ್ರಶ್ನಿಸುತ್ತವೆ, ಸರಕಾರಗಳನ್ನೇ ಅಲುಗಾಡಿಸಿಬಿಡುತ್ತವೆ. ಈಗ ಅಮೆರಿಕಾದಲ್ಲಿ ಗುಟ್ಟು ರಟ್ಟಾದ 'ಎಪ್‌ಸ್ಟೀನ್ ಹಗರಣ' ಅದಕ್ಕೆ ಇನ್ನೊಂದು. ಬಿಲ್ ಕ್ಲಿಂಟನ್, ಬಿಲ್ ಗೇಟ್ಸ್ ಮೊದಲಾದವರ ಕಚ್ಚೆಹರಕುತನವೂ ಟಾಪ್ ಸೀಕ್ರೆಟ್- ಅತಿ ಗೌಪ್ಯವೇ ಆಗಿತ್ತು.

ಗುಟ್ಟನ್ನು ಕಾಪಾಡಿಕೊಳ್ಳುವುದು ಅತ್ಯಂತ ದುಬಾರಿ- ಆರ್ಥಿಕವಾಗಿ ಮತ್ತು ಮಾನಸಿಕವಾಗಿ. ಯಾವುದೇ ಗುಟ್ಟು, ನಮ್ಮಲ್ಲಿಯೇ ಉಳಿಸಿಕೊಳ್ಳುವ ವಿಷಯ ಸಹಜವಾಗಿ ಉದ್ವೇಗಕ್ಕೆ ಕಾರಣವಾಗುತ್ತವೆ. ಇದು ಎಲ್ಲರ ಅನುಭವ. ಒತ್ತಡವೇಕೆ? ಗುಟ್ಟು ಎಂದಾಕ್ಷಣ ಆ ಮಾಹಿತಿ ಎಂಥದ್ದೇ ಇರಲಿ, ಅದಕ್ಕೆ ಹೆಚ್ಚಿನ ಮೌಲ್ಯ, ಗೌರವ. ಮನಃಶಾಸ್ತ್ರಜ್ಞರ ಪ್ರಕಾರ ಗುಟ್ಟು ಇರಬೇಕು- ಅದರದ್ದೇನೂ ಸಮಸ್ಯೆ ಇಲ್ಲ, ಉಪದ್ರ ಗುಟ್ಟಿಗೆ ಸಂಬಂಧಿಸಿದ ನಮ್ಮ ಮಾನಸಿಕ ರಿಹರ್ಸಲ್‌ನದು. 'ಗುಟ್ಟು ತಿಳಿದುಬಿಟ್ಟರೆ ಹೇಗೆ?' ಇದು ಕ್ರಮೇಣ ನಿರಂತರ ಉದ್ವೇಗಕ್ಕೆ ಕಾರಣವಾಗುತ್ತದೆಯಂತೆ. ಗುಟ್ಟು ಕೇಳುವಾಗ ಕುತೂಹಲವೆನಿಸಿದರೂ ಕೇಳಿದ ಮೇಲೆ ರಗಳೆಯೇ ಹೌದು ಬಿಡಿ.

ನಮ್ಮ ಮಂತ್ರಗಳಲ್ಲಿ ಅದೆಷ್ಟು ಮಾಹಿತಿಯನ್ನು ಗುಟ್ಟಾಗಿ ಇಡಲಾಗಿದೆ ಎನ್ನುವ ಪೂರ್ಣ ಅಂದಾಜು ನಮ್ಮಲ್ಲಿ ಎಲ್ಲರಿಗೂ ಇಲ್ಲ. ಮಂತ್ರ ಎಂದಾಕ್ಷಣ ದೇವರನ್ನು ಹೊಗಳುವುದು, ಬ್ರಾಹ್ಮಣರದ್ದು ಎಂದಾಗಿದೆ. ಉಳಿದ ಜಗತ್ತು ಭೂಮಿ ಸಪಾಟಾಗಿದೆ ಎಂದು ನಂಬಿದ್ದ ಕನಿಷ್ಠ ಐದು ಸಾವಿರ ವರ್ಷದ ಹಿಂದೆಯೇ ಬ್ರಹ್ಮಾಂಡದ ಕಲ್ಪನೆ, ಸ್ಪಷ್ಟತೆ ವೇದ ಮಂತ್ರಗಳಲ್ಲಿದೆ. ನಾದ ಮತ್ತು ಶಬ್ದಶಕ್ತಿ, ಭದ್ರತೆ ಇತ್ಯಾದಿ. ಇಂದಿನ ಅತ್ಯಾಧುನಿಕ ಜಗತ್ತಿನ ಎಲ್ಲರ ಸಮಸ್ಯೆ- ಮಾನಸಿಕ ಸಮಸ್ಯೆ. ಅದಕ್ಕೆ ಬೇಕಾದ ಪರಿಹಾರ, ಧ್ಯಾನ, ಯೋಗ ಏನುಂಟು ಏನಿಲ್ಲ, ಅದೆಲ್ಲವನ್ನೂ ಹಿಂದಿನವರು ಗುಟ್ಟಾಗಿ ಇಟ್ಟದ್ದಲ್ಲ- ಪಟ್ಟಾಗಿ ಮಂತ್ರದಲ್ಲಿಟ್ಟದ್ದು. ನಮ್ಮ ಇಂದಿನ ವ್ಯವಸ್ಥೆಯ ಕರ್ಮಕ್ಕೆ ನಮ್ಮ ಜ್ಞಾನ ನಮ್ಮೆದುರೇ ಗುಟ್ಟಾಗಿ, ದೂರವಾಗಿ ಕೂತಿದೆ.

ಎಲ್ಲರೂ ಪಾರದರ್ಶಕತೆಯನ್ನು ಕೊಂಡಾಡುತ್ತಾರೆ, ಎಲ್ಲರಿಗೂ ಪಾರದರ್ಶಕತೆ ಬೇಕು. ಆದರೆ ಗುಟ್ಟುಗಳಿಲ್ಲದೆ ಜಗತ್ತು ಸಾಧ್ಯವಿಲ್ಲ. ಗುಟ್ಟು ನಂಬಿಕೆಯದ್ದೇ ಭಾಗ. ಆದರೆ ಕೆಲವೊಂದು ಗುಟ್ಟು ಬಿಟ್ಟುಕೊಟ್ಟರೆ ಮಾತ್ರ ನೆಮ್ಮದಿ. ಕ್ರಿಶ್ಚಿಯಾನಿಟಿಯಲ್ಲಿ- ಕನ್ಫೆಷನ್ ರೂಮ್, ದೇವರಿಗೆ ಹೇಳಿದ್ದು ಸಮಾಧಾನವಾಗದಿದ್ದಲ್ಲಿ ಇನ್ನೊಬ್ಬ ವ್ಯಕ್ತಿಗೆ- ಪಾದ್ರಿಗೆ ಹೇಳುವ ವ್ಯವಸ್ಥೆ ಇದೇ ಅವಶ್ಯಕತೆಯಿಂದ ಹುಟ್ಟಿದ್ದು. 'ಅಮ್ಮನಿಗೆ ಹೇಳಬೇಡ' ಎಂದು ಮೆಲ್ಲಗೆ ಶುರುವಾಗುವ ಗುಟ್ಟು ಎಲ್ಲೆಲ್ಲಿಯೋ ಹೇಗೇಗೋ ನಮ್ಮಲ್ಲಿ ರೂಪತಾಳುತ್ತವೆ, ಬದುಕನ್ನು ನಿರ್ದೇಶಿಸುತ್ತವೆ. ಎಲ್ಲಾ ಸತ್ಯಗಳನ್ನೂ ಪ್ರಪಂಚಕ್ಕೆ ಕೂಗಿ ಹೇಳಬೇಕೆಂದಿಲ್ಲ, ಉತ್ತಮ ಜೀವನ ನಿರ್ವಹಣೆಗೆ ಗುಟ್ಟುಗಳು ಬೇಕು. ಅಷ್ಟೇ ಅಲ್ಲ- ಅದನ್ನು ಸರಿಯಾಗಿಯೇ ಬಳಸಿಕೊಳ್ಳಬೇಕು. ಯಾವ ಗುಟ್ಟು ವಿಶ್ವಾಸವನ್ನು ಬೆಳೆಸುತ್ತದೆಯೋ, ಸುರಕ್ಷತೆಯನ್ನು ಹೆಚ್ಚಿಸುತ್ತದೆಯೋ, ಘನತೆಯನ್ನು ಕಾಪಾಡಿಕೊಳ್ಳುತ್ತದೆಯೋ, ಪ್ರಾಮಾಣಿಕವೋ, ಇನ್ನೊಬ್ಬರಿಗೆ ಹಾನಿಯುಂಟುಮಾಡುವುದಿಲ್ಲವೋ ಅಂಥ ಗುಟ್ಟುಗಳು ನಮಗೆ ಹಾನಿಮಾಡುವುದಿಲ್ಲ. ಯಾವ ಗುಟ್ಟು ದುರುದ್ದೇಶದ್ದೋ, ನಮ್ಮನ್ನು ನೋವಾಗಿ, ರಗಳೆಯಾಗಿ ಕಾಡುತ್ತದೆಯೋ ಅಂಥ ಅಪ್ರಾಮಾಣಿಕ ಗುಟ್ಟನ್ನು ಬಿಟ್ಟುಬಿಡದಿದ್ದಲ್ಲಿ ಅವು ಬೆನ್ನಿನ ಮೇಲಿನ ಆಲೂಗಡ್ಡೆ ಚೀಲದಂತೆ. ಭಾರವಾಗುತ್ತದೆ, ಕ್ರಮೇಣ ಕೊಳೆಯುತ್ತದೆ, ವಾಸನೆ, ತುರಿಕೆ, ಗಾಯ. ಅದನ್ನು ಬೇಗ ಕಳಗಿಳಿಸುವುದೇ ಬುದ್ಧಿವಂತಿಕೆ.

ನಮ್ಮ ಸುತ್ತಲೂ ಅದೆಷ್ಟು ಗುಟ್ಟುಗಳಿಲ್ಲವೇ? 'ಮನುಷ್ಯ ಹುಟ್ಟುವಾಗ ಏನನ್ನೂ ತರುವುದಿಲ್ಲ, ಹೋಗುವಾಗ, ಸಾಯುವಾಗ ಏನನ್ನೂ ಒಯ್ಯುವುದಿಲ್ಲ' ಎಂಬ ಮಾತಿದೆಯಲ್ಲ. ಆದರೆ ಇದೆಲ್ಲದಕ್ಕೆ ಅಪವಾದ 'ಗುಟ್ಟು'. ಏಕೆಂದರೆ ಕೆಲವರು ಸಾಯುವಾಗ ಕೆಲವು ಗುಟ್ಟುಗಳನ್ನೂ ತಮ್ಮ ಜತೆ ತೆಗೆದುಕೊಂಡುಹೋಗಿಬಿಡುತ್ತಾರೆ!

ಹರ್ಮುಜ್ ಬಿಕ್ಕಟ್ಟಿನಿಂದ ಕಲಿಯಬೇಕಿರುವ ಪಾಠ

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಪ್ರತಿ ಬ್ಯಾರೆಲ್‌ಗೆ 10 ಡಾಲರ್ ಏರಿಕೆಯಾದರೂ, ಭಾರತದ ಬೊಕ್ಕಸಕ್ಕೆ 1 ಲಕ್ಷದ 27 ಸಾವಿರ ಕೋಟಿ ರುಪಾಯಿ ವೆಚ್ಚವಾಗುತ್ತದೆ! ಇದರಿಂದ ವಿತ್ತೀಯ ಕೊರತೆಯಾಗುತ್ತದೆ. ಆಗ ರುಪಾಯಿ ದುರ್ಬಲವಾಗುತ್ತದೆ. ಜಿಯೊಪೊಲಿಟಿಕಲ್ ರಿಸ್ಕ್ ಇದ್ದಾಗ ನಮ್ಮ ಇಂಧನ ಭದ್ರತೆಯ ಸತ್ವಪರೀಕ್ಷೆ ನಡೆಯುತ್ತದೆ. ಆದ್ದರಿಂದ ಭಾರತವು ಇಂಧನ ಸ್ವಾವಲಂಬನೆಯನ್ನೂ ಗಳಿಸಿಕೊಳ್ಳಬೇಕು.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
keshavaprasadb@gmail.com

ಎಲ್ಲವೂ ಅಂದುಕೊಂಡಂತೆ ನಡೆದರೆ, 2047ರ ಬಳಿಕ ಒಂದು ವೇಳೆ ಕೊಲ್ಲಿ ಯುದ್ಧ ಸಂಭವಿಸಿ ಹರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿ ಹಾಕಿದರೂ ಭಾರತೀಯರು ತಲೆ ಕೆಡಿಸಿಕೊಳ್ಳಲಾರರು! ಕಾರಣ ಏನೆಂಬುದನ್ನು ತಿಳಿಯೋಣ.

ಸದ್ಯಕ್ಕಂತೂ ಅನಿವಾರ್ಯ. ಭಾರತೀಯರೆಲ್ಲರೂ ಪರ್ಷಿಯನ್ ಕೊಲ್ಲಿಯಲ್ಲಿರುವ ಹರ್ಮುಜ್ ಎಂಬ ಜಲಸಂಧಿಯಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಬಗ್ಗೆ ವ್ಯಾಪಕ ಚರ್ಚೆ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ನಿಮಗೆಲ್ಲ ಗೊತ್ತೇ ಇದೆ- ಅದುವೇ ಇರಾನ್ ಮತ್ತು ಅಮೆರಿಕ-ಇಸ್ರೇಲ್ ಪಡೆಯ ನಡುವಣ ಯುದ್ಧ.

ಯುದ್ಧ ನಡೆಯುತ್ತಿರುವುದು ಅಮೆರಿಕ- ಇಸ್ರೇಲ್ ಮತ್ತು ಇರಾನ್ ನಡುವೆಯಾದರೂ, ಹರ್ಮುಜ್ ಮಹತ್ವವೇ ಬೇರೆ. ಇದರ ಮೂಲಕ ಜಾಗತಿಕ ತೈಲ ಸರಬರಾಜಿನ 20 ಪರ್ಸೆಂಟ್ ಸಾಗುತ್ತದೆ. ವಾಸ್ತವವಾಗಿ ಹರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಲೇನ್ ಮೇಲೆ ಯಾರಿಗೂ ಹಕ್ಕಿಲ್ಲ. ಅದು ಅಂತಾರಾಷ್ಟ್ರೀಯ ಜಲಮಾರ್ಗ. ಪರ್ಷಿಯನ್ ಕೊಲ್ಲಿಗೂ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾ ಸಾಗರಕ್ಕೂ ಅದು ಸಂಪರ್ಕ ಕಲ್ಪಿಸುತ್ತದೆ. ಸೌದಿ ಅರೇಬಿಯಾ, ಇರಾಕ್, ಕತಾರ್, ಯುಎಇಯಿಂದ ಕಚ್ಚಾ ತೈಲ ಮತ್ತು ಎಲ್‌ಎನ್‌ಜಿಯನ್ನು ಏಷ್ಯಾದ ಚೀನಾ, ಭಾರತ, ಜಪಾನ್‌ಗೆ ಹಡಗುಗಳ ಮೂಲಕ ಸಾಗಣೆ ಮಾಡಲು ಈ ಅಗಲ ಕಿರಿದಾದ ಹರ್ಮುಜ್ ಜಲಸಂಧಿಯನ್ನು ದಾಟಬೇಕು. ಇದರ ಪ್ರವೇಶ ದ್ವಾರದಲ್ಲಿ 50 ಕಿಲೋಮೀಟರ್ ಅಗಲ ಇದ್ದರೆ, ಸಪೂರದ ಸಂಧಿಯಲ್ಲಿ 33 ಕಿಲೋಮೀಟರ್ ಮಾತ್ರ ಇದೆ. ಅದರಲ್ಲೂ ಹಡಗುಗಳು ಸಾಗುವ ಶಿಪ್ಪಿಂಗ್ ಲೇನ್ ಇನ್ನೂ ಸಣ್ಣದು. ಭೌಗೋಳಿಕವಾಗಿ ಹರ್ಮುಜ್ ಜಲಸಂಧಿಯ ಒಂದು ಬದಿಯಲ್ಲಿ ಇರಾನ್ ಪ್ರಾಬಲ್ಯವಿದ್ದರೆ, ಮತ್ತೊಂದು ಬದಿಯಲ್ಲಿ ಯುಎಇ ಮತ್ತು ಒಮಾನ್ ತೀರವಿದೆ. ಜಾಗತಿಕ ಕಚ್ಚಾ ತೈಲದ 20 ಪರ್ಸೆಂಟ್ ಈ ಮಾರ್ಗದಲ್ಲಿ ಹೋಗುತ್ತದೆ. ಯುರೋಪಿಗೂ 80 ಪರ್ಸೆಂಟ್ ಎಲ್‌ಎನ್‌ಜಿ ಇದೇ ದಾರಿಯಲ್ಲಿ ಸಾಗಣೆಯಾಗುತ್ತದೆ. ಒಂದು ಕಡೆ ಹರ್ಮುಜ್ ಜಲಸಂಧಿ, ಮತ್ತೊಂದು ಕಡೆ ರಷ್ಯಾದಿಂದ ಯುರೋಪಿಗೆ ಅನಿಲ ಪೂರೈಕೆ ಸ್ಥಗಿತವಾದರೆ ಯುರೋಪ್ ಗಂಭೀರ ಸಮಸ್ಯೆಗೆ ಸಿಲುಕುವುದು ಖಚಿತ.

ಈ ನಡುವೆ, ಚೀನಾಕ್ಕೆ ಮಾತ್ರ ಕಚ್ಚಾ ತೈಲವನ್ನು ಹಡಗುಗಳ ಮೂಲಕ ಸಾಗಿಸಲು ಬಿಡುವುದಾಗಿ ಇರಾನ್ ಹೇಳಿದೆಯಂತೆ. ಒಂದು ವೇಳೆ ಇದು ನಿಜವೇ ಆಗಿದ್ದರೆ, ಭಾರತ ಏನು ಪಾಪ ಮಾಡಿದೆ? ಇದು ಅನ್ಯಾಯವಲ್ಲವೇ? ಇರಲಿ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಪ್ರತಿ ಬ್ಯಾರೆಲ್‌ಗೆ 10 ಡಾಲರ್ ಏರಿಕೆಯಾದರೂ, ಭಾರತದ ಬೊಕ್ಕಸಕ್ಕೆ 13-14 ಶತಕೋಟಿ ಡಾಲರ್ ವೆಚ್ಚವಾಗುತ್ತದೆ. ರುಪಾಯಿ ಲೆಕ್ಕದಲ್ಲಿ 1 ಲಕ್ಷದ 27 ಸಾವಿರ ಕೋಟಿ ರುಪಾಯಿ! ಇದರಿಂದ ವಿತ್ತೀಯ ಕೊರತೆಯಾಗುತ್ತದೆ. ಆಗ ರುಪಾಯಿ ದುರ್ಬಲವಾಗುತ್ತದೆ. ಜಿಯೊಪೊಲಿಟಿಕಲ್ ರಿಸ್ಕ್ ಇದ್ದಾಗ ನಮ್ಮ ಇಂಧನ ಭದ್ರತೆಯ ಸತ್ವಪರೀಕ್ಷೆ ನಡೆಯುತ್ತದೆ. ಆದ್ದರಿಂದ ಭಾರತವು ಇಂಧನ ಸ್ವಾವಲಂಬನೆಯನ್ನೂ ಗಳಿಸಿಕೊಳ್ಳಬೇಕು. ಆರ್ಥಿಕ ಪ್ರಗತಿಗೆ ಇದು ಅವಶ್ಯಕ. ದೇಶವು ಕೇವಲ ಕ್ಲೀನ್ ಎನರ್ಜಿಗೆ ಆದ್ಯತೆ ನೀಡಿದರೆ ಸಾಲದು. ಜತೆಗೆ ಪ್ರತಿ ಮನೆಯಲ್ಲೂ, ಉದ್ದಿಮೆಯಲ್ಲೂ ನವೀಕರಿಸಬಹುದಾದ ಇಂಧನದ ಸ್ವಾವಲಂಬನೆ ಸಾಧಿಸುವಂತಾಗಬೇಕು. ಸೌರಫಲಕಗಳು ಮತ್ತು ಗಾಳಿಯಂತ್ರಗಳನ್ನು ಒಟ್ಟಿಗೆ ಹೊಂದಿರುವ ಪಿಎಲ್‌ಎಫ್ -ಸೋಲಾರ್-ವಿಂಡ್ ಹೈಬ್ರಿಡ್ ಮಾದರಿಗಳು ಜನಪ್ರಿಯವಾಗಬೇಕು. ಇಲೆಕ್ಟ್ರಿಕ್ ವಾಹನಗಳ ಬಳಕೆ ಹೆಚ್ಚಬೇಕು. ಅತ್ಯಾಧುನಿಕ ಗ್ರಿಡ್‌ಗಳು, ಬೃಹತ್ ಬ್ಯಾಟರಿಗಳು, ಪಂಪ್ಡ್ ಹೈಡ್ರೊ

ಸ್ಟೋರೇಜ್ ಮತ್ತು ನ್ಯೂಕ್ಲಿಯರ್ ಎನರ್ಜಿಯ ಬಳಕೆ ಅಗತ್ಯ ಎನ್ನುತ್ತಾರೆ ನೀತಿ ಆಯೋಗದ ಮಾಜಿ ಸಿಇಒ ಅಮಿತಾಭ್ ಕಾಂತ್.

ಅಮೆರಿಕದ ಎನರ್ಜಿ ಟೆಕ್ನಾಲಜಿ ವಲಯದ ಸಂಸ್ಥೆ ಬರ್ಕ್ಲಿ ಲ್ಯಾಬ್ 2023ರಲ್ಲಿ ಒಂದು ಸ್ವಾರಸ್ಯಕರ ವರದಿ ಸಿದ್ಧಪಡಿಸಿತ್ತು. 'ಭಾರತ 2047ರ ವೇಳೆಗೆ ಇಂಧನ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯ' ಎಂಬುದೇ ಅದರ ಶೀರ್ಷಿಕೆ. ಅದರ ಸಾರ ಇಲ್ಲಿದೆ:

ಭಾರತಕ್ಕೆ ಮೂರು ಸೆಕ್ಟರ್‌ಗಳಲ್ಲಿ ಹೆಚ್ಚಿನ ಇಂಧನ ಅಗತ್ಯವಿದೆ. ಅವೆಂದರೆ- ವಿದ್ಯುತ್, ಸಾರಿಗೆ ಮತ್ತು ಉದ್ದಿಮೆ. ಇಂಧನ ಸ್ವಾವಲಂಬನೆ ಗಳಿಸಿದರೆ ಆರ್ಥಿಕ-ಪರಿಸರ ಮತ್ತು ಎನರ್ಜಿ ಬೆನಿಫಿಟ್ ಆಗಲಿದೆ. 2047ರ ವೇಳೆಗೆ ಗ್ರಾಹಕರಿಗೆ 240 ಶತಕೋಟಿ ಡಾಲರ್ ಉಳಿತಾಯವಾಗಲಿದೆ. ಪೆಟ್ರೋಲಿಯಂ ಆಮದು ವೆಚ್ಚದಲ್ಲಿ 90 ಪರ್ಸೆಂಟ್ ಇಳಿಕೆಯಾಗಲಿದೆ. ವಾರ್ಷಿಕ 240 ಶತಕೋಟಿ ಡಾಲರ್ ಖರ್ಚು ಉಳಿತಾಯವಾಗಲಿದೆ. ಗಡುವಿಗೆ ಮೊದಲೇ ಭಾರತ 'ನೆಟ್ ಝೀರೊ' ಕಮಿಟ್ಮೆಂಟ್ ಸಾಧಿಸಬಹುದು. ಜಾಗತಿಕವಾಗಿಯೂ ಭಾರತೀಯ ಉದ್ದಿಮೆಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಬಹುದು.

ಭಾರತ ಈಗ ಜಗತ್ತಿನಲ್ಲೇ ಮೂರನೇ ಅತಿ ದೊಡ್ಡ ಇಂಧನ ಬಳಕೆದಾರ. ಮುಂದಿನ ದಶಕಗಳಲ್ಲಿ ಇದು ನಾಲ್ಕು ಪಟ್ಟು ಹೆಚ್ಚಲಿದೆ. ದೇಶದ ಆರ್ಥಿಕ ಪ್ರಗತಿ ಇದಕ್ಕೆ ಕಾರಣ. ಭಾರತ ಈಗ ತನ್ನ ಜನರ ಅಗತ್ಯಕ್ಕಾಗಿ ತೈಲದ 90 ಪರ್ಸೆಂಟ್, ಇಂಡಸ್ಟ್ರಿಯಲ್ ಕಲ್ಲಿದ್ದಲಿನ 80 ಪರ್ಸೆಂಟ್ ಮತ್ತು ನೈಸರ್ಗಿಕ ಅನಿಲದ 40 ಪರ್ಸೆಂಟ್ ಅನ್ನು ಆಮದು ಮಾಡಿಕೊಳ್ಳುತ್ತಿದೆ. ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ದರಗಳು ಮತ್ತು ಪೂರೈಕೆಯಲ್ಲಿ ಅಲ್ಲೋಲ-ಕಲ್ಲೋಲ ಆಗುತ್ತಿರುತ್ತದೆ. ಇದರ ಪರಿಣಾಮಗಳನ್ನು ದೇಶ ನಿರ್ವಹಿಸಬೇಕಾಗುತ್ತದೆ.

ಸ್ವಚ್ಛ ಇಂಧನ ವಿಷಯದಲ್ಲಿ ಭಾರತ ಇನ್ನೂ ಪ್ರಬಲವಾಗಬೇಕು. ವಿಶ್ವದಲ್ಲಿಯೇ ನವೀಕರಿಸಬಹುದಾದ ಇಂಧನಗಳ ದರವು ಭಾರತದಲ್ಲಿ ಅಗ್ಗವಾಗಿದೆ. ಸೌರ ವಿದ್ಯುತ್ ದರದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಗಣನೀಯ ಇಳಿಕೆಯಾಗಿದೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಲಿಥಿಯಂ ನಿಕ್ಷೇಪ ಇರುವ ದೇಶಗಳಲ್ಲಿ ಭಾರತ ಇದೆ. ಜಮ್ಮು-ಕಾಶ್ಮೀರದಲ್ಲಿ 59 ಲಕ್ಷ ಟನ್ ಲಿಥಿಯಂ ನಿಕ್ಷೇಪ 2023ರಲ್ಲಿ ಪತ್ತೆಯಾಗಿತ್ತು. ಮಂಡ್ಯ ಜಿಲ್ಲೆಯಲ್ಲೂ ಪ್ರಾಥಮಿಕ ಸಮೀಕ್ಷೆಯ ಪ್ರಕಾರ 1,600 ಟನ್ ಲಿಥಿಯಂ ನಿಕ್ಷೇಪ ಪತ್ತೆಯಾಗಿತ್ತು. ಇಲೆಕ್ಟ್ರಿಕ್ ವಾಹನಗಳ ಬ್ಯಾಟರಿಗಳಲ್ಲಿ ಇದರ ಬಳಕೆಯಾಗುತ್ತದೆ. ಕಡಿಮೆ ವೆಚ್ಚದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ಇದು ಸಹಕಾರಿಯಾಗಲಿದೆ.

ನಿಸ್ಸಂದೇಹವಾಗಿ ಭಾರತ ಈಗ ಇಂಧನ ಸ್ವಾತಂತ್ರ್ಯದ ನಿಟ್ಟಿನಲ್ಲಿ ಹೆಜ್ಜೆಗಳನ್ನು ಇಡುತ್ತಿದೆ. 2030ರೊಳಗೆ 500 ಗಿಗಾವ್ಯಾಟ್ ನಾನ್ -ಫಾಸಿಲ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದುವ ಗುರಿಯನ್ನು ಕೇಂದ್ರ ಸರಕಾರ ಘೋಷಿಸಿದೆ. ಇದರಲ್ಲಿ ಈಗಾಗಲೇ 2025ರ ಅಕ್ಟೋಬರ್ ವೇಳೆಗೆ 250 ಮೆಗಾವ್ಯಾಟ್ ಗುರಿ ಮುಟ್ಟಲಾಗಿದೆ. ಸೌರಶಕ್ತಿ ಇದರಲ್ಲಿ ನಿರ್ಣಾಯಕವಾಗಿದೆ. ಪವನ ವಿದ್ಯುತ್ ಸಾಥ್ ನೀಡುತ್ತಿದೆ. 2035ರ ಬಳಿಕ ಮಾರಾಟವಾಗುವ ಬಹುಪಾಲು ಹೊಸ ವಾಹನಗಳು ಇಲೆಕ್ಟ್ರಿಕ್ ಆಗಿರಲಿವೆ. ಹೊಸ ಇಲೆಕ್ಟ್ರಿಕ್ ವಾಹನಗಳು ಮತ್ತು ಗ್ರಿಡ್ ಸ್ಕೇಲ್ ಬ್ಯಾಟರಿ ಸ್ಟೋರೇಜ್ ಸಿಸ್ಟಮ್‌ಗಳಿಗೆ 2040ರ ವೇಳೆಗೆ 20 ಲಕ್ಷ ಟನ್ ಲಿಥಿಯಂ ಅಗತ್ಯ ಬೀಳಲಿದೆ. ಇದನ್ನು ದೇಶೀಯ ನಿಕ್ಷೇಪಗಳಿಂದಲೇ ಪಡೆಯಲಾಗುವುದು. ಲಿಥಿಯಂ ನಿಕ್ಷೇಪ ಹೇರಳವಾಗಿ ಪತ್ತೆಯಾಗಿರುವುದರಿಂದ ಭಾರತದಲ್ಲಿಯೇ ಹೊಸ ಇಲೆಕ್ಟ್ರಿಕ್ ವಾಹನಗಳ ತಯಾರಿಕೆ ಸುಲಭವಾಗಲಿದೆ. ಗ್ರಿಡ್-ಸ್ಕೇಲ್ ಬ್ಯಾಟರಿ ಸ್ಟೋರೇಜ್ ಸಿಸ್ಟಮ್‌ಗಳನ್ನೂ ತಯಾರಿಸಬಹುದು. ಮುಂಬರುವ ದಶಕಗಳಲ್ಲಿ ಇಂಧನ ಮೂಲಸೌಕರ್ಯಕ್ಕೆ ಭಾರತವು 3 ಟ್ರಿಲಿಯನ್ ಡಾಲರ್ ಹೂಡಿಕೆ ಮಾಡಬೇಕಾದ ಅಗತ್ಯ ಇದೆ. ಇದು ಒಂದು ರೀತಿಯಲ್ಲಿ ಅನುಕೂಲವೂ ಆಗಿದೆ. ಮುಂಬರುವ ದಶಕದಲ್ಲಿ ಕ್ಲೀನ್ ಎನರ್ಜಿಗೆ ಪರಿವರ್ತನೆ ಹೊಂದಲು ಇದು ಸಕಾಲವಾಗಿದೆ. ಸರಕಾರದ ಪಾಲಿಸಿಗಳು ಇದಕ್ಕೆ ತುಂಬ ಸಪೋರ್ಟ್ ಕೊಡಬೇಕು. ಕ್ಲೀನ್ ಎನರ್ಜಿ ಅನುಷ್ಠಾನವನ್ನು ಕಡ್ಡಾಯಗೊಳಿಸಬೇಕು ಹಾಗೂ ಭಾರತ ಈ ಮಹತ್ವಾಕಾಂಕ್ಷೆಯ ಪರಿವರ್ತನೆಯನ್ನು ಸಾಧಿಸುವ ವಿಶ್ವಾಸ ಇದೆ ಎಂದು ಬರ್ಕ್ಲಿ ಲ್ಯಾಬ್‌ನ ಸಂಶೋಧಕರು ಹೇಳಿದ್ದಾರೆ.

ಇದೆಲ್ಲ ಮುಂದಿನ ಎರಡು ದಶಕಗಳ ಯೋಜನೆಯಾದರೆ, ಈಗಿನ ಪರಿಸ್ಥಿತಿ ಏನು ಎಂಬ ಪ್ರಶ್ನೆ ಸ್ವಾಭಾವಿಕ. ಇರುವುದರಲ್ಲಿ ಉತ್ತಮ ನಡೆಯನ್ನು ಭಾರತ ಅನುಸರಿಸುತ್ತಿದೆ. ಭಾರತ ತನ್ನದೇ ವ್ಯೂಹಾತ್ಮಕ ಪೆಟ್ರೋಲಿಯಂ ಸಂಗ್ರಹಾಗಾರಗಳನ್ನು ಹೊಂದಿದೆ. ದೇಶ 85 ಪರ್ಸೆಂಟ್ ತೈಲವನ್ನು ಆಮದು ಮಾಡುತ್ತಿದೆ. ಡಜನುಗಟ್ಟಲೆ ಮೂಲಗಳನ್ನು ಹೊಂದಿದೆ. ದಿನಕ್ಕೆ 50 ಲಕ್ಷ ಬ್ಯಾರೆಲ್ ತೈಲ ಬೇಕಾಗುತ್ತದೆ. ಹರ್ಮುಜ್ ಬಿಕ್ಕಟ್ಟಿನ ನಂತರ ಭಾರತದ ಬಳಿ ಕೇವಲ 25 ದಿನಗಳಿಗೆ ಬೇಕಾಗುವಷ್ಟು ಮಾತ್ರ ಕಚ್ಚಾ ತೈಲ ಇದೆ ಎಂಬ ತಪ್ಪು ಕಲ್ಪನೆ ಹರಡುತ್ತಿದೆ. ಸ್ಟ್ರಾಟಜಿಕ್ ಪೆಟ್ರೋಲಿಯಂ ರಿಸರ್ವ್ಸ್, ಇತರ ದಾಸ್ತಾನು ಸೇರಿ ಒಟ್ಟು 70ಕ್ಕೂ ಹೆಚ್ಚು ದಿನಗಳಿಗೆ ಬೇಕಾಗುವಷ್ಟು ಕಚ್ಚಾ ತೈಲ ದಾಸ್ತಾನು ಇದೆ. ಆಂಧ್ರಪ್ರದೇಶದ ವಿಶಾಖಪಟ್ಟಣಂ ಹಾಗೂ ಕರ್ನಾಟಕದಲ್ಲಿ ಮಂಗಳೂರು ಮತ್ತು ಪಡೂರಿನಲ್ಲಿ ಈ ದಾಸ್ತಾನು ಕೇಂದ್ರಗಳು ಇವೆ. ಈ ಲೆಕ್ಕಾಚಾರ ಹೀಗಿದೆ: ಆಂಧ್ರಪ್ರದೇಶ ಮತ್ತು ಕರ್ನಾಟಕದ ಮೂರು ರಿಸರ್ವ್‌ಗಳಲ್ಲಿ 5.33 ಮಿಲಿಯನ್ ಮೆಟ್ರಿಕ್ ಟನ್ ಕಚ್ಚಾ ತೈಲ ಇದೆ. ಇದು 9.5 ದಿನಗಳ ಇಡೀ ದೇಶದ ಖರ್ಚಿಗೆ ಸಾಕು. ಇದನ್ನು ತೀರಾ ತುರ್ತು ಸಂದರ್ಭದಲ್ಲಿ ಮಾತ್ರ ಬಳಸಲಾಗುತ್ತದೆ. ದಿನ ನಿತ್ಯದ ಅಗತ್ಯಗಳಿಗೆ ಬಳಸುವ ಪರಿಪಾಠ ಇಲ್ಲ. ಇದಲ್ಲದೆ ವರದಿಗಳ ಪ್ರಕಾರ 25 ದಿನಗಳ ಬೇಡಿಕೆಗೆ ಅವಶ್ಯವಿರುವ ಕಚ್ಚಾ ತೈಲ ಸಂಗ್ರಹ ಇದೆ. ಜತೆಗೆ ಪೆಟ್ರೋಲ್ -ಡೀಸೆಲ್ ಆಗಿ ಸಂಸ್ಕರಣೆಯಾಗಿರುವ ತೈಲದ ಸಂಗ್ರಹ ಹೆಚ್ಚುವರಿ 25 ದಿನಗಳಿಗೆ ಸಾಕಾಗುವಷ್ಟು ಇದೆ. ಇದಲ್ಲದೆ 15-20 ದಿನಗಳಿಗೆ ಸಾಕಾಗುವ ಕಮರ್ಷಿಯಲ್ ಸ್ಟಾಕ್ಸ್, ಎಲ್‌ಪಿಜಿ, ಎಲ್‌ಎನ್‌ಜಿ ರಿಸರ್ವ್ಸ್ ಇದೆ.

ಭಾರತಕ್ಕೆ ರಷ್ಯಾ 19-33 ಪರ್ಸೆಂಟ್ ಕಚ್ಚಾ ತೈಲ ನೀಡುತ್ತಿದೆ. ಸೌದಿ ಅರೇಬಿಯಾ, ಯುಎಇ, ಇರಾಕ್, ಅಮೆರಿಕ, ಆಫ್ರಿಕದ ದೇಶಗಳು, ಲ್ಯಾಟಿನ್ ಅಮೆರಿಕದಿಂದಲೂ ತೈಲ ಪಡೆಯಬಹುದು. ಆದ್ದರಿಂದ ಹರ್ಮುಜ್‌ನಿಂದ ತೈಲದ ಮಾರ್ಗಕ್ಕೆ ಸಮಸ್ಯೆ ಆಗಿದ್ದರೂ, ಪೂರೈಕೆಯ ಮೂಲಗಳು ವೈವಿಧ್ಯಮಯವಾಗಿವೆ. ಸೌದಿ ಅರೇಬಿಯಾ ಮತ್ತು ಯುಎಇ, ಹರ್ಮುಜ್ ಜಲಸಂಧಿಯನ್ನು ಬೈಪಾಸ್ ಮಾಡಿ ಪೈಪ್‌ಲೈನ್ ಮೂಲಕ ರಫ್ತು ಮಾಡುವ ವ್ಯವಸ್ಥೆಯನ್ನು ಹೊಂದಿವೆ. ಅಮೆರಿಕ ಕೂಡ ತೈಲ ಸಾಗಣೆಗೆ ಸಹಕರಿಸುವ ನಿರೀಕ್ಷೆ ಇದೆ. ಆದರೆ ಸದ್ಯಕ್ಕಿರುವ ಸವಾಲು ಅಂತಾರಾಷ್ಟ್ರೀಯ ತೈಲ ದರಗಳ ದಿಢೀರ್ ಏರಿಕೆ. ತೈಲದ ಕೊರತೆ ಕಾಣಿಸುವ ಸಾಧ್ಯತೆ ಇಲ್ಲ. '4-5 ವಾರಗಳಲ್ಲಿ ಇರಾನ್ ಯುದ್ಧ ನಿಲ್ಲುವ ನಿರೀಕ್ಷೆ ಇದೆ' ಎಂದು ಟ್ರಂಪ್ ಹೇಳಿದ್ದಾರೆ. ಇಸ್ರೇಲ್ ಪ್ರಧಾನಿ ನೆತನ್ಯಾಹು ಕೂಡ 'ಇದು ಅಲ್ಪಾವಧಿಯ ಸಮರ' ಎಂದಿದ್ದಾರೆ. ಆಪ್ತಮಿತ್ರ ರಷ್ಯಾ ಸೇರಿದಂತೆ ಡಜನ್‌ಗಟ್ಟಲೆ ದೇಶಗಳೂ ತೈಲ ಪೂರೈಕೆಗೆ ನಿಂತಿವೆ. ಪರಿಸ್ಥಿತಿಯನ್ನು ಜಾಣ್ಮೆಯಿಂದ ಎದುರಿಸುವುದು ಮತ್ತು ದೀರ್ಘಕಾಲೀನ ತಂತ್ರವಾದ ಇಂಧನ ಸ್ವಾತಂತ್ರ್ಯವನ್ನು ಗಳಿಸುವುದೊಂದೇ ಉಳಿದಿರುವ ದಾರಿ. ಆದ್ದರಿಂದ ಅಂದುಕೊಂಡಂತೆ ಎಲ್ಲವೂ ನಡೆದರೆ 2047ರ ಬಳಿಕ ಮತ್ತೊಮ್ಮೆ ಹರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದರೂ, ಭಾರತೀಯರು ನಿಶ್ಚಿಂತೆಯಿಂದ ಇರಬಲ್ಲರು!

ಭಟ್ಟರ್ ಸ್ಕಾಚ್

- **ರಾಜು ಭರತ್, ಮೈಸೂರು**
  ಭಟ್ರೇ, ಇಂದಿನ ಕಾಲದ 'ಮಹಾಭಾರತ' ಎಲ್ಲಿ ನಡೆಯುತ್ತೆ?
- **ಆಫೀಸ್ ವಾಟ್ಸಾಪ್ ಗ್ರೂಪ್‌ಗಳಲ್ಲಿ!**

- **ಸಂಜು, (ಇಮೇಲ್ ಮೂಲಕ)**
  ಭಟ್ರೇ, ಎಲೆಕ್ಷನ್ ಮುಗಿದ ಮೇಲೆ ರಾಜಕಾರಣಿಗಳಿಗೆ ಬರುವ ಸಾಮಾನ್ಯ ಕಾಯಿಲೆ ಯಾವುದು?
- **ಜನರಿಗೆ ಕೊಟ್ಟ ಭರವಸೆಗಳೆಲ್ಲ ಮರೆತುಹೋಗುವುದು!**

- **ರಾಮದಾಸ ಯಾಜಿ, ಭದ್ರಾವತಿ**
  ಭಟ್ರೇ, ಜೀವನದ ಅತಿ ದೊಡ್ಡ ಸವಾಲು ಯಾವುದು?
- **ಫೋಟೋದಲ್ಲಿ ಇರುವಷ್ಟೇ ಚೆನ್ನಾಗಿ ರಿಯಲ್ ಲೈಫ್‌ನಲ್ಲಿ ಕಾಣಿಸುವುದು!**

- **ಸುಬ್ಬಣ್ಣ ಪಿ., ಕೋಣಂದೂರು**
  ಭಟ್ರೇ, ಗಂಡನಿಗೂ, ಜಿಪಿಎಸ್‌ಗೂ ಏನು ವ್ಯತ್ಯಾಸ?
- **ಜಿಪಿಎಸ್ ತಪ್ಪು ದಾರಿ ತೋರಿಸಿದಾಗ ಸಾರಿ ಅಂತ ಹೇಳುವುದಿಲ್ಲ, ಗಂಡ ದಾರಿ ತಪ್ಪಿದಾಗ ಹೆಂಡತಿಯಿಂದ ಬೈಸಿಕೊಳ್ಳುತ್ತಾನೆ!**

- **ಸುರೇಶ ಗೌಡ, ಗುಬ್ಬಿ**
  ಭಟ್ರೇ, ಬ್ರಹ್ಮಚಾರಿ ಮತ್ತು ವಿವಾಹಿತ ಪುರುಷನ ನಡುವಿನ ವ್ಯತ್ಯಾಸವೇನು?
- **ಬ್ರಹ್ಮಚಾರಿ ಕನಸು ಕಾಣುತ್ತಾನೆ, ವಿವಾಹಿತನಿಗೆ ಕನಸಿನಲ್ಲೂ ಸತ್ಯದರ್ಶನ ಆಗುತ್ತಿರುತ್ತದೆ!**

- **ರಮೇಶ ಉಪಾಧ್ಯ, ಸಂತೇಬೆನ್ನೂರು**
  ಭಟ್ರೇ, ಹೋಟೆಲ್‌ನಲ್ಲಿ ವೇಟರ್ ಬರುವವರೆಗೂ ಏನು ಮಾಡಬೇಕು?
- **ಪಕ್ಕದ ಟೇಬಲ್‌ನವರು ಏನು ಆರ್ಡರ್ ಮಾಡಿದ್ದಾರೆ ಅಂತ ಇಣುಕಿ ನೋಡಬೇಕು!**

- **ಅಂಜಲಿ, ಬೆಂಗಳೂರು**
  ಭಟ್ರೇ, ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಅಂತಾರಲ್ಲ, ಯಾಕೆ?
- **ಯಾಕಂದ್ರೆ, ಅವಳು ಮುಂದೆ ಹೋಗಲು ದಾರಿ ಬಿಡೋದಿಲ್ಲ!**

- **ಅರ್ಜುನ ಗೌಡ, ತುಮಕೂರು**
  ಭಟ್ರೇ, ಸಾಲ ತೆಗೆದುಕೊಂಡವನನ್ನು ಹುಡುಕುವುದು ಸುಲಭನಾ?
- **ಅದರ ಬದಲು ದೇವರನ್ನು ಹುಡುಕುವುದು ವಾಸಿ!**

- **ವಿಷ್ಣು ಶರ್ಮ, ಶಿರಸಿ**
  ಭಟ್ರೇ, ಸೋಷಿಯಲ್ ಮೀಡಿಯಾದಲ್ಲಿ 'ಸ್ಟೇಟಸ್' ಹಾಕೋದು ಯಾಕೆ?
- **ನಮ್ಮ ಪರಿಸ್ಥಿತಿ ನಮಗಿಂತ ಬೇರೆಯವರಿಗೆ ಚೆನ್ನಾಗಿ ಗೊತ್ತಿರಲಿ ಅಂತ!**

- **ಸುನಿಲ್ ಶಾಸ್ತ್ರಿ, ಶಿವಮೊಗ್ಗ**
  ಭಟ್ರೇ, ಇಂದಿನ ಕಾಲದಲ್ಲಿ 'ಸತ್ಯ ಹರಿಶ್ಚಂದ್ರ' ಯಾರು?
- **ಗೂಗಲ್‌ಗೂ ಗೊತ್ತಿಲ್ಲದವನು!**

ಕುದುರೆಯ ಬಾಲ ಮನೆಯಂಗಳದಲ್ಲಿ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ನಮ್ಮ ಸುತ್ತಮುತ್ತಲಿನ ಪರಿಸರದ ವಿಸ್ಮಯಗಳನ್ನು, ಪರಿಸರದ ಕೊಂಡಿಗಳನ್ನು ಸಾಕಷ್ಟು ಅರಿತಿದ್ದೇವೆ ಎಂಬ ಸಣ್ಣ ಹಮ್ಮು ಹೆಚ್ಚಿನವರಲ್ಲಿದೆ. ಸಾಮಾಜಿಕ ವ್ಯವಹಾರದ ದೃಷ್ಟಿಯಲ್ಲಿ ಅದನ್ನು ಒಣಜಂಬ ಎಂದೂ ಕರೆಯಬಹುದು. ಆದರೆ, ಪರಿಸರದ ಅಗಾಧ ಪ್ರಪಂಚದ ಕುರಿತಾಗಿ ಅಂಥ ಜಂಬ ಅಥವಾ ಒಣಜಂಬಕ್ಕೆ ಸ್ಥಳವಿಲ್ಲ. ಏಕೆಂದರೆ, ನಾವು ಸಾಕಷ್ಟು ಅರಿತಿದ್ದೇವೆ ಎಂಬ ನಮ್ಮ ಸುತ್ತಲಿನ ಪರಿಸರದಲ್ಲಿ ಇಂದಿಗೂ ಅವೆಷ್ಟೋ ವಿಸ್ಮಯಗಳಿವೆ, ಅನೂಹ್ಯ ವ್ಯಾಪಾರಗಳು ನಡೆಯುತ್ತಿವೆ, ಸಂಶೋಧನೆಗೊಳ್ಳಬೇಕಾದ ವಿದ್ಯಮಾನಗಳಿವೆ, ಮೇಲ್ನೋಟಕ್ಕೆ ಇದು ಹೀಗೆ ಎಂದು ಅನಿಸುವ ಘಟನೆಗಳ ಹಿಂದೆ ನಿಗೂಢ ಕೊಂಡಿಗಳ ಸಮತೋಲಿತ ವ್ಯವಸ್ಥೆಯಿದೆ!

ನಮ್ಮ ಹಳ್ಳಿಯ ಮನೆಯಲ್ಲಿ ಇಂಥದೊಂದು ಘಟನೆಗೆ ನನ್ನ ತಂಗಿ, ಭಾವ ಸಾಕ್ಷಿಯಾದರು. ಅದನ್ನು ಅವರ ಮಾತುಗಳಲ್ಲೇ ಕೇಳುವುದಾದರೆ: ''ನಮ್ಮ ಮನೆಯ ಬೆಕ್ಕು ತನ್ನ ಬಾಯಲ್ಲಿ ಒಂದು ಹಾಂತೆಯನ್ನು ಕಚ್ಚಿಕೊಂಡು ಓಡಿ ಬಂತು. ಸಂಜೆಯ ಕತ್ತಲೆಯ ಸಮಯ. ಅದರ ಬಾಯಲ್ಲಿದ್ದ ಕೀಟವನ್ನು ಕಂಡು, ಹಚ ಹಚ ಎಂದು ಓಡಿಸಿದೆವು. ಅದು ಚಾಲಾಕಿತನದಿಂದ ಮನೆ ಮುಂದಿನ ಅಂಗಳದ ಆವರಣದ ಮೂಲೆಯಲ್ಲಿ ಕುಳಿತು, ಆ ಹಾಂತೆಯನ್ನು ತಿಂದುಹಾಕಿತು. ಎಲ್ಲಾ ಸ್ವಾಹಾ ಮಾಡಿ, ನಾಲಗೆಯನ್ನು ಸವರಿಕೊಳ್ಳುತ್ತಾ ಕುಳಿತ ಆ ಬೆಕ್ಕಿನ ಹತ್ತಿರ ಹೋಗಿ ನೋಡಿದರೆ, ಅದರ ಮುಂಭಾಗದಲ್ಲಿ ಒಂದು ಉದ್ದನೆಯ ಕಡ್ಡಿ ಇತ್ತು! ಆದರೆ ಆ ಕಡ್ಡಿಗೆ ಜೀವ ಇತ್ತು! ಅತ್ತಿತ್ತ ಅಲ್ಲಾಡುತ್ತಿದ್ದ ಆ ಕಡ್ಡಿಯ ಜತೆ ಬೆಕ್ಕು ಆಟ ಆಡಲು ಶುರುಮಾಡಿತು. ಆ ಕಡ್ಡಿಗೆ ಜೀವ ಹ್ಯಾಂಗೆ ಬಂತೋ ಗೊತ್ತಿಲ್ಲ. ನಕ್ಕು ಹುಳಕ್ಕಿಂತ (ಎರೆ ಹುಳ) ಉದ್ದ, ಸಪೂರ ಇದ್ದ ಆ ಕಪ್ಪು ಕಡ್ಡಿಯು ನುಲಿದುಕೊಂಡು, ತನ್ನಷ್ಟಕ್ಕೆ ಚಲಿಸುವಂತೆ ಅಂಗಳದಲ್ಲಿ ಆಟವಾಡುತ್ತಿದೆ! ನಮ್ಮ ಬೆಕ್ಕು ಅದರ ಜತೆ ಆಟ ಆಡುತ್ತಿದೆ. ಬೆಕ್ಕನ್ನು ಆಚೆ ಓಡಿಸಿ, ನನ್ನ ಮೊಬೈಲ್‌ನಲ್ಲಿ ಆ ಕಡ್ಡಿ ರೀತಿ ಉದ್ದನೆಯ ಕೀಟದ ವಿಡಿಯೋ ಮಾಡಿದೆ. ಇದು ಎಂತ ಹೇಳಿ ಕಾಂಬ ಎಂಬ ಪ್ರಶ್ನೆಯ ಜತೆ, ನಮ್ಮ ಒಂದು ವಾಟ್ಸಾಪ್ ಗ್ರೂಪಿಗೆ ಹಾಕಿದೆ. ಯಾರಿಗೂ ಸುಖ್ಖ ಉತ್ತರ ಗೊತ್ತಾಗಲಿಲ್ಲ. ಇದು ಎಂತ ಕೀಟ ಇರಬಹುದು ಎಂದು ನಿನಗೆ ಗೊತ್ತಾ?''

ಇದು ನನ್ನ ತಂಗಿಯ ಪ್ರಶ್ನೆ. ಮೊಬೈಲ್‌ನಲ್ಲಿ ಚಿತ್ರಿಸಿದ ವಿಡಿಯೋವನ್ನು ನೋಡಿದೆ. ಅವರ ಮನೆಯ ಅಂಗಳದ ಸಿಮೆಂಟ್ ನೆಲದ ಮೇಲೆ ಅತ್ತಿತ್ತ ನುಲಿದಾಡುತ್ತಿದ್ದ ಆ ನಸುಕಪ್ಪು ಬಣ್ಣದ ಕೀಟವು ಸುಮಾರು ಒಂದು ಅಡಿ ಉದ್ದ ಇರಬಹುದು. ಅದು ಸುರುಳಿಸುತ್ತುತ್ತಾ, ಅತ್ತಿತ್ತ ವೇಗವಾಗಿ ಚಲಿಸುತ್ತಿತ್ತು. ಎರೆಹುಳಕ್ಕಿಂತ ತುಸು ತೆಳು, ಕಪ್ಪುಬಣ್ಣ. ನೋಡಲು ತುಸು ವಿಚಿತ್ರ, ಸಣ್ಣಗೆ ಅಸಹ್ಯ ತರಿಸುವಂಥ ದೇಹ ರಚನೆ. ಇದೆಂಥ ಹುಳ, ಅದೂ ನಮ್ಮ ಊರಿನಲ್ಲಿ ಎಂಬ ಕುತೂಹಲ ಹುಟ್ಟಿತು. ನಮ್ಮ ಊರಿನಲ್ಲಿ ಎಂದು ಒತ್ತಿ ಹೇಳಿದ್ದೇಕೆಂದರೆ, ಆ ಪರಿಸರದಲ್ಲಿ ಪ್ರತಿದಿನ ಸುಮಾರು ಐದು ಕಿ.ಮೀ. ಕಾಡು ಗುಡ್ಡಗಳಲ್ಲಿ ನಡೆಯುತ್ತಾ ಶಾಲೆಗೆ ಹೋಗುತ್ತಾ, ಅಲ್ಲೇ ಬೆಳೆದಿದ್ದ ನನ್ನ ಗಮನಕ್ಕೆ ಇಂಥದೊಂದು ಕೀಟ ಬಂದಿರಲಿಲ್ಲ! ನಾನು ಕಂಡಿಲ್ಲ ಎಂದ ಮಾತ್ರಕ್ಕೆ, ನಮ್ಮ ಹಳ್ಳಿಯ ಪರಿಸರದ ವಿಸ್ಮಯಗಳು ಬೆಳಕಿಗೆ ಬರಬಾರದೆಂದೇನೂ ಇಲ್ಲವಲ್ಲ. ಜತೆಗೆ, ಅಲ್ಲೇ ಹುಟ್ಟಿ ಬೆಳೆದಿದ್ದರೂ, ನನ್ನಂಥವರ ಅರಿವಿಗೆ ಬಾರದ ಹಲವು ವಿಸ್ಮಯಗಳು ನಮ್ಮ ಹಳ್ಳಿಯ ಸುತ್ತಲಿನ ಪರಿಸರದಲ್ಲಿ ಅಡಗಿವೆ ಎಂಬುದಕ್ಕೆ ಇದೂ ಒಂದು ಉದಾಹರಣೆಯೇ ಆಗಿರಬೇಕು, ಅಲ್ಲವೆ?

ಈಗ ಎಂತಿದ್ದರೂ ಅಂತರ್ಜಾಲದ ಯುಗ ತಾನೆ? ಯಾವುದೇ ಸಮಸ್ಯೆಗೂ ಅಂತರ್ಜಾಲದಲ್ಲಿ, ಕೃತಕ ಬುದ್ಧಿಮತ್ತೆಯಲ್ಲಿ (ಎಐ) ಉತ್ತರ ದೊರಕುತ್ತದೆ ಎಂದು ನಾವೇ ಅಂದುಕೊಂಡಿರುವ (ಅಥವಾ ಹಾಗೆ ಭ್ರಮಿಸಿಕೊಂಡಿರುವ?) ಕಾಲವಿದು. ಅಂತರ್ಜಾಲದಲ್ಲಿ ಈ ಕೀಟದ ಕುರಿತು ಹುಡುಕಿದಾಗ ಗೊತ್ತಾಯಿತು, ಅದು 'ಹಾರ್ಸ್ ಹೇರ್ ವರ್ಮ್'. ಹೆಸರು ಚೆನ್ನಾಗಿದೆ! ಹಾರ್ಸ್ ಹೇರ್ ವರ್ಮ್, ಅಂದರೆ ಕುದುರೆ ಬಾಲದಂಥ ಕೀಟ! ಇದರ ಹೆಸರಿನ ರೀತಿಯೇ, ಇದರ ಜೀವನಚಕ್ರದ ಮಾಹಿತಿ ಭಲೇ ರೋಚಕವಾಗಿದೆ. ಹಳ್ಳದ ದಡದಲ್ಲಿ, ಜವುಗು ಮತ್ತು ಪಸೆ ಜಾಗದಲ್ಲಿ ವಾಸಿಸುವ ಈ ಹುಳ ಐದರಿಂದ ಹತ್ತು ಸೆಂಟಿಮೀಟರ್ ಬೆಳೆಯುತ್ತದೆ. 2,000ಕ್ಕೂ ಹೆಚ್ಚು ಪ್ರಭೇದವಿರುವ ಇವುಗಳಲ್ಲಿ ಕೆಲವು ಪ್ರಭೇದದ ಕೀಟಗಳು, ಒಂದರಿಂದ ಎರಡು ಮೀಟರ್ ಉದ್ದ ಬೆಳೆಯುವುದೂ ಉಂಟು.

ಇಷ್ಟು ವೈವಿಧ್ಯವಿರುವ ಈ ಹುಳದ ಉದ್ದವು ಒಂದು ಕೌತುಕ. ಅದಕ್ಕೂ ಮಿಗಿಲಾದ ಕೌತುಕ ಎಂದರೆ, ಅದರ ಮರಿಯ ಜೀವನಕ್ರಮ!

ಈ ಕೀಟದ ಮರಿಯು ಲಾರ್ವಾ ರೂಪ ಪಡೆದಾಗ, ನಾನಾ ರೀತಿಯ ಸಾಹಸ ಮತ್ತು ಪಯಣಗಳನ್ನು ಮಾಡುತ್ತದೆ! ಬದುಕಿನ ಚಕ್ರದ ಆ ಹಂತದಲ್ಲಿ, ಅದರ ಮರಿಯು ವಿವಿಧ ಕೀಟಗಳನ್ನೇ ತನ್ನ ಮನೆಯನ್ನಾಗಿ ಮಾಡಿಕೊಳ್ಳುತ್ತದೆ. ಹಾತೆ, ಮಿಡತೆ, ಜಿರಳೆ ಮೊದಲಾದ ಜೀವಿಗಳ ದೇಹ ಪ್ರವೇಶಿಸುವ ಆ ಲಾರ್ವಾ, ಅಲ್ಲೇ ಮನೆ ಮಾಡಿಕೊಂಡು, ತನ್ನ ಅತಿಥಿಯ ದೇಹದ ಒಳಗೆ ಬೆಳೆದು, ನಿಧಾನವಾಗಿ ಅತಿಥಿಯ ದೇಹದ ಹೊರಗೂ ಬೆಳೆಯತೊಡಗುತ್ತದೆ! ಅಂದರೆ, ಬೇರಾವುದೋ ಪ್ರಭೇದದ ಮಿಡತೆಯ ದೇಹದ ಮೇಲ್ಭಾಗದಲ್ಲಿ, ಕಡ್ಡಿಯ ಸ್ವರೂಪದಲ್ಲಿ ಬೆಳೆಯತೊಡಗುತ್ತದೆ, ಈ ಲಾರ್ವಾ!

ಹೀಗೆ ನಾಲ್ಕಾರು ತಿಂಗಳು ಬೆಳೆದ ನಂತರ, ಆ ಲಾರ್ವಾ ಸಾಕಷ್ಟು ಉದ್ದವಾಗಬಹುದು. ಮೇಲ್ನೋಟಕ್ಕೆ ಒಂದು ದಾರದಂಥ ರಚನೆಯು ಮಿಡತೆಯ ದೇಹಕ್ಕೆ ಅಂಟಿಕೊಂಡಂತೆ ಕಾಣಿಸಬಹುದು; ಆದರೆ, ಅದು ಹಾರ್ಸ್ ಹೇರ್ ವರ್ಮ್‌ನ ಲಾರ್ವಾ! ಅದರ ಕಾಟ ತಡೆಯದ ಮಿಡತೆ, ನೀರಿನಲ್ಲಿ ಮುಳುಗಿದಾಗ, ಈ ಕೀಟ ಪ್ರತ್ಯೇಕಗೊಳ್ಳಬಹುದು. ಈ ರೀತಿ ಮಿಡತೆಯ ದೇಹಕ್ಕೆ ಅಂಟಿಕೊಂಡಿದ್ದಾಗಲೇ, ನನ್ನ ತಂಗಿಯ ಮನೆಯ ಬೆಕ್ಕು ಆ ದಿನ ಮಿಡತೆಯನ್ನು ಕಚ್ಚಿಕೊಂಡು ತಂದಾಗ, ಅದರ ಜತೆ ಈ ಕುದುರೆ ಕೂದಲು ಹುಳವೂ ಬಂತು. ಬೆಕ್ಕು ಮಿಡತೆಯನ್ನು ತಿಂದು ಹಾಕಿತು, ಕುದುರೆ ಕೂದಲು ಹುಳ ಮಾತ್ರ ಉಳಿದುಕೊಂಡಿತು, ಕ್ಯಾಮೆರಾದಲ್ಲಿ ಸೆರೆಯಾಯಿತು.

ಈ ಕೀಟದ ಹೆಸರನ್ನು ಕನ್ನಡಕ್ಕೆ ಅನುವಾದಿಸಿದಾಗ, ಕುದುರೆ ಕೂದಲು ಹುಳ ಎನಿಸಿದರೂ, ನಮ್ಮ ಹಳ್ಳಿಯಲ್ಲಿ ಕುದುರೆಯಂತೂ ಇಲ್ಲ, ಹಳ್ಳಿ ಜನರು ಅದನ್ನು ಏನೆಂದು ಕರೆಯುತ್ತಾರೊ ಸ್ಪಷ್ಟವಿಲ್ಲ. 'ಕೊಂಬಿನ ವಿಷ' ಎನ್ನುತ್ತಾರೆ ಕೆಲವರು, ಎಂದಳು ನನ್ನ ತಂಗಿ. ಆದರೆ ಹಳ್ಳಿಯ ಜನರು ತಮ್ಮ ಸುತ್ತಲಿನ ಅಸಂಖ್ಯ ಕೀಟ, ಪಕ್ಷಿಗಳನ್ನು ನಾಮಕರಣ ಮಾಡುವಲ್ಲಿ, ನಿರ್ದಿಷ್ಟವಾಗಿ ಒಂದು ಹೆಸರನ್ನೇ ಬಳಸುವಲ್ಲಿ ತುಸು ಹಿಂದೆ ಎಂದೇ ಹೇಳಬಹುದು. ಜತೆಗೆ, ಪರಿಸರದ ನಿಗೂಢ ವಿದ್ಯಮಾನಗಳನ್ನು ನಮ್ಮ ಹಳ್ಳಿಯ ಜನರು, ಜನಪದರು ನಿಖರವಾಗಿ ಗುರುತಿಸದೇ ಇರಬಹುದು. ಬಹುಶಃ, ಕಡ್ಡಿಯ ರೂಪದಲ್ಲಿರುವ, ಬೇರೊಂದು ಜೀವಿಯ ಮೇಲೆ ಪರೋಪಜೀವಿಯಾಗಿ ಅಂಟಿಕೊಂಡು, ಹಲವು ತಿಂಗಳುಗಳ ಕಾಲ ತನ್ನ ಅತಿಥಿಯ ಜತೆಯಲ್ಲೇ ಸುತ್ತಾಡುವ ಇಂಥ ಕಡ್ಡಿಯ ರೂಪದ ಕೀಟವನ್ನು ಸ್ಪಷ್ಟವಾಗಿ ಗುರುತಿಸಿಲ್ಲದೇ ಇರುವ ಸಾಧ್ಯತೆ ಇದೆ. ಹಾರ್ಸ್ ಹೇರ್ ವರ್ಮ್ ಅನ್ನು, ಕುದುರೆ ಕೂದಲು ಹುಳ ಎಂದು ಕನ್ನಡದಲ್ಲಿ ಅನುವಾದಿಸಬಹುದು. ನಮ್ಮ ರಾಜ್ಯದಲ್ಲಿ ಈ ಕೀಟದ ಹಲವು ಪ್ರಭೇದಗಳಿರಬಹುದು. ಹೆಚ್ಚಿನ ಅಧ್ಯಯನ ಆದಂತೆ ಕಾಣುವುದಿಲ್ಲ ಮತ್ತು ಅಂಥ ಅಧ್ಯಯನ ನಡೆದಿದ್ದರೂ, ಜನಸಾಮಾನ್ಯರಿಗೆ, ಪರಿಸರದ ಕುರಿತು ಕುತೂಹಲ ಹೊಂದಿರುವವರಿಗೆ ಆ ಅಧ್ಯಯನದ ವಿವರಗಳು ತಲುಪಿಲ್ಲ ಎಂದೇ ಹೇಳಬಹುದು.

ನಮ್ಮ ಹಳ್ಳಿಯ ಜನರು ಈ ಕೀಟವನ್ನು ಕೊಂಬಿನ ವಿಷ ಎಂದೂ ಕರೆದಿರುವ ಸಾಧ್ಯತೆಯಿದೆ. ಆದರೆ, ನಮ್ಮೂರಿನಲ್ಲಿ ಅದೇ ಹೆಸರಿನ ಇನ್ನೊಂದು ಕೀಟ ತುಸು ಪ್ರಖ್ಯಾತ. ಮಳೆಗಾಲದಲ್ಲಿ ಕಾಣಸಿಗುವ, ಒಂದು ಇಂಚು ಉದ್ದದ, ಅಗಲ ತಲೆಯ (ತಲೆಯು ಅಡ್ಡಡ್ಡ ಬೆಳೆದಿರುತ್ತದೆ) ಕಪ್ಪು ಹುಳವೊಂದನ್ನು ಸಹ ನಮ್ಮ ಹಳ್ಳಿಯವರು 'ಕೊಂಬಿನ ವಿಷ' ಎಂದು ಕರೆಯುತ್ತಾರೆ. ನೋಡಲು ತುಸು ಭಯ ಹುಟ್ಟಿಸುವ, ಲೋಳೆಲೋಳೆಯ ದೇಹ ಹೊಂದಿರುವ ಆ ಹುಳ ಕಾಲಿಗೆ ತಗುಲಿದರೆ, ಆ ಭಾಗ ನಿಧಾನವಾಗಿ ಕೊಳೆಯಲು ಆರಂಭಿಸುತ್ತದೆ ಎಂಬ ನಂಬಿಕೆಯೂ ನಮ್ಮ ಹಳ್ಳಿಯಲ್ಲಿದೆ. ಇದು ನಂಬಿಕೆಯೂ ಆಗಿರಬಹುದು, ಮೂಢನಂಬಿಕೆಯೂ ಆಗಿರಬಹುದು. ಕೊಂಬಿನ ವಿಷ ಎಂಬ ಜೀವಿಯು, ಒಂದೆರಡು ಇಂಚು ಉದ್ದ ಇದ್ದು, ಲೋಳೆಲೋಳೆ ದೇಹ ಹೊಂದಿರುತ್ತದೆ. ಕೊಂಬಿನ ವಿಷ ಎಂಬ ಹೆಸರಿರುವುದರಿಂದ, ಇದು ತುಸು ಪ್ರಸಿದ್ಧ. ಇದನ್ನು ಇಂಗ್ಲಿಷ್‌ನಲ್ಲಿ ಹ್ಯಾಮರ್ ಹೆಡ್ ವರ್ಮ್ ಎಂದು ಕರೆದಿದ್ದು, ಇವುಗಳಲ್ಲಿ ಕೆಲವು ಪ್ರಭೇದಗಳೂ ಇವೆ.

ಅಡ್ಡಡ್ಡವಾಗಿ ಬೆಳೆದಿರುವ ಅದರ ತಲೆಯನ್ನು ಕಂಡು, ಅದರ ಗಾಢವರ್ಣದ ದೇಹವನ್ನು ಕಂಡು, (ದಟ್ಟ ಕಪ್ಪು ಅಥವಾ ಕೆಂಪು ಮಿಶ್ರಿತ ಲೋಳೆ ದೇಹ) ಅದನ್ನು ಕೊಂಬಿನ ವಿಷ ಎಂದು ನಮ್ಮ ಜನಪದರು ಕರೆದರು. ಆದರೆ, ಅಂಥ ಹೆಸರಿಡುವಾಗ, ಭಾವನಾತ್ಮಕ ವಿಚಾರವೇ ಪ್ರಧಾನವೇ ಹೊರತು, ವೈಜ್ಞಾನಿಕ ವರ್ಗೀಕರಣಕ್ಕೆ ಅನುಕೂಲವಾಗುವ ಹೆಸರನ್ನು ನಮ್ಮ ಜನಪದರು ಇಡುವ ಸಾಧ್ಯತೆ ಕಡಿಮೆ. ನಮ್ಮ ಊರಿನ ಸುತ್ತ ಕಾಣಸಿಗುವ ಹಕ್ಕಿಗಳ ಕಥೆಯೂ ಅಷ್ಟೆ – ಕೆಲವು ಹಕ್ಕಿಗಳಿಗೆ ನಿರ್ದಿಷ್ಟ ಹೆಸರನ್ನು ಇಟ್ಟು ಕರೆದರೂ, ಇನ್ನು ಕೆಲವಕ್ಕೆ ಅಸ್ಪಷ್ಟ ಹೆಸರು. ಇನ್ನು ಕೆಲವಕ್ಕೆ ಹೆಸರೇ ಇಲ್ಲ ಎಂದರೂ ಹೇಳಬಹುದು! ನಮ್ಮ ಹಳ್ಳಿಯಲ್ಲಿ 'ಪಿಕಳಾರ' ಎಂದು ನಾಲ್ಕಾರು ಪ್ರಭೇದದ ಹಕ್ಕಿಗಳನ್ನು ಕರೆದಿದ್ದನ್ನು ಕಂಡಿರುವೆ. ''ಅವತ್ತು ಕಂಡ, ಜುಟ್ಟಿನ ಹಕ್ಕಿ ಪಿಕಳಾರ. ಇದಕ್ಕೆ ಜುಟ್ಟು ಇಲ್ಲ, ಇದು ಬೇರೆ ಹಕ್ಕಿ ಅಲ್ಲವಾ, ಇದೆಂಥ ಹಕ್ಕಿ?'' ಎಂದು ಕೇಳಿದರೆ, ''ನಂಗೊತ್ತಿಲ್ಲ, ಎಲ್ಲಾ ಹಕ್ಕಿಗಳಿಗೆ ಹೆಸರಿಡುವುದಕ್ಕೆ ಆಗುತ್ತಾ?'' ಎನ್ನುತ್ತಿದ್ದರು ನಮ್ಮ ಅಮ್ಮಮ್ಮ. ಇದು ಗ್ರಾಮೀಣರ ಸಹಜ ಉತ್ತರ ತಾನೆ! ಇನ್ನು ಕೆಲವು ಹಕ್ಕಿಗಳ, ಪ್ರಾಣಿಗಳ ನಿರ್ದಿಷ್ಟ ಹೆಸರು ಕ್ರಮೇಣ ಜನಮಾನಸದಿಂದ ಮರೆತೇಹೋಗಿರಬಹುದು. ಆಗ, ಹೋಲಿಕೆಯ ಆಧಾರದಲ್ಲಿ ಹೆಸರು ಬಳಕೆಗೆ ಬಂದಿರುತ್ತದೆ.

ಇಷ್ಟಿದ್ದರೂ, ವಿಶಿಷ್ಟವಾಗಿ ಕೂಗುವ ಒಂದು ಹಕ್ಕಿಗೆ ನಮ್ಮ ಹಳ್ಳಿಯ ಜನರು ಇಟ್ಟ ಹೆಸರು ಮಾತ್ರ ಬೆರಗು ಹುಟ್ಟಿಸುವಂಥದ್ದು! ಆ ಹಕ್ಕಿಯ ಹೆಸರಿನ ಹಿಂದೆ ನಮ್ಮೂರಿನ ಕೃಷಿಕರು ಅನುಭವಿಸುತ್ತಾ ಬಂದಿರುವ ಕಷ್ಟ, ವೇದನೆಗಳ ವ್ಯಥೆಯಿದೆ. ಸಾಮಾನ್ಯವಾಗಿ ಬೇಸಗೆಯ ದಿನಗಳಲ್ಲಿ ಮನೆಯ ಮುಂದಿನ ಹಾಡಿಯ ಮರಗಳ ಸಂದಿಯಲ್ಲಿ ಕುಳಿತ ಒಂದು ಹಕ್ಕಿ ''ಹೋರಿ ಸತ್ತು ಹೋಯಿತೋ'' ಎಂದು ಕೂಗುತ್ತದೆ. ಕೂ.. ಕೂ.. ಕೂ.. ಕೂ.. ಎಂದು ನಾಲ್ಕಾರು ಏರಿಳಿತ ಇರುವ ಆ ಹಕ್ಕಿಯ ಕೂಗನ್ನು ''ಹೋರಿ ಸತ್ ಹೋಯ್ತೋ, ಹಣ ಕೊಟ್ ಆಯ್ತೋ'' ಎಂದು ಅರ್ಥೈಸುತ್ತಾರೆ ನಮ್ಮ ಹಳ್ಳಿಯವರು (ಇಂಡಿಯನ್ ಕುಕೂ: ಕುಕುಲಸ್ ಮೈಕ್ರೊಪ್ಟೆರಸ್).

ಬೇರಾವುದೇ ಸಮಯದಲ್ಲಿ ಕೇಳಿಬರದ ಆ ಹಕ್ಕಿಯ ಕೂಗು, ಬೇಸಗೆಯ ಸಮಯದಲ್ಲಿ ಮಾತ್ರ ಕೇಳಿಬರುವುದು ನಮ್ಮೂರಿನವರಿಗೆ ಬೆರಗನ್ನು ತಂದಿರಬೇಕು. ಆದ್ದರಿಂದ, ಅದಕ್ಕೊಂದು ದುಃಖ ಕಥೆ ಕಟ್ಟಿದ್ದಾರೆ. ಒಂದು ಜತೆ ಹೋರಿಗಳನ್ನು ಖರೀದಿಸಲು ಹೊರಟ ಒಬ್ಬ ಬಡ ರೈತ, ಕಾಡಿನ ದಾರಿ ದಾಟಿ ಪಕ್ಕದ ಹಳ್ಳಿಗೆ ಹೋದ. ಅಲ್ಲಿನ ಸ್ಥಿತಿವಂತ ರೈತನೊಬ್ಬನ ಬಳಿ ಹೋರಿಗಳ ವ್ಯಾಪಾರ ಮಾಡಿದ. ಅದಕ್ಕಾಗಿ ಸಾಲ ಮಾಡಿ, ಕಷ್ಟಪಟ್ಟು ಹಣ ಹೊಂದಿಸಿದ್ದ. ಬೇಸಾಯ ಶುರುವಾಗುವ ಸಮಯಕ್ಕೆ ಹೋರಿಗಳನ್ನು ಹೊಡೆದು ತಂದರಾಯಿತು, ಅಷ್ಟರಲ್ಲಿ ಒಂದು ಕೊಟ್ಟಿಗೆ ಕಟ್ಟುವ ಎಂದು ಒಂದೆರಡು ವಾರ ಹೋರಿಗಳನ್ನು ಅಲ್ಲೇ ಬಿಟ್ಟುಬಂದ. ಮನೆಯ ಬಳಿ ಕೊಟ್ಟಿಗೆ ಕಟ್ಟಿದ. ಇನ್ನೇನು ಹೂಟಿ ಶುರುಮಾಡಬೇಕು, ಹೋರಿಗಳನ್ನು ಹೊಡೆದುಕೊಂಡು ಬರೋಣ ಎಂದು ಪಕ್ಕದ ಹಳ್ಳಿಗೆ ಹೋಗಿ ನೋಡಿದರೆ, ''ಕಾಯಿಲೆ ಬಂದು ನೀನು ಖರೀದಿಸಿದ ಹೋರಿಗಳು ಸತ್ತುಹೋದವು'' ಎಂದು ಹೇಳಿದ, ಹೋರಿಗಳನ್ನು ಮಾರಿದಾತ. ಈತ ಬಡವ. ಮಾರಿದಾತ ಸ್ಥಿತಿವಂತ. ''ಹಣ ವಾಪಸು ಕೊಡಿ'' ಎಂದು ಕೇಳಿದರೆ ''ಹಣ ಎಲ್ಲಾ ಖರ್ಚಾಯ್ತು, ನಿನ್ನ ಹೋರಿ ಸತ್ತು ಹೋಯಿತಲ್ಲ, ಈಗ ಹಣ ಕೊಡು ಎಂದರೆ ನಾನೆಲ್ಲಿಂದ ತರಲಿ?'' ಎಂದು ದಬಾಯಿಸಿದ ಆ ಸ್ಥಿತಿವಂತ ರೈತ. ಹಣ ಕೊಟ್ಟರೂ, ಹೋರಿ ಸಿಗದೇ ರೈತ ಹತಾಶನಾದ. ಮನೆಯತ್ತ ಕಾಡುದಾರಿಯಲ್ಲಿ ಹೊರಟ ಆ ಬಡ ರೈತ, ಮನೆಗೆ ವಾಪಸಾಗಲು ಮನಸ್ಸಾಗದೇ, ಕಾಡಿನಲ್ಲೇ ಅಲೆದಾಡುತ್ತಾ ''ಹೋರಿ ಸತ್ ಹೋಯ್ತೋ, ಹಣ ಕೊಟ್ ಆಯ್ತೋ'' ಎಂದು ಕೂಗುತ್ತಾ ಹಕ್ಕಿಯ ರೂಪ ತಾಳಿದ್ದಾನೆ. ಇದು ನಮ್ಮ ಹಳ್ಳಿಯ ಜನಪದರ ಕಥೆ. ವಿಚಿತ್ರ ಧ್ವನಿಯಲ್ಲಿ ಕೂಗುವ ಹಕ್ಕಿಗೆ, ಕೃಷಿ ಕೆಲಸದ ಕಷ್ಟ, ವ್ಯಥೆಯ ಕಥೆಯನ್ನು ಜೋಡಿಸಿದ ಈ ಕಥನ ಕುತೂಹಲಕಾರಿ. ಬೇಸಗೆಯ ದಿನಗಳಲ್ಲಿ ದೊಡ್ಡ ದನಿಯಲ್ಲಿ ಕೂಗುವ ''ಹೋರಿ ಸತ್ ಹೋಯ್ತೋ'' ಹಕ್ಕಿಯು, ನಮ್ಮ ಹಳ್ಳಿಯ ಎಲ್ಲರ ಗಮನವನ್ನೂ, ಹಳ್ಳಿಯನ್ನು ಸುತ್ತುವರಿದಿದ್ದ ಹಕ್ಕಲಿನತ್ತ ಸೆಳೆಯುವುದಂತೂ ನಿಜ. ಆ ಮೂಲಕ, ಪರಿಸರದ ಪ್ರಾಮುಖ್ಯತೆಯನ್ನು ಅದು ತಿಳಿಸಿಕೊಡುತ್ತದೆ.

ಸೈಕ್ಸ್–ಪಿಕೊಟ್ ಒಪ್ಪಂದ: ಮಧ್ಯಪ್ರಾಚ್ಯದ ದುರಂತದ ಮೂಲ

ಯುರೋಪಿನ ಶಕ್ತಿಗಳು ದೇಶಗಳನ್ನು ಮಾತ್ರ ನಿರ್ಮಿಸಲಿಲ್ಲ, ಜತೆಗೆ ಕೆಲವು ಕಡೆ ಹೊಸ ರಾಜವಂಶಗಳನ್ನೂ ಬೆಳೆಸಿದವು. ಈ ರಾಜವಂಶಗಳು ಕಾಲಕ್ರಮೇಣ ಸ್ವತಂತ್ರ ರಾಷ್ಟ್ರಗಳಾಗಿ ಬೆಳೆದರೂ, ಅವುಗಳ ಪ್ರಾರಂಭಿಕ ರಾಜಕೀಯ ಮಾನ್ಯತೆ ಮತ್ತು ಭದ್ರತೆ ಬಹುತೇಕವಾಗಿ ಯುರೋಪಿನ ಶಕ್ತಿಗಳ ಅನುಕೂಲತೆಯಿಂದ ಬಂದಂಥವು ಎಂಬುದು ಕಹಿಸತ್ಯ. ಆದರೆ ಈ ಗಡಿಗಳು ಜನರ ಸಹಜ ಗುರುತುಗಳನ್ನು ಒಡೆಯುವಂತಾಗಿದ್ದವು.

ಭೂರಾಜಕೀಯ

ಲೀನಾ ಜೋಶಿ
vveditoped@gmail.com

ಮಧ್ಯಪ್ರಾಚ್ಯದ ಪ್ರಸಕ್ತ ಪರಿಸ್ಥಿತಿ ನೋಡಿದಾಗ ಒಂದು ಪ್ರಶ್ನೆ ಪುನಃ ಪುನಃ ಎದುರಾಗುತ್ತದೆ– ಈ ಪ್ರದೇಶದಲ್ಲಿ ಶಾಶ್ವತ ಶಾಂತಿ ಯಾಕೆ ಅಷ್ಟು ಕಷ್ಟ? ಇದಕ್ಕೆ ಅನೇಕ ಕಾರಣಗಳಿವೆ. ಅವೆಂದರೆ– ಗುಂಪುಗಳ ರಾಜಕೀಯ, ಸಂಪತ್ತಿನ ಮೇಲಿನ ಸ್ಪರ್ಧೆ, ಪ್ರಾದೇಶಿಕ ಶಕ್ತಿಗಳ ಸಂಘರ್ಷ. ಬ್ರಿಟನ್‌ಗೆ ಮಧ್ಯಪ್ರಾಚ್ಯದ ಮಹತ್ವ ತುಂಬಾ ಸ್ಪಷ್ಟವಾಗಿ ಗೊತ್ತಿತ್ತು. ಯುರೋಪಿನಿಂದ ಭಾರತಕ್ಕೆ ಸಾಗುವ ಮಾರ್ಗಗಳನ್ನು ಸುರಕ್ಷಿತವಾಗಿಡಲು ಈ ಪ್ರದೇಶದಲ್ಲಿ ಸಾರ್ವಭೌಮತ್ವದ ಅಗತ್ಯವಿತ್ತು. ಮೊದಲ ಮಹಾಯುದ್ಧದ ವೇಳೆ ಬ್ರಿಟನ್ ವಿಭಿನ್ನ ಅರಬ್ ಗುಂಪುಗಳಿಗೆ ವಿಭಿನ್ನ ಭರವಸೆಗಳನ್ನು ನೀಡಿತು. ಅರಬ್ ನಾಯಕರಿಗೆ ಒಟ್ಟೊಮನ್‌ರರ ವಿರುದ್ಧ ಹೋರಾಡಿದರೆ ಸ್ವಾತಂತ್ರ್ಯ ನೀಡುವ ಭರವಸೆ ನೀಡಿದರೆ, ಫ್ರಾನ್ಸ್‌ನ ಜತೆಗೂಡಿ Sykes-Picot Agreement ಮೂಲಕ ಭೂಭಾಗ ಹಂಚಿಕೆ ಮಾಡಿ ವಿಭಿನ್ನ ರಾಜರುಗಳನ್ನು ಸೃಷ್ಟಿಸಿತು. ಇದಲ್ಲದೆ 1917ರ Balfour Declaration ಮೂಲಕ ಪ್ಯಾಲೆಸ್ತೀನ್ ಪ್ರದೇಶದಲ್ಲಿ ಯಹೂದಿಗಳಿಗೆ ಪ್ರತ್ಯೇಕ ರಾಷ್ಟ್ರದ ಬೆಂಬಲ ಘೋಷಿಸಲಾಯಿತು. ಈ ದ್ವಂದ್ವ ಭರವಸೆಗಳು ಮುಂದೆ ಇಸ್ರೇಲ್–ಪ್ಯಾಲೆಸ್ತೀನ್ ನಡುವಿನ ಕೊನೆಗೊಳ್ಳದ ಸಂಘರ್ಷಕ್ಕೆ ನೆಲೆ ಸಿದ್ಧಪಡಿಸಿದವು. ಒಂದೇ ಭೂಭಾಗಕ್ಕೆ, ಎರಡು ಸಮುದಾಯಗಳಿಗೆ ಭರವಸೆ ನೀಡಿ ಅನಿಶ್ಚಿತತೆಯ ಬೀಜ ಬಿತ್ತಿದ್ದು ಬ್ರಿಟಿಷರು. ಬ್ರಿಟಿಷ್ ಸಾಮ್ರಾಜ್ಯ ತನ್ನ ಜಾಗತಿಕ ಹಿತಾಸಕ್ತಿಗಳನ್ನು ರಕ್ಷಿಸಲು ಮಧ್ಯಪ್ರಾಚ್ಯವನ್ನು ಭೂರಾಜಕೀಯ ಚದುರಂಗದ ಬೋರ್ಡ್‌ನಂತೆ ಬಳಸಿತು. ಬ್ರಿಟನ್ ಪ್ರಾದೇಶಿಕ ರಾಜವಂಶಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿತು. ಇದರಿಂದ ಸ್ಥಳೀಯ ಆಡಳಿತಗಳು ಹೊರಗಿನ ಶಕ್ತಿಗಳ ಮೇಲೆ ಅವಲಂಬಿತರಾಗುವ ಚಕ್ರ ಆರಂಭವಾಯಿತು. ಈ ತಂತ್ರಗಳು ಅನೇಕ ಸಂದರ್ಭಗಳಲ್ಲಿ ಅನಿಶ್ಚಿತತೆಯನ್ನು ಕಡಿಮೆ ಮಾಡುವ ಬದಲು ದೀರ್ಘಗೊಳಿಸಿದವು.

1918ರಲ್ಲಿ ಒಟ್ಟೊಮನ್ ಸಾಮ್ರಾಜ್ಯವು ಕೊನೆಗೊಳ್ಳುವುದರ ಮೂಲಕ, ಪ್ರಪಂಚದ ಅತ್ಯಂತ ಸಂಕೀರ್ಣ ಮಧ್ಯಪ್ರಾಚ್ಯದ ನಕ್ಷೆಯು ಬದಲಾಯಿತು. ನಾವು ಈಗ ನೋಡುತ್ತಿರುವ ಮಧ್ಯಪ್ರಾಚ್ಯ ರಾಷ್ಟ್ರಗಳು ಆಗ ಅಸ್ತಿತ್ವದಲ್ಲೇ ಇರಲಿಲ್ಲ. ಈ ಬದಲಾವಣೆಯ ಹಿಂದಿರುವುದು, ಯುರೋಪಿನ ಜಾಗತಿಕ ಶಕ್ತಿಗಳಿಂದ ರೂಪಗೊಂಡ ಸೈಕ್ಸ್–ಪಿಕೊಟ್ ಒಪ್ಪಂದ. 1916ರಲ್ಲಿ ರಹಸ್ಯವಾಗಿ ರೂಪುಗೊಂಡ ಸೈಕ್ಸ್–ಪಿಕೊಟ್ ಒಪ್ಪಂದ ಕೇವಲ ಒಂದು ರಾಜತಾಂತ್ರಿಕ ಒಪ್ಪಂದವಲ್ಲ; ಅದು ಒಂದು ಪ್ರದೇಶದ ರಾಜಕೀಯ ಭವಿಷ್ಯವನ್ನು ಹೊರಗಿನ ಶಕ್ತಿಗಳು ತಮ್ಮ ಲಾಭಕ್ಕಾಗಿ ಹೇಗೆ ಮರುಬರೆಯಬಹುದು ಎಂಬುದಕ್ಕೆ ಸ್ಪಷ್ಟ ಉದಾಹರಣೆ. ಬ್ರಿಟನ್‌ನ ಮಾರ್ಕ್ ಸೈಕ್ಸ್ ಮತ್ತು ಫ್ರಾನ್ಸ್‌ನ ಫ್ರಾಂಕೋಯಿಸ್ ಜಾರ್ಜಸ್–ಪಿಕೊಟ್ ಮೊದಲ ಮಹಾಯುದ್ಧದ ಸಂದರ್ಭದಲ್ಲೇ, ಕುಸಿಯುತ್ತಿದ್ದ ಒಟ್ಟೊಮನ್ (ಈಗಿನ ತುರ್ಕಿ) ಸಾಮ್ರಾಜ್ಯದ ಅರಬ್ ಭೂಭಾಗವನ್ನು ತಮ್ಮ ಮಧ್ಯೆ ಹಂಚಿಕೊಳ್ಳಲು ಯೋಜನೆ ರೂಪಿಸಿದರು. ಜನರ ಇಚ್ಛೆ, ಧಾರ್ಮಿಕ–ಜನಾಂಗೀಯ ಸಾಂದರ್ಭಿಕತೆ, ಇತಿಹಾಸ ಈ ಯಾವುದನ್ನೂ ಲೆಕ್ಕಿಸದೆ ಎಳೆದ ಗಡಿಗಳು ಇಂದಿನ ಮಧ್ಯಪ್ರಾಚ್ಯದ ಅಸ್ಥಿರತೆಯ ಬೀಜಗಳಾದವು. ಇದು ಕೇವಲ ಭೂಭಾಗ ಹಂಚಿಕೆ ಅಲ್ಲ– ಇದು ಹೊಸ ರಾಷ್ಟ್ರಗಳ ಜನನ ಮತ್ತು ಹಳೆಯ ರಾಜಕೀಯ ವ್ಯವಸ್ಥೆಗಳ ಅಂತ್ಯವೂ ಹೌದು. ಇಂದಿನ ಮಧ್ಯಪ್ರಾಚ್ಯದಲ್ಲಿ ಕಂಡುಬರುವ ಅನೇಕ ರಾಷ್ಟ್ರಗಳು ಮತ್ತು ಕೆಲವು ರಾಜವಂಶಗಳು, ಯುರೋಪಿನ ರಾಜಕೀಯ ದಾಳದ ಫಲವಾಗಿವೆ.

ಹುಟ್ಟಿದವು ಹೊಸ ದೇಶಗಳು

ಒಟ್ಟೊಮನ್ ಸಾಮ್ರಾಜ್ಯದ ಅವಶೇಷಗಳಿಂದ ಯುರೋಪಿನ ಶಕ್ತಿಗಳು ಹೊಸ ರಾಷ್ಟ್ರಗಳನ್ನು ರೂಪಿಸಿದವು. ಇವು ಸಹಜ ರಾಷ್ಟ್ರೀಯ ಚಳವಳಿಗಳ ಫಲವಲ್ಲ, ಬದಲಿಗೆ ವಸಾಹತು ಶಕ್ತಿಗಳ ಗಡಿನಿರ್ಣಯದ ಫಲ. ಈ ರಾಷ್ಟ್ರಗಳ ಗಡಿಗಳು ಜನಾಂಗೀಯ, ಧಾರ್ಮಿಕ, ಭಾಷಾ ವಾಸ್ತವಿಕತೆಗಳನ್ನು ಗೌರವಿಸದೆ ಎಳೆಯಲ್ಪಟ್ಟವು. ಇದರಿಂದ ಆಂತರಿಕ ಸಂಘರ್ಷಗಳು ಶಾಶ್ವತ ಸ್ವರೂಪ ಪಡೆದುಕೊಂಡವು. ಇದರ ಪರಿಣಾಮವಾಗಿ ಇಂದಿನ ಇರಾಕ್, ಜೋರ್ಡಾನ್, ಸಿರಿಯಾ ಮತ್ತು ಲೆಬನಾನ್ ರಾಷ್ಟ್ರಗಳ ಗಡಿಗಳು ರೂಪುಗೊಂಡವು. ಇರಾನ್ (ಅಂದಿನ ಪರ್ಷಿಯಾ) ನೇರವಾಗಿ ಸೈಕ್ಸ್–ಪಿಕೊಟ್ ಒಪ್ಪಂದದ ಭಾಗವಾಗದಿದ್ದರೂ, 20ನೇ ಶತಮಾನದಲ್ಲಿ ಬ್ರಿಟನ್ ಮತ್ತು ರಷ್ಯಾದ ಪ್ರಭಾವ ವಲಯಗಳಲ್ಲಿ ವಿಭಜಿಸಲ್ಪಟ್ಟಿತ್ತು. ತೈಲ ಸಂಪತ್ತಿನ ಕಾರಣದಿಂದ ಹೊರಗಿನ ಹಸ್ತಕ್ಷೇಪ ಹೆಚ್ಚಾಯಿತು. ಇದು ಪ್ರಾದೇಶಿಕ ಶಕ್ತಿಯ ರಾಜಕೀಯ ಸ್ವಾಯತ್ತತೆಯ ಮೇಲೆ ಪರಿಣಾಮ ಬೀರಿತು. ಯುರೋಪಿನ ಶಕ್ತಿಗಳಿಗೆ ಮಧ್ಯಪ್ರಾಚ್ಯವು ಕೇವಲ ಒಂದು ಪ್ರದೇಶವಲ್ಲ– ಅದು ತೈಲ ಸಂಪತ್ತು, ವ್ಯಾಪಾರ ಮಾರ್ಗಗಳು ಮತ್ತು ಜಾಗತಿಕ ಪ್ರಭಾವದ ಕೀಲಿಕೈ. ಬ್ರಿಟನ್ ಮತ್ತು ಫ್ರಾನ್ಸ್ ತಮ್ಮ ಆರ್ಥಿಕ ಲಾಭಕ್ಕಾಗಿ ಪ್ರಾಂತ್ಯಗಳನ್ನು ಹಂಚಿಕೊಂಡವು.

ಯುರೋಪಿನ ಶಕ್ತಿಗಳು ದೇಶಗಳನ್ನು ಮಾತ್ರ ನಿರ್ಮಿಸಲಿಲ್ಲ, ಜತೆಗೆ ಕೆಲವು ಕಡೆ ಹೊಸ ರಾಜವಂಶಗಳನ್ನೂ ಬೆಳೆಸಿದವು. ಈ ರಾಜವಂಶಗಳು ಕಾಲಕ್ರಮೇಣ ಸ್ವತಂತ್ರ ರಾಷ್ಟ್ರಗಳಾಗಿ ಬೆಳೆದರೂ, ಅವುಗಳ ಪ್ರಾರಂಭಿಕ ರಾಜಕೀಯ ಮಾನ್ಯತೆ ಮತ್ತು ಭದ್ರತೆ ಬಹುತೇಕವಾಗಿ ಯುರೋಪಿನ ಶಕ್ತಿಗಳ ಅನುಕೂಲತೆಯಿಂದ ಬಂದಂಥವು ಎಂಬುದು ಕಹಿಸತ್ಯ.

ಆದರೆ ಈ ಗಡಿಗಳು ಜನರ ಸಹಜ ಗುರುತುಗಳನ್ನು ಒಡೆಯುವಂತಾಗಿದ್ದವು. ಕುರ್ದ್ ಜನಾಂಗದವರು ನಾಲ್ಕು ರಾಷ್ಟ್ರಗಳಲ್ಲಿ ವಿಭಜಿಸಲ್ಪಟ್ಟರು; ಪಂಥೀಯ ಸಮತೋಲನವನ್ನು ಲೆಕ್ಕಿಸದೆ ಆಡಳಿತ ವ್ಯವಸ್ಥೆಗಳು ನಿರ್ಮಿಸಲ್ಪಟ್ಟವು. ಮಧ್ಯಪ್ರಾಚ್ಯದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ದುಃಖಭರಿತ ಅಧ್ಯಾಯಗಳಲ್ಲಿ ಒಂದಾಗಿದೆ ಕುರ್ದ್ ಜನರ ಕಥೆ. ತಮ್ಮದೇ ಭಾಷೆ, ಸಂಸ್ಕೃತಿ, ಪರಂಪರೆ ಮತ್ತು ಶತಮಾನಗಳ ನೆಲೆಯುಳ್ಳ ಜನಾಂಗವಾಗಿದ್ದರೂ, ಅವರಿಗೆ ಸ್ವಂತ ರಾಷ್ಟ್ರ ದೊರಕಲಿಲ್ಲ. ಇತಿಹಾಸದ ತಿರುವುಗಳಲ್ಲಿ ನೀಡಿದ ಭರವಸೆಗಳು ಮುರಿಯಲ್ಪಟ್ಟವು. ಹೀಗಾಗಿ ಮಧ್ಯಪ್ರಾಚ್ಯವು ಸಹಜ ರಾಷ್ಟ್ರ ನಿರ್ಮಾಣದ ಫಲವಲ್ಲ, ಬದಲಿಗೆ ಅದು ಹೊರಗಿನ ಹಸ್ತಕ್ಷೇಪದಿಂದ ಜನಿಸಿದ ಶಿಶು. ಇದೇ ಕಾರಣದಿಂದ ಈ ಪ್ರದೇಶವು ಶತಮಾನದಿಂದಲೂ ಯುದ್ಧಭೂಮಿಯಂತೆ ಕಾಣುತ್ತಿದೆ.

ಯುರೋಪಿನ ಸ್ವಾರ್ಥ

ಯುರೋಪಿನ ವಸಾಹತು ನೀತಿಯ ಕೇಂದ್ರಬಿಂದು– 'ವಿಭಜಿಸಿ ಆಳುವುದು' ಅಥವಾ 'ಒಡೆದು ಆಳುವುದು'. ಒಗ್ಗಟ್ಟಿಲ್ಲದ ಸಮಾಜವನ್ನು ನಿಯಂತ್ರಿಸುವುದು ಸುಲಭ. ಯುರೋಪಿನ ಶಕ್ತಿಗಳಿಗೆ ಮಧ್ಯಪ್ರಾಚ್ಯವು ಕೇವಲ ಒಂದು ಪ್ರದೇಶವಲ್ಲ, ಅದು ತೈಲ ಸಂಪತ್ತು, ವ್ಯಾಪಾರ ಮಾರ್ಗಗಳು ಮತ್ತು ಜಾಗತಿಕ ಪ್ರಭಾವದ ಕೀಲಿಕೈ. ಬ್ರಿಟನ್ ಮತ್ತು ಫ್ರಾನ್ಸ್ ತಮ್ಮ ಆರ್ಥಿಕ ಲಾಭಕ್ಕಾಗಿ ಪ್ರಾಂತ್ಯಗಳನ್ನು ಹಂಚಿಕೊಂಡವು. ಮಧ್ಯಪ್ರಾಚ್ಯದ ಸಂಪತ್ತು, ತೈಲ– ಯುರೋಪಿನ ಕೈಗಾರಿಕಾ ರಾಷ್ಟ್ರಗಳಿಗೆ ಆರ್ಥಿಕ ಬಲ ನೀಡಿದವು. ಈ ಸಂಪತ್ತಿನ ನಿಯಂತ್ರಣ ಮತ್ತು ವ್ಯಾಪಾರ ಒಪ್ಪಂದಗಳು ಯುರೋಪಿನ ಆರ್ಥಿಕ ಸಮೃದ್ಧಿಗೆ ಕಾರಣವಾದರೆ, ಪ್ರಾದೇಶಿಕ ರಾಷ್ಟ್ರಗಳು ರಾಜಕೀಯ ಅಸ್ಥಿರತೆಯೊಂದಿಗೆ ಹೋರಾಡಬೇಕಾಯಿತು. ಬ್ರಿಟನ್ ಮತ್ತು ನಂತರ ಅಮೆರಿಕ ಪ್ರಾದೇಶಿಕ ಆಡಳಿತಗಳೊಂದಿಗೆ ರಕ್ಷಣಾ ಮತ್ತು ತೈಲ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ತಮ್ಮ ಪ್ರಭಾವವನ್ನು ಉಳಿಸಿಕೊಂಡವು.

ಭದ್ರತೆಗಾಗಿ ಶಸ್ತ್ರಾಸ್ತ್ರ ಮಾರಾಟ ಮತ್ತು ಸೇನಾ ಸಹಕಾರ ಮುಂದುವರಿಯಿತು. ಅಸ್ಥಿರತೆಯ ಭಯ ಹೆಚ್ಚಾದಷ್ಟೂ ಭದ್ರತಾ ಒಪ್ಪಂದಗಳ ಅವಲಂಬನೆ ಹೆಚ್ಚಾಯಿತು. ಇದರಿಂದ ರಾಜಕೀಯ ಅನಿಶ್ಚಿತತೆ ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ; ಬದಲಿಗೆ ನಿಯಂತ್ರಿತ ಅಸ್ಥಿರತೆಯ ಸ್ಥಿತಿ ಮುಂದುವರಿಯಿತು.

ಹೊರಗಿನ ಶಕ್ತಿಗಳಿಗೆ ಅವಕಾಶ

ಇತಿಹಾಸವು ಒಂದು ಕಠೋರ ಸತ್ಯವನ್ನು ಹೇಳುತ್ತದೆ, ಸ್ಥಳೀಯ ನಾಯಕರಲ್ಲಿ ಏಕತೆ ಇಲ್ಲದಿದ್ದರೆ, ಹೊರಗಿನ ಶಕ್ತಿಗಳು ಅದನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತವೆ. ಮಧ್ಯಪ್ರಾಚ್ಯದಲ್ಲಿ ಹಲವಾರು ವರ್ಷಗಳ ಸಂಘರ್ಷಕ್ಕೆ ಇದೇ ಮೂಲ. ಅರಬ್ ರಾಷ್ಟ್ರಗಳು ಒಂದೇ ಧ್ವನಿಯಲ್ಲಿ ಮಾತಾಡಲಿಲ್ಲ. ಶಿಯಾ ಸುನ್ನಿ ಪ್ರತ್ಯೇಕತೆ, ಪ್ರಾದೇಶಿಕ ಸ್ಪರ್ಧೆಗಳು, ಸ್ವಾರ್ಥ ರಾಜಕಾರಣ, ವೈಯಕ್ತಿಕ ಅಧಿಕಾರದ ಹಂಬಲ– ಇವೆಲ್ಲವೂ ಒಟ್ಟಾಗಿ ಬಲವಾದ ಏಕತೆಯನ್ನು ತಡೆಯಿತು. ಇದರ ಫಲವಾಗಿ, ಹೊರಗಿನ ಶಕ್ತಿಗಳು ಒಂದು ಪಕ್ಷಕ್ಕೆ ಬೆಂಬಲ ನೀಡಿ ಮತ್ತೊಂದು ಪಕ್ಷವನ್ನು ದುರ್ಬಲಗೊಳಿಸುವ ರಾಜಕಾರಣ ನಡೆಸಲು ಸಾಧ್ಯವಾಯಿತು. ಸಿರಿಯಾ ಗೃಹಯುದ್ಧದಲ್ಲಿ ವಿವಿಧ ವಿದೇಶಿ ಹಸ್ತಕ್ಷೇಪಗಳು, ಇರಾಕ್‌ನ ರಾಜಕೀಯ ಅಸ್ಥಿರತೆ, ಲೆಬನಾನ್‌ನ ಆರ್ಥಿಕ–ರಾಜಕೀಯ ಸಂಕಷ್ಟ– ಇವೆಲ್ಲವೂ ಸ್ಥಳೀಯ ಏಕತೆಯ ಕೊರತೆಯನ್ನು ಬಲವಾಗಿ ತೋರಿಸುತ್ತವೆ. ಏಕತೆ ಇಲ್ಲದ ಜಾಗದಲ್ಲಿ ಯಾರೋ ಒಬ್ಬರು ಲಾಭ ಪಡೆಯುತ್ತಾರೆ, ಮಧ್ಯಪ್ರಾಚ್ಯದ ಇತಿಹಾಸವು ಈ ಮಾತಿಗೆ ಸಾಕ್ಷಿ.

ಆದರೆ ಇಂದಿನ ವಾಸ್ತವಿಕತೆ ಹೆಚ್ಚು ಸಂಕೀರ್ಣವಾಗಿದೆ. ಈ ರಾಷ್ಟ್ರಗಳು ತಮ್ಮ ಸ್ವಂತ ವಿದೇಶಾಂಗ ಮತ್ತು ಆರ್ಥಿಕ ನೀತಿಗಳನ್ನು ರೂಪಿಸುತ್ತಿವೆಯಾದರೂ 'ಹೊರಗಿನ ಪ್ರಭಾವ' ಇಂದೂ ಇದೆ. ಸ್ವಾತಂತ್ರ್ಯದ ನಂತರವೂ ಅನೇಕ ಮಧ್ಯಪ್ರಾಚ್ಯ ರಾಷ್ಟ್ರಗಳು ಭದ್ರತೆಗಾಗಿ ಪಶ್ಚಿಮ ರಾಷ್ಟ್ರಗಳ ಮೇಲೆ ಅವಲಂಬಿತವಾಗಿವೆ. ರಾಜವಂಶಗಳು ಮತ್ತು ಆಡಳಿತಗಳು ಒಳಗಿನ ಹಾಗೂ ಹೊರಗಿನ ಅಪಾಯಗಳಿಂದ ಭಯಪಡುವ ಸಂದರ್ಭಗಳಲ್ಲಿ, ಯುರೋಪ್ ಮತ್ತು ಅಮೆರಿಕ ರಕ್ಷಣಾ ಒಪ್ಪಂದಗಳು ಹಾಗೂ ಶಸ್ತ್ರಾಸ್ತ್ರ ಮಾರಾಟದ ಮೂಲಕ ಭದ್ರತೆ ಒದಗಿಸುತ್ತವೆ.

ಶಾಂತಿ ಯಾಕೆ ಸಿಗುತ್ತಿಲ್ಲ?

ಇದಕ್ಕಿರುವ ಕಾರಣಗಳೆಂದರೆ:

1) ಕೃತಕ ಗಡಿಗಳು ಮತ್ತು ಗುರುತು ಸಂಘರ್ಷಗಳು
2) ಬಾಹ್ಯಶಕ್ತಿಗಳ ನಿರಂತರ ಹಸ್ತಕ್ಷೇಪ
3) ಸಂಪತ್ತಿನ ಮೇಲಿನ ಜಾಗತಿಕ ಸ್ಪರ್ಧೆ
4) ಸ್ಥಳೀಯ ನಾಯಕರಲ್ಲಿ ಏಕತೆಯ ಕೊರತೆ.

ಇವೆಲ್ಲವೂ ಸೇರಿ ಮಧ್ಯಪ್ರಾಚ್ಯವನ್ನು ಶಾಂತಿಯ ತೀರದಿಂದ ದೂರ ಇಟ್ಟಿವೆ. ನಕ್ಷೆ ಬದಲಾಯಿಸುವುದು ಸುಲಭ, ಆದರೆ ಮನಸ್ಸುಗಳ ಏಕತೆಯನ್ನು ನಿರ್ಮಿಸುವುದು ಕಷ್ಟ. ಸೈಕ್ಸ್–ಪಿಕೊಟ್ ಒಪ್ಪಂದವು ಒಂದು ಶತಮಾನದ ಹಿಂದಿನ ಘಟನೆ. ಆದರೆ ಅದರ ಪರಿಣಾಮ ಇಂದಿಗೂ ಜೀವಂತವಾಗಿದೆ. ಇತಿಹಾಸವನ್ನು ಬದಲಿಸಲು ಸಾಧ್ಯವಿಲ್ಲ, 1916ರಲ್ಲಿ ಎಳೆದ ರೇಖೆಗಳು ಇಂದಿಗೂ ಗಾಯಗಳಾಗಿ ಉಳಿದಿವೆ. ಸಿರಿಯಾ ಗೃಹಯುದ್ಧ, ಇರಾಕ್‌ನ ರಾಜಕೀಯ ಅಸ್ಥಿರತೆ, ಇಸ್ರೇಲ್–ಪ್ಯಾಲೆಸ್ತೀನ್ ಸಂಘರ್ಷ ಇವುಗಳೆಲ್ಲವೂ ಶತಮಾನದ ಹಿಂದಿನ ಆ ಗಡಿರೇಖೆಗಳ ದೀರ್ಘ ನೆರಳನ್ನು ಹೊತ್ತಿವೆ. ಶತಮಾನ ಕಳೆದರೂ ಸಂಘರ್ಷ ಮುಂದುವರಿಯುತ್ತಿರುವುದು, ಇತಿಹಾಸದ ತಪ್ಪು ವಿನ್ಯಾಸಗಳು ದೀರ್ಘಕಾಲದ ಪರಿಣಾಮ ಉಂಟುಮಾಡಬಹುದು ಎಂಬುದಕ್ಕೆ ಸ್ಪಷ್ಟಸಾಕ್ಷಿ. ಮಧ್ಯಪ್ರಾಚ್ಯದ ಅನಿಶ್ಚಿತತೆ ಶತಮಾನಗಳ ಜಟಿಲ ಇತಿಹಾಸದ ಫಲ. ಬ್ರಿಟನ್ ತನ್ನ ಜಾಗತಿಕ ಹಿತಾಸಕ್ತಿಗಳನ್ನು ರಕ್ಷಿಸಲು ತೆಗೆದುಕೊಂಡ ನಿರ್ಧಾರಗಳು, ಕೃತಕ ಗಡಿಗಳು ಮತ್ತು ದ್ವಂದ್ವ ಭರವಸೆಗಳು ದೀರ್ಘಕಾಲದ ಪರಿಣಾಮ ಬೀರಿವೆ.

(ಲೇಖಕಿ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗಿ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬದುಕಲು ಪ್ರೇರಣೆ

ಹರೀಶ್ ಕೇರ ಅವರ 'ಕಾಡುದಾರಿ' ಅಂಕಣದಲ್ಲಿ (ಮಾ.5) ಜಲಾಲುದ್ದೀನ್ ರೂಮಿಯವರ ದಿವ್ಯ ಚಿಂತನೆಗಳನ್ನು ಅಕ್ಷರ ರೂಪಕ್ಕಿಳಿಸಿದ ರೀತಿ ಅದ್ಭುತ. ಈ ಬರಹ ಕೇವಲ ಓದಲಿಕ್ಕಲ್ಲ, ಅಂತರಾಳದಲ್ಲಿ ಇಳಿಸಿಕೊಂಡು ಬದುಕಲು ಪ್ರೇರಣೆಯಂತಿದೆ. ನಮ್ಮೊಳಗಿನ ಮೌನವನ್ನು ಆಲಿಸುವುದನ್ನು ಈ ಲೇಖನ ಕಲಿಸುತ್ತದೆ. ಸಾಮಾನ್ಯವಾಗಿ ನಾವು ನಮ್ಮ ಜೀವನದ ಸಂಕಷ್ಟಗಳನ್ನು ಕಂಡು ಮರುಗುತ್ತೇವೆ; ಆದರೆ 'ಗಾಯಗಳೇ ಬೆಳಕು ಪ್ರವೇಶಿಸುವ ದ್ವಾರಗಳು' ಎಂಬ ರೂಮಿಯವರ ಮಾರ್ಮಿಕ ಮಾತುಗಳು ಕಷ್ಟಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ದಾರಿಯನ್ನು ತೋರಿಸಿವೆ. 'ನಾನು ಕ್ರೈಸ್ತನಲ್ಲ, ಯಹೂದಿಯಲ್ಲ, ಮುಸ್ಲಿಮನಲ್ಲ...' ಎಂಬ ಸಾಲುಗಳು ಇಂದಿನ ಕಾಲಘಟ್ಟಕ್ಕೆ ಸಂಜೀವಿನಿಯಿದ್ದಂತೆ. ಯಾವುದೇ ಗಡಿಗಳಿಲ್ಲದೆ ಪ್ರೀತಿಯನ್ನೇ ಉಸಿರಾಡುವ ಮನುಷ್ಯನಾಗಿ ಬದುಕುವುದು ಹೇಗೆ ಎಂಬ ಆತ್ಮಶೋಧನೆಗೆ ಈ ಲೇಖನ ದಾರಿ ಮಾಡಿಕೊಟ್ಟಿದೆ. ದೈನಂದಿನ ಜಂಜಾಟಗಳ ನಡುವೆ ಕಳೆದುಹೋಗಿರುವ 'ನಮ್ಮನ್ನೇ' ನಮಗೆ ಹುಡುಕಿಕೊಡುವ ದಿವ್ಯ ದಾರಿದೀಪದಂತಿರುವ ಈ ಬರಹಕ್ಕಾಗಿ ಹಾಗೂ ಸುಂದರವಾಗಿರುವ ರೂಮಿಯವರ ತತ್ವಜ್ಞಾನವನ್ನು ಇಷ್ಟು ಆಪ್ತವಾಗಿ ಕಟ್ಟಿಕೊಟ್ಟದ್ದಕ್ಕೆ ಪತ್ರಿಕೆಗೆ ಮತ್ತು ಹರೀಶ್ ಕೇರ ಅವರಿಗೆ ಅಭಿನಂದನೆಗಳು.

– ಹೊಸ್ಮನೆ ಮುತ್ತು, ಬೆಂಗಳೂರು

ಹೀಗೊಂದು ಸ್ಫೂರ್ತಿ

ಡಾ. ಆನಂದಿಬಾಯಿ ಜೋಶಿ ಎಂಬ ಭಾರತದ ಮೊದಲ ಮಹಿಳಾ ವೈದ್ಯಕೀಯ ಪದವೀಧರೆಯ ಕುರಿತು 'ಒಂದೊಳ್ಳೆ ಮಾತು' ಅಂಕಣದಲ್ಲಿ ರೂಪಾ ಗುರುರಾಜ್ ಅವರು ಅಪರೂಪದ ಮಾಹಿತಿಯನ್ನು ನೀಡಿದ್ದಾರೆ. ಆನಂದಿಬಾಯಿ ಅವರು ಕೇವಲ 21 ವಯಸ್ಸಿಗೇ ತಮ್ಮ ಭುವಿಯ ಪ್ರಯಾಣವನ್ನು ಮುಗಿಸಿ (1865–1887), ಅಷ್ಟರಲ್ಲೇ ಅಸಂಖ್ಯ ದೈಹಿಕ, ಕೌಟುಂಬಿಕ ಕಷ್ಟಗಳ ಮಧ್ಯೆ ನಲುಗಿ, ಸಣ್ಣ ವಯಸ್ಸಿನಲ್ಲೇ ಮದುವೆ–ಮಗು ಅಂತ ಗೋಳಾಡಿ, ಹೆತ್ತ ಗಂಡುಮಗುವನ್ನು ಕಳೆದುಕೊಂಡರೂ ವೈದ್ಯಕೀಯ ಶಿಕ್ಷಣವನ್ನು ಪಡೆಯುವ ಉತ್ಕಟ ಹಂಬಲದಿಂದ ವಿದೇಶಕ್ಕೆ ಹೋಗಿ ಅಭ್ಯಸಿಸಿ, ಮುಂದೆ ಭಾರತದ ಮೊದಲ ವೈದ್ಯೆ ಎಂಬ ಉಪಾಧಿ ಪಡೆದದ್ದು ನಿಜಕ್ಕೂ ಹೆಮ್ಮೆ ಹಾಗೂ ಅಭಿಮಾನದ ಸಂಗತಿ. ಆನಂದಿಬಾಯಿ ಜೋಶಿ ಅವರ ಈ ಸಕಲ ಸಾಧನೆಯ ಹಿಂದೆ ಅವರ ಪತಿ ಗೋಪಾಲರಾವ್ ಅವರ ಸಂಪೂರ್ಣ ಸಹಕಾರ ಇರುವುದು ಕೂಡ ಅಷ್ಟೇ ಸ್ತುತ್ಯರ್ಹ. ನಮ್ಮ ಪ್ರತಿನಿತ್ಯದ ಸಣ್ಣ ಸಣ್ಣ ಸಂಗತಿಗಳನ್ನೇ ಅತಿ ದೊಡ್ಡದಾಗಿ ಬಿಂಬಿಸಿಕೊಂಡು, 'ಇಡೀ ಬದುಕೇ ಒಂದು ಶಾಪ' ಅನ್ನೋ ಭಾವನೆಯನ್ನು ಹೊಂದಿರುವವರಿಗೆ ಡಾ. ಆನಂದಿಬಾಯಿ ಜೋಶಿ ಅವರು ನಿಜಕ್ಕೂ ಒಬ್ಬ ಮಾದರಿ ವ್ಯಕ್ತಿ. ಕಷ್ಟಗಳ ಸುರಿಮಳೆಯೇ ಆಗುತ್ತಿದ್ದರೂ, ದೇವರು ನೀಡಿದ ಅಲ್ಪಾಯುಷ್ಯದಲ್ಲೇ ಸಾಧನೆ ಮಾಡಿ, ಉಳಿದವರ ಬದುಕಿಗೆ ಆನಂದ ತುಂಬಿ ನಿರ್ಗಮಿಸಿದ ಅವರು ಪ್ರಾತಃಸ್ಮರಣೀಯರು. ಅತ್ಯಂತ ಯೋಗ್ಯ ವ್ಯಕ್ತಿತ್ವದ ಪರಿಚಯ, ದರ್ಶನ ಮಾಡಿಸಿದ ಅಂಕಣಕಾರ್ತಿಗೆ ಮತ್ತು ಅದನ್ನು ಪ್ರಕಟಿಸಿದ ಪತ್ರಿಕೆಗೆ ಧನ್ಯವಾದಗಳು.

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಏಕಿಂಥ ಇಬ್ಬಂದಿತನ?

ಮಧ್ಯಪ್ರಾಚ್ಯ ವಲಯದಲ್ಲಿ ನಡೆಯುತ್ತಿರುವ ಯುದ್ಧದ ಬಗ್ಗೆ ನಮ್ಮ ರಾಜ್ಯದ ಹಾಗೂ ಕೇಂದ್ರದ ಕೆಲವು ನಾಯಕರ ಹೇಳಿಕೆಗಳು ಅಸಂಬದ್ಧ ಹಾಗೂ ಏಕಮುಖವಾಗಿವೆ. ಹಮಾಸ್ ಉಗ್ರರು ಇಸ್ರೇಲ್ ಮೇಲೆ ದಾಳಿಮಾಡಿ ನೂರಾರು ಇಸ್ರೇಲಿಗರನ್ನು ಕೊಂದಾಗ ಮತ್ತು ಸೆರೆಯಾಳಾಗಿ ಹಿಡಿದಿಟ್ಟುಕೊಂಡಾಗ ತುಟಿಪಿಟಿಕ್ ಅನ್ನದ ಇದೇ ನಾಯಕರುಗಳು, ಈಗ ಇರಾನ್ ನಾಯಕ ಸತ್ತಾಗ ಎಲ್ಲಿಲ್ಲದ ಕಾಳಜಿಯನ್ನು ತೋರಿಸುತ್ತಿದ್ದಾರೆ. ಪಾಕಿಸ್ತಾನ–ಪ್ರೇರಿತ ಪಾಪಿಗಳು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರನ್ನು ಕೊಂದಾಗ ಇವರುಗಳ ಬಾಯಿ ಬಂದಾಗಿತ್ತು. ಇರಾನಿನ ನಾಯಕ ಸತ್ತಿದ್ದಕ್ಕೆ ಅಲ್ಲಿಯ ನಾಗರಿಕರೇ ಸಂಭ್ರಮ ಪಡುತ್ತಿರುವಾಗ ನಮ್ಮ ಕೆಲ ನಾಯಕರು ವಿಷಾದವನ್ನು ವ್ಯಕ್ತಪಡಿಸುತ್ತಿರುವುದು ಅವರ ಇಬ್ಬಂದಿತನದ ಅನಾವರಣವಲ್ಲದೆ ಮತ್ತೇನು? ಈ ನಾಯಕರ ಹೇಳಿಕೆಗಳು ಅವರ ಪಕ್ಷಕ್ಕೂ, ನಮ್ಮ ದೇಶಕ್ಕೂ ಒಳ್ಳೆಯದಲ್ಲ. ಇಂಥ ನಾಯಕರು ಇನ್ನಾದರೂ ತಮ್ಮ ವರ್ತನೆಯನ್ನು ಬದಲಿಸಿಕೊಳ್ಳಲಿ.

– ದಾವಣಗೆರೆ ಮುಕುಂದ, ಬೆಂಗಳೂರು

ನಮ್ಮ ಸಿದ್ಧತೆ–ಬದ್ಧತೆ

ಅಮೆರಿಕವು ತನ್ನ ಲಾಭಕ್ಕಾಗಿ ಅನ್ಯದೇಶಗಳ ಮಧ್ಯೆ ಘರ್ಷಣೆಗಳನ್ನು ಹುಟ್ಟುಹಾಕುವುದು, ತನ್ನ ಮಾತು ಕೇಳದ ದೇಶಗಳ ಮೇಲೆ ದಾಳಿ ನಡೆಸುವುದು, ತನ್ನ ಭದ್ರತೆಯ ಕಾರಣ ಒಡ್ಡಿ ಇಸ್ರೇಲ್ ನೆರೆಹೊರೆಯ ರಾಷ್ಟ್ರಗಳ ಮೇಲೆ ಭೀಕರವಾಗಿ ದಾಳಿಮಾಡುವುದು ಇವೆಲ್ಲ ಹೊಸತೇನಲ್ಲ. ಪ್ರಸ್ತುತ ಘೋರ ಯುದ್ಧವಾಗಿ ಪರಿಣಮಿಸಿರುವ ಈ ನಡೆಯು ಈಗ ಭಾರತದ ಕಾಲಬುಡಕ್ಕೆ, ಅಂದರೆ ಹಿಂದೂ ಮಹಾಸಾಗರದವರೆಗೂ ವಿಸ್ತರಿಸಿದೆ. ಭಾರತವೀಗ ತನ್ನ ಭೌತಿಕ ಮತ್ತು ಆರ್ಥಿಕ ಭದ್ರತೆಗಾಗಿ ಗಟ್ಟಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆಳುವ ಪಕ್ಷವು ಈ ನಿಟ್ಟಿನಲ್ಲಿ ತಜ್ಞರೊಡನೆ ಸಮಾಲೋಚಿಸಿ ಮುಂದುವರಿಯಬೇಕು. ವಿರೋಧ ಪಕ್ಷಗಳ ಮೇಲೆ ವಿವಿಧ ಪ್ರಹಾರಗಳನ್ನು ನಿಲ್ಲಿಸಿ ವಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವಿರೋಧ ಪಕ್ಷಗಳು ಆಳುವ ಪಕ್ಷದ ಟೀಕೆಯನ್ನು ಕೈಬಿಟ್ಟು ಈ ದಿಸೆಯಲ್ಲಿ ಸಹಕರಿಸಬೇಕು. ಬರಲಿರುವ ಚುನಾವಣೆಗಳು ಈ ನಡೆಗಳಿಗೆ ಅಡ್ಡಿಯಾಗಬಾರದು.ಅಮೆರಿಕವು ದಾಳಿಗೆ ಭಾರತದ ನೆಲೆಗಳನ್ನು ಬಳಸಿಕೊಳ್ಳುತ್ತಿದೆ ಎಂಬ ಸುಳ್ಳುಸುದ್ದಿಯ ಕುಚೋದ್ಯವೂ ನಡೆದಿರುವಾಗ ಜನರು ಪ್ರಚೋದಿತರಾಗದೆ ವಿವೇಕ–ವಿಮರ್ಶೆ–ತಾಳ್ಮೆಯನ್ನು ಹೊಂದಿರಬೇಕು.

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಒಳ್ಳೆಯ ಬರಹ

ಡಾ.ಮೈತ್ರಿ ಭಟ್ ಅವರು 'ಮಾತಿನ ಮಂಟಪ' ಅಂಕಣವನ್ನು (ಮಾ.5) ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬ ಮಾತು ನನ್ನನ್ನು ಫ್ಲ್ಯಾಷ್‌ಬ್ಯಾಕ್‌ಗೆ ಕರೆದೊಯ್ದಿತು. ನನ್ನ 3 ವರ್ಷದ ಮಗಳೊಂದಿಗೆ ತವರೂರು ಮೈಸೂರಿಗೆ ಪ್ಯಾಸೆಂಜರ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದೆ. ಪ್ರತಿ ಊರಲ್ಲಿ ರೈಲು ನಿಂತಾಗಲೂ ಚುರುಮುರಿ, ಸೀಬೆಕಾಯಿ, ಹುರಿದ ಕಡ್ಲೆಬೀಜ ಹೀಗೆ ಒಂದಲ್ಲಾ ಒಂದು ತಿನಿಸು ಮಾರಲು ಬರುತ್ತಿತ್ತು, ಅವೆಲ್ಲವನ್ನೂ ಮಗಳಿಗೆ ಕೊಡಿಸಿಯೂ ಆಗಿತ್ತು. ಚನ್ನಪಟ್ಟಣ ದಾಟಿದ ನಂತರ, ಮದ್ದೂರು ವಡೆ ಮಾರಲು ಬಂದ ಹುಡುಗನ ವೇಷಭೂಷಣ ನೋಡಿ, ತಿನಿಸನ್ನು ಕೊಡಿಸಲು ನನಗೆ ಮನಸ್ಸಾಗಲಿಲ್ಲ. ಆದರೆ 'ಬೇಕೇ ಬೇಕು' ಎಂದು ಹಠ ಹಿಡಿದ ಮಗಳಿಗೆ, ''ಅದನ್ನು ಕಳಪೆ ಎಣ್ಣೆಯಲ್ಲಿ ಕರಿದಿರುತ್ತಾರೆ, ತಿಂದರೆ ಜ್ವರ ಬರಬಹುದು, ಬೇಡ'' ಎಂದೆ. ಪಕ್ಕದ ಬೋಗಿಗೆ ಹೋಗಿ ಮರಳಿದ ಆ ಹುಡುಗನನ್ನು ನನ್ನ ಮಗಳು, ''ಇದನ್ನು ಕಳಪೆ ಎಣ್ಣೆಯಲ್ಲಿ ಕರಿದಿದ್ದಾ?'' ಎಂದು ಕೇಳಿಯೇಬಿಟ್ಟಳು. ಆತ ಏನೂ ಉತ್ತರಿಸದೆ ಮುಂದೆ ಹೋದ. ಆ ಕ್ಷಣಕ್ಕೆ ನನ್ನ ಮಗಳ ಮುಗ್ಧತೆಗೆ ನಗು ಬಂದರೂ ನಂತರದಲ್ಲಿ, 'ಅವಳ ಬಳಿ ನಾನು ಹಾಗೆ ಹೇಳಬಾರದಿತ್ತು' ಅಂತ ನನ್ನನ್ನೇ ಬೈದುಕೊಂಡೆ. ಮದ್ದೂರು ವಡೆ ಮಾರಲು ಬಂದಿದ್ದ ಆ ಹುಡುಗನ ಮನಸ್ಸಿಗೆ ಆ ಕ್ಷಣದಲ್ಲಿ ಎಷ್ಟು ನೋವಾಗಿರಬಹುದು ಎಂಬುದನ್ನು ಕಲ್ಪಿಸಿಕೊಂಡರೆ ಇಂದಿಗೂ ಖೇದವಾಗುತ್ತದೆ.

– ಶೈಲಜಾ ವಾಸುಕಿ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:50

ಸಮಾಚಾರ ಸಣ್ಣದಲ್ಲ

ಡೂಮ್ಸ್ ಡೇ ಕ್ಷಿಪಣಿ ಪರೀಕ್ಷೆ ನಡೆಸಿದ ಅಮೆರಿಕ



ವಾಷಿಂಗ್ಟನ್: ಇರಾನ್ ಯುದ್ಧದಲ್ಲಿ ಅಮೆರಿಕದ ಶಸ್ತ್ರಾಸ್ತ್ರಗಳು, ಮುಖ್ಯವಾಗಿ ಕ್ಷಿಪಣಿಗಳ ಸಂಗ್ರಹ ಖಾಲಿಯಾಗುತ್ತಾ ಬರುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದರ ನಡುವೆಯೇ ಅಮೆರಿಕ ತನ್ನ ಅತ್ಯಂತ ಶಕ್ತಿಶಾಲಿ ಪರಮಾಣು ಕ್ಷಿಪಣಿ 'ಡೂಮ್ಸ್ ಡೇ'ಯನ್ನು ಮಂಗಳವಾರ ರಾತ್ರಿ 11 ಗಂಟೆಯಲ್ಲಿ ಪರೀಕೆಗೊಳಪಡಿಸಲಾಗಿದೆ. ಪೆಸಿಫಿಕ್ ಮಹಾಸಾಗರದ ಮೇಲೆ ಸಾವಿರಾರು ಕಿ.ಮೀ ಪ್ರಯಾಣಿಸಿ ಅಂತಿಮವಾಗಿ ಮಾರ್ಷಲ್ ದ್ವೀಪಗಳ ಬಳಿ ತನ್ನ ಉದ್ದೇಶಿತ ಗುರಿಯನ್ನು ಯಶಸ್ವಿಯಾಗಿ ತಲುಪಿದೆ ಎಂದು ಅಮೆರಿಕದ ಬಾಹ್ಯಾಕಾಶ ಪಡೆ ತಿಳಿಸಿದೆ. ಕ್ಯಾಲಿಫೋರ್ನಿಯ ಕರಾವಳಿಯಲ್ಲಿ 'ಮಿನಿಟ್ ಮ್ಯಾನ್-3' ಖಂಡಾಂತರ ಕ್ಷಿಪಣಿಯ ಪರೀಕ್ಷೆ ನಡೆಸಲಾಗಿದೆ. ಭೂಮಿಯ ಯಾವುದೇ ಭಾಗಕ್ಕಾದರೂ ತೆರಳಿ ಗುರಿಯತ್ತ ದಾಳಿ ನಡೆಸಬಲ್ಲ ಅಪಾರ ಸಾಮರ್ಥ್ಯದ ಈ ಶಸ್ತ್ರಾಸ್ತ್ರವನ್ನು 'ಡೂಮ್ಸ್ ಡೇ' ಕ್ಷಿಪಣಿ ಎಂದೇ ಕರೆಯಲಾಗುತ್ತದೆ. ಏಕೆಂದರೆ ಇದು ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ದು ಸಾವಿರಾರು ಕಿ.ಮೀ.ವರೆಗೂ ಸಂಚರಿಸಿ ಗುರಿಯತ್ತ ನಿಖರ ದಾಳಿ ಮಾಡಬಲ್ಲದಾಗಿದೆ.

ಡೂಮ್ಸ್ ಡೇ ವೈಶಿಷ್ಯ: ಕ್ಷಿಪಣಿ 18.3 ಮೀ. ಉದ್ದವಿದ್ದು, 5.5 ಅಡಿ ವ್ಯಾಸವಿದೆ. 79,432 ಪೌಂಡ್ ತೂಕವಿದೆ. 9,656 ಕಿ.ಮೀ.ಗಳಷ್ಟು ದೂರದವರೆಗೂ ಗಂಟೆಗೆ 24,000 ಕಿಮೀ ವೇಗದಲ್ಲಿ ಸಾಗಬಲ್ಲದು. 1,120 ಕಿ.ಮೀ.ಗಳಷ್ಟು ಎತ್ತರದವರೆಗೂ ಚಿಮ್ಮಬಲ್ಲದು.

ಭಯೋತ್ಪಾದನೆ ವಿರುದ್ಧ ಹೋರಾಟ: ಭಾರತ ಕರೆ

ನ್ಯೂಯಾರ್ಕ್: ಅಂತಾರಾಷ್ಟ್ರೀಯ ಮಟ್ಟದ ಭಯೋತ್ಪಾದಕ ಸಂಘಟನೆಗಳಾದ ಅಲ್‌ಖೈದಾ ಮತ್ತು ಐಎಸ್‌ಐಎಸ್(ಐಸಿಸ್) ಹಾಗೂ ಈ ಉಗ್ರ ಸಂಘಟನೆಗಳ ಜತೆಗೆ ಕೈಜೋಡಿಸಿರುವ ಎಲ್ಲಾ ಭಯೋತ್ಪಾದಕ ಸಂಘಟನೆಗಳ ವಿರುದ್ಧವೂ ಜಾಗತಿಕ ಸಮೂಹವು ಒಟ್ಟಾಗಿ ಹೋರಾಟ ನಡೆಸಬೇಕಿದೆ ಎಂದು ಭಾರತ ವಿಶ್ವಸಂಸ್ಥೆಯಲ್ಲಿ ಬುಧವಾರ ಕರೆ ನೀಡಿದೆ. ಈ ಉಗ್ರ ಸಂಘಟನೆಗಳು ಜಾಗತಿಕ ಶಾಂತಿ-ಭದ್ರತೆಗೆ ಅಪಾಯಕಾರಿಯಾಗಿವೆ. ಭಯೋತ್ಪಾದನೆಗೆ ಯಾವುದೇ ದೇಶ ಎಂಬ ಮಿತಿಯಿಲ್ಲ, ಅದಕ್ಕೆ ಗಡಿಗಳೂ ಇಲ್ಲ. ವಿಶ್ವವನ್ನು ಅಶಾಂತಿ- ಅಭದ್ರತೆಯಲ್ಲಿ ಕೆಡುವುವುದೇ ಅದರ ಏಕಮಾತ್ರ ಉದ್ದೇಶವಾಗಿದೆ. ಹಾಗಾಗಿ ವಿಶ್ವದ ಎಲ್ಲಾ ದೇಶಗಳೂ ಒಗ್ಗೂಡಿ ಭಯೋತ್ಪಾದನೆ ಸಂಘಟನೆಗಳನ್ನು ನಾಶಪಡಿಸಬೇಕಿದೆ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ, ಮೊದಲ ಕಾರ್ಯದರ್ಶಿ ರಘುಪುರಿ ಹೇಳಿದ್ದಾರೆ. ಇದೇ ವೇಳೆ ರಘು ಅವರು, 2025ರ ಏ.22ರಂದು ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ 25 ಪ್ರವಾಸಿಗರನ್ನು ಪಾಕ್ ಮೂಲದ ಮೂವರು ಭಯೋತ್ಪಾದಕರು ಧರ್ಮ ಕೇಳಿ ಗುಂಡಿಕ್ಕಿ ಕೊಂದ ಘಟನೆಯನ್ನು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಗೆ ನೆನಪಿಸಿದ್ದಾರೆ.

ಯುದ್ಧದ 6ನೇ ದಿನ ಇರಾನ್‌ನ ಮತ್ತಷ್ಟು ನೌಕೆಗಳ ಮೇಲೆ ಅಮೆರಿಕ ದಾಳಿ | ಇರಾನ್ ಮೇಲಿನ ಯುದ್ಧ ನಿಲುಗಡೆ ಪ್ರಸ್ತಾಪ-ಅಮೆರಿಕ ಸಂಸತ್ ತಿರಸ್ಕೃತ

ಇರಾನ್ ಮೇಲಿನ ಯುದ್ಧ ಸದ್ಯಕ್ಕೆ ನಿಲ್ಲಲ್ಲ: ಅಮೆರಿಕ

ವಾಷಿಂಗ್ಟನ್: ಅಣ್ವಸ್ತ್ರ ಬಲ ಪಡೆಯಲು ಮುಂದಾಗಿದ್ದ ಇರಾನ್ ವಿರುದ್ಧ ಮಿತ್ರರಾಷ್ಟ್ರ ಇಸ್ರೇಲ್‌ನ ಜತೆಗೂಡಿ ಫೆ.28ರಂದು ಆರಂಭಿಸಿದ ಯುದ್ಧವನ್ನು ಸದ್ಯಕ್ಕೆ ನಿಲ್ಲಿಸುವ ಇರಾದೆ ಇಲ್ಲ ಎಂದು ಅಮೆರಿಕ ಹೇಳಿಕೊಂಡಿದೆ. ಅಷ್ಟೇ ಅಲ್ಲದೇ, ಯುದ್ಧವನ್ನು ಇನ್ನಷ್ಟು ತೀವ್ರಗೊಳಿಸುವ ನಿರ್ಧಾರದೊಂದಿಗೆ ತನ್ನ ಶಸ್ತ್ರಾಗಾರದಲ್ಲಿನ ಅಪರೂಪದ-ಬಲು ಬಲಿಷ್ಠವಾದ ಅಸ್ತ್ರ 'ಡೂಮ್ಸ್‌ಡೇ' ಮಿಸೈಲನ್ನು ಹೊರತೆಗೆದು ಪರೀಕ್ಷೆಗೆ ಒಳಪಡಿಸಿದೆ. ಈ ಮಧ್ಯೆ, ಶ್ವೇತಭವನದ ಮಾಧ್ಯಮ ಪ್ರತಿನಿಧಿ ಕೆರೋಲಿನ್ ಸುದ್ದಿಗೋಷ್ಠಿ ನಡೆಸಿ, 'ಇರಾನ್‌ನ ವಾಯುಪ್ರದೇಶವನ್ನು ಸದ್ಯದಲ್ಲೇ ಅಮೆರಿಕದ ಹಿಡಿತಕ್ಕೆ ತೆಗೆದುಕೊಳ್ಳಲಿದೆ' ಎಂದು ಪ್ರಕಟಿಸಿದ್ದಾರೆ.



ಮಧ್ಯಪ್ರಾಚ್ಯದಲ್ಲಿ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ಯುದ್ಧ ಗುರುವಾರ 6ನೇ ದಿನಕ್ಕೆ ಕಾಲಿಟ್ಟಿದೆ. ಯುದ್ಧ ನಿಲುಗಡೆಗೆ ಅಮೆರಿಕದ ಸಂಸತ್ತಿನಲ್ಲಿ ಬುಧವಾರ ಸಲ್ಲಿಕೆಯಾದ ಪ್ರಸ್ತಾಪವನ್ನು ಸದನ ಬಹುಮತದಿಂದ ತಿರಸ್ಕರಿಸಿದೆ.

ಟ್ರಂಪ್‌ಗೆ ಬಲ: ಯುದ್ಧ ಮತ್ತು ಮುಂದಿನ ದಾಳಿ ನಿರ್ಣಯ ಕೈಗೊಳ್ಳುವ ಮುನ್ನ ಮೊದಲು ಸಂಸತ್ತಿನ ಅನುಮೋದನೆ ಕಡ್ಡಾಯಗೊಳಿಸಬೇಕು ಎಂದು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಪ್ರತಿಪಕ್ಷಗಳ ಸಂಸದರಲ್ಲಿ ಕೆಲವರು ಮಂಡಿಸಿದ್ದ ಈ ಪ್ರಸ್ತಾವನೆಗೆ 47-53 ಮತಗಳ ಅಂತರದಲ್ಲಿ ಸೋಲಾಯಿತು. ಅಣ್ವಸ್ತ್ರ ಹೊಂದಲು ಮುಂದಾಗಿದ್ದ ಇರಾನ್ ವಿರುದ್ಧ ಇಸ್ರೇಲ್ ಜತೆಗೂಡಿ ಅಮೆರಿಕ ನಡೆಸುತ್ತಿರುವ ಯುದ್ಧಕ್ಕೆ ಅಮೆರಿಕಾ ಸೆನೆಟ್ ಪೂರ್ಣ ಪ್ರಮಾಣದಲ್ಲಿ ಬೆಂಬಲಿಸಿದೆ. ಆ ಮೂಲಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಕ್ಕೆ ಮತ್ತಷ್ಟು ಬಲ ಸಿಕ್ಕಂತಾಗಿದೆ.

100 ಗಂಟೆ ವಿಡಿಯೊ: 'ಎಪಿಕ್ ಆಫ್ ಫ್ಯೂರಿ' ಹೆಸರಿಟ್ಟುಕೊಂಡು ಇರಾನ್ ವಿರುದ್ಧ ಅಮೆರಿಕ ಫೆ.28ರಂದು ಆರಂಭಿಸಿದ ಯುದ್ಧದ 100 ಗಂಟೆಗಳ ವಿಡಿಯೊ ದಾಖಲೆಯನ್ನು ಅಮೆರಿಕ ಕಮಾಂಡ್ ಸೆಂಟರ್(ಯುಎಸ್‌ಸಿಸಿ) ಜಾಲತಾ ಣದಲ್ಲಿ ಬಿಡುಗಡೆ ಮಾಡಿದೆ. ಅಯತೊಲ್ಲ ಅಲಿ ಖಮೇನಿ ಅವರು ಇರಾನ್ ಸರಕಾರದ ಪ್ರಮುಖರ ಜತೆ ಸಭೆ ಸೇರಿದ್ದ ಕಟ್ಟಡದ ಮೇಲಿನ ದಾಳಿ, ನೌಕಾಪಡೆಗಳ ಮೇಲೆ ಕ್ಷಿಪಣಿ ಉಡಾವಣೆ ಮೊದಲಾದ ಇರಾನ್‌ನ ಪ್ರಮುಖ ಸ್ಥಳಗಳು, ಸೇನಾ ನೆಲೆಗಳ ಮೇಲಿನ ದಾಳಿ ಸಂದರ್ಭದ ದೃಶ್ಯಗಳು ಈ ವಿಡಿಯೊದಲ್ಲಿವೆ.

ಈ ನಡುವೆ ಕುವೈತ್‌ನಲ್ಲಿನ ಅಮೆರಿಕ ಕಮಾಂಡ್ ಸೆಂಟರ್ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಹುತಾತ್ಮರಾದ ಅಮೆರಿಕದ 5-6ನೇ ಯೋಧರ ಹೆಸರು ಬಹಿರಂಗಗೊಳಿಸಲಾಗಿದೆ.

15 ಅಂಕ: ಇರಾನ್ ವಿರುದ್ಧ ಯುದ್ಧ ನಡೆಸುತ್ತಿರುವ ಅಮೆರಿಕದ ಸೇನಾಪಡೆ, ವಾಯುಪಡೆ, ನೌಕಾಪಡೆಗಳಿಗೆ 10ರ ಬದಲಾಗಿ 15 ಅಂಕ ಕೊಡುವೆ. ಯುದ್ಧದ ಈ 5 ದಿನಗಳಲ್ಲಿ ಇರಾನ್‌ನ ಶಕ್ತಿ ಕುಂದಿ ಹೋಗಿದೆ. ಅಮೆರಿಕದ ಬಲ ಹೆಚ್ಚಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ.

'ಐರಿಸ್ ದೇನಾ' ನೌಕೆಯ ನಾಶಕ್ಕೆ ಪ್ರತಿಕಾರ: ಇರಾನ್

ಇನ್ನೊಂದೆಡೆ ಇರಾನ್ ಕೂಡಾ ಅಮೆರಿಕ-ಇಸ್ರೇಲ್ ವಿರುದ್ಧ ಹಾಗೂ ಆ ದೇಶಗಳಿಗೆ ನೆರವಾಗುತ್ತಿರುವ ನೆರೆಹೊರೆ ದೇಶಗಳ ಮೇಲಿನ ದಾಳಿಯನ್ನು ಗುರುವಾರವೂ ಮುಂದುವರಿಸಿದೆ. ಭಾರತದ ನೌಕಾಪಡೆಯ ಅತಿಥಿಯಾಗಿ ತೆರಳಿದ್ದ, ಇರಾನ್‌ನ ಐಆರ್‌ಐಎಸ್ ದೇನಾ ಯುದ್ಧ ನೌಕೆಯನ್ನು ಟಾರ್ಪೆಡೊ ಹಾರಿಸಿ ಶ್ರೀಲಂಕಾ ಬಳಿ ಮುಳುಗಿಸಿದ, 87 ನೌಕಾದಳ ಸಿಬ್ಬಂದಿ ಸಾವಿಗೆ ಕಾರಣವಾದ ಅಮೆರಿಕದ ನೌಕಾಪಡೆ ವಿರುದ್ಧ ದಾಳಿ ಮಾಡಿ ಪ್ರತಿಕಾರ ತೀರಿಸಿಕೊಳ್ಳುವುದಾಗಿ ಇರಾನ್ ಗುಡುಗಿದೆ. ನಾರ್ಥ್ ಪರ್ಷಿಯನ್ ಕೊಲ್ಲಿಯಲ್ಲಿದ್ದ ಅಮೆರಿಕದ 2 ತೈಲ ನೌಕೆಗಳ ಮೇಲೆ ಕ್ಷಿಪಣಿಗಳಿಂದ ಇರಾನ್ ನೌಕಾಪಡೆ ಬಲವಾದ ಪ್ರಹಾರ ನಡೆಸಿದೆ. ಮುಬಾರಕ್ ಅಲ್-ಕಬೀರ್ ಪ್ರದೇಶದಲ್ಲಿ ಇರಾನ್ ದಾಳಿಯಿಂದ ದೊಡ್ಡ ಸ್ಫೋಟವಾಗಿದ್ದು, ಸುತ್ತಲಿದ್ದ ಸಣ್ಣ ನೌಕೆಗಳು ಸಮುದ್ರದಲ್ಲಿ ಮುಳುಗಿವೆ.

ಲಂಕಾದತ್ತ ಗುರುವಾರ ಆಗಮಿಸಿದ ಇರಾನ್‌ನ ನೌಕಾಪಡೆಯ ಹಡಗು.

ಇನ್ನೊಂದೆಡೆ ಇರಾನ್ ಸೇನೆ ಕುವೈತ್‌ನಲ್ಲಿರುವ ಅಮೆರಿಕದ ಸೇನಾನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದರಿಂದ 2 ದೊಡ್ಡ ತೈಲ ಟ್ಯಾಂಕರ್ ಸ್ಫೋಟಗೊಂಡಿವೆ. ಪರಿಣಾಮ ತೈಲ ಸೋರಿಕೆಯಾಗಿದೆ ಎಂದು ಬ್ರಿಟಿಷ್ ಕಡಲ ಭದ್ರತಾ ಸಂಸ್ಥೆ ಯುಕೆಎಂಟಿಒ ತಿಳಿಸಿದೆ.

ಭಾರತ ತಿರಸ್ಕಾರ: ಇರಾನ್ ಯುದ್ಧ ನೌಕೆ ಮೇಲೆ ಶ್ರೀಲಂಕಾ ಕಡಲಲ್ಲಿ ದಾಳಿ ನಡೆಸುವುದಕ್ಕೆ ಭಾರತದ ನೌಕಾನೆಲೆಯನ್ನು ಅಮೆರಿಕ ಬಳಸಿಕೊಂಡಿದೆ ಎಂಬ ಆರೋಪವನ್ನು ಭಾರತದ ವಿದೇಶಾಂಗ ಇಲಾಖೆ ಪೂರ್ಣವಾಗಿ ನಿರಾಕರಿಸಿದೆ. ಅದೆಲ್ಲವೂ ಊಹಾಪೋಹ ಎಂದು ಪ್ರತಿಕ್ರಿಯಿಸಿದೆ. ಈ ಮಧ್ಯೆ, ಇರಾನ್ ನೌಕಾಪಡೆ ಗುರುವಾರ 2ನೇ ಯುದ್ಧ ನೌಕೆಯನ್ನು ಶ್ರೀಲಂಕಾದತ್ತ ಕಳುಹಿಸಿಕೊಟ್ಟಿದ್ದು, ನೌಕೆಯ ಸಂಚಾರಕ್ಕೆ ಸುರಕ್ಷಿತ ಮಾರ್ಗ ಕಲ್ಪಿಸಿಕೊಡುವಂತೆ ಲಂಕಾ ನೌಕಾಪಡೆಗೆ ಮನವಿ ಮಾಡಿದೆ. 'ಐರಿಸ್ ದೇನಾ' ಯುದ್ಧನೌಕೆಯಲ್ಲಿದ್ದು, ಅಮೆರಿಕ ದಾಳಿಯಲ್ಲಿ ಹುತಾತ್ಮರಾದ ಯೋಧರ ಮೃತದೇಹಗಳನ್ನು ಸಂಗ್ರಹಿಸಲು ಮತ್ತು ಗಾಯಗೊಂಡು ಆಸ್ಪತ್ರೆ ಸೇರಿರುವ ನಾವಿಕರನ್ನು ವಾಪಸ್ ಇರಾನ್‌ಗೆ ಕರೆದೊಯ್ಯಲೆಂದೇ ಈ ನೌಕೆಯನ್ನು ಕಳುಹಿಸಿಕೊಟ್ಟಿರುವುದಾಗಿ ಇರಾನ್ ನೌಕಾಪಡೆ ಹೇಳಿದೆ.

ಅಜರ್‌ಬೈಜಾನ್‌ಗೂ ಇರಾನ್ ದಾಳಿ

ನಖ್ಚಿವಾನ್: ಇರಾನ್, ಯುದ್ಧ ಆರಂಭವಾಗಿ ದಿನಗಳು ಉರುಳಿದಂತೆ ನೆರೆಹೊರೆಯ ದೇಶಗಳ ಮೇಲೆ ಒಂದೊಂದಾಗಿ ದಾಳಿ ಮಾಡುವುದಕ್ಕೆ ಶುರು ಮಾಡುತ್ತಿದೆ. ಅಮೆರಿಕ-ಇಸ್ರೇಲ್ ದಾಳಿ ಮಾಡುವುದಕ್ಕೆ ನೆರವಾಗಿದ್ದಾರೆ ಎಂಬ ಕಾರಣಕ್ಕೆ ಸಿಟ್ಟಿಗೆದ್ದು ಇರಾನ್ ನೆರೆಹೊರೆಯ ದೇಶಗಳ ಮೇಲೆಲ್ಲಾ ದಾಳಿ ಮಾಡಲಾರಂಭಿಸಿದೆ. ಕಳೆದ 6 ದಿನಗಳಲ್ಲಿ 10ಕ್ಕೂ ಅಧಿಕ ದೇಶಗಳ ಮೇಲೆ ಪ್ರತಿಕಾರದ ರಣಕಹಳೆ ಮೊಳಗಿಸಿದೆ. 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್'(ಐಆರ್‌ಜಿಸಿ) ಗುರುವಾರ ಅಜರ್‌ಬೈಜಾನ್ ಮೇಲೆ ಡ್ರೋನ್‌ಗಳಿಂದ ದಾಳಿ ನಡೆಸಿದೆ. ಇರಾನ್‌ನ ಡ್ರೋನ್‌ಗಳು ಅಜರ್‌ಬೈಜಾನ್‌ನ ನಖ್ಚಿವಾನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಪ್ಪಳಿಸಿವೆ. ವಿಮಾನ ನಿಲ್ದಾಣದ ಟರ್ಮಿನಲ್ ಹಾನಿಗೊಂಡಿದೆ. ಅಲ್ಲಿದ್ದ ಸಿಬ್ಬಂದಿಗಳಲ್ಲಿ ಇಬ್ಬರು ಗಾಯಗೊಂಡಿದ್ದಾರೆ. ಈ ದಾಳಿಯನ್ನು ಅಜರ್‌ಬೈಜಾನ್ ತೀವ್ರವಾಗಿ ಖಂಡಿಸಿದೆ. ಅಂತಾರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ. ಪ್ರತಿಯಾಗಿ ಕ್ರಮ ಕೈಗೊಳ್ಳುವುದಾಗಿ ವಿದೇಶಾಂಗ ಸಚಿವಾಲಯ ಎಚ್ಚರಿಸಿದೆ. ಇರಾನ್ ರಾಯಭಾರಿಗೆ ನೋಟಿಸ್ ಜಾರಿ ಮಾಡಿದೆ.

5 ದಿನದಲ್ಲಿ 75ಕ್ಕೇರಿದ ಸಾವು: ಹಮಾಸ್ ಮುಖಂಡ ವಾಸಿಮ್ ಅತಲ್ಲಾಹ್ ಅಲ್-ಅಲಿ, ಪತ್ನಿ ಸಾವು

ಲೆಬನಾನ್ ಮೇಲೆ ಇಸ್ರೇಲ್‌ನಿಂದ ಸತತ ಕ್ಷಿಪಣಿ ದಾಳಿ

ಟೆಲ್ ಅವಿವ್: ಇಸ್ರೇಲ್ ಸೇನಾಪಡೆ ಇರಾನ್ ಮೇಲೆ ಗುರುವಾರವೂ ಕ್ಷಿಪಣಿ ದಾಳಿ ಮುಂದುವರಿಸಿದೆ. ಇನ್ನೊಂದೆಡೆ ಲೆಬನಾನ್ ಮೇಲೆಯೂ ಇಸ್ರೇಲ್ ಸೇನಾಪಡೆ ನಿರಂತರ ದಾಳಿ ನಡೆಸುತ್ತಿದೆ.

ಇಸ್ರೇಲ್ ಗುರುವಾರ ನಸುಕಿನಲ್ಲಿ ನಡೆಸಿದ ದಾಳಿಯಿಂದ ಗಾಜಾ ಮೂಲದ ಹಮಾಸ್ ಉಗ್ರ ಸಂಘಟನೆಯ ಹಿರಿಯ ಮುಖಂಡ ವಾಸಿಮ್ ಅತಲ್ಲಾಹ್ ಅಲ್-ಅಲಿ ಮತ್ತು ಆತನ ಪತ್ನಿ ಹತರಾದರು. ಇಸ್ರೇಲ್‌ನ ಡ್ರೋನ್, ಟ್ರಿಪೋಲಿ ಸಮೀಪದಲ್ಲಿರುವ ಪ್ಯಾಲೆಸ್ತೀನ್ ನಿರಾಶ್ರಿತರು ತಂಗಿರುವ ಬೆದ್ದಾವಿ ಪ್ರದೇಶದಲ್ಲಿನ ವಾಸಿಮ್ ಅವರ ಮನೆಯನ್ನೇ ಗುರಿಯಾಗಿರಿಸಿ ದಾಳಿ ನಡೆಸಿದೆ. ಇಸ್ರೇಲ್-ಹಿಜ್ಬುಲ್ಲಾ ನಡುವೆ 2024ರಲ್ಲಿ ಸಂಘರ್ಷ ಆರಂಭವಾದಾಗಿನಿಂದಲೂ ಇಸ್ರೇಲ್ ಸೇನಾಪಡೆ ಬೆದ್ದಾವಿ ಪ್ರದೇಶದ ಮೇಲೆ ಆಗ್ಗಾಗ್ಗೆ ದಾಳಿ ನಡೆಸುತ್ತಲೇ ಇದೆ ಎಂದು ಲೆಬನಾನ್‌ನ 'ನ್ಯಾಷನಲ್ ನ್ಯೂಸ್ ಏಜೆನ್ಸಿ' ವರದಿ ಮಾಡಿದೆ.

ಲೆಬನಾನ್ ಮೇಲಿನ ಇಸ್ರೇಲ್ ದಾಳಿಗೆ ಗುರುವಾರ 5ನೇ ದಿನ. ಮೊದಲ ನಾಲ್ಕು ದಿನಗಳಲ್ಲಿಯೇ ಇಸ್ರೇಲ್ ದಾಳಿಯಿಂದ ಲೆಬನಾನ್ ವಿವಿಧೆಡೆ 70 ಮಂದಿ ಹತರಾಗಿದ್ದರು. 430 ಮಂದಿ ಗಾಯಗೊಂಡಿದ್ದರು. ಇದನ್ನು ಲೆಬನಾನ್ ಆರೋಗ್ಯ ಇಲಾಖೆಯೇ ತಿಳಿಸಿದೆ.

ಬುಧವಾರ ರಾತ್ರಿಯಿಂದ ಗುರುವಾರ ನಸುಕಿನವರೆಗೆ ನಡೆದ ಹಲವು ದಾಳಿಗಳಲ್ಲಿ ಮತ್ತೆ ಐವರು ಹತರಾಗಿದ್ದು,

ಲೆಬನಾನ್‌ನ ಪ್ರಮುಖ ನಗರ ಬೈರೂತ್ ಮೇಲೆ ಗುರುವಾರ ನಸುಕಿನಲ್ಲಿ ಇಸ್ರೇಲ್ ಕ್ಷಿಪಣಿ ಅಪ್ಪಳಿಸಿದ್ದರಿಂದ ದೊಡ್ಡ ಸ್ಫೋಟವಾಗಿದೆ.

ಲೆಬನಾನ್‌ನಲ್ಲಿ 5 ದಿನಗಳಲ್ಲಿನ ಒಟ್ಟು ಸಾವಿನ ಸಂಖ್ಯೆ 75ಕ್ಕೇರಿದೆ. ಲೆಬನಾನ್ ಟ್ರಿಪೋಲಿಯಲ್ಲಿರುವ ಬೆಡ್ಡಾವಿ ಪ್ಯಾಲೆಸ್ತೇನಿಯನ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಕ್ಷಿಪಣಿ ಹಾರಿಸಿದ್ದು, ಇಬ್ಬರು ಪ್ಯಾಲೆಸ್ತೀನಿಯರು ಸಾವಿಗೀಡಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ದೃಢಪಡಿಸಿದೆ.

ಲೆಬನಾನ್ ಬೈರೂತ್ ಪ್ರದೇಶದಲ್ಲಿನ ಹಿಜ್ಬುಲ್ಲಾ ಉಗ್ರ ಸಂಘಟನೆಯ ನೆಲೆಗಳನ್ನೂ ಗುರಿಯಾಗಿಸಿಕೊಂಡು ಇಸ್ರೇಲ್ ಸೇನಾಪಡೆಗಳು ಮತ್ತಷ್ಟು ದಾಳಿ ನಡೆಸಿವೆ. ಬುಧವಾರ ತಡರಾತ್ರಿಯಿಂದ ಗುರುವಾರ ನಸುಕಿನವರೆಗೂ ಡ್ರೋನ್‌ಗಳ ಮೂಲಕ ದಕ್ಷಿಣ ಲೆಬನಾನ್ ಭಾಗದಲ್ಲಿನ ಕರಾವಳಿ ಹೆದ್ದಾರಿಗಳಲ್ಲಿ ಸಂಚರಿಸುತ್ತಿದ್ದ ವಾಹನಗಳ ಮೇಲೆ ಇಸ್ರೇಲ್ ಸರಣಿ ದಾಳಿ ನಡೆಸಿದೆ. ಪರಿಣಾಮ ಮೂವರು ಸಾವಿಗೀಡಾಗಿದ್ದಾರೆ. ಇದನ್ನು ಲೆಬನಾನ್ ಮಾಧ್ಯಮಗಳೇ ದೃಢಪಡಿಸಿವೆ. ವೈಮಾನಿಕ ದಾಳಿಯ ಜತೆಗೇ ಸೇನಾಪಡೆಯ ಕಾಲ್ದಳವನ್ನೂ ಲೆಬನಾನ್‌ಗೆ ದೂಡಿರುವ ಇಸ್ರೇಲ್, ಬುಧವಾರ 80 ಹಳ್ಳಿಗಳ ನಿವಾಸಿಗಳನ್ನು ಲಿತಾನಿ ನದಿಯ ಉತ್ತರಕ್ಕೆ ತೆರಳುವಂತೆ ಒತ್ತಾಯಿಸಿದೆ. ಏಕೆಂದರೆ ಈ ಪ್ರದೇಶ ಇಸ್ರೇಲ್ ಗಡಿಗೆ ತಾಗಿಕೊಂಡಿದೆ.

ಲೆಬನಾನ್ ಬಿಡಿ: ಇರಾನ್ ಎಚ್ಚರಿಕೆ

ಲೆಬನಾನ್ ಮೇಲಿನ ದಾಳಿ ಕೊನೆಗೊಳಿಸುವಂತೆ ಹಾಗೂ ತಕ್ಷಣವೇ ಲೆಬನಾನ್‌ನಿಂದ ಜಾಗ ಖಾಲಿ ಮಾಡುವಂತೆ ಇಸ್ರೇಲ್ ಸೇನೆಗೆ ಇರಾನ್ ಗುರುವಾರ ಎಚ್ಚರಿಕೆ ನೀಡಿದೆ. ಲೆಬನಾನ್ ಮೇಲಿನ ದಾಳಿಯನ್ನು ಮುಂದುವರಿಸಿದ್ದೇ ಆದಲ್ಲಿ ವಿಶ್ವದಲ್ಲಿ ಎಲ್ಲೆಲ್ಲಿ ಇಸ್ರೇಲ್‌ನ ರಾಯಭಾರ ಕಚೇರಿಗಳು ಇವೆಯೋ ಅದರ ಮೇಲೆ ಇರಾನ್ ದಾಳಿ ಮಾಡಲಿದೆ ಎಂಬ ಬೆದರಿಕೆಯನ್ನು ಇರಾನ್ ಸೇನೆಯ ವಕ್ತಾರ ಅಬೋಲ್‌ಫಜಲ್ ಷೆಕಾರರ್ಚಿ ಹಾಕಿದ್ದಾರೆ.

ಗುಜರಾತಲ್ಲಿ 29, ಒಡಿಶಾದಲ್ಲಿ ನಾಲ್ವರ ದುರ್ಮರಣ

2 ರಾಜ್ಯದಲ್ಲಿ ಹೋಳಿ ವೇಳೆ 33 ಮಂದಿ ನೀರುಪಾಲು

ದೆಹಲಿ: ಗುಜರಾತ್ ರಾಜ್ಯದಲ್ಲಿ ರಂಗಿನ ಹಬ್ಬ ಹೋಳಿ, ದುಃಖದ ದಿನವಾಗಿ ಬದಲಾಗಿದೆ. ಸೂರತ್, ಅಹಮದಾಬಾದ್ ಮತ್ತಿತರ ನಗರ ಸೇರಿ ರಾಜ್ಯದ ಹಲವೆಡೆ ಬುಧವಾರದ ಹೋಳಿ ಸಂಭ್ರಮದ ಬಳಿಕ ನದಿ-ಕಾಲುವೆ-ಹೊಂಡಗಳಲ್ಲಿ ಸ್ನಾನಕ್ಕೆ ತೆರಳಿದ್ದವರಲ್ಲಿ ಒಟ್ಟು 29 ಮಕ್ಕಳು-ಯುವಕರು ನೀರು ಪಾಲಾಗಿದ್ದಾರೆ.ಸೂರತ್ ಜಿಲ್ಲೆಯೊಂದರಲ್ಲೇ 2 ಪ್ರತ್ಯೇಕ ಘಟನೆಗಳಲ್ಲಿ 7 ಮಂದಿ ನೀರುಪಾಲಾಗಿದ್ದಾರೆ. ಅಹಮದಾಬಾದ್ ಜಿಲ್ಲೆಯಲ್ಲೂ 2 ಕಡೆ 7 ಸಾವಾಗಿದೆ. ಮಹಿಸಾಗರ್ ಜಿಲ್ಲೆಯಲ್ಲಿ 4, ನರ್ಮದಾ 3, ಅರಾವಳಿ ಜಿಲ್ಲೆಯ 2 ಕಡೆ ಒಟ್ಟು 4, ಅಮ್ರೇಲಿ ಮತ್ತು ದ್ವಾರಕಾ ಜಿಲ್ಲೆಗಳಲ್ಲಿ ತಲಾ 1 ಸಾವಾಗಿದೆ. ಸೂರತ್ ಜಿಲ್ಲೆಯ ಮಂಗ್ರೋಲ್ ತಾಲೂಕಿನ ಪನ್ಸಾರ ಗ್ರಾಮದ ಬಳಿ ಕಿಮ್ ನದಿಗಿಳಿದ 3 ಯುವಕರು ನೀರಲ್ಲಿ ಮುಳುಗಿದ್ದಾರೆ. ಇಸ್ರೋಲಿಯ ಮಿಂದೋಲಾ ನದಿಯಲ್ಲಿ 4 ಯುವಕರು ನೀರುಪಾಲಾಗಿದ್ದಾರೆ. ಅಹಮದಾಬಾದ್‌ನ ಕುಬೇರ್ ನಗರ ಪ್ರದೇಶದ 4 ಯುವಕರು ಕೋಟರ್‌ಪುರ ನಂದಿಗ್ರಾಮ್ ಬಳಿ ನದಿಯಲ್ಲಿ ಸಾವನ್ನಪ್ಪಿದ್ದಾರೆ. ಸೀತಾಪುರ ಗ್ರಾಮದ 3 ಮಕ್ಕಳು ಜೋಲಾಸರ್ ಸರೋವರದಲ್ಲಿ ಮುಳುಗಿದ್ದಾರೆ. ಮಹಿಸಾಗರ್ ಜಿಲ್ಲೆಯ ಕೋಥಂಭ ಬಳಿ ಸರೋವರಕ್ಕೆ ಇಳಿದ ನಾಲ್ವರು ಯುವಕರು ಸಾವನ್ನಪ್ಪಿದ್ದಾರೆ. ನರ್ಮದಾ ಜಿಲ್ಲೆಯಲ್ಲಿ ಮೂವರು ಯುವಕರು ನದಿಪಾಲಾಗಿದ್ದಾರೆ. ಮೆಹ್ಸಾನಾ ಜಿಲ್ಲೆಯ ಮೋತಿಡೌ ಮತ್ತು ಕಾಡಿಯಲ್ಲಿ ಕಾಲುವೆಯಲ್ಲಿ ಇಬ್ಬರು ಯುವಕರು ಜೀವ ಕಳೆದುಕೊಂಡಿದ್ದಾರೆ. ಅರಾವಳಿ ಜಿಲ್ಲೆಯ ಜಲಂಪುರ ಬಳಿಯ ಮಜುಮ್ ನದಿಯಲ್ಲಿ 2 ಯುವಕರು ಸಾವಿಗೀಡಾದರೆ, ದ್ವಾರಕಾ ಸರೋವರದಲ್ಲಿ ಒಬ್ಬ ಬಾಲಕ ಮುಳುಗಿದ್ದಾನೆ. ಒಡಿಶಾ ರಾಜ್ಯದಲ್ಲೂ ನಾಲ್ವರು ನೀರುಪಾಲಾಗಿದ್ದಾರೆ. ಜಾಜ್‌ಪುರದಲ್ಲಿ ಮೂವರು ಮತ್ತು ಕಟಕ್‌ನಲ್ಲಿ ಒಬ್ಬ ನೀರು ಪಾಲಾಗಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 36/2025-26 ದಿನಾಂಕ: 03.03.2026

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ, ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 5054-80- 190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ (ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳು), 3054-03-102-0-01-200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ, 4059-80-051-0-32-386 ನ್ಯಾಯಾಲಯ ಕಟ್ಟಡಗಳು ಅಡಿಯಲ್ಲಿನ ಒಟ್ಟು 05 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW-1 & 3 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.6.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.63.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 05 ಕಾಮಗಾರಿಗಳಿಗೆ (ಇಂ.ಸಂಖ್ಯೆ:34007 ದಿನಾಂಕ:10.03.2026, ಇಂ,ಸಂಖ್ಯೆ::34166, 29245 (6ನೇ ಕರೆ) 34078 ದಿನಾಂಕ:11.03.2026, ಇಂ.ಸಂಖ್ಯೆ:33847 ದಿನಾಂಕ:13.03.2026 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25-26/181/1949

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ತುಮಕೂರು, ದೂ:0816-2252937
ಸಂ:23/ಕಾಪಾಅ/ಗ್ರಾ.ಕು.ನೀ.ನೈ.ವಿ/ತುಮ/ಟೆಂಡರ್/AE-1&2&3/3780/25-26
ದಿನಾಂಕ: 03.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 23/2025-26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2025-26 ನೇ ಸಾಲಿಗೆ ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಶಿರಾ, ತಿಪಟೂರು, ತುಮಕೂರು, ಮತ್ತು ತುರುವೇಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.13.43ಲಕ್ಷಗಳು, ಇ.ಎಂ.ಡಿ ಮೊತ್ತ ರೂ.33,580/-ಗಳು ಹಾಗೂ ಆ) ಗರಿಷ್ಟ ಮೊತ್ತ ರೂ.94.17 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,88,340/- ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : 16-03-2026 ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ ದಿನಾಂಕ: 11-03-2026ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ ತುಮಕೂರು (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17-03-2026 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18-03-2026 ಸಂಜೆ 05.30 ಘಂಟೆಯ ನಂತರ.

ಸಹಿ/-(ಶ್ರೀ ಕೆ.ಎಂ.ಕುಮಾರಸ್ವಾಮಿ)
ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ&ನೈ ಇಲಾಖೆ, ತುಮಕೂರು ವಿಭಾಗ, ತುಮಕೂರು.

DIPR/TMK/477/KSMCA/2025-26

ವೀಸಾ ಅವಧಿ ಬಳಿಕದ ದಂಡ ರದ್ದು: ಯುಎಇ

ದುಬೈ: ಇರಾನ್ ಮೇಲೆ ಇಸ್ರೇಲ್-ಅಮೆರಿಕ ಯುದ್ಧ ನಡೆಸುತ್ತಿರುವ ಕಾರಣ ಗಲ್ಫ್ ರಾಷ್ಟ್ರಗಳು ತಮ್ಮ ವಾಯು ಪ್ರದೇಶವನ್ನು ಬಂದ್ ಮಾಡಿದ್ದರಿಂದ ವಿಮಾನ ಹಾರಾಟ ಅಸಾಧ್ಯವಾಗಿದ್ದು, ಸಾವಿರಾರು ವಿದೇಶಿ ಪ್ರಜೆಗಳು ಗಲ್ಫ್ ರಾಷ್ಟ್ರಗಳ ವಿಮಾನ ನಿಲ್ದಾಣಗಳಲ್ಲಿ ಸಿಲುಕಿಕೊಂಡಿದ್ದಾರೆ. ಈ ಮಧ್ಯೆ ಹಲವರ ವೀಸಾ ಅವಧಿ ಮುಗಿದಿದ್ದರಿಂದ, 'ಓವರ್ ಸ್ಟೇ' ದಂಡ ಪಾವತಿಸಬೇಕಾದ ಅನಿವಾರ್ಯತೆ ಎದುರಾಗಿತ್ತು. ಈಗ ಯುಎಇ ಸರಕಾರ, ಯುದ್ಧದ ಹಿನ್ನೆಲೆ 'ಓವರ್ ಸ್ಟೇ' ದಂಡವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದೆ. ಸರಕಾರದ ಈ ಕ್ರಮದಿಂದ ವೀಸಾ ಅವಧಿ ಮುಗಿದ ಬಳಿಕವೂ ಆ ದೇಶದಲ್ಲಿ ಉಳಿಯಬೇಕಾಗಿ ಬಂದವರಿಗೆ ದೊಡ್ಡ ಹೊರೆ ತಪ್ಪಿದಂತಾಗಿದೆ. ವಿಮಾನ ನಿಲ್ದಾಣಗಳಲ್ಲಿ ಸಿಲುಕಿರುವವರಿಗೆ ಮತ್ತು ಫೆ.28ರ ನಂತರ ಯುಎಇಗೆ ಭೇಟಿ ನೀಡಿದವರಿಗೆ ವೀಸಾ ಅಥವಾ ಪ್ರವಾಸಿ ವೀಸಾ ಅವಧಿ ಮುಗಿದಿದ್ದಲ್ಲಿ ದಂಡ ಪಾವತಿ ತಪ್ಪಿದೆ. ನಿವಾಸಿ ವೀಸಾ ರದ್ದುಗೊಳಿಸಿ ದೇಶ ತೊರೆಯಲಿದ್ದವರಿಗೂ ದಂಡ ವಿಧಿಸಲಾಗುವುದಿಲ್ಲ ಎಂದು ಯುಎಇ ಆಡಳಿತ ಗುರುವಾರ ಘೋಷಿಸಿದೆ.

ಕೈನಿಂದ ಸಿಂಘ್ವಿ, ನೇತಂ ಮತ್ತೊಮ್ಮೆ ರಾಜ್ಯಸಭೆಗೆ

ದೆಹಲಿ: ಇದೇ ಮಾ.16ರಂದು ನಡೆಯಲಿರುವ ರಾಜ್ಯಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷ ಇಬ್ಬರು ಹಾಲಿ ಸಂಸದರ ಹೆಸರನ್ನೇ ಮರು ನಾಮನಿರ್ದೇಶನ ಮಾಡಿ ಗುರುವಾರ ಅಧಿಕೃತ ಪ್ರಕಟಣೆ ಹೊರಡಿಸಿದೆ. ತೆಲಂಗಾಣ ದಿಂದ ಅಭಿಷೇಕ್ ಮನು ಸಿಂಘ್ವಿ ಮತ್ತು ಛತ್ತೀಸ್‌ಗಢದಿಂದ ಫುಲೊ ದೇವಿ ನೇತಂ ಅವರನ್ನು ಅಭ್ಯರ್ಥಿಗಳಾಗಿ ಘೋಷಿಸಿದೆ. ಜತೆಗೆ ಹರಿಯಾಣದಿಂದ ಕರಂವೀರ್ ಸಿಂಗ್ ಬೌಧ್ ಹಾಗೂ ಹಿಮಾಚಲ ಪ್ರದೇಶದಿಂದ ಅನುರಾಗ್ ಶರ್ಮ ಅವರನ್ನು ಹೊಸದಾಗಿ ಕಣಕ್ಕಿಳಿಸಿದೆ. ಅನುರಾಗ್ ಶರ್ಮಾ ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖ್ ಅವರ ಸಮೀಪವರ್ತಿ. ಪ್ರಸ್ತುತ ಕಾಂಗ್ರಾ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ. ತಮಿಳುನಾಡಿನಿಂದ ರಾಜ್ಯಸಭೆಗೆ ಆಯ್ಕೆಯಾಗಲಿರುವವರಲ್ಲಿ ಒಂದು ಸ್ಥಾನವನ್ನು ಕಾಂಗ್ರೆಸ್ ಪಕ್ಷಕ್ಕೆ ಡಿಎಂಕೆ ಬಿಟ್ಟುಕೊಟ್ಟಿದೆ. ಆ ಸ್ಥಾನಕ್ಕೆ ಎಂ.ಕ್ರಿಸ್ಟೋಫರ್ ಟಿಲಕ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಘೋಷಿಸಿದೆ. ತೆಲಂಗಾಣದಿಂದ ಗೆಲ್ಲಬಹುದಾದ 2ನೇ ಸ್ಥಾನಕ್ಕೆ ಸಿಎಂ ರೇವಂತ್ ರೆಡ್ಡಿ ಅವರ ಆಪ್ತ ವೇಮ್ ನರೇಂದರ್ ರೆಡ್ಡಿಯನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿಸಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಈ ಅಭ್ಯರ್ಥಿ ಪಟ್ಟಿಗೆ ಸಮ್ಮತಿಸಿದ್ದಾರೆ. ನಾಮಪತ್ರ ಸಲ್ಲಿಸಲು ಗುರುವಾರ ಕಡೆದಿನ.



ಅನೂಹ್ಯ ನಡೆಗಳ ರಾಜಕಾರಣಿ ನಿತೀಶ್ ಕುಮಾರ್

1951ರ ಮಾ.1ರಂದು ಜನಿಸಿದ ನಿತೀಶ್ ಕುಮಾರ್ ರಾಜಕೀಯದ ಹಾದಿ ಮಾರ್ಚ್ ತಿಂಗಳಲ್ಲೇ ಬದಲಾಗುತ್ತಿದೆ. ರಾಜ್ಯ ರಾಜಕಾರಣದಿಂದ ರಾಷ್ಟ್ರೀಯ ರಾಜಕಾರಣಕ್ಕೆ ಪಲ್ಲಟ. ಗುರುವಾರ ರಾಜ್ಯಸಭೆಗೆ ಎನ್‌ಡಿಎ ಅಭ್ಯರ್ಥಿಯಾಗಿ ನಾಮಪತ್ರ. ಮಾ.16ಕ್ಕೆ ಚುನಾವಣೆ. ಏ.9ರಿಂದ ರಾಜ್ಯಸಭೆ ಸದಸ್ಯತ್ವ ಅವಧಿ ಆರಂಭ. ಬಿಹಾರ ರಾಜ್ಯ ರಾಜಕಾರಣಕ್ಕೆ ವಿದಾಯ. ಸಿಎಂ ಹುದ್ದೆ ತ್ಯಾಗ.

1985ರಲ್ಲಿ ಮೊದಲ ಬಾರಿಗೆ ಜನತಾ ದಳದ ಶಾಸಕರಾಗಿ ಆಯ್ಕೆಯಾಗುವ ಮೂಲಕ ಬಿಹಾರ ವಿಧಾನಸಭೆ ಪ್ರವೇಶ.

1994ರಲ್ಲಿ ಗೆಳೆಯ ಜಾರ್ಜ್ ಫರ್ನಾಂಡಿಸ್ ಜತೆಗೂಡಿ ಸಮತಾ ಪಕ್ಷ ಸ್ಥಾಪನೆ.

1996ರಲ್ಲಿ ಸಮತಾ ಪಕ್ಷದ ಮೂಲಕ ಲೋಕಸಭೆಗೆ ಆಯ್ಕೆ. 'ಎನ್‌ಡಿಎ' ಮೈತ್ರಿಕೂಟಕ್ಕೆ ಸೇರ್ಪಡೆ. ಕೆಲ ಕಾಲ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಕೇಂದ್ರ ಸರಕಾರದಲ್ಲಿ ಸಚಿವ ಸ್ಥಾನ.

1998 ಏಪ್ರಿಲ್‌ನಲ್ಲಿ ರೈಲ್ವೆ ಸಚಿವ.

2003ರಲ್ಲಿ ಸಂಯುಕ್ತ ಜನತಾ ದಳ ಪಕ್ಷದಲ್ಲಿ ಸಮತಾ ಪಕ್ಷದ ವಿಲೀನ. ಜನತಾ ದಳ(ಯು) ನಾಯಕತ್ವದ ಹೊಣೆ ನಿತೀಶ್ ಹೆಗಲಿಗೆ.

2005ರ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಜೆಡಿ(ಯು) ಮತ್ತು ಬಿಜೆಪಿ ಮತ್ತಿತರ ಪಕ್ಷಗಳ ಮೈತ್ರಿಕೂಟ 'ಎನ್‌ಡಿಎ'ಗೆ ಬಹುಮತ. ಬಿಹಾರದ ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ನಿತೀಶ್ ಕುಮಾರ್ ಅಧಿಕಾರ ಸ್ವೀಕಾರ.

2010ರ ಚುನಾವಣೆಯಲ್ಲಿಯೂ ಎನ್‌ಡಿಎ ಮರು ಆಯ್ಕೆ. ನಿತೀಶ್ ಸಿಎಂ ಹುದ್ದೆ ಮುಂದುವರಿಕೆ.

2013: ಎನ್‌ಡಿಎ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ನರೇಂದ್ರ ಮೋದಿ ಅವರನ್ನು ಘೋಷಿಸಿದ್ದರಿಂದ ಎನ್‌ಡಿಎ ಮೈತ್ರಿಕೂಟ ತೊರೆದ ನಿತೀಶ್. ಲಾಲೂ ಯಾದವ್ ಅವರ ಆರ್‌ಜೆಡಿ ಮತ್ತು ಕಾಂಗ್ರೆಸ್ ಜತೆಗೂಡಿ 2013ರ ಜೂನ್‌ನಲ್ಲಿ 'ಮಹಾಘಟಬಂಧನ್' ರಚನೆ. ಸಿಎಂ ಹುದ್ದೆಯಲ್ಲಿ ಮುಂದುವರಿಕೆ. ಬಳಿಕ ಕೇಂದ್ರದಲ್ಲಿ 'ಯುಪಿಎ' ಒಕ್ಕೂಟಕ್ಕೆ ಜೆಡಿ(ಯು) ಸೇರ್ಪಡೆ.

2014ರ ಸಾರ್ವತ್ರಿಕ ಚುನಾವಣೆ. ಎನ್‌ಡಿಎ ಭರ್ಜರಿ ಜಯ. ಜೆಡಿಯುಗೆ ಭಾರೀ ಸೋಲು. ಸೋಲಿನ ಹೊಣೆ ಹೊತ್ತು 2014ರ ಮೇ 17ಕ್ಕೆ ಬಿಹಾರ ಸಿಎಂ ಹುದ್ದೆಗೆ ನಿತೀಶ್ ಕುಮಾರ್ ರಾಜೀನಾಮೆ. ಅಲ್ಪಾವಧಿಗೆ ಜಿತನ್ ರಾಮ್ ಮಾಂಝಿಗೆ ಸಿಎಂ ಹುದ್ದೆ.

2015 ಫೆಬ್ರವರಿ ಮರಳಿ ಬಿಹಾರ ಸಿಎಂ ಆಗಲು ನಿತೀಶ್ ಯತ್ನ. ಮಾಂಝಿ ರಾಜೀನಾಮೆ. ವಿಧಾನಸಭೆ ಚುನಾವಣೆಯಲ್ಲಿ ಮಹಾಘಟಬಂಧನ್‌ಗೆ ಭಾರೀ ಜಯ. ನಿತೀಶ್ ಮತ್ತೆ ಸಿಎಂ.

2017 ಆರ್‌ಜೆಡಿ ಭ್ರಷ್ಟಾಚಾರ ಆರೋಪ. ಮಹಾಘಟಬಂಧನ್ ತೊರೆದ ನಿತೀಶ್ ಕುಮಾರ್, ಜೆಡಿಯು ಪಕ್ಷ ಮರಳಿ ಎನ್‌ಡಿಎ ಮೈತ್ರಿಕೂಟ ಸೇರ್ಪಡೆ. ಸಿಎಂ ಹುದ್ದೆಯಲ್ಲಿ ಮುಂದುವರಿಕೆ.

2020ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಯು ಅಲ್ಪ ಬಹುಮತದೊಂದಿಗೆ ಆಯ್ಕೆ. ಮತ್ತೆ ನಿತೀಶ್ ಸಿಎಂ.

2022ರ ಆಗಸ್ಟ್, ಮತ್ತೆ ಎನ್‌ಡಿಎ ತೊರೆದ ನಿತೀಶ್ ಕುಮಾರ್. ಕಾಂಗ್ರೆಸ್-ಆರ್‌ಜೆಡಿ ನೇತೃತ್ವದ ಮಹಾಘಟಬಂಧನ್‌ಗೆ ಮತ್ತು 'ಯುಪಿಎ' ಒಕ್ಕೂಟಕ್ಕೆ ಮರು ಸೇರ್ಪಡೆ.

2024ರ ಜನವರಿ, ಮಹಾಘಟಬಂಧನ್‌ನಿಂದ ಮತ್ತೆ ಹೊರನಡೆದ ನಿತೀಶ್, 'ಎನ್‌ಡಿಎ' ಮೈತ್ರಿಕೂಟಕ್ಕೆ ಸೇರ್ಪಡೆ. 2025ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸರಿಸಮನಾಗಿ ಜೆಡಿಯು ಸ್ಥಾನಗಳ ಗಳಿಕೆ. 10ನೇ ಬಾರಿಗೆ ಬಿಹಾರ ಸಿಎಂ ಆಗಿ ನಿತೀಶ್ ಕುಮಾರ್ ಪ್ರಮಾಣವಚನ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತಿಯಲ್ಲಿ ರಾಜ್ಯಸಭೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಗುರುವಾರ ನಿತೀಶ್ ನಾಮಪತ್ರ ಸಲ್ಲಿಕೆ.



ಹೋರಾಟದ ದಿನಗಳಲ್ಲಿ ಜಯಪ್ರಕಾಶ್ ನಾರಾಯಣ್ ಜತೆ ನಿತೀಶ್

- 25 ವರ್ಷಗಳಿಂದ ಬಿಹಾರ ರಾಜಕಾರಣದ ಕೇಂದ್ರ ಬಿಂದು-ರಾಜಕೀಯ ಪಲ್ಲಟಗಳ ಸರದಾರ
- 'ಸುಶಾಸನ್'(ಅತ್ಯುತ್ತಮ ಆಡಳಿತ)ದ ಭರವಸೆ-ಬಲವಾದ ರಾಜಕೀಯ ವ್ಯಕ್ತಿತ್ವ ರಚನೆ
- 2016ರಲ್ಲಿ ರಾಜ್ಯದಲ್ಲಿ ಮದ್ಯಪಾನ ತಯಾರಿಕೆ, ಮಾರಾಟಕ್ಕೆ ಸಂಪೂರ್ಣ ನಿಷೇಧ
- ಹೆಣ್ಣು ಮಕ್ಕಳ ಶಿಕ್ಷಣ ಉತ್ತೇಜಿಸಲು ಬಾಲಕಿಯರಿಗೆ ಬೈಸಿಕಲ್ ಕೊಡುಗೆ ಯೋಜನೆ
- ಚುನಾವಣೆಗಳಲ್ಲಿ ಪಕ್ಷಗಳ ಜತೆಗಿನ ಮೈತ್ರಿ ಬದಲಾವಣೆ, ಕೂಟ ಬದಲಾವಣೆ
- ಒಮ್ಮೆ ಎನ್‌ಡಿಎ ಮೈತ್ರಿಕೂಟ, ಇನ್ನೊಮ್ಮೆ ಇಂಡಿಯ ಒಕ್ಕೂಟ, ಮತ್ತೆ ಮಹಾಘಟಬಂಧನ್
- ಪದೇ ಪದೇ ಮೈತ್ರಿಕೂಟ ಬದಲಿಸುತ್ತಿದ್ದುದರಿಂದ ಬಿಹಾರ ರಾಜಕೀಯದಲ್ಲಿ 'ಪಲ್ಟು ರಾಮ್' ಎಂಬ ಅಡ್ಡಹೆಸರು
- ಬಿಹಾರದಲ್ಲಿ 10 ಬಾರಿ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸಿದ ದಾಖಲೆ
- 2005ರಿಂದಲೂ ಒಂದಲ್ಲಾ ಒಂದು ಮಿತ್ರಪಕ್ಷಗಳ ಜತೆಗೂಡಿ ಸಿಎಂ ಕುರ್ಚಿ ಗಟ್ಟಿ
- ಬಿಜೆಪಿ ಜತೆಗೂ ಸೈ, ಕೆಲವೊಮ್ಮೆ ಕಾಂಗ್ರೆಸ್ ಜತೆಗೂ ಕೈ, ಮತ್ತೆ ಆರ್‌ಜೆಡಿ ಜತೆಗೂ ಸೈ
- 2026ರ ಮಾ.5 ರಾಜ್ಯಸಭೆಗೆ ಎನ್‌ಡಿಎ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ
- ಅಲ್ಲಿಗೆ ಬಿಹಾರ ರಾಜ್ಯ ರಾಜಕಾರಣದಿಂದ ನಿರ್ಗಮನ, ದೆಹಲಿ ಮೇಲ್ಮನೆಗೆ ಸ್ಥಳಾಂತರ
- 2026 ಮಾ.16ರಂದು ರಾಜ್ಯಸಭೆ ಚುನಾವಣೆ, ಏ.9ರಿಂದ ರಾಜ್ಯಸಭೆ ಸದಸ್ಯತ್ವ
- ಪುತ್ರ ನಿಶಾಂತ್ ಕುಮಾರ್ ರಾಜಕೀಯ ಭವಿಷ್ಯಕ್ಕಾಗಿ ರಾಜ್ಯ ರಾಜಕಾರಣ, ಸಿಎಂ ಹುದ್ದೆ ತ್ಯಾಗ

ಪ್ರಧಾನಿ ನರೇಂದ್ರ ಮೋದಿ ಜತೆ ವೇದಿಕೆಯಲ್ಲಿ ನಿತೀಶ್

ರಾಜಕೀಯ ಆರಂಭದ ದಿನಗಳಲ್ಲಿ ಸಿಎಂ ಲಾಲೂ ಪ್ರಸಾದ್ ಯಾದವ್ ಮತ್ತು ಶರದ್ ಯಾದ್ವ್ ಜತೆ ನಿತೀಶ್.

10ನೇ ಬಾರಿ ಬಿಹಾರ ಸಿಎಂ ಆಗಿ 2025ರಲ್ಲಿ ಪ್ರಮಾಣವಚನ

ಸಮಾಚಾರ ಸಣ್ಣದಲ್ಲ

'ಭೀಮ ಗಾಯನ' ಕಾರ್ಯಕ್ರಮ ಇಂದು

ಶಿವಮೊಗ್ಗ: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಗಾಂಧಿ, ಬುದ್ಧ, ಬಸವ ವಿಚಾರಧಾರೆಗಳನ್ನು ಜನಮಾನಸದಲ್ಲಿ ಜಾಗೃತಗೊಳಿಸಲು ನಾಡಿನ ಹೆಸರಾಂತ ಹಾಗೂ ಪರಿಣಿತಿ ಹೊಂದಿದ ಪರಿಶಿಷ್ಟ ಜಾತಿಯ ಕಲಾವಿದರನ್ನೊಳಗೊಂಡ ಕಲಾ ತಂಡದಿಂದ 'ಭೀಮ ಗಾಯನ' ಕಾರ್ಯಕ್ರಮವನ್ನು ಮಾ. 6 ರ ಸಂಜೆ 6 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್‌ಭವನದಲ್ಲಿ ಏರ್ಪಡಿಸಲಾಗಿದೆ. ಎಸ್ಸಿಎಸ್ಪಿ ಕ್ರಿಯಾಯೋಜನೆಯಂತೆ ರಾಜ್ಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಭೇಟಿ ನೀಡಿದ ಸ್ಥಳ/ಪರಿಶಿಷ್ಟ ಜಾತಿಯ ಜನಸಂಖ್ಯೆ ಹೆಚ್ಚು ಇರುವೆಡೆ ಈ ಭೀಮ ಗಾಯನ ಹಮ್ಮಿಕೊಳ್ಳಲಾಗಿದೆ. ಅಮ್ಮ ವಸುಂಧರೆ ಕಲಾತಂಡದವರು 'ಭೀಮ ಗಾಯನ' ಕಾರ್ಯಕ್ರಮವನ್ನು ನಗರದ ಡಾ.ಬಿ.ಆರ್. ಅಂಬೇಡ್ಕರ್‌ಭವನದಲ್ಲಿ ಸಂಜೆ 6 ರಿಂದ ನಡೆಸಿಕೊಡಲಿದ್ದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಮಧು ಬಂಗಾರಪ್ಪ ಉದ್ಘಾಟನೆ ನೆರವೇರಿಸುವರು. ಶಿವಮೊಗ್ಗ ನಗರ ಶಾಸಕರಾದ ಎಸ್ ಎನ್ ಚನ್ನಬಸಪ್ಪ ಅಧ್ಯಕ್ಷತೆ ವಹಿಸುವರು. ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಜಿ.ಪಂ ಸಿಇಒ ಹೇಮಂತ್ ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ ಪಾಲ್ಗೊಳ್ಳುವರು. ಗಾಯನ ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದೆ.

ಮಾ.8ಕ್ಕೆ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳು

ಶಿವಮೊಗ್ಗ: ಯುವ ಸಬಲೀಕರಣ ಕ್ರೀಡಾ ಇಲಾಖೆ ಹಾಗೂ ಮೈ ಭಾರತ್ ಶಿವಮೊಗ್ಗ ವತಿಯಿಂದ ಮಹಿಳಾ ದಿನಾಚರಣೆ ಪ್ರಯುಕ್ತ ಮಾ. 8 ರಂದು ನೇಹರು ಕ್ರೀಡಾಂಗಣದಲ್ಲಿ ವಿವಿಧ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. 13 ವರ್ಷದಿಂದ 18 ವರ್ಷವರೆಗಿನವರಿಗೆ ವೈಯಕ್ತಿಕ ವಿಭಾಗದಲ್ಲಿ ಅಥ್ಲೆಟಿಕ್ 100 ಮೀ,200 ಮೀ,400 ಮೀ ಓಟ. 18 ವರ್ಷ ಮೇಲ್ಪಟ್ಟ 12 ಜನರನ್ನೊಳಗೊಂಡ ತಂಡಗಳಿಗೆ ಥ್ರೋಬಾಲ್.18 ವರ್ಷ ಮೇಲ್ಪಟ್ಟ 8 ಜನರ ತಂಡಗಳಿಗೆ ಹಗ್ಗ ಜಗ್ಗಾಟ ಸ್ಪರ್ಧೆ. ವೈಯಕ್ತಿಕ ವಿಭಾಗದಲ್ಲಿ ಸ್ಲೋ ಬೈಕ್ ರೇಸ್. 18 ರಿಂದ 25 ವರ್ಷದವರಿಗೆ ವೈಯಕ್ತಿಕ ವಿಭಾಗದಲ್ಲಿ ಫ್ಯಾಷನ್ ಶೋ. 20 ರಿಂದ 40 ವರ್ಷದವರಿಗೆ ಭಾರತೀಯ ಸಂಪ್ರದಾಯ ಉಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜೇತರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುತ್ತಿದ್ದುಆಸಕ್ತರು ಬೆಳಿಗ್ಗೆ 9.30 ಕ್ಕೆ ಸರಿಯಾಗಿ ಆಧಾರ್‌ಕಾರ್ಡ್ ಪತ್ರದೊಂದಿಗೆ ನೆಹರೂ ಕ್ರೀಡಾಂಗಣದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಇಲಾಖೆ, ಸಹಾಯಕ ನಿರ್ದೇಶಕರ ಕಛೇರಿ, (ದೂ.ಸಂ.:9353084822) ಭೇಟಿ ನೀಡಬಹುದು ಎಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಒಳಮೀಸಲು ಜಾರಿಯ ಬಳಿಕ ಹುದ್ದೆಗಳ ತುಂಬಿ

ಶಿವಮೊಗ್ಗ: ಪರಿಶಿಷ್ಟ ಜಾತಿಯ ಒಳಮೀಸಲಾತಿಯನ್ನು ಜಾರಿಗೊಳಿಸದೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಬಾರದು ಎಂದು ಕರ್ನಾಟಕ ಮಾದಾರ ಮಹಾಸಭಾದ ಜಿಲ್ಲಾಧ್ಯಕ್ಷ ಹೆಚ್.ಶಿವಾಜಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ 56,342 ಖಾಲಿ ಹುದ್ದೆಗಳ ಭರ್ತಿಯಲ್ಲಿ ಶೇ.15ರ ಒಳಮೀಸಲಾತಿಯನ್ನು ಗ್ರೂಪ್ ಎಬಿಸಿ ವರ್ಗೀಕರಣದಂತೆ ಜಾರಿಗೊಳಿಸಲು ಆದೇಶಗಳಿಗೆ ತಿದ್ದುಪಡಿ ತಂದು ಶೇ.56ರ ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಬೇಕು ಎಂದರು. ಈಗ ರಾಜ್ಯ ಸರ್ಕಾರ 56,342 ಖಾಲಿ ಹುದ್ದೆಗಳನ್ನು ಒಳಮಿಸಲಾತಿಯ ಶೇ.15ರ ಹಂಚಿಕೆಯನ್ನು ಸ್ಪಷ್ಟವಾಗಿ ಅನ್ವಯಿಸಿ ಮಾತ್ರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮಹಾಸಭಾದ ಪ್ರಮುಖ ಭಾನುಪ್ರಸಾದ್ ಮಾತನಾಡಿ, ನಮ್ಮೆಲ್ಲಾ ಬೇಡಿಕೆಗಳಿಗೆ ಸರಕಾರ ಸ್ಪಂದಿಸದಿದ್ದರೆ ಮಾದಿಗ ಸಮುದಾಯ ರಾಜ್ಯಾದ್ಯಂತ ಹೋರಾಟ ಕೈಗೊಳ್ಳುತ್ತದೆ. ಶಿಕಾರಿಪುರದಲ್ಲಿ ಮಾ.7ರಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಮುಖಂಡರುಗಳಾದ ತಿಮ್ಲಾಪುರ ಲೋಕೇಶ್, ಸಿ.ಮೂರ್ತಿ,ವ 'ಂಜುನಾಥ್ ಎಸ್., ಹೆಚ್.ಎನ್. ಪ್ರಭು, ಗಿರೀಶ್, ಅಣ್ಣಪ್ಪ, ಮಂಜು, ಪುಟ್ಟರಾಜು, ರಮೇಶ್, ಗಾಜನೂರು ನಾಗರಾಜ್ ಇದ್ದರು.

ಮಾದಕ ವಸ್ತು ತಡೆಗೆ ಶಾಶ್ವತಿ ವೇದಿಕೆ ಆಗ್ರಹ

ಶಿವಮೊಗ್ಗ: ಗಾಂಜಾ ಸೇರಿದಂತೆ ಮಾದಕ ವಸ್ತುಗಳ ತಡೆಗೆ ಅಗತ್ಯಕ್ರಮ ಕೈಗೊಳ್ಳಬೇಕು ಎಂದು ಶಾಶ್ವತಿ ಮಹಿಳಾ ವೇದಿಕೆಯ ಅಧ್ಯಕ್ಷೆ ಡಾ.ಶಾಂತಾ ಸುರೇಂದ್ರ ಅವರ ನೇತೃತ್ವದಲ್ಲಿ ವೇದಿಕೆಯ ಸದಸ್ಯರು ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಜಿಲ್ಲೆಯಲ್ಲಿ ಇತ್ತೀಚೆಗೆ ಗಾಂಜಾ ಹಾವಳಿಗೆ ಹೆಚ್ಚಾಗುತ್ತಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲಿ ಗಾಂಜಾ ಕೂಡ ಮಾರಾಟವಾಗುತ್ತಿರುತ್ತದೆ. ಅದನ್ನು ತಡೆಯಬೇಕು ಎಂದು ಆಗ್ರಹಿಸಲಾಗಿದೆ.

{ಕೆ.ಎಸ್.ಈಶ್ವರಪ್ಪ } ಮಾಜಿ ಡಿಸಿಎಂ

ಮುಸ್ಲಿಮರು ಭಾರತದಲ್ಲಿ ಮಾತ್ರ ಸುರಕ್ಷಿತವಾಗಿದ್ದಾರೆ. ಆದರೆ ಇದನ್ನು ಅರಿಯದ ಮುಸ್ಲಿಮರು ಇರಾನ್ ದೇಶಕ್ಕೆ ಬೆಂಬಲ ನೀಡುವುದು ಅಲ್ಲಿನ ನಾಯಕ ಅಲಿ ಖಮೇನಿ ಹತ್ಯೆಯನ್ನು ವಿರೋಧಿಸುವುದು, ಸಂತಾಪ ವ್ಯಕ್ತಪಡಿಸುವುದು, ಮೋದಿ ವಿರುದ್ಧ ಮಾತನಾಡುವುದು ಇವೆಲ್ಲವೂ ಖಂಡನೀಯ. ಇರಾನ್ ಪಾಕಿಸ್ತಾನಕ್ಕೆ ಬೆಂಬಲಿಸಿರುವುದನ್ನು ನಾವು ನೋಡಿದ್ದೇವೆ. ಈ ದೇಶದ ನೀರು, ಗಾಳಿ ಸೇವಿಸಿದ ಮುಸ್ಲಿಮರು ಈ ಬಗ್ಗೆ ಯೋಚಿಸಬೇಕು.

ಮುಸ್ಲಿಂ ಮಕ್ಕಳಿಂದ ಅಪರಾಧ ಕೃತ್ಯಗಳು | ಎನ್‌ಐಎಗೆ ವಹಿಸಬೇಕು: ಶಾಸಕ ಚನ್ನಬಸಪ್ಪ

'ಅಪ್ರಾಪ್ತ' ಹೆಸರಿನ ದುರ್ಬಳಕೆ, ತನಿಖೆಗೆ ಆಗ್ರಹ

ಶಾಸಕ ಎಸ್.ಎನ್. ಚನ್ನಬಸಪ್ಪ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಶಿವಮೊಗ್ಗ: ಶಿವಮೊಗ್ಗವೂ ಸೇರಿದಂತೆ ರಾಜ್ಯದಲ್ಲಿ 'ಅಪ್ರಾಪ್ತ' ಹೆಸರಿನ ದುರ್ಬಳಕೆ ಆಗುತ್ತಿದ್ದು, ಇದರ ಸಮಗ್ರ ತನಿಖೆಯನ್ನು ಎನ್‌ಐಎಗೆ ವಹಿಸಬೇಕು ಎಂದು ಶಿವಮೊಗ್ಗ ನಗರ ಶಾಸಕ ಎಸ್.ಎನ್. ಚನ್ನಬಸಪ್ಪ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಪ್ರಾಪ್ತ ವಯಸ್ಸಿನ ಮುಸ್ಲಿಂ ಮಕ್ಕಳೇ ಮಾದಕವಸ್ತು, ಗಾಂಜಾ ಸೇವನೆ ಮಾಡಿ, ಹಿಂದೂ ಯುವಕರನ್ನು ಹತ್ಯೆ ಮಾಡುವ ಕೃತ್ಯ ಹೆಚ್ಚಾಗುತ್ತಿದೆ. ಅದಕ್ಕೆ ಉದಾಹರಣೆ ಇತ್ತೀಚೆಗೆ ನಗರದ ಹೊರವಲಯದ ಸೂಳೆಬೈಲಿನಲ್ಲಿ ನಡೆದ ಸಂಕೇತ್ ಎಂಬ ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಯ ಹತ್ಯೆ. ಮುಸಲ್ಮಾನ್ ಅಪ್ರಾಪ್ತರಿಂದಲೇ ಗಾಂಜಾ ಸೇವಿಸಿ ಅನೇಕ ಕಡೆ ಕಲ್ಲು ತೂರಾಟ, ಗಲಭೆ ಆಗಿವೆ. 8-9ನೇ ತರಗತಿಯಲ್ಲಿ ಫೇಲಾದ ಮುಸ್ಲಿಂ ಅಪ್ರಾಪ್ತರೇ ಎಲ್ಲಾ ಕುಕೃತ್ಯಗಳಿಗೆ ಕಾರಣರಾಗುತ್ತಿದ್ದಾರೆ. ಅಪ್ರಾಪ್ತರು ಎನ್ನುವ ಕಾರಣಕ್ಕಾಗಿ ಪೊಲೀಸರು ಇವರ ವಿರುದ್ಧ ಏನನ್ನೂ ಮಾಡಲಾಗುತ್ತಿಲ್ಲ. ಪ್ರಸ್ತುತ ಕಾನೂನಿನ ತೊಡಕು ಇವರಿಗೆ ಎದುರಾಗುತ್ತಿದೆ. ರಕ್ಷಣಾ ಇಲಾಖೆ ಅಸಹಾಯಕವಾಗಿದೆ. ಅಪ್ರಾಪ್ತರು ಕೊಲೆ ಮಾಡಿದರೂ ಅವರಿಗೆ ಶಿಕ್ಷೆಯಾಗುತ್ತಿಲ್ಲ. ಈ ಗಂಭೀರತೆಯನ್ನು ಸರ್ಕಾರ ಮನಗಾಣಬೇಕು ಎಂದು ಹೇಳಿದರು.

ಮುಸಲ್ಮಾನ್ ಅಪ್ರಾಪ್ತರು ಸಮಾಜ ಘಾತುಕ ಕೃತ್ಯ ಎಸಗುವುದರ ಹಿಂದೆ ಇರುವ ಬಲವಾದ ಕಾರಣವನ್ನು ಹುಡುಕುವ ಕೆಲಸ ಆಗಬೇಕು. ಅಪ್ರಾಪ್ತರನ್ನು ಸೃಷ್ಟಿ ಮಾಡುವ ಕಿಡಿಗೇಡಿಗಳು ಯಾರು ? ಎಂಬುದರ ಬಗ್ಗೆ ಪೊಲೀಸ್ ಇಲಾಖೆ ತನ್ನದೇ ಆದ ರೀತಿಯ ತನಿಖೆ ಮಾಡಬೇಕು ಎಂದು ಆಗ್ರಹಿಸಿದ ಅವರು, ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿದರೂ ಬೇರೆ ಮುಖವಾಡದಲ್ಲಿ ಅದರ ಕಾರ್ಯಾಚರಣೆ ನಡೆಯುತ್ತಿದೆ. ಈ ಅಂಶವನ್ನು ಬರುವ ವಿಧಾನಸಭಾ ಅಧಿವೇಶನದಲ್ಲಿ ಗಂಭೀರವಾಗಿ ಚರ್ಚೆಗೆ ತೆಗೆದುಕೊಳ್ಳಲಾಗುವುದು. ಸರ್ಕಾರ ಇದೇ ರೀತಿ ಮುಸ್ಲಿಂರ ಬಗ್ಗೆ ನಿರ್ಲಿಪ್ತ ಭಾವನೆಯನ್ನು ತಾಳಿದರೆ ಪೊಲೀಸ್ ಇಲಾಖೆ ಹಿಂದೂಗಳ ಹೆಣ ಹೋರುವ ಇಲಾಖೆ ಎಂಬ ಬೋರ್ಡ್ ಹಾಕಿಕೊಳ್ಳಬೇಕಾಗುತ್ತದೆ ಎಂದು ವ್ಯಂಗ್ಯವಾಡಿದರು.

ಇರಾನ್ ಸರ್ವಾಧಿಕಾರಿ, ಖಮೇನಿ ಹತ್ಯೆಯಾದಾಗ ಇಲ್ಲಿನ ಮುಸಲ್ಮಾನರು ಕಣ್ಣೀರು ಹಾಕಿದರು. ಆದರೆ ಪೆಹಲ್ಗಾಮ್ನಲ್ಲಿ ದುರ್ಮರಣ ಹೊಂದಿದ ಇಲ್ಲಿನ ಮಂಜುನಾಥ್, ರಾಜ್ಯದ ವಿವಿಧೆಡೆ ಯೋಧರು ವೀರ ಮರಣವನ್ನಪ್ಪಿದಾಗ ಇಲ್ಲಿಯ ಮುಸಲ್ಮಾನರು ಎಲ್ಲಿದ್ದರು ಎಂದು ಪ್ರಶ್ನಿಸಿದ ಅವರು, ಸರ್ಕಾರ ಮೃತ ಸಂಕೇತ್ಗೆ 15 ಲಕ್ಷ ರೂ. ಪರಿಹಾರ ಕೊಟ್ಟರೆ ಮುಗಿಯುವುದಿಲ್ಲ. ಆ ಪ್ರಕರಣ ಸಂಪೂರ್ಣ ತನಿಖೆಯಾಗಬೇಕು ಎಂದು ಪುನರಾಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ನಗರಾಧ್ಯಕ್ಷ ಮೋಹನ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ದೀನ್ದಯಾಳ್, ಕೆ.ಜಿ. ಕುಮಾರಸ್ವಾಮಿ ಇದ್ದರು.

ಬಾಲಾಪರಾಧಿಗಳ ಪ್ರಮಾಣ ಹೆಚ್ಚಾಗಿದೆ..!

ಈ ಒಂದು ವರ್ಷದಲ್ಲಿ ಬಾಲಾಪರಾಧಿಗಳ ಪ್ರಮಾಣ ಶಿವಮೊಗ್ಗದಲ್ಲಿ ಶೇ.15ರಷ್ಟು ಹೆಚ್ಚಾಗಿದೆ. ಅದರಲ್ಲಿ ಮಾದಕವಸ್ತು ಸೇವನೆ, ಕಳ್ಳತನ, ಹೆಚ್ಚಳವಾಗಿದೆ. ಶೇ.50 ಕ್ಕಿಂತ ಹೆಚ್ಚಿನ ಪ್ರಕರಣಗಳಲ್ಲಿ ಎಸ್‌ಎಸ್‌ಎಲ್ಸಿಗಿಂತ ಕಡಿಮೆ ಓದಿದವರು ಇದ್ದಾರೆ. ಬಾಲಾಪರಾಧಿಗಳಿಂದ ನಡೆದ ಒಟ್ಟು 67 ಪ್ರಕರಣಗಳಲ್ಲಿ ಪೋಕ್ಸೋ 24, ಕೊಲೆ 1, ಕೊಲೆಯತ್ನ 19, ದರೋಡೆ 3, ಗಾಂಜಾ ಸೇವನೆ-ಮಾರಾಟ 4, ಕಳ್ಳತನ ಮತ್ತು ಡಕಾಯಿತಿ 5 ಹಾಗೂ ಇನ್ನಿತರ ಪ್ರಕರಣಗಳಿದ್ದು, ಇದನ್ನು ಗಂಭೀರವಾಗಿ ಗೃಹ ಇಲಾಖೆ ತೆಗೆದುಕೊಳ್ಳಬೇಕು ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಸಲಹೆ ನೀಡಿದರು.

ಇಂದು ಬಜೆಟ್, ಶಿವಮೊಗ್ಗಕ್ಕೆ ಯಾವ ನಿರೀಕ್ಷೆಯೂ ಇಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾ.6ರಂದು ಮಂಡಿಸಲಿರುವ ಬಜೆಟ್ ಮೇಲೆ ನನಗೆ ಯಾವ ನಿರೀಕ್ಷೆಯೂ ಇಲ್ಲ. ಕಳೆದ ಮೂರು ವರ್ಷಗಳಲ್ಲಿ ಅವರು ಬಜೆಟ್ ನಲ್ಲಿ ನೀಡಿದ ಯಾವ ಭರವಸೆಯೂ ಈಡೇರಿಲ್ಲ. ಆದ್ದರಿಂದ ಶಿವಮೊಗ್ಗಕ್ಕೆ ಏನು ಬೇಕು ಎಂದು ಕೇಳುವ ಮನಸ್ಸೂ ಇಲ್ಲ. ಸರಕಾರದ ಬಗ್ಗೆ ಸಂಪೂರ್ಣ ಭ್ರಮನಿರಸನವಾಗಿದೆ. ಬಜೆಟ್ ಅಧಿವೇಶನದಲ್ಲಿ ಗಂಭೀರವಾಗಿ ಚರ್ಚಿಸುವೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಹೇಳಿದರು.

ಭಾರತವನ್ನ ಹಿಂದೂ ರಾಷ್ಟ್ರವಾಗಿ ಘೋಷಿಸಲಿ

ಶಿಕಾರಿಪುರ ತಾಲೂಕಿನ ಹಿರೇಕಲವತ್ತಿಯಲ್ಲಿ ನಡೆದ ಹಿಂದೂ ರಾಷ್ಟ್ರ ಜಾಗೃತಿ ಸಭೆಯಲ್ಲಿ ಹಿಂದೂ ಜನಜಾಗೃತಿ ಸಮಿತಿಯ ಜಿಲ್ಲಾ ಸಮನ್ವಯಕ ವಿಜಯ ರೇವಣಕರ್ ಮಾತನಾಡಿದರು.

ಶಿಕಾರಿಪುರ: ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ಸಂವಿಧಾನ ತಿದ್ದುಪಡಿಪಡಿಗೊಳಿಸಿ ಜಾತ್ಯತೀತ ರಾಷ್ಟ್ರ ಎಂದು ಸೇರ್ಪಡೆಗೊಳಿಸಿದ ಪರಿಣಾಮ ಇದೀಗ ಬಹುಸಂಖ್ಯಾತ ಹಿಂದೂ ಸಮುದಾಯ ಹಲವು ಸಂಕಟಗಳನ್ನು ಎದುರಿಸಬೇಕಾಗಿದೆ. ಈ ಸಮಸ್ಯೆ ಪರಿಹಾರಕ್ಕೆ ಭಾರತ ಹಿಂದೂ ರಾಷ್ಟ್ರ ಎಂದು ಘೋಷಿಸಬೇಕಾಗಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ಜಿಲ್ಲಾ ಸಮನ್ವಯಕ ವಿಜಯ ರೇವಣಕರ್‌ಆಗ್ರಹಿಸಿದರು.

ತಾಲೂಕಿನ ಹಿರೇಕಲವತ್ತಿಯ ಶ್ರೀ ಮಣ್ಣು ಬಸವೇಶ್ವರ ಸಮುದಾಯ ಭವನದಲ್ಲಿ ಹಿಂದೂ ಜನ ಜಾಗೃತಿ ಸಮಿತಿಯ ವತಿಯಿಂದ ನಡೆದ ಹಿಂದೂ ರಾಷ್ಟ್ರ ಜಾಗೃತಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಕ್ರೈಸ್ತರಿಗೆ 150 ದೇಶಗಳು, ಮುಸಲ್ಮಾನರಿಗೆ 50 ಕ್ಕೂ ಹೆಚ್ಚು ದೇಶಗಳಿದ್ದು, 100 ಕೋಟಿ ಅಧಿಕ ಹಿಂದೂಗಳಿಗೆ ಸ್ವತಂತ್ರ ಹಿಂದೂ ರಾಷ್ಟ್ರವಿಲ್ಲ ಎಂಬುದು ಅತ್ಯಂತ ದುರಾದೃಷ್ಟಕರ ಸಂಗತಿ. ಪುಣ್ಯ ಭೂಮಿ ಭಾರತದಲ್ಲಿ ಹಿಂದೂ ದೇವಸ್ಥಾನಗಳನ್ನು ಸರ್ಕಾರೀಕರಣ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶದಲ್ಲಿ ಪಾಕಿಸ್ತಾನ ಪರ ಘೋಷಣೆ ನಡೆಯುತ್ತದೆ, ಇದಕ್ಕೆ ಇದುವರೆಗೂ ಕಡಿವಾಣ ಇಲ್ಲದಂತಾಗಿದೆ, ಲವ್ ಜಿಹಾದ್ ಗೆ ಯುವತಿಯರು ಬಲಿಯಾಗುತ್ತಿದ್ದು ಇದರ ವಿರುದ್ಧ ಹಿಂದುಗಳೆಲ್ಲ ಒಂದಾಗಿ ಹೋರಾಡ ಬೇಕಾಗಿದೆ. ಕಳೆದ ಮೂರು ವರ್ಷಗಳಿಂದ 10 ಲಕ್ಷಕ್ಕೂ ಹೆಚ್ಚು ಯುವತಿಯರು ಮತಾಂತರ ವಾಗಿದ್ದಾರೆ. ಇದಕ್ಕೆ ಧರ್ಮ ಶಿಕ್ಷಣ ಪಡೆಯುವುದರ ಜತೆಗೆ ಹಿಂದೂ ಧರ್ಮಾಚರಣೆಯಿಂದ ಪರಿಹಾರ ದೊರೆಯಲಿದೆ ಎಂದರು.

ಪ್ರತಿ ಹಿಂದೂ ಮನೆಯಲ್ಲಿ ಮಕ್ಕಳಿಗೆ ಧರ್ಮ ಶಿಕ್ಷಣ ನೀಡುವುದರ ಮೂಲಕ ಧರ್ಮ ರಕ್ಷಣೆ, ರಾಷ್ಟ್ರ ರಕ್ಷಣೆ ಜೊತೆಗೆ ಸ್ವಸಂರಕ್ಷಣೆ ಕಲಿಯುವುದರ ಮೂಲಕ ಜಾಗೃತ ಶಕ್ತಿ ನಿರ್ಮಾಣ ಮಾಡಿಕೊಳ್ಳಬೇಕಿದೆ ಎಂದರು.

ಸನಾತನ ಸಂಸ್ಥೆಯ ಕಾವೇರಿ ರಾಯ್ಕರ್ ಮಾತನಾಡಿ, ಧರ್ಮರಕ್ಷಣೆಗಾಗಿ ಧರ್ಮಾಚರಣೆ ಮಾತ್ರ ಹಿಂದುಗಳ ಎಲ್ಲ ಸಮಸ್ಯೆಗೆ ಏಕೈಕ ಪರಿಹಾರವಾಗಿದೆ. ಸನಾತನ ಸಂಸ್ಕೃತಿಯನ್ನು ಕೆಲವರು ಅವಮಾನಿಸುವ ಪ್ರಸಂಗಗಳು ನಡೆಯುತ್ತಿವೆ ಎಂದು ವಿಷಾದಿಸಿದರು.

ಎಡಪಂಥೀಯ ವಿಚಾರವಾದಿಗಳು ದೇಶದಲ್ಲಿ ಕೇಸರಿ ಭಯೋತ್ಪಾದನೆ ಎಂಬ ಸುಳ್ಳು ವಿಷಯವನ್ನು ಸೃಷ್ಟಿಸಿ ಮಾಲೆಗಾಂವ್ ಸ್ಫೋಟ, ದಾಬೋಲ್ಕರ್, ಪನ್ಸಾರೆ, ಗೌರಿಲಂಕೇಶ್ ಹತ್ಯೆ ಪ್ರಕರಣಗಳಲ್ಲಿ ಅಮಾಯಕ ಹಿಂದೂ ಕಾರ್ಯಕರ್ತರನ್ನು ಗುರಿಯಾಗಿಸಲಾಯಿತು ಎಂದರು,

ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ಸಂಯೋಜಕ ನ್ಯಾಯವಾದಿ ರೇಖೇಶ್ ಮಾನೆ ಮಾತನಾಡಿ, ಪಠ್ಯಪುಸ್ತಕಗಳಲ್ಲಿ ಮೆಕಾಲೆ ಶಿಕ್ಷಣ ಪದ್ಧತಿಯಿಂದ ರಾಷ್ಟ್ರಪುರುಷರ ಇತಿಹಾಸವನ್ನು ಮರೆಮಾಚುವ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ, ಹಿಂದೂಗಳಿಗೆ ಆಗುತ್ತಿರುವ ಪ್ರತಿಯೊಂದು ಅನ್ಯಾಯಗಳನ್ನು ಕಾನೂನಿನ ಚೌಕಟ್ಟಿನ ಮೂಲಕ ಪರಿಹರಿಸಿಕೊಳ್ಳಬೇಕಿದೆ ಎಂದರು ಕಾರ್ಯಕ್ರಮದಲ್ಲಿ ಶ್ರೀ ಮಣ್ಣು ಬಸವೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಸುದರ್ಶನ್ ನಾಯ್ಡು, ನಾಗರಾಜ್, ಉಪಾಧ್ಯಕ್ಷ ಪರಶುರಾಮ್, ಭಾಸ್ಕರ್‌ನಾಯ್ಡು, ಕೃಷ್ಣಮೂರ್ತಿ, ಕಪ್ಪನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ಪ್ರಕಾಶ್ ನಾಯ್ಡು ಮತ್ತಿತರರು ಉಪಸ್ಥಿತರಿದ್ದರು.

ಸಮಾಜಕ್ಕೆ ಲಯನ್ಸ್ ಕ್ಲಬ್ ಸಂಸ್ಥೆ ಕೊಡುಗೆ

ಪಟ್ಟಣದ ಆಲೇಕಲ್ ಸಭಾಭವನದಲ್ಲಿ ಲಯನ್ಸ್ ಕ್ಲಬ್ ನಿಂದ ನಡೆದ ಮೂರನೇ ವಲಯ ಸಭೆಯನ್ನು ಸೊರಬ ಲಯನ್ಸ್ ಅಧ್ಯಕ್ಷೆ ಭಾರತಿ ಹನುಮಂತಪ್ಪ ಉದ್ಘಾಟಿಸಿದರು.

ಸೊರಬ: ಲಯನ್ಸ್ ಕ್ಲಬ್ ಸಂಸ್ಥೆಯು ಸಾರ್ವಜನಿಕರಿಗೆ ಸಾಮಾಜಿಕ ಸೇವೆಯನ್ನು ಸಲ್ಲಿಸುತ್ತಾ ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದ್ದು, ಸೇವೆ ಮಾಡುವ ಮನೋಭಾವ ಇರುವವರಿಗೆ ಲಯನ್ಸ್ ಸಂಸ್ಥೆ ಉತ್ತಮ ಅವಕಾಶವಾಗಿದೆ ಎಂದು ಸೊರಬ ಲಯನ್ಸ್ ಅಧ್ಯಕ್ಷೆ ಭಾರತಿ ಹನುಮಂತಪ್ಪ ತಿಳಿಸಿದರು.

ಪಟ್ಟಣದ ಆಲೇಕಲ್ ಸಭಾಭವನದಲ್ಲಿ ಲಯನ್ಸ್ ಕ್ಲಬ್ ನಿಂದ ನಡೆದ ಮೂರನೇ ವಲಯ ಸಭೆಯಲ್ಲಿ ಅವರು ಮಾತನಾಡಿ, ಲಯಲ್ಸ್ ಕ್ಲಬ್ ಸೇವೆಯನ್ನೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಸೇವಾಸಂಸ್ಥೆಗಳಲ್ಲಿ ಒಂದಾಗಿದ್ದು, ಎಚ್‌ಎಸ್ ಮಂಜಪ್ಪ, ಡಾ. ಎಂ.ಕೆ ಭಟ್ ಮತ್ತಿತರರು ನನ್ನನ್ನು ಗುರುತಿಸಿ ಈ ಸಂಸ್ಥೆಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಲಯನ್ಸ್ ಕ್ಲಬ್ ಸಂಸ್ಥೆಯು ಸಾರ್ವಜನಿಕರಿಗೆ ಸಾಮಾಜಿಕ ಸೇವೆಯನ್ನು ಸಲ್ಲಿಸುತ್ತಾ ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿದೆ. ಕಳೆದ ಒಂದು ವರ್ಷದಲ್ಲಿ ಹಲವು ಸಾಮಾಜಿಕ ಸೇವೆ ಸಲ್ಲಿಸಿದ ತೃಪ್ತಿ ನನಗಿದೆ. ಇನ್ನುಳಿದ ದಿನಗಳಲ್ಲಿ ಇನ್ನೂ ಹೆಚ್ಚು ಸೇವೆ ಮಾಡಲು ಪ್ರಯತ್ನಿಸುತ್ತೇನೆ ಎಂದರು. ವಲಯಾಧ್ಯಕ್ಷ ಕುಮಾರಸ್ವಾಮಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಸೊರಬ, ಕಾರ್ಯದರ್ಶಿ ಸುಬ್ರಹ್ಮಣ್ಯ ಗುಡಿಗಾರ್, ಖಜಾಂಚಿ ಸವಿತಾ ಎಂ ಭಟ್, ಮಾಜಿ ಗೌರ್ನರ್‌ಗಳಾದ ಎಚ್‌ಎಸ್ ಮಂಜಪ್ಪ, ಡಾ. ಎಂ.ಕೆ ಭಟ್, ಕೋರ್ ಕಮಿಟಿ ಸದಸ್ಯರಾದ ಶಿವಾನಂದ್ ಬಿಳಗಿ, ಎಲ್‌ಐಸಿ ಶಿವಾನಂದ, ಅಮೃತರಾಜ್, ಟಿಆರ್‌ಸುರೇಶ, ಪ್ರತಿಮಾ, ಪ್ರತಿಭಾ ಗೋಖಲೆ, ಮತ್ತಿತರರು ಇದ್ದರು.

ಉಳವಿ ಶಿಕಾರಿಪುರ ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು. ಲಯನ್ಸ್ ಕ್ಲಬ್ ನಿಂದ ಚಿಕ್ಕಮಕೂಪ್ಪದ ಹಿರಿಯ ಪ್ರಾಥಮಿಕ ಶಾಲೆಗೆ ಕಂಪ್ಯೂಟರ್ ಮತ್ತು ಆಯ್ದ ಕಾಲೇಜ್ ವಿದ್ಯಾರ್ಥಿಗಳಿಗೆ ಕಾಲೇಜ್ ಬ್ಯಾಗ್ ವಿತರಿಸಲಾಯಿತು. ಇದೆ ಸಂದರ್ಭದಲ್ಲಿ ವಲಯಾಧ್ಯಕ್ಷ ಕುಮಾರಸ್ವಾಮಿ ಶಿಕಾರಿಪುರ ಕ್ಲಬ್ ನ ಲಯನ್ಸ್ ಶಾಲೆಯ ಗ್ರಂಥಾಲಯಕ್ಕೆ ಪುಸ್ತಕ ಕೊಡುಗೆ ನೀಡಿದರು.

ನಾಲ್ವರು ಅಂತರ್‌ಜಿಲ್ಲಾ ಮನೆಗಳ್ಳರ ಬಂಧನ

ಹೊಸನಗರದ ಪೊಲೀಸರು ನಾಲ್ವರು ಕಳ್ಳರನ್ನು ಬಂಧಿಸಿ ಚಿನ್ನ ಬೆಳ್ಳಿಗಳನ್ನು ವಶ ಪಡಿಸಿಕೊಂಡಿರುವುದು.

ಹೊಸನಗರ: ತಾಲೂಕು ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸರ್ಕಲ್ ಇನ್ಸಪೆಕ್ಟರ್‌ಗೌಡಪ್ಪಗೌಡರ್ ಅವರ ಮಾರ್ಗದರ್ಶನದಲ್ಲಿ ನಗರ ಠಾಣಾ ಸಬ್‌ಇನ್‌ಸ್ಪೆಕ್ಟರ್‌ಶಿವಾನಂದ ಕೋಳಿಯವರ ನೇತೃತ್ವದಲ್ಲಿ ನಾಲ್ವರು ಅಂತರ್‌ಜಿಲ್ಲಾ ಮನೆಗಳ್ಳರನ್ನು ಬಂಧಿಸಲಾಗಿದೆ ಬಂಧಿತರಿಂದ ಸುಮಾರು 7.90 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಬೆಳ್ಳಿ ವಸ್ತುಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶ ಪಡಿಸಿಕೊಳ್ಳಲಾಗಿದೆ.

ಕಳೆದ 2025ರ ಡಿ. 27ರಂದು ಹೊಸನಗರ ತಾಲೂಕಿನ ನಾಗೋಡಿ (ನಿಟ್ಟೂರು) ಗ್ರಾಮದ ನಿವಾಸಿ ರಾಜೇಂದ್ರ ಶೆಟ್ಟಿಎಂಬುವವರ ಮನೆಯಲ್ಲಿ ಕಳವು ನಡೆದಿತ್ತು. ಮನೆಯವರು ಇಲ್ಲದ ಸಮಯ ನೋಡಿ ಮುಂಬಾಗಿಲು ಬೀಗ ಮುರಿದು ಒಳನುಗ್ಗಿದ ಕಳ್ಳರು ಲಾಕರ್‌ಬೀಗ ಮುರಿದು ಬೆಲೆಬಾಳುವ ಆಭರಣಗಳನ್ನು ದೋಚಿ ಪರಾರಿಯಾಗಿದ್ದರು. ನಗರಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.ಈ ಪ್ರಕರಣವನ್ನು ಬೆನ್ನತ್ತಿದ್ದ ಪಿಎಸ್‌ಐ ಶಿವಾನಂದ ಕೋಳಿ ಹಾಗೂ ಸಿಬ್ಬಂದಿ ವಿಶೇಷ ತಂಡ ರಚಿಸಿ ತಾಂತ್ರಿಕ ವಿಶ್ಲೇಷಣೆ ಹಾಗೂ ಬೆರಳಚ್ಚು ತಜ್ಞರ ನೆರವಿನಿಂದ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತರು ಭಟ್ಕಳ ಮೂಲದ ಮಹಮ್ಮದ್ ಇಮ್ರಾನ್‌ಇಕ್ಕೇರಿ, ಮಹಮದ್‌ಅಖೀಲ್, ಅಮೀರ್‌ಹಸನ್ ಬ್ಯಾರಿ ಮತ್ತು ಬೇಬಿ ಹಾಜಿರ ಎಂದು ಗುರುತಿಸಲಾಗಿದೆ

ಒಟ್ಟು 3.87 ಲಕ್ಷದ ಮೌಲ್ಯದ 30ಗ್ರಾಂ ತೂಕದ ಚಿನ್ನದ ನೆಕ್ಲೇಸ್, 93 ಸಾವಿರ ರೂ.ಮೌಲ್ಯದ 6ಗ್ರಾಂ ಬ್ರೇಸ್ಲೆಟ್, 50 ಗ್ರಾಮ ಬೆಳ್ಳಿ ಪದಾರ್ಥ, ಮೊಬೈಲ್ ಫೋನ್, ಹಾಗೂ ಕಳ್ಳತನಕ್ಕೆ ಬಳಸಿದ ಇಟಿಯೋಸ್ ಕಾರನ್ನು ವಶಪಡಿಸಿಕೊಳ್ಳಲಾಗಿದ್ದು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆಒಪ್ಪಿಸಲಾಗಿದೆ.

ಸುಗಮ ಸಂಚಾರಕ್ಕೆ ಹಲವು ದಿಟ್ಟ ಕ್ರಮ

ಸಂಚಾರಿ ವೃತ್ತ ನಿರೀಕ್ಷಕ ಟಿ.ವಿ. ದೇವರಾಜ್ ನೇತೃತ್ವದ ತಂಡ, ದುರ್ಗಿಗುಡಿ ಮುಖ್ಯರಸ್ತೆಯ ಸುಗಮ ಸಂಚಾರಕ್ಕೆ ಪರಿಶೀಲನೆ ನಡೆಸಿತು.

ಶಿವಮೊಗ್ಗ: ನಗರದ ದುರ್ಗಿಗುಡಿ ಮುಖ್ಯ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಹಲವು ಅಡೆತಡೆಗಳ ದೂರು ಬಂದ ಹಿನ್ನಲೆಯಲ್ಲಿ ಸಂಚಾರಿ ವೃತ್ತ ನಿರೀಕ್ಷಕ ಟಿ.ವಿ. ದೇವರಾಜ್ ನೇತೃತ್ವದಲ್ಲಿ ಸಂಚಾರಿ ಪೊಲೀಸರ ತಂಡ, ದುರ್ಗಿಗುಡಿ ಮುಖ್ಯರಸ್ತೆಯಲ್ಲಿ ಹಲವು ದಿಟ್ಟ ಕ್ರಮಗಳನ್ನು ಕೈಗೊಂಡಿದೆ.

ದುರ್ಗಿಗುಡಿ ಮುಖ್ಯರಸ್ತೆಯಲ್ಲಿ ಸಿಂಗರ್‌ಶೋರೂಂ ವೃತ್ತದಿಂದ ಗೋಪಿವೃತ್ತದವರೆಗೆ ಏಕಮುಖ ಸಂಚಾರವಿದ್ದು ಬ್ಯಾರಿಕೇಡ್ ಹಾಕಿ ಫಲಕಗಳನ್ನು ಹಾಕಿದ್ದರೂ ಸಹ ನಿರಂತರವಾಗಿ ವಾಹನ ಸವಾರರು ನಿಯಮ ಉಲ್ಲಂಘಿಸುತ್ತಿದ್ದು, ಇನ್ನು ಮುಂದೆ ಕಠಿಣ ಕ್ರಮ ಕೈಗೊಳ್ಳಲಾಗುವುದು, ಫುಟ್ಪಾತ್ ಮೇಲೆ ವ್ಯಾಪಾರಸ್ಥರು ಯಾವುದೇ ರೀತಿಯ ಅತಿಕ್ರಮಣ ಮಾಡುವ ಹಾಗಿಲ್ಲ. ತಮ್ಮ ಅಂಗಡಿಯ ಬೋರ್ಡ್ ಇಡುವ ಹಾಗಿಲ್ಲ. ಹೂವು-ಹಣ್ಣು ವ್ಯಾಪಾರಿಗಳು ಮನಬಂದಂತೆ ತಮ್ಮ ಗಾಡಿಗಳನ್ನು ನಿಲ್ಲಿಸುತ್ತಿದ್ದು, ಅದಕ್ಕೆ ಅವಕಾಶವಿಲ್ಲ. ದುರ್ಗಿಗುಡಿ ಮುಖ್ಯ ರಸ್ತೆಯಲ್ಲಿ ಸುಗಮ ಸಂಚಾರದ ದೃಷ್ಠಿಯಿಂದ ತಳ್ಳುವ ಗಾಡಿಗಳಿಗೆ ಶಾಶ್ವತವಾಗಿ ನಿಲ್ಲಲ್ಲು ಅವಕಾಶವಿಲ್ಲ ಎಂದು ಟ್ರಾಫಿಕ್ ನಿರೀಕ್ಷಕರು ತಿಳಿಸಿದ್ದಾರೆ. ಅಲ್ಲದೆ ಆಟೋ ಚಾಲಕರು ಕೂಡ ಮನಬಂದಂತೆ ಆಟೋಗಳನ್ನು ನಿಲ್ಲಿಸುತ್ತಿದ್ದು, ಅವರು ನಿಗದಿತ ಜಾಗದಲ್ಲೇ ಪಾರ್ಕಿಂಗ್ ಮಾಡಬೇಕು. ಸಂಚಾರಿ ನಿಯಮಗಳನ್ನು ಸಾರ್ವಜನಿಕರು ಪಾಲಿಸಬೇಕು. ವ್ಯಾಪಾರಸ್ಥರು ಕೂಡ ಅದನ್ನು ಪಾಲಿಸಬೇಕು. ಅಲ್ಲದೆ ಕನ್ಸರ್ವೆನ್ಸಿಗಳನ್ನು ತಮ್ಮ ದ್ವಿಚಕ್ರ ವಾಹನಗಳ ನಿಲುಗಡೆಗೆ ಬಳಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಆದರೆ ವಿಪರ್ಯಾಸವೆಂದರೆ ಸಂಚಾರಿ ಪೊಲೀಸರು ಫುಟ್ಪಾತ್ ಮೇಲಿದ್ದ ಬೋರ್ಡ್ ತೆರವುಗೊಳಿಸಿ, ಎಚ್ಚರಿಕೆ ನೀಡಿ, ತೆರಳಿದ ಕೆಲವೇ ಕ್ಷಣಗಳಲ್ಲಿ ಮತ್ತೆ ವ್ಯಾಪಾರಿಗಳಿಂದ ನಿಯಮಗಳ ಉಲ್ಲಂಘನೆ ಯಥಾಪ್ರಕಾರ ಮುಂದುವರೆದಿದೆ.

ಕಾರ್ಮಿಕರಿಗೆ ಕನಿಷ್ಠ ವೇತನ ಘೋಷಿಸಿ

ಶಿವಮೊಗ್ಗ : ಕರ್ನಾಟಕ ರಾಜ್ಯ, ವೇತನ ಸಂಹಿತೆ, ಕರಡು ನಿಯಮಗಳು 2026ರ ಕುರಿತು ಕಾರ್ಮಿಕ ಸಂಘಗಳ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೇಳಿದ ರಾಜ್ಯ ಸಕಾರ ಈ ಕರಡು ನಿಯಮಗಳನ್ನು ಪ್ರಕಟಿಸಿದ್ದು, ಅದನ್ನು ಯಥಾವತ್ತು ಜಾರಿಗೊಳಿಸಬೇಕೆಂದು ಆಗ್ರಹಿಸಿ ಸಿಐಟಿಯು ಜಿಲ್ಲಾ ಸಮಿತಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು. ರಾಜ್ಯದ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠವೇತನದ ಪ್ರಕಟಣೆಗೆ ಒತ್ತಾಯಿಸಿ, ಮನವಿ ಸಲ್ಲಿಸಿದ ಸಿಐಟಿಯು ಕನಿಷ್ಠವೇತನ ಸಲಹಾ ಮಂಡಳಿಯು ತಮ್ಮ ಅಭಿಪ್ರಾಯವನ್ನು 2025 ಆಗಸ್ಟ್ನಲ್ಲಿ ಸರ್ಕಾರಕ್ಕೆ ಸಲ್ಲಿಸಿ, ಹಲವು ತಿಂಗಳು ಕಳೆದರೂ ವೈಜ್ಞಾನಿಕವಾದ ಹಾಗೂ ಕಾನೂನುಬದ್ಧವಾದ ಕನಿಷ್ಠ ವೇತನದ ಅಂತಿಮ ಪ್ರಕಟಣೆ ಇನ್ನೂ ಆಗಿಲ್ಲ. ಕನಿಷ್ಠ ವೇತನ ಪರಿಷ್ಕರಣೆಯಾಗಿ ಏಳುವರ್ಷ ಕಳೆದಿದ್ದು ರಾಜ್ಯದ ಸಮಗ್ರ ಅಭಿವೃದ್ಧಿಗೆ ಹಾಗೂ ಲಕ್ಷಾಂತರ ದುರ್ಬಲ ಕಾರ್ಮಿಕ ವರ್ಗಕ್ಕೆ ಆರ್ಥಿಕ ಸ್ವಾವಲಂಬನೆಯನ್ನು ಖಾತರಿಪಡಿಸುವ ಕನಿಷ್ಠವೇತನದ ಪ್ರಕಟಣೆಯನ್ನು ಕೂಡಲೇ ಮಾಡಬೇಕೆಂದು ಸಿಐಟಿಯು ಆಗ್ರಹಿಸಿದೆ. ಕರ್ನಾಟಕದ ಅಸಂಘಟಿತ, ಸಣ್ಣ, ಮಧ್ಯಮ ಉತ್ಪಾದನಾ ಘಟಕಗಳಲ್ಲಿ ದುಡಿಯುವ ಲಕ್ಷಾಂತರ ಕಾರ್ಮಿಕರಲ್ಲಿ ಭರವಸೆಯನ್ನು ಮೂಡಿಸಿದ ಕನಿಷ್ಠವೇತನ ಪುನರ್ವಿಮರ್ಶೆ ಪ್ರಕ್ರಿಯೆ ನಿರೀಕ್ಷೆಯಾಗಿಯೇ ಉಳಿದಿದ್ದು, ತಕ್ಷಣ ಕಾರ್ಮಿಕ ಕಾಯ್ದೆಗಳಿಗೆ ಶಿಫಾರಸ್ಸನ್ನು ಜಾರಿಗೊಳಿಸುವಂತೆ ಒತ್ತಾಯಿಸಿದೆ. ಇದರ ಆಧಾರದಲ್ಲಿ ಕೂಡಲೇ ರಾಜ್ಯ ಸರಕಾರ ಕನಿಷ್ಠವೇತನವನ್ನು ಘೋಷಣೆಮಾಡಿ, ಕಾರ್ಮಿಕರ ಹಿತ ಕಾಪಾಡಬೇಕೆಂದು ಮನವಿಯಲ್ಲಿ ಆಗ್ರಹಿಸಿದೆ.

ಪರಿಶಿಷ್ಟರಿಗೆ ಶೇ.24 ಹಣ ಮೀಸಲಿಡಿ

ಶಿವಮೊಗ್ಗ: ಬಜೆಟ್ನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಶೇ.24ರಷ್ಟು ಅನುದಾನ ಮೀಸಲಿರಿಸಬೇಕು, ಹಣ ದುರ್ಬಳಕೆ ತಡೆಯಲು ಕಾಯ್ದೆಯ ಸೆಕ್ಷನ್-7(ಸಿ) ರದ್ದುಪಡಿಸಬೇಕು, ಗ್ಯಾರೆಂಟಿಗೆ ವರ್ಗಾಯಿಸಿದ 25 ಸಾವಿರ ಕೋಟಿ ಹಣ ವಾಪಾಸ್ ಮಾಡಬೇಕು. ದಸಂಸ ಸಂಸ್ಥಾಪಕ ಪ್ರೊ.ಬಿ.ಕೃಷ್ಣಪ್ಪನವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಘೋಷಿಸುವಂತೆ ಮಾ.11ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ಫ್ರೀಡಂಪಾರ್ಕಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಡಿಎಸ್‌ಎಸ್ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 17 ಬೇಡಿಕೆಗಳನ್ನು ಮುಂದಿಟ್ಟುಕೊಂಡು ಈ ಪ್ರತಿಭಟನೆಯಲ್ಲಿ ಹಕ್ಕೋತ್ತಾಯ ಮಂಡಿಸಲಿದ್ದೇವೆ. ಗ್ಯಾರೆಂಟಿ ಯೋಜನೆಗಳಿಗೆ ವರ್ಗಾಯಿಸಿದ 25 ಸಾವಿರ ಕೋಟಿ ಹಣವನ್ನು ಹಿಂತಿರುಗಿಸಬೇಕು. ವಸತಿರಹಿತರಿಗೆ ಭೂಮಿ ಖರೀದಿಸಿ ನಿವೇಶನ ಹಂಚಿಕೆ ಮಾಡಬೇಕು. ಪ್ರೊ.ಬಿ.ಕೃಷ್ಣಪ್ಪನವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಣೆಮಾಡಿ, ಅವರ ಜನ್ಮದಿನ ಜೂನ್ 9ರಂದು ರಜಾರಹಿತ ದಿನವನ್ನಾಗಿ ಆಚರಣೆ ಮಾಡಬೇಕು. ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ರೂ.500 ಕೋಟಿ ಅನುದಾನ ಬಿಡುಗಡೆ ಮಾಡಬೇಕು.ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನವೆಚ್ಚ 3000ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ. ಎಂ.ಏಳುಕೋಟಿ, ಶಿವಬಸಪ್ಪ, ಕರಿಬಸಪ್ಪ, ಲಕ್ಷ್ಮಣ್, ಹರಿಗೆ ರವಿ, ಪ್ರೊ.ಚನ್ನಪ್ಪ, ಕೃಷ್ಣಪ್ಪ, ಸಂತೋಷ್, ಅನಿಲ್, ರಮೇಶ್ ಮತ್ತಿತರರಿದ್ದರು.

ಕಾಂಗ್ರೆಸ್ ಸರಕಾರ ಸಂಪೂರ್ಣ ದಿವಾಳಿ: ಈಶ್ವರಪ್ಪ

ಶಿವಮೊಗ್ಗದಲ್ಲಿ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಶಿವಮೊಗ್ಗ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಸಂಪೂರ್ಣ ದಿವಾಳಿಯಾಗಿದೆ ಎಂದು ರಾಷ್ಟ್ರಭಕ್ತರ ಬಳಗದ ಸಂಚಾಲಕ ಹಾಗೂ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ರಾಜ್ಯದ ಆಡಳಿತದಲ್ಲಿ ಸಂಪೂರ್ಣ ವಿಫಲವಾಗಿದ್ದು, ಆರ್ಥಿಕವಾಗಿಯೂ ದಿವಾಳಿಯಾಗಿದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ರಾಜ್ಯದ ಗುತ್ತಿಗೆದಾರರಿಗೆ ಕಾಮಗಾರಿಗಳ ಪೂರ್ಣಹಣವನ್ನು ಪಾವತಿಸಲು ಆಗದಷ್ಟು ದಿವಾಳಿಯಾಗಿದೆ. ಗುತ್ತಿಗೆದಾರರು ಹಲವು ಭಾರಿ ಎಚ್ಚರಿಕೆ ಕೊಟ್ಟಿದ್ದರೂ ಮುಖ್ಯಮಂತ್ರಿಗಳು ಅಸಹಾಯಕರಾಗಿದ್ದಾರೆ ಎಂದು ಟೀಕಿಸಿದರು.

ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಸುಮಾರು 37,000 ಕೋಟಿ ಹಣ ಪಾವತಿಯಾಗಬೇಕಾಗಿದೆ. ಈ ಹಣ ಬಿಡುಗಡೆಯಾಗದೆ ಗುತ್ತಿಗೆದಾರರು ಅತ್ಯಂತ ಸಂಕಷ್ಟಕ್ಕೆ ತಲುಪಿದ್ದು, ಸರಕಾರದ ಮೇಲೆ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ. ಹಣಬರುವ ಗ್ಯಾರಂಟಿಯೂ ಇಲ್ಲವಾಗಿ ಟೆಂಡರ್‌ಹಾಕುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಇದಕ್ಕೆ ಶಿವಮೊಗ್ಗದ್ದೇ ಉದಾಹರಣೆ ಎಂದರೆ ಯಲವಟ್ಟಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಯಾವ ಗುತ್ತಿಗೆದಾರನೂ ಟೆಂಡರ್‌ಹಾಕಿಲ್ಲ ಎಂದರು.

ರಾಜ್ಯ ಸರ್ಕಾರ ಈ ನಡುವೆ ಮತ್ತೊಂದು ಹೊಸ ಪದ್ಧತಿಯನ್ನು ಜಾರಿಗೆ ತರಲು ಹೊರಟಿದೆ. ರಾಜ್ಯದ ಎಲ್ಲಾ ಟೆಂಡರ್ ಪ್ರಕ್ರಿಯೆಗಳು ಕೇಂದ್ರೀಕೃತ ವ್ಯವಸ್ಥೆಯಲ್ಲಿಯೇ ಆಗಬೇಕು ಎಂದಿದ್ದಾರೆ. ಇದು ಸ್ಥಳೀಯ ಗುತ್ತಿಗೆದಾರರಿಗೆ ಮಾರಕವಾಗುತ್ತದೆ. ಅಷ್ಟೇ ಅಲ್ಲ, ಇದರಲ್ಲಿ ಬೇರೆ ರಾಜ್ಯದ ಗುತ್ತಿಗೆದಾರರು ಬಂದರೆ ರಾಜ್ಯದ ಗುತ್ತಿಗೆದಾರರಿಗೆ ಅವಕಾಶವೇ ಇಲ್ಲದಂತಾಗಿ ಕನ್ನಡಿಗರಿಗೆ ತೊಂದರೆಯಾಗುತ್ತದೆ. ಮತ್ತು ಕೇಂದ್ರೀಕೃತ ವ್ಯವಸ್ಥೆಯಾದರೆ ಭ್ರಷ್ಟಾಚಾರವೇ ಒಟ್ಟುಗೂಡಿದಂತಾಗುತ್ತದೆ ಎಂದರು.

ದೇಶದ್ರೋಹಿ ಮುಸ್ಲಿಮರು:

ಮುಸ್ಲಿಮರು ಭಾರತದಲ್ಲಿ ಮಾತ್ರ ಸುರಕ್ಷಿತವಾಗಿದ್ದಾರೆ. ಆದರೆ ಇದನ್ನು ಅರಿಯದ ಮುಸ್ಲಿಮರು ಇರಾನ್ ದೇಶಕ್ಕೆ ಬೆಂಬಲ ನೀಡುವುದು ಅಲ್ಲಿನ ನಾಯಕ ಅಲಿ ಖಮೇನಿ ಹತ್ಯೆಯನ್ನು ವಿರೋಧಿಸುವುದು, ಸಂತಾಪ ವ್ಯಕ್ತಪಡಿಸುವುದು, ಮೋದಿ ವಿರುದ್ಧ ಮಾತನಾಡುವುದು ಇವೆಲ್ಲವೂ ಖಂಡನೀಯ. ಇರಾನ್ ಪಾಕಿಸ್ತಾನವನ್ನು ಬೆಂಬಲಿಸಿರುವುದನ್ನು ನಾವು ನೋಡಿದ್ದೇವೆ. ಈ ದೇಶದ ನೀರು, ಗಾಳಿ ಸೇವಿಸಿದ ದೇಶದ್ರೋಹಿ ಮುಸ್ಲಿಮರು ಈ ಬಗ್ಗೆ ಯೋಚಿಸಬೇಕಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಕೆ.ಈ. ಕಾಂತೇಶ್, ಮಹಾಲಿಂಗಯ್ಯಶಾಸ್ತ್ರಿ, ಮೋಹನ್ ಜಾದವ್, ಮಧುಸೂದನ್, ಕುಬೇರಪ್ಪ, ಚನ್ನಬಸಪ್ಪ ಇದ್ದರು.

ಸಮಾಚಾರ ಸಣ್ಣದಲ್ಲ

ರಜೆ ಪಡೆಯದ ಪ್ರಧಾನಿ ಮೋದಿಗೆ ಕೆನಡಾ ಪ್ರಧಾನಿ ಕಾರ್ನಿ ಪ್ರಶಂಸೆ

ಸಿಡ್ನಿ: ವಿಶ್ವದಲ್ಲಿ ಉನ್ನತ ಅಧಿಕಾರದಲ್ಲಿದ್ದುಕೊಂಡು 25 ವರ್ಷಗಳಿಂದ ಒಂದು ದಿನವೂ ರಜೆ ತೆಗೆದುಕೊಳ್ಳದೇ ಸತತವಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಅವರು ಒಬ್ಬರೇ. ಅವರೇ ಭಾರತದ ಪ್ರಧಾನ ಮಂತ್ರಿ, ವಿಶ್ವದ ಶ್ರೇಷ್ಠ ನಾಯಕ ನರೇಂದ್ರ ಮೋದಿ ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಪ್ರಶಂಸೆಯ ಮಳೆಗರೆದಿದ್ದಾರೆ. ಭಾರತಕ್ಕೆ ಈಗಷ್ಟೇ ಬಂದು ಆಸ್ಟ್ರೇಲಿಯಾ ಭೇಟಿಗೆ ತೆರಳಿರುವ ಮಾರ್ಕ್ ಕಾರ್ನಿ, ಸಿಡ್ನಿಯ ಸಭಾಂಗಣವೊಂದರಲ್ಲಿ ಚಿಂತಕರ ಚಾವಡಿಯನ್ನು ಉದ್ದೇಶಿಸಿ ಗುರುವಾರ ಮಾತನಾಡಿದ್ದು, ಪ್ರಧಾನಿ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿ, ಆ ಬಳಿಕ ಭಾರತದ ಪ್ರಧಾನಿಯಾಗಿ ಕಳೆದ 25 ವರ್ಷಗಳಿಂದ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸುಸ್ತು ಎನ್ನುವುದೇ ಇಲ್ಲ. ಈ ಅವಧಿಯಲ್ಲಿ ಅವರು ಒಂದು ದಿನವೂ ರಜೆ ತೆಗೆದುಕೊಂಡಿಲ್ಲ. ತಮ್ಮ ದೇಶದ ಜನರಿಗಾಗಿ ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ. ನಿತ್ಯವೂ ಒಂದಲ್ಲಾ ಇನ್ನೊಂದು ಕೆಲಸದಲ್ಲಿ ತೊಡಗಿಸಿಕೊಂಡೇ ಇರುತ್ತಾರೆ ಎಂದು ಹೇಳಿದ್ದಾರೆ.

15 ವರ್ಷ ಮೀರಿದ ಆಟೋಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಶುಲ್ಕದಲ್ಲಿ ಏರಿಕೆ

ಎಫ್‌ಸಿ ದರ ಹೆಚ್ಚಳ; ತೀವ್ರ ವಿರೋಧ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: 15 ವರ್ಷಕ್ಕಿಂತಲೂ ಹಳೆಯದಾದ ಆಟೋಗಳ ಫಿಟ್‌ನೆಸ್ ಪ್ರಮಾಣ ಪತ್ರ ಹಾಗೂ ತಪಾಸಣಾ ಶುಲ್ಕವನ್ನು 1000 ರು.ನಿಂದ 9200 ರು.ಗಳಿಗೆ ಹೆಚ್ಚಿಸಿದ ಹಿನ್ನೆಲೆ ಆಟೋ ಚಾಲಕರು ಹೆಚ್ಚುವರಿ ಶುಲ್ಕದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ತಮ್ಮೊಂದಿಗೆ ಶುಲ್ಕ ಹೆಚ್ಚಳದ ಕುರಿತು ಚರ್ಚೆ ನಡೆಸಿಲ್ಲ. ಕೇಂದ್ರ ಸರಕಾರದ ನಿರ್ದೇಶನಗಳನ್ನು ಉಲ್ಲೇಖಿಸಿದರಷ್ಟೇ ಸಾಕಾಗುವುದಿಲ್ಲ. ಪರಿಷ್ಕರಣೆಯನ್ನು ಜಾರಿಗೆ ತರುವ ಮೊದಲು ಔಪಚಾರಿಕವಾಗಿ ತಿಳಿಸಬೇಕು ಮತ್ತು ಆಕ್ಷೇಪಣೆ ಗಳನ್ನು ಆಹ್ವಾನಿಸಬೇಕು ಎಂದು ಇಲಾಖೆಯ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

20 ವರ್ಷಗಳನ್ನು ದಾಟಿದ ತಮ್ಮ ವಾಹನದ ಎಫ್‌ಸಿಯನ್ನು ನವೀಕರಿಸಲು ಇತ್ತೀಚೆಗೆ 9,200 ರು. ಪಾವತಿಸಿದ್ದೇನೆ. ಕಳೆದ ವರ್ಷ, ನಾನು ಕೇವಲ 1,000 ರು. ಪಾವತಿಸಿದೆ. ಈ ವರ್ಷ, ಅವರು 9,200 ರು. ಶುಲ್ಕ ಜಾರಿ ಮಾಡಿದ್ದಾರೆ. ಮಾರ್ಚ್‌ನಲ್ಲಿ ಅವರ ನಿಗದಿತ ನವೀಕರಣಕ್ಕೆ ಕೆಲವು ದಿನಗಳ ಮೊದಲು ಅವರು ಪಾವತಿ ಮಾಡಲಾಗಿದೆ. ನಾವು 1990 ರ ದಶಕದ ಆರಂಭದಿಂದಲೂ ಆಟೋಗಳನ್ನು ಓಡಿಸುತ್ತಿದ್ದೇವೆ. ಹೊಸ ವಾಹನವನ್ನು ಖರೀದಿಸುವುದು ನಮಗೆ ಸುಲಭವಲ್ಲ. ಬ್ಯಾಂಕ್‌ಗಳು ಹಳೆಯ ಚಾಲಕರಿಗೆ ಸಾಲ ನೀಡಲು ಹಿಂಜರಿಯುತ್ತವೆ. ಕಡಿಮೆ ಎಫ್‌ಸಿ ಶುಲ್ಕವನ್ನು ಪಾವತಿಸಲು ಹೊಸ ಆಟೋ ಖರೀದಿಸಲು ಸಾಧ್ಯವಾಗದೆ ಸಿಲುಕಿಕೊಂಡಂತಾಗಿದೆ ಎಂದು ಆಟೋ ಚಾಲಕರು ಅಳಲು ತೋಡಿಕೊಂಡಿದ್ದಾರೆ. 1991 ರಿಂದ ಆಟೋರಿಕ್ಷಾ ಓಡಿಸುತ್ತಿರುವ ವಾಸುದೇವ್ ಕೆ, ವಿದ್ಯುತ್ ಚಾಲಿತ ವಾಹನಕ್ಕೆ ಪರಿವರ್ತಿಸಲಾದ ತಮ್ಮ 2004 ಮಾದರಿಯ ವಾಹನದ ಎಫ್‌ಸಿಯನ್ನು ನವೀಕರಿಸಲು ತನಗೂ 9,200 ರು. ಶುಲ್ಕ ವಿಧಿಸಲಾಗಿದೆ. ಕಳೆದ ವರ್ಷದವರೆಗೆ, ಅವರು ಇವಿ ಪರಿವರ್ತನೆಗಾಗಿ 600 ರು. ಜತೆಗೆ 200 ರು. ಪಾವತಿಸಿದರು, ಒಟ್ಟು 800 ರು. ಹಣ ಪಾವತಿಸಿದ್ದೇನೆ. ನಾನು ಇಷ್ಟು ಹೆಚ್ಚಿನ ಮೊತ್ತವನ್ನು ಪಾವತಿಸಿದ್ದು ಇದೇ ಮೊದಲು.

> ಈ ಹೆಚ್ಚಳವು ಅತಿಯಾದದ್ದು ಮತ್ತು ಹಠಾತ್ತನೆ ಜಾರಿಗೆ ತರಲಾಗಿದೆ. ಹೊಸ ವಾಹನಗಳ ತಪಾಸಣಾ ಶುಲ್ಕವನ್ನು 600 ರು.ಗಳಿಂದ 800 ರು .ಗಳಿಗೆ ಮತ್ತು ಎಂಟು ವರ್ಷಗಳ ನಂತರ 800 ರು.ಗಳಿಂದ 1,000 ರು.ಗಳಿಗೆ ಹೆಚ್ಚಿಸಲಾಗಿದೆ. ಆದರೆ 15 ವರ್ಷಗಳನ್ನು ಪೂರ್ಣಗೊಳಿಸಿದ ವಾಹನಗಳಿಗೆ ಈಗ ಸುಮಾರು 4,500 ರು. ವಿಧಿಸಲಾಗುತ್ತಿದೆ, ಆದರೆ 20 ವರ್ಷಕ್ಕಿಂತ ಮೇಲ್ಪಟ್ಟ ವಾಹನಗಳಿಗೆ 9,200 ರು. ಪಾವತಿಸಲಾಗುತ್ತಿದೆ.
>
> - ರುದ್ರಮೂರ್ತಿ
> ಆಟೋರಿಕ್ಷಾ ಚಾಲಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ

ಯಾವುದೇ ಅಧಿಕೃತ ಪೂರ್ವ ಸೂಚನೆ ಇರಲಿಲ್ಲ. ಫೆಬ್ರವರಿಯಲ್ಲಿ ಎಫ್‌ಸಿ ನವೀಕರಣ ಬಾಕಿ ಇರುವುದರಿಂದ, ಮಾನ್ಯ ಪ್ರಮಾಣಪತ್ರವಿಲ್ಲದೆ ಕಾರ್ಯನಿರ್ವಹಿಸುವುದರಿಂದ ಭಾರೀ ದಂಡ ವಿಧಿಸಲಾಗುವುದರಿಂದ ಪಾವತಿಸು ವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕೆಪಿಎಸ್‌ಸಿ ಮುಚ್ಚುವುದು ಉತ್ತಮ, ಇದು ಕಳ್ಳರ ದಂಧೆಯ ಕೇಂದ್ರ

ಸರಕಾರದಿಂದ ಸಾಲದ ಬಜೆಟ್ ಮಂಡನೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿ 1.15 ಲಕ್ಷ ಕೋಟಿ ರೂ. ಸಾಲ ಮಾಡಿ ಬಜೆಟ್ ಮಂಡಿಸಲಿದ್ದಾರೆ. ಈ ಬಾರಿಯೂ ಜನರ ಮೇಲೆ ತೆರಿಗೆಗಳ ಹೊರೆ ಹಾಕುವುದು ಖಚಿತ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಬಜೆಟ್ ಮುನ್ನವೇ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಎಂದರೆ ತೆರಿಗೆ ಹೇರುವ ರಾಮಯ್ಯ ಆಗಿದ್ದಾರೆ. ಈ ಬಾರಿಯ ಕೇಂದ್ರ ಬಜೆಟ್ನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ತೆರಿಗೆಗಳ ಹೊರೆ ಕಡಿಮೆ ಮಾಡಿದ್ದಾರೆ. ಆದರೆ ಸಿಎಂ ಸಿದ್ದರಾಮಯ್ಯ ತಿಂಗಳಿಗೆ ನಾಲ್ಕರಂತೆ ತೆರಿಗೆ ಹಾಕುತ್ತಾರೆ. ಈಗಾಗಲೇ 36 ತೆರಿಗೆಗಳನ್ನು ಜನರ ಮೇಲೆ ಹೇರಿದ್ದಾರೆ. ಚುನಾವಣೆಗೆ ಮುನ್ನ ಜನರ ಮೇಲೆ ಹೊರೆ ಹಾಕದೆ ಗ್ಯಾರಂಟಿ ತರುತ್ತೇವೆ ಎಂದು ಭರವಸೆ ನೀಡಿ, ಈಗ ತೆರಿಗೆಗಳ ಹೊರೆ ಹೇರಿದ್ದಾರೆ. ಸಿದ್ದರಾಮಯ್ಯನವರ ಅವಧಿ ಮುಗಿಯುವ ವೇಳೆಗೆ ಒಟ್ಟು ಸಾಲ 8 ಲಕ್ಷ ಕೋಟಿ ರು.ಮೀರಲಿದೆ. ಇದರಿಂದಾಗಿ ಆರ್ಥಿಕ ಶಿಸ್ತು ಮೀರಿ ಹೋಗುತ್ತದೆ. ಇದು ಅವರ ಕಣ್ಕಟ್ಟು ವಿದ್ಯೆ ಎಂದರು.

ಸಿಎಂ ಸಿದ್ದರಾಮಯ್ಯ ಇಲ್ಲದ ಆದಾಯವನ್ನು ಸೃಷ್ಟಿಸಿ ಜಿಎಸ್‌ಡಿಪಿಗೆ ಹೋಲಿಕೆ ಮಾಡುವ ಶೇಕಡ ಪ್ರಮಾಣ ಕಡಿಮೆ ಇರುವಂತೆ ತೋರಿಸುತ್ತಾರೆ. ಈ ಮೂಲಕ ಆರ್ಥಿಕ ಶಿಸ್ತು ಪಾಲಿಸಿದ್ದೇವೆ ಎಂದು ಸುಳ್ಳಾಗಿ ತೋರಿಸುತ್ತಾರೆ. ಬಜೆಟ್ ಎಂದರೆ ಆದಾಯ ಹೆಚ್ಚಿಸಿ, ಜನರಿಗೆ ಹೊರೆಯಾಗದಂತೆ ಮಾಡಬೇಕು. ಇದನ್ನೇ ಆರ್ಥಿಕ ಪರಿಣತಿ ಎಂದು ಹೇಳುತ್ತಾರೆ. ಸಾಲ ಮಾಡಿ ಸರಕಾರ ನಡೆಸಲು ಇವರೇ ಬೇಕಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲಿದೆ ಎಂದು ಜನರು ಅಂದುಕೊಂಡಿದ್ದು ಸಂಪೂರ್ಣ ಸುಳ್ಳಾಗಿದೆ. ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಲ ಇಲ್ಲದ ಬಜೆಟ್ ಮಂಡಿಸಿದ್ದು, ಇನ್ನೂ 24,400 ಕೋಟಿ ರು. ಸಾಲ ಪಡೆಯಬಹುದಿತ್ತು. ಅಂತಹ ಅವಕಾಶವಿದ್ದರೂ ಅವರು ಆಗ ಸಾಲ ಪಡೆದಿರಲಿಲ್ಲ. ಕಾಂಗ್ರೆಸ್ ಮಾತ್ರ ಪ್ರತಿ ವರ್ಷ ಸಾಲ ಪಡೆಯುತ್ತಲೇ ಇದೆ. ಈ ಬಾರಿ 1.15 ಲಕ್ಷ ಕೋಟಿ ರು. ಸಾಲ ಪಡೆಯಲಿದ್ದಾರೆ. ಸಾಲವನ್ನು ಜನರ ತಲೆ ಮೇಲೆ ಹೇರುವ ಬಜೆಟನ್ನು ಈ ಬಾರಿ ಮಂಡಿಸುತ್ತಾರೆ. ನಂಜುಂಡಪ್ಪ ವರದಿಯಲ್ಲಿದ್ದ ಹಿಂದುಳಿದ ತಾಲೂಕುಗಳ ಸಂಖ್ಯೆ, ಗೋವಿಂದರಾವ್ ವರದಿಯಲ್ಲಿ ಇನ್ನಷ್ಟು ಅಧಿಕವಾಗಿದೆ. ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಪ್ರತಿ ವರ್ಷ 15,000 ಕೋಟಿ ರು. ಮೀಸಲಿಡಬೇಕೆಂದು ಸರಕಾರಕ್ಕೆ ಪತ್ರ ಬರೆದಿದ್ದೇನೆ. ಈ ಬಜೆಟ್‌ನಲ್ಲಿ ಸರಕಾರ ಇಷ್ಟೂ ಅನುದಾನ ಮೀಸಲಿಡಬೇಕು ಎಂದು ಆಗ್ರಹಿಸಿದರು.

> **ಕೆಪಿಎಸ್‌ಸಿ ಮುಚ್ಚಿ**
>
> ಕೆಪಿಎಸ್‌ಸಿ ಎಂದರೆ ಕಳ್ಳರ ದಂಧೆಯ ಕೇಂದ್ರ. ಹಣ ಕೊಡಲ್ಲ ಎಂದರೆ ಕಚೇರಿಯ ಒಳಗೆ ಕೂಡ ಬಿಡುವುದಿಲ್ಲ. ಕುಟುಂಬ, ಜಾತಿ ಎನ್ನುವುದು ಇಲ್ಲಿ ಮಾನದಂಡವೇ ಹೊರತು ಅಂಕ, ಪ್ರತಿಭೆ ಮುಖ್ಯವಲ್ಲ. ಕೆಪಿಎಸ್‌ಸಿ ಮುಚ್ಚಿ ಕೇಂದ್ರದ ಯುಪಿಎಸ್‌ಸಿ ಮಾದರಿಯ ಒಂದು ಸಂಸ್ಥೆ ನಿರ್ಮಿಸಬೇಕು. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಮಾತಾಡುತ್ತೇನೆ. ಜೊತೆಗೆ ಕಾನೂನು ಸುವ್ಯವಸ್ಥೆ, ಪ್ರತಿಭಟನೆಗಳು, ಮೊದಲಾದ ವಿಷಯಗಳ ಬಗ್ಗೆ ಮಾತಾಡುತ್ತೇನೆ ಎಂದರು.

ರಾಜ್ಯದ ವಿವಿಧೆಡೆ ಲೋಕಾಯುಕ್ತ ಏಕಕಾಲದಲ್ಲಿ ದಾಳಿ | ಚಿನ್ನಾಭರಣ ಜಪ್ತಿ

10 ಭ್ರಷ್ಟ ಅಧಿಕಾರಿಗಳಿಗೆ ಲೋಕಾ ಶಾಕ್

ಬೆಂಗಳೂರು: ಭ್ರಷ್ಟ ಅಧಿಕಾರಿಗಳ ವಿರುದ್ಧದ ಬೇಟೆಯನ್ನು ಮುಂದುವರಿಸಿರುವ ಲೋಕಾಯುಕ್ತ ಅಧಿಕಾರಿಗಳು ಗುರುವಾರ ಬೆಂಗಳೂರು, ಮೈಸೂರು, ಹಾಸನ, ಮಂಡ್ಯ, ಗದಗ, ಯಾದಗಿರಿ, ಹುಬ್ಬಳ್ಳಿ, ವಿಜಯಪುರ ಮತ್ತು ಬಾಗಲಕೋಟೆ ಸೇರಿ ಹಲವೆಡೆ ಏಕಕಾಲದಲ್ಲಿ ದಾಳಿ ಕೈಗೊಂಡು 10 ಮಂದಿ ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಕೆಡವಿದ್ದಾರೆ.

ಆದಾಯಕ್ಕಿಂತ ನೂರಾರು ಪಟ್ಟು ಅಕ್ರಮ ಆಸ್ತಿಗಳಿಕೆಯ ದೂರುಗಳ ಹಿನ್ನೆಲೆಯಲ್ಲಿ ಹಿರಿಯ ಎಂಜಿನಿಯರ್‌ಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳ ನಿವಾಸ ಹಾಗೂ ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಕೋಟ್ಯಂತರ ಮೌಲ್ಯದ ನಗದು, ಚಿನ್ನಾಭರಣಗಳು, ಐಷಾರಾಮಿ ವಸ್ತುಗಳು ವಾಹನಗಳನ್ನು ಜಪ್ತಿ ಮಾಡಿ ದಾಖಲೆ ಪತ್ರಗಳಿಗೆ ಶೋಧ ಕೈಗೊಂಡಿದ್ದಾರೆ.

ಮಂಡ್ಯದ ಲೋಕೋಪಯೋಗಿ ಎಇಇ ಸತೀಶ್ ಅವರ ಕಚೇರಿ ಬಂದಿಗೌಡ ಬಡಾವಣೆಯ ಮನೆ, ಸೇರಿದಂತೆ ಒಟ್ಟು ನಾಲ್ಕು ಕಡೆ ದಾಳಿ ಮಾಡಿ ಶೋಧ ನಡೆಸಿದ್ದಾರೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮುಖ್ಯ ಎಂಜಿನಿಯರ್ ವಸಂತ ವಾಲಪ್ಪ ನಾಯಕ್ ಅವರ ಬಾಗಲಕೋಟೆಯಲ್ಲಿರುವ ಮನೆ ಮೇಲೆ ಹಾಗೂ ಸಹೋದರನ ಮನೆ ಮೇಲೆ ದಾಳಿ ನಡೆಸಲಾಗಿದೆ. ಬಾಗಲಕೋಟೆ ತಾಲೂಕಿನ ಬಿಲ್ ಕೆರೂರ ಗ್ರಾಮದಲ್ಲಿನ ಮನೆ, ವಸಂತ ಅವರ ತಾಯಿ ವಾಸವಿರುವ ಬಸವ ನಗರದ ಮನೆ, ಬಾಗಲಕೋಟೆಯಲ್ಲಿರುವ ವಸಂತ ಸಹೋದರ ಭೀಮಸೇನ ನಾಯಕ ಮನೆ ಮೇಲೆಯೂ ದಾಳಿ ನಡೆಸಿ ದಾಖಲೆ, ಅಕ್ರಮ ಆಸ್ತಿಯ ಶೋಧ ನಡೆಸುತ್ತಿದ್ದಾರೆ. ಬೆಂಗಳೂರು ನಗರದ ಸಿಂಗನಾಯಕನ ಹಳ್ಳಿ ರೈತಸೇವಾ ಸಹಕಾರ ಸಂಘ ಯಲಹಂಕದ ಸಿಇಒ ಆರ್. ಶಶಿಧರ್ ಮನೆ ಮೇಲೆ, ಅಲ್ಲದೆ ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎಚ್.ಸಿ.ಇಂದ್ರೇಶ್ ಅವರ ಕಚೇರಿ ಮನೆ ಮೇಲೆ ದಾಳಿ ನಡೆಸಲಾಗಿದೆ. ಯಾದಗಿರಿಯಲ್ಲಿ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್‌ನ-ಉಪ ಎಲೆಕ್ಟ್ರಿಕಲ್ ಇನ್ಸ್‌ಸ್ಪೆಕ್ಟರ್ ವೀರೇಶ್ ಹಿರೇಮಠ್, ಧಾರವಾಡದಲ್ಲಿ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಇಲಾಖೆಯ ತಾಲೂಕು ಕಲ್ಯಾಣ ಅಧಿಕಾರಿ ಎಂ.ಕೆ ಸುರಕೋಡ, ಹಾಸನದಲ್ಲಿ ಮಹಾನಗರ ಪಾಲಿಕೆಯ ಎಇಇ ಎಮ್.ಸಿ ಸತ್ಯನಾರಾಯಣ, ಮೈಸೂರಲ್ಲಿ ಜಲ ಭವನದ ಎಇಇ ಹಾಗೂ ಆಸೀಫ್ ಇಕ್ಬಾಲ್, ಜಯಪುರದ ಕೃಷ್ಣ ಭಾಗ್ಯ ಜಲನಿಗಮದ ಜೂನಿಯರ್ ಇಂಜಿನಿಯರ್ ಪ್ರಕಾಶ್ ಪಿಜಿ ಆಸ್ತಿ ಮೇಲೂ ಲೋಕಾಯುಕ್ತ ದಾಳಿಯಾಗಿದೆ.

ಲೋಕಾ ಬಲೆಗೆ ಬಿದ್ದವರ್ಯಾರು?

- ಸತೀಶ್, ಮಂಡ್ಯ ಲೋಕೋಪಯೋಗಿ ಎಇಇ
- ವಸಂತ ವಾಲಪ್ಪ ನಾಯಕ್, ಕೆಎಸ್‌ಆರ್‌ಟಿಸಿ ಮುಖ್ಯ ಎಂಜಿನಿಯರ್
- ಆರ್.ಶಶಿಧರ್, ರೈತಸೇವಾ ಸಹಕಾರ ಸಂಘದ ಸಿಇಒ
- ಎಚ್.ಸಿ.ಇಂದ್ರೇಶ್, ಪಶುವೈದ್ಯಕೀಯ ಸಹಾಯಕ ಪ್ರಾಧ್ಯಾಪಕ
- ವೀರೇಶ್ ಹಿರೇಮಠ್, ಉಪ ಎಲೆಕ್ಟ್ರಿಕಲ್ ಇನ್ಸ್‌ಸ್ಪೆಕ್ಟರ್ ಯಾದಗಿರಿ
- ಎಂ.ಕೆ ಸುರಕೋಡ, ತಾಲೂಕು ಅಲ್ಪಸಂಖ್ಯಾತ ಅಧಿಕಾರಿ ಧಾರವಾ
- ಎಮ್.ಸಿ ಸತ್ಯನಾರಾಯಣ, ಎಇಇ ಹಾಸನ ಮಹಾನಗರ ಪಾಲಿಕೆ
- ಆಸೀಫ್ ಇಕ್ಬಾಲ್, ಮೈಸೂರಲ್ಲಿ ಜಲ ಭವನ ಎಇಇ
- ಪ್ರಕಾಶ್ ಪಿ.ಜಿ, ಕೃಷ್ಣ ಭಾಗ್ಯ ಜಲನಿಗಮದ ಜೆಇ

> **ಬಾಗಿಲು ತೆರೆಯದ ಅಧಿಕಾರಿ ಹೈಡ್ರಾಮ**
>
> ಹಾಸನ ಮಹಾನಗರ ಪಾಲಿಕೆಯ ಎಇಇ ಸತ್ಯನಾರಾಯಣ ಅವರ ರವೀಂದ್ರ ನಗರದ ನಿವಾಸಕ್ಕೆ ಲೋಕಾಯುಕ್ತ ಡಿವೈಎಸ್ಪಿ ಸುರೇಶ್ ನೇತೃತ್ವದ ತಂಡ ದಾಳಿ ಮಾಡಿದಾಗ, ಅಧಿಕಾರಿ ಬಾಗಿಲು ತೆಗೆಯಲು ನಿರಾಕರಿಸಿದ್ದಾರೆ. ಸುಮಾರು ಅರ್ಧ ಗಂಟೆಗಳ ಕಾಲ ಬಾಗಿಲು ಬಡಿದರೂ ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ, ಲೋಕಾಯುಕ್ತ ಅಧಿಕಾರಿಗಳು ಚಾಣಾಕ್ಷತನ ಮೆರೆದರು. ಠಾಣೆಯ ಜೀಪ್ ಅನ್ನು ಮನೆಯ ಗೋಡೆಗೆ ಅಂಟಿಸಿ ನಿಲ್ಲಿಸಿ, ಅದರ ಮೇಲೆ ಹತ್ತಿ ಮೊದಲ ಮಹಡಿಯ ಮೂಲಕ ಮನೆಯೊಳಗೆ ಪ್ರವೇಶಿಸಿ ಸತ್ಯನಾರಾಯಣ ಅವರಿಗೆ ಶಾಕ್ ನೀಡಿದ್ದಾರೆ. ಇಂಡಿ ತಾಲೂಕಿನ ಕೆಬಿಜೆಎನ್‌ಎಲ್ ಜೂನಿಯರ್ ಎಂಜಿನಿಯರ್ ಪ್ರಕಾಶ್ ಪಿ.ಜಿ ಅವರ ಮೇಲೆ ನಡೆದ ದಾಳಿ ಕೂಡ ವಿಶೇಷವಾಗಿದೆ. ಪ್ರಕಾಶ್ ಅವರ ಇಂಡಿ ಕಚೇರಿ, ನಿವಾಸದ ಜೊತೆಗೆ ಬೆಂಗಳೂರಿನ ಮಹದೇವಪುರದಲ್ಲಿರುವ ಮನೆ ಹಾಗೂ ಬೀದರ್‌ನ ಹುಮನಾಬಾದ್ನಲ್ಲಿರುವ ಮನೆಯ ಮೇಲೆಯೂ ದಾಳಿ ನಡೆದಿದೆ. ವಿಶೇಷವೆಂದರೆ, ಇವರ ಪತ್ನಿಯ ಹೆಸರಿನಲ್ಲಿರುವ ಶಾಲೆಯ ಮೇಲೆಯೂ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಲಾಗಿದೆ.

ಎಸ್‌ಸಿಪಿ, ಟಿಎಸ್‌ಪಿ ಹಣ ಗ್ಯಾರಂಟಿಗಳಿಗೆ ಬಳಕೆ: ಬೆಲ್ಲದ

ಸಿದ್ದರಾಮಯ್ಯ ಸರಕಾರದಿಂದ ದಲಿತರಿಗೆ ಮೋಸ

ಬೆಂಗಳೂರು: ಎಸ್‌ಇಪಿ/ಟಿಎಸ್‌ಪಿ ಹಣವನ್ನು ದಲಿತರಿಗೆ ಬಳಸದೆ ಗ್ಯಾರಂಟಿಗಳಿಗೆ ವಿನಿಯೋಗಿಸಿ ಸಿದ್ದರಾಮಯ್ಯ ಸರಕಾರ ದಲಿತರಿಗೆ ಮೋಸ ಮಾಡಿ ಹಗಲು ದರೋಡೆ ಮಾಡುತ್ತಿದೆ ಎಂದು ಎಂದು ವಿಧಾನಸಭೆಯ ಪ್ರತಿಪಕ್ಷದ ಉಪನಾಯಕರಾದ ಅರವಿಂದ ಬೆಲ್ಲದ್ ಆರೋಪಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದಲಿತರು ಮತ್ತು ಹಿಂದುಳಿದವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಸರಕಾರ ದಲಿತರಿಗೆ ಏನು ಮಾಡದೇ ಹಗಲು ದರೋಡೆ ಮಾಡುತ್ತಿದೆ. ರಾಜ್ಯದ ಕಾಂಗ್ರೆಸ್ ಸರಕಾರ ಮೂರು ವರ್ಷದಿಂದ ಎಸ್‌ಇಪಿ/ಟಿಎಸ್‌ಪಿಯಿಂದ 38,859ಕೋಟಿ ಹಣ ಗ್ಯಾರಂಟಿಗಳಿಗೆ ಬಳಸಿದೆ. 2023-24 ರಲ್ಲಿ 11144 ಕೋಟಿ, 24-25 ರಲ್ಲಿ 14282 ಕೋಟಿ ಹಾಗೂ 25-26 ರಲ್ಲಿ 13433 ಕೋಟಿಯನ್ನು ಗ್ಯಾರಂಟಿಗೆ ಬಳಸಿದ್ದಾರೆ ಎಂದು ದೂರಿದರು.

ಈ ಬಾರಿಯ ಬಜೆಟ್‌ನಲ್ಲಿ ದಲಿತರ ಹಣ ಬಳಸಿರುವುದನ್ನು ವಾಪಸ್ ಕೊಡಬೇಕು. ಇದರೊಂದಿಗೆ ದಲಿತರಿಗೆ ಹೊಸದಾಗಿಯೂ ಹಣ ಕೊಡಬೇಕು. ಎಸ್‌ಸಿ/ಎಸ್‌ಟಿ ನಿಗಮಗಳಿಗೆ ಬಜೆಟ್‌ನಲ್ಲಿ ಕನಿಷ್ಠ ಒಂದು ಸಾವಿರ ಕೋಟಿ ನೀಡಬೇಕು. 7ಸಿ ಮೂಲಕ ದುರ್ಬಳಕೆಯಾಗುವುದನ್ನು ತಡೆಯಲು ಅದನ್ನು ತೆಗೆಯಬೇಕು. ದಲಿತರ ಹಣವನ್ನು ಗ್ಯಾರಂಟಿಗಳಿಗೆ ಬಳಸುವುದಿಲ್ಲ ಎಂಬ ವಾಗ್ದಾನ ಮಾಡಲಿ ಎಂದು ಆಗ್ರಹಿಸಿದರು.

> ದಲಿತರ ಜನಸಂಖ್ಯೆ ಪ್ರಕಾರ ಇಲಾಖೆಯಿಂದ ವೆಚ್ಚ ಮಾಡಬೇಕು ಎಂಬ ನಿಯಮ ಇದೆ. ದಲಿತರ, ಆದಿವಾಸಿಗಳ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂಬ ನಿಯಮ ಇದೆ. ಅವರಿಗಾಗಿ ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಯೋಜನೆಗಳಿಗೆ ಉಪಯೋಗ ಮಾಡಬೇಕು. ಆದರೆ ಇವರು ಗ್ಯಾರಂಟಿಗೆ ಹಣ ಬಳಸಿದ್ದಾರೆ. ದಲಿತರಿಗೆ ಮಾತ್ರ ಬಳಕೆಯಾಗಬೇಕಾದ ಹಣ ಸವರ್ಣೀಯರಿಗೆ, ಅಲ್ಪಸಂಖ್ಯಾತರಿಗೆ ಬಳಕೆಯಾಗುತ್ತಿರುವುದು ಎಷ್ಟು ಸರಿ?
>
> - ಅರವಿಂದ ಬೆಲ್ಲದ್
> ವಿಧಾನಸಭೆ ಪ್ರತಿಪಕ್ಷದ ಉಪನಾಯಕ

ಕೌಟುಂಬಿಕ ಕಥೆಯ ಕೃಷ್ಣ ರುಕ್ಕು

ಕಿರುತೆರೆಯಲ್ಲಿ ಈಗಾಗಲೇ ಹತ್ತು ಹಲವು ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಆ ಸಾಲಿಗೆ ಈಗ ಕೃಷ್ಣ ರುಕ್ಕು ಧಾರಾವಾಹಿಯೂ ಸೇರ್ಪಡೆಯಾಗಿದೆ. ಕೌಟುಂಬಿಕ ಕಥೆಯ ಜತೆಗೆ ಪ್ರೀತಿಯ ಕಥಾಹಂದರದ ಈ ಧಾರಾವಾಹಿ ಹಲವು ಅನಿರೀಕ್ಷಿತ ತಿರುವುಗಳ ಜತೆಗೆ ಸಾಗುತ್ತದೆ. ಅಣ್ಣನ ಅಕಾಲಿಕ ನಿಧನದ ನಂತರ ತನ್ನ ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ರುಕ್ಕು ಯಾವೆಲ್ಲಾ ಸವಾಲುಗಳನ್ನು ಎದಿರಿಸುತ್ತಾಳೆ ಎಂಬುದನ್ನು ಇಲ್ಲಿ ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗುತ್ತಿದೆ. ಪ್ರೀತಿ, ದ್ವೇಷ ಮತ್ತು ವಿಧಿಯಾಟದ ನಡುವೆ ಕೃಷ್ಣ-ರುಕ್ಕುವಿನ ಜೀವನ ಹೀಗೆ ಸಾಗಲಿದೆ ಎನ್ನುವುದು ಕುತೂಹಲಭರಿತವಾಗಿದೆ.

ಮೌನ ಗುಡ್ಡೇಮನೆ ರುಕ್ಕು ಪಾತ್ರದಲ್ಲಿ ನಟಿಸುತ್ತಿದ್ದು, ಅಕ್ಷಯ್ ನಾಯಕ್ ಕೃಷ್ಣನ ಪಾತ್ರ ನಿರ್ವಹಿಸುತ್ತಿದ್ದಾರೆ. ಹಿರಿಯ ನಿರ್ದೇಶಕ ಎಸ್.ನಾರಾಯಣ್, ಸೂರ್ಯ ಪ್ರಕಾಶ್ ಎಂಬ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಆ ಮೂಲಕ ಹಲವು ವರ್ಷಗಳ ಬಳಿಕ ಕನ್ನಡ ಕಿರುತೆರೆಗೆ ಮರಳಿ ಬಂದಿದ್ದಾರೆ. ನಟಿ ಸುಚಿತ್ರಾ, ಗಾಯಕ ನವೀನ ಸಜ್ಜು ಮುಂತಾದವರು ಧಾರಾವಾಹಿಯ ತಾರಾಬಳಗದಲ್ಲಿದ್ದಾರೆ. ಧೃತಿ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ದಿಲೀಪ್ ರಾಜ್ ಹಾಗೂ ಶ್ರೀವಿದ್ಯಾ, ಕೃಷ್ಣ ರುಕ್ಕು ಧಾರಾವಾಹಿಯನ್ನು ನಿರ್ಮಾಣ ಮಾಡುತ್ತಿದ್ದಾರೆ.

ಪ್ರೇಕ್ಷಕರ ಮನಸ್ಸಿಗೆ ಹತ್ತಿರವಾಗುವ ನೈಜ ಭಾವನೆಗಳು ಮತ್ತು ಕೌಟುಂಬಿಕ ಮೌಲ್ಯಗಳನ್ನೊಳಗೊಂಡ ಧಾರಾವಾಹಿ ಇದಾಗಿದ್ದು, ಪ್ರೀತಿ, ಜವಾಬ್ದಾರಿ ಮತ್ತು ವಿಧಿಯಾಟದ ಸುತ್ತ ನಡೆಯುವ ಒಂದು ಸುಂದರವಾದ ಕಥೆಯಾಗಿದೆ. ಈ ಧಾರಾವಾಹಿಯಲ್ಲಿನ ವೈವಿಧ್ಯಮಯ ಪಾತ್ರಗಳು ಮತ್ತು ಕುತೂಹಲಕಾರಿ ಕಥೆಯು ವೀಕ್ಷಕರ ಮನಸೆಳೆಯಲಿವೆ ಎಂದು ಜೀ ಕನ್ನಡ ವಾಹಿನಿಯ ದೀಪಕ್ ಶ್ರೀರಾಮುಲು ಹೇಳಿದರು. ಕೃಷ್ಣ ರುಕ್ಕು ಸೋಮವಾರದಿಂದ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ.

ದಾಖಲೆ ಬರೆಯಲು ಸಜ್ಜಾದ ನಾಗಬಂಧಂ

ಅಭಿಷೇಕ್ ನಾಮಾ ಸಾರಥ್ಯದಲ್ಲಿ ಮೂಡಿಬರುತ್ತಿರುವ ಪ್ಯಾನ್ ಇಂಡಿಯಾ ಚಿತ್ರ, ನಾಗಬಂಧಂ ಚಿತ್ರ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದೆ. ಈಗ ಬಿಡುಗಡೆಗೂ ಮೊದಲೇ ಹೊಸ ದಾಖಲೆ ಬರೆಯಲು ಸಿದ್ಧವಾಗಿದೆ. ಈ ಚಿತ್ರದ ಮೊದಲ ಹಾಡು ನಮೋ ರೇ... ಇದೇ 15 ರಂದು ಬಿಡುಗಡೆಯಾಗಲಿದೆ. ಭಗವಾನ್ ಶ್ರೀಮನ್ನಾರಾಯಣನಿಗೆ ಭಕ್ತಿಯ ಸಮರ್ಪಣೆಯಾಗಿ ಮೂಡಿಬಂದಿರುವ ಈ ಗೀತೆಯು ಚಿತ್ರದ ಆಳವಾದ ಆಧ್ಯಾತ್ಮಿಕ ಸತ್ವವನ್ನು ಪ್ರತಿಬಿಂಬಿಸುತ್ತದೆ. ಆಧ್ಯಾತ್ಮಿಕ ಹಿನ್ನೆಲೆಯುಳ್ಳ ಈ ಹಾಡು ಪ್ರೇಕ್ಷಕರಲ್ಲಿ ದೈವಿಕ ಭಾವನೆಯನ್ನು ಮೂಡಿಸಲಿದೆ.

ಈ ಹಾಡಿನಲ್ಲಿ ಸುಮಾರು ಸಾವಿರ ನೃತ್ಯ ಕಲಾವಿದರು ಭಾಗವಹಿಸಿರುವುದು ನಮೋ ರೇ ಗೀತೆಯ ಹೈಲೈಟ್ ಆಗಿದೆ. ಭಾರತದ ವಿವಿಧ ನೃತ್ಯ ಪ್ರಕಾರಗಳ ವೈವಿಧ್ಯತೆ ಮತ್ತು ಏಕತೆಯನ್ನು ಸಾರುವ ಸಲುವಾಗಿ ಈ ಬೃಹತ್ ನೃತ್ಯ ಸಂಯೋಜನೆಯನ್ನು ಮಾಡಲಾಗಿದೆ. ನೃತ್ಯ ಸಂಯೋಜಕರಾದ ಗಣೇಶ್ ಆಚಾರ್ಯ ಮತ್ತು ಸೃಷ್ಟಿ ವರ್ಮ ನೃತ್ಯ ನಿರ್ದೇಶದ ಈ ಹಾಡು ದೃಶ್ಯ ವೈಭವವನ್ನು ಉಣಬಡಿಸಲಿದೆ. ಮಾಧುರಿ ಶೇಷಾದ್ರಿ ಸಾಹಿತ್ಯದ ಈ ಹಾಡಿಗೆ ಜುನೈದ್ ಕುಮಾರ್ ಭಕ್ತಿ ಮತ್ತು ಆಧ್ಯಾತ್ಮ ಮೇಳೈಸಿದ ಸುಮಧುರ ಸಂಗೀತ ಸಂಯೋಜಿಸಿದ್ದಾರೆ. ಗಾಯಕಿ ಸಿಂಧೂಜಾ ಶ್ರೀನಿವಾಸನ್ ಕಂಠಸಿರಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ತಾಂತ್ರಿಕವಾಗಿಯೂ ನಾಗಬಂಧಂ ಅತ್ಯಂತ ಶ್ರೀಮಂತವಾಗಿದೆ. ಸೌಂದರ್ ರಾಜನ್ ಎಸ್ ಅವರ ಅಮೋಘ ಛಾಯಾಗ್ರಹಣ ಹಾಗೂ ಆರ್.ಸಿ ಪ್ರಣವ್ ಸಂಕಲನ ಕಾರ್ಯವು ಹಾಡಿನ ಮೆರುಗು ಹೆಚ್ಚಿಸಿದೆ. ಕಲಾ ನಿರ್ದೇಶಕ ಅಶೋಕ್ ಕುಮಾರ್ ಕಥೆಗೆ ಪೂರಕವಾದ ಅದ್ದೂರಿ ಮತ್ತು ಕಲಾತ್ಮಕ ಲೋಕವನ್ನೇ ಸೃಷ್ಟಿಸಿದ್ದಾರೆ. ಎನ್.ಐ.ಕೆ ಸ್ಟುಡಿಯೋಸ್ ಲಾಂಛನದಲ್ಲಿ ಕಿಶೋರ್ ಅನ್ನಪೂರ್ಣ ರೆಡ್ಡಿ ಮತ್ತು ನಿಶಿತಾ ನಾಗಿರೆಡ್ಡಿ ನಿರ್ಮಿಸುತ್ತಿದ್ದಾರೆ. ಭಾರತೀಯ ಸಿನಿಮಾದ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುವ ಗುರಿ ಹೊಂದಿರುವ ಈ ಚಿತ್ರವು ಪ್ರೇಕ್ಷಕರನ್ನು ಸೆಳೆಯಲು ಸಜ್ಜಾಗಿದೆ.



ಮಕ್ಕಳ ಚಿತ್ರ ಪಂಚರತ್ನಗಳು

ಪಂಚ ರತ್ನಗಳು ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ಪಂಚರತ್ನಗಳು ಮಕ್ಕಳ ಚಿತ್ರವಾಗಿದ್ದು ಎಲ್ಲರೂ ನೊಡಬೇಕಾದ ಸ್ಟೋರಿ ಸಿನಿಮಾದಲ್ಲಿದೆ. ಹಾಡುಗಳು ಸಂಗೀತ ಪ್ರಿಯರ ಮನಸೆಳೆದಿವೆ. ಶ್ರೀ ಕ್ಯಾಲಮ್ಮ ದೇವಿ ಫಿಲಂಸ್ ಬ್ಯಾನರ್‌ನಲ್ಲಿ ಜಿ.ಆರ್ .ನಾರಾಯಣ ಗೌಡ ಚಿತ್ರ ನಿರ್ಮಾಣ ಮಾಡಿದ್ದಾರೆ. ಆರ್.ಗೌತಮ್ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಮೂರು ಹಾಡುಗಳಿಗೂ ಸಾಹಿತ್ಯ ರಚಿಸಿದ್ದಾರೆ. ಪ್ರಥಮ್, ಯಶಸ್, ವಿಹಾನ್, ತನ್ವಿ, ಆಧ್ಯಾ ಪ್ರಥಮ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ತಾಯಿಯಾಗಿ ಬಿಂದು ಆಚಾರ್ಯ, ಶಿಕ್ಷಣ ಸಚಿವರಾಗಿ ಆನಂದ್ ನಗರ್ಕರ್ ಕಾಣಿಸಿಕೊಂಡಿದ್ದಾರೆ.

ಸಮಾಜದಲ್ಲಿ ಬಗೆಹರಿಯದೇ ಉಳಿದಿದ್ದ ಸಮಸ್ಯೆಯನ್ನು ಕಂಡರೂ ಕಾಣದಂತಿದ್ದ ಹಿರಿಯ ವರ್ತನೆಗೆ ಬೇಸತ್ತ ಮಕ್ಕಳು, ತಾವೇ ಆ ಸಮಸ್ಯೆಯನ್ನು ಸರಕಾರದ ಗಮನಕ್ಕೆ ತಂದು ಹೇಗೆ ಪರಿಹರಿಸುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಪ್ರಕೃತಿಯ ಅಂಶಗಳಾದ ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಇವುಗಳನ್ನು ಭುವನ್, ಜೀವಿತಾ, ಜ್ಯೋತಿ, ಅನಿಲ್ ಹಾಗೂ ಆಕಾಶ್ ಪಾತ್ರದ ಹೆಸರಿನಲ್ಲಿ ಬಿಂಬಿಸಲಾಗಿದೆ. ಇದು ಮಕ್ಕಳ ಚಿತ್ರವಾದರೂ ಎಲ್ಲರೂ ನೋಡಬೇಕಾದ ಸಿನಿಮಾವಾಗಿದೆ. ಒಳ್ಳೆಯ ಸಂದೇಶವೂ ಇದೆ ಎಂದು ನಿರ್ದೇಶಕ ಗೌತಮ್ ತಿಳಿಸಿದರು. ಸಂಗೀತ ಪ್ರಣವ್, ಛಾಯಾಗ್ರಹಣ ಅನಿಲ್ ಕಶ್ಯಪ್, ಸಂಕಲನ ಅಭಿಷೇಕ್ ಅವರದ್ದಾಗಿದೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಜೈಲರ್‌ನಲ್ಲಿ ಶಾರುಖ್

ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದ ಜೈಲರ್ ಭರ್ಜರಿ ಯಶಸ್ಸು ಪಡೆಯಿತು. ರಜನಿಕಾಂತ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದ ಜೈಲರ್‌ನಲ್ಲಿ ಶಿವರಾಜ್ ಕುಮಾರ್, ಮೋಹಲ್ ಲಾಲ್, ಜಾಕಿಶ್ರಾಫ್.. ಹೀಗೆ ಹಲವು ದಿಗ್ಗಜರು ಅಭಿನಯಿಸಿದ್ದರು. ಒಂದೇ ಚಿತ್ರದಲ್ಲಿ ತಮ್ಮ ನೆಚ್ಚಿನ ನಟರನ್ನು ಕಣ್ತುಂಬಿಕೊಂಡಿದ್ದ ಅಭಿಮಾನಿಗಳು ಬಹುಪರಾಕ್ ಎಂದಿದ್ದರು. ಜೈಲರ್ ಯಶಸ್ಸಿ ಖುಷಿಯಲ್ಲಿ ಈಗ ಜೈಲರ್ 2 ಮೂಡಿಬರುತ್ತಿದೆ. ಮೊದಲ ಭಾಗಕ್ಕಿಂತ ಎರಡನೇ ಭಾಗ ಇನ್ನೂ ಅದ್ದೂರಿಯಾಗಿ ಮೂಡಿಬರಲಿದೆ.

ಇಲ್ಲಿಯೂ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್, ನರಸಿಂಹನಾಗಿ ಅಬ್ಬರಿಸಲಿದ್ದಾರೆ. ವಿಶೇಷ ಎಂದರೆ ಬಾಲಿವುಡ್ ಕಿಂಗ್‌ಖಾನ್ ಶಾರುಖ್ ಖಾನ್ ಕೂಡ ಜೈಲರ್ 2ನಲ್ಲಿ ವಿಶೇಷ ಪಾತ್ರದಲ್ಲಿ ಅಭಿನಯಿಸಲಿದ್ದಾರೆ. ಆ ಮೂಲಕ ದಕ್ಷಿಣ ಭಾರತ ಚಿತ್ರರಂಗದಲ್ಲಿ ಮಿಂಚಲು ರೆಡಿಯಾಗಿದ್ದಾರೆ. ಮಾತ್ರವಲ್ಲ ರಜನಿಕಾಂತ್ ಅವರ ಋಣ ತೀರಿಸಿದ್ದಾರೆ. ಹೌದು ರಜನೀಕಾಂತ್ ಅವರು ಶಾರುಖ್ ಖಾನ್ ನಿರ್ಮಿಸಿ, ನಟಿಸಿದ್ದ ರಾ ಒನ್ ಸಿನಿಮಾದಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಅಂತೆಯೇ ಈಗ ಶಾರುಖ್, ರಜನಿಕಾಂತ್ ಅಭಿನಯದ ಜೈಲರ್ 2ನಲ್ಲಿ ಬಣ್ಣಹಚ್ಚಲಿದ್ದಾರೆ. ಈ ಹಿಂದೆ ರಜನಿಕಾಂತ್ ಅಭಿನಯದ ಕೂಲಿ ಚಿತ್ರದಲ್ಲಿ ಅಮೀರ್ ಖಾನ್ ಅತಿಥಿ ಪಾತ್ರದಲ್ಲಿ ನಟಿಸಿದ್ದರು. ಜೈಲರ್ 2ನಲ್ಲಿ ಶಾರುಖ್ ಖಾನ್ ಅವರ ಪಾತ್ರ ಏನಿರಬಹುದು ಎಂಬ ಕುತೂಹಲ ಕಾಡುತ್ತಿದೆ. ದಕ್ಷಿಣ ಭಾರತದ ಚಿತ್ರರಂಗ ಬಾಲಿವುಡ್ ದಿಗ್ಗಜರನ್ನು ಸೆಳೆಯುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಜೈಲರ್ 2 ಅದ್ದೂರಿ ವೆಚ್ಚದ ಚಿತ್ರವಾಗಿದ್ದು, ಮಿಥುನ್ ಚಕ್ರವರ್ತಿ, ರಮ್ಯಾ ಕೃಷ್ಣ ಸೇರಿದಂತೆ ದೊಡ್ಡ ತಾರಾಳಗವೇ ಚಿತ್ರದಲ್ಲಿದೆ.



ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ!

ಸಾಮಾನ್ಯ ಮತ್ತು ಬಡ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಿದರೆ, ಅದರಿಂದ ನಮ್ಮ ದೇಶದ ಭವಿಷ್ಯವನ್ನೇ ಉತ್ತಮಪಡಿಸಬಹುದು.

• ಗೀತಾ ಶ್ರೀನಿವಾಸನ್

ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ ಪ್ರಧಾನದೇವತೆ, ಶ್ರೀ ವೀರಭದ್ರಸ್ವಾಮಿ. ಮಠದ ಆವರಣದಲ್ಲಿರುವ ಪುರಾತನವಾದ ದೇವಾಲಯದಲ್ಲಿ, ದೇವರ ದರ್ಶನಮಾಡಿದ ಬಳಿಕ ಭಕ್ತಾದಿಗಳು, ತಮ್ಮ ನಡುವೆ ಪ್ರತ್ಯಕ್ಷವಾಗಿರುವ 'ಶ್ರೀ ವೀರಭದ್ರಸ್ವಾಮಿ'ಯ ದರ್ಶನ ಪಡೆಯಲು ಉತ್ಸುಕರಾಗಿ, ತಮ್ಮ ಸರದಿಗೆ ಕಾಯುತ್ತಾರೆ. ಹೌದು. ಇಲ್ಲಿನ ಮಠಾಧಿಪತಿಗಳಾದ ಶ್ರೀ ಷ.ಬ್ರ. ಡಾ. ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ದರ್ಶನ, ಆಶೀರ್ವಾದ ಪಡೆಯಲು ಸಾಲುಗಟ್ಟುತ್ತಾರೆ. ಇದಕ್ಕೆ ಕಾರಣ, ಸತ್ಯ-ಧರ್ಮಗಳ ಸಾಕಾರ ಮೂರ್ತಿಯಾಗಿರುವ ಸ್ವಾಮೀಜಿಯವರು, ಜನಸಾಮಾನ್ಯರ ಜೀವನದಲ್ಲಿ ಬದಲಾವಣೆ ತರುವಂಥ ಅನೇಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿದ್ದಾರೆ. ಅವರ ನೇತೃತ್ವದಲ್ಲಿ ಜಾತಿ, ಮತ, ಧರ್ಮಗಳ ಭೇದವಿಲ್ಲದೆ ಅನೇಕ ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ದಾನಧರ್ಮ ಕಾರ್ಯಗಳು ನಡೆಯುತ್ತಿವೆ.

ಶ್ರೀ ಬಸಲಿಂಗಯ್ಯ ಆರ್. ಹಿರೇಮಠ ಮತ್ತು ಶ್ರೀಮತಿ ಶಾಂತಮ್ಮನವರ ಸುಪುತ್ರರಾದ ಸ್ವಾಮೀಜಿಯವರು ಜನಿಸಿದ್ದು, ವಿಜಯಪುರ ಜಿಲ್ಲೆ, ಬಸವನ ಬಾಗೇವಾಡೀ ತಾಲೂಕ್, ಸಂಕನಾಳ ಗ್ರಾಮದಲ್ಲಿ. ತಮ್ಮ 16ನೇ ವಯಸ್ಸಿನಲ್ಲೇ ಮಠಾಧಿಪತ್ಯ ಸ್ವೀಕರಿಸಿ, ಸಮಾಜಸೇವೆಯಲ್ಲಿ ನಿರತರಾಗಿದ್ದಾರೆ. ಪ್ರಾಥಮಿಕ ಶಿಕ್ಷಣ: ಹುಣಶ್ಯಾಳ ಶಾಲೆ, ಜನ್ಮಸ್ಥಳದ ಸಮೀಪ. ಪ್ರೌಢಶಿಕ್ಷಣ: ಆರ್.ಪಿ.ಇ. ಹೈಸ್ಕೂಲ್, ರಾಜಾಜಿನಗರ, ಬೆಂಗಳೂರು.

ಪಿಯುಸಿ: ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು.

ಪದವಿ ಶಿಕ್ಷಣ-ಬಿ.ಎ.: ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರು.

ಎಂ.ಎ.: ಸಂಸ್ಕೃತದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದಿಂದ, ಮೂರು ಚಿನ್ನದ ಪದಕಗಳನ್ನು ಪಡೆದರು.

• ಉನ್ನತ ಅಧ್ಯಯನ

ಸದಾ ಅಧ್ಯಯನ ನಿರತರಾಗಿರುವ ಇವರು 2011ರಲ್ಲಿ 'ಶೈವಾಗಮಗಳು ಮತ್ತು ಶ್ರೀ ಸಿದ್ಧಾಂತ ಶಿಖಾಮಣಿ' ವಿಷಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. ಪರಮಪೂಜ್ಯ ಸ್ವಾಮೀಜಿಯವರು ತಮ್ಮ ವಿಶಾಲ ಅನುಭವ ಮತ್ತು ವಿಶ್ವಕೋಶೀಯ ಜ್ಞಾನದಿಂದ, ವೀರಶೈವ ಸಿದ್ಧಾಂತದ ಆಧ್ಯಾತ್ಮಿಕ ತತ್ತ್ವವನ್ನು, ಭಾರತದಲ್ಲಷ್ಟೇ ಅಲ್ಲದೆ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ರಷ್ಯಾ, ಸಿಂಗಪುರ, ಒಮಾನ್ ಮುಂತಾದ ದೇಶಗಳಲ್ಲಿ ಪ್ರಚಾರ ಮಾಡಿದ್ದಾರೆ. ಸ್ವಾಮೀಜಿಯವರ ಸಾಮಾಜಿಕ ಹಾಗೂ ಧಾರ್ಮಿಕ ಸೇವೆಯನ್ನು ಗುರುತಿಸಿ, ರಾಜ್ಯದ ಪ್ರಮುಖ ದಿನಪತ್ರಿಕೆ 'ವಿಜಯ ಕರ್ನಾಟಕ' ವತಿಯಿಂದ 'ಸತ್ಕರ್ಮ ಸತ್ಕಾರ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸ್ವಾಮೀಜಿಯವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗಗಳು ಇಲ್ಲಿವೆ:

• ಪ್ರ: ಸ್ವಾಮೀಜಿ, ತಾವು ಬೆಂಗಳೂರಿನಲ್ಲಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಗ್ರಾಮೀಣ ಪ್ರದೇಶದ ಮಕ್ಕಳಿಗೆ, ಉಚಿತ ವಸತಿ ಶಾಲೆಯನ್ನು ಇಂಗ್ಲಿಷ್ ಮೀಡಿಯಂನಲ್ಲಿ ನಡೆಸುತ್ತಿದ್ದೀರಿ. ಇದಕ್ಕೆ ಪ್ರೇರಣೆ ಏನು?

ಉ: ಅದಕ್ಕೆ ಒಂದು ಕಾರಣವಿದೆ. ನಾವು ಕೂಡ ಗ್ರಾಮೀಣ ಪ್ರದೇಶಕ್ಕೆ ಸೇರಿರುವಂಥ ಸಣ್ಣ ಹಳ್ಳಿಯಲ್ಲಿ ಹುಟ್ಟಿದ್ದು. ಸಣ್ಣಹಳ್ಳಿಯಾದ ಹುಣಶ್ಯಾಳದಲ್ಲಿ 1-7ನೇ ತರಗತಿವರೆಗೂ ಓದಿದ್ದು. 7ರವರೆಗೂ ನಾನೇ ಫಸ್ಟ್ ರ್‍ಯಾಂಕ್, ನಾನೇ ಲೀಡರ್ ಕ್ಲಾಸಿನಲ್ಲಿ. 7ನೇ ತರಗತಿ ಆದ ಮೇಲೆ, ಅದೇ ಜಿಲ್ಲೆಯ ಮಣಗಲಿ ಪಟ್ಟಿಕಾಂತಿ ಹಿರೇಮಠದ ಮಠಾಧಿಪತಿ ಸ್ವಾಮೀಜಿಯವರ ದೃಷ್ಟಿ ನನ್ನ ಮೇಲೆ ಬಿತ್ತು. ಆಗ ನಾನು ಈ ಮಠಕ್ಕೆ ಉತ್ತರಾಧಿಕಾರಿಯಾಗಬೇಕು ಅಂತ ಅವರು ಇಚ್ಛೆ ಮಾಡಿ, ನನ್ನ ತಂದೆ-ತಾಯಿಯನ್ನು ಕೇಳಿದರು. ಒಪ್ಪಿಕೊಂಡು ಬಂದ್ವಿ. ಇಲ್ಲಿ ಬೆಂಗಳೂರಲ್ಲಿ ಓಲ್ಡ್ ಫೋರ್ಟ್ ಸ್ಕೂಲ್‌ಗೆ ಎಂಟನೆಯ ಕ್ಲಾಸಿಗೆ ಇಂಗ್ಲಿಷ್ ಮೀಡಿಯಂಗೆ ಸೇರಿಕೊಂಡೆ. ಇಂಗ್ಲಿಷ್ ಮೀಡಿಯಂನಲ್ಲಿ ನನಗೇನೂ ಅರ್ಥವಾಗುತ್ತಿರಲಿಲ್ಲ. ಒಂದೆರಡು ಸಲ ಅತ್ತಿದ್ದೀನಿ. ಅವಾಗ, ಅಷ್ಟು ಚಿಕ್ಕ ವಯಸ್ಸಿನಲ್ಲಿ, ನನ್ನ ಮನಸ್ಸಿನಲ್ಲಿ ಒಂದು ವಿಚಾರ ಬಂತು. ಹಳ್ಳಿಯಲ್ಲಿ ಹುಟ್ಟಿದ ಮಕ್ಕಳಿಗೆ ಇಂಗ್ಲಿಷ್ ಅಂದರೆ ಎಷ್ಟು ಕಷ್ಟ. ದೇವರೇನಾದರೂ ಅವಕಾಶ ಮಾಡಿಕೊಟ್ಟರೆ, ಹಳ್ಳಿ ಮಕ್ಕಳಿಗೆ ನಾನು ಬೆಂಗಳೂರಿನಲ್ಲಿ ಹೈ-ಸ್ಟಾಂಡರ್ಡ್ ಇಂಗ್ಲಿಷ್-ಮೀಡಿಯಂ-ಸ್ಕೂಲ್ ಮಾಡಬೇಕು ಅಂತ ಎಂಟನೆಯ ಕ್ಲಾಸ್‌ನಲ್ಲಿದ್ದಾಗಲೇ ನಾನು ಸಂಕಲ್ಪ ಮಾಡಿದೆ.

• ಪ್ರ: ನಿಮ್ಮ ಆ ಸಂಕಲ್ಪವನ್ನು ಹೇಗೆ ಸಾಕಾರಗೊಳಿಸಿದಿರಿ?

ಆ ಸಂಕಲ್ಪ ಹೆಂಗೋ ಯೋಗಾಯೋಗ ಆಯ್ತು. 1989ರಲ್ಲಿ, 7ನೇ ತರಗತಿಯಾದ ಮೇಲೆ, ಇಲ್ಲೇ ಬಿಜಾಪುರ ಜಿಲ್ಲೆ ಮನುಗುಳಿ ಮಠದ ಉತ್ತರಾಧಿಕಾರಿಯಾಗಿ, ಬೆಂಗಳೂರಿಗೆ ಓದಲಿಕ್ಕೆ ಬಂದಿದ್ದು, 1994-95ರಲ್ಲಿ, ಈ ವಿಭೂತಿಪುರ-ಸಂಸ್ಥಾನ-ಮಠದ ಸ್ವಾಮೀಜೀಯವರು, ಚಿಕ್ಕಪೇಟೆಯಲ್ಲಿದ್ದ ಮಹಂತಿನ್ ಮಠದಲ್ಲಿದ್ದ ನನ್ನನ್ನ ನೋಡಿ, ಉತ್ತರಾಧಿಕಾರಿಯಾಗಿ ಮಾಡಿಕೊಳ್ಳಬೇಕು ಅಂತ ಅವರಿಗೆ ನನ್ನ ಮೇಲೆ ಮನಸು ಬಂದದ್ದು ಒಂದು ಯೋಗ. 1996ರಲ್ಲಿ ಈ ಮಠಕ್ಕೆ ಸ್ವಾಮೀಜಿಯಾಗಿ ಬಂದೆ. ಆ ಸಂಕಲ್ಪ ಪೂರ್ಣ ಆಗಿದ್ದು 2009ರಲ್ಲಿ, ವಿಭೂತಿಪುರಮಠದಲ್ಲಿ. 2001ರಲ್ಲಿ ನಮ್ಮ ಗುರುಗಳು ಲಿಂಗೈಕರಾದರು. ಆಮೇಲೆ ನಾನು ಮಠದ ಜವಾಬ್ದಾರಿ ತೆಗೆದುಕೊಂಡೆ. ಅವಾಗಿನಿಂದ ನನ್ನ ತಲೆಯಲ್ಲಿ ಇತ್ತು ಬಡವರಿಗೆ ಸ್ಕೂಲ್ ಮಾಡಲೇಬೇಕು, ನಾನೇನು ಅವಾಗಿನಿಂದ ಕನಸು ಕಂಡಿದ್ದೇನೋ ಅದನ್ನು ಮಾಡಬೇಕಂತ. 2009ರಲ್ಲಿ ದೊಡ್ಡದಾಗಿ ಒಂದು ಸ್ಕೂಲನ್ನು ಪ್ರಾರಂಭಿಸಿದೆವು. ಹಳ್ಳಿಯ ಮಕ್ಕಳಿಗೆ ಒಳ್ಳೆಯ ಕ್ವಾಲಿಟಿ ಎಜುಕೇಶನ್ ಕೊಡಬೇಕು, ಅವರಿಗೆ ಒಳ್ಳೆಯ ಆಹಾರ ಕೊಡಬೇಕು, ಸೌಲಭ್ಯಗಳನ್ನ ಕೊಡಬೇಕಂತ. ಸೇರಿಕೊಳ್ಳುವಾಗ ನಮ್ಮ ಮಕ್ಕಳಿಗೆ, ಬರೀ ಜನರಲ್ ಇಂಗ್ಲಿಷ್ ಬಂದಿರುತ್ತೆ. ಇಲ್ಲಿ, 6-10ನೇ ತರಗತಿಯವರೆಗೆ ಓದಿ, ನನಗಿಂತಲೂ ಫ್ಲುಯೆಂಟಾಗಿ ಇಂಗ್ಲಿಷ್ ಮಾತನಾಡುತ್ತಾರೆ, ಆಂಕರಿಂಗ್ ಮಾಡುತ್ತಾರೆ. ಇದು ನನ್ನ ಕನಸು, ಹಿಂಗಾಗಬೇಕಿತ್ತು, ಅಂತ. ಇವತ್ತು ಆಗಿದೆ. ಪ್ರತಿ ವರ್ಷ 100% ರಿಸಲ್ಟು. ಎಲ್ಲರೂ ಫಸ್ಟ್ ಕ್ಲಾಸ್, ಡಿಸ್ಟಿಂಕ್ಷನ್.

ಶ್ರೀಮಠದ ಶ್ರೀಗಳು 2000ರಲ್ಲಿ ಎಂ.ಎ. ಪದವಿಯಲ್ಲಿ ತ ಸುವರ್ಣ ಪದಕಗಳನ್ನು ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರಿಂದ ಪಡೆಯುತ್ತಿರುವುದು.

• ಪ್ರ: ಇಲ್ಲಿನ ಮಕ್ಕಳ ಶಿಸ್ತು-ಸಂಯಮ ಅನುಕರಣೀಯ. ಇದನ್ನು ಅವರಲ್ಲಿ ರೂಢಿಸಲು ಯಾವ ಕ್ರಮ ಪಾಲಿಸಲಾಗಿದೆ?

ಉ: ಈ ಶಾಲೆ ಒಳ್ಳೆಯ ಡಿಸಿಪ್ಲಿನ್ಡ್ ಸೈನಿಕ್ ಸ್ಕೂಲ್ ತರಹ ಇರಬೇಕು ಅಂತ ಮನಸ್ಸು ಮಾಡ್ದೆ. ಮಕ್ಕಳು ದಿನ ಬೆಳಗ್ಗೆ 5 ಗಂಟೆಗೆ ಏಳಬೇಕು. 5.30-6.30ರವರೆಗೂ ಯೋಗ ಮಾಡಬೇಕು. 7ರಿಂದ ಸೇವೆ ಮಾಡಬೇಕು. ಮಠದ ಕಸ ಗುಡಿಸುವುದು, ಪಾತ್ರೆ ತೊಳೆಯುವುದು ಮುಂತಾಗಿ, ಅವರ ಕೆಲಸ ಅವರೇ ಮಾಡಿಕೊಳ್ಳಬೇಕು. ಅವರಿಗೆ ಜೀವನದ ಅನುಭವ ಆಗ್ಬೇಕು. 8 ಗಂಟೆಗೆ ಪ್ರಾರ್ಥನೆ. ರುದ್ರ, ಶ್ರೀ ಸೂಕ್ತ, ಪುರುಷ ಸೂಕ್ತ, ಶಂಕರಾಚಾರ್ಯರ ಸ್ತೋತ್ರಗಳು ಮುಂತಾದುವನ್ನ ಪಠಿಸಬೇಕು. ಸಂಸ್ಕೃತ ಉಚ್ಚಾರಣೆ ಮಾಡಿದರೆ, ನಮ್ಮ ಧ್ವನಿ ಸ್ಪಷ್ಟವಾಗತ್ತೆ. ಶಬ್ದಗಳ ಪ್ರಯೋಗ ಸ್ಪಷ್ಟವಾಗಿ ಬರುತ್ತದೆ. ಮತ್ತೆ ಊಟ ಮಾಡಿ ಶಾಲೆಗೆ ಹೋಗುತ್ತಾರೆ. ಮತ್ತೆ ಸಾಯಂಕಾಲ ಸೇವೆ ಮಾಡಿ, 6ರಿಂದ 6.30ರ ವರೆಗೆ ಪ್ರಾರ್ಥನೆ.

• ಪ್ರ: ಈ ಶಾಲೆಯ ಮಕ್ಕಳಿಗೆ ದೊರೆಯುವ ವಿಶೇಷ ಸೌಲಭ್ಯಗಳ ಬಗ್ಗೆ ತಿಳಿಸಿ

ಉ: ಈ ಶಾಲೆಯಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಸುಮಾರು 500 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ, ಭೋಜನ, ಕಂಪ್ಯೂಟರ್ ತರಬೇತಿ, ಸ್ಮಾರ್ಟ್ ಕ್ಲಾಸ್, ಪ್ರಯೋಗಾಲಯ ಹಾಗೂ ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಶಿಸ್ತು, ಯೋಗಾಭ್ಯಾಸ, ನೈತಿಕ ಮೌಲ್ಯಗಳು ಹಾಗೂ ಸೇವಾಭಾವನೆಗೆ ವಿಶೇಷ ಒತ್ತು ನೀಡಲಾಗುತ್ತದೆ.

• ಪ್ರ: ವಸತಿಶಾಲೆಯಲ್ಲಿರುವ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಮತ್ತು ಮೌಲ್ಯಗಳನ್ನು ಅಳವಡಿಸಲು ಯಾವ ರೀತಿ ಕಾಳಜಿ ವಹಿಸಬೇಕು?

ಉ: ಇದು ಬಹಳ ಮುಖ್ಯ. ತಂದೆ ತಾಯಿಯರು ತಮ್ಮ ಮಕ್ಕಳನ್ನು ವಸತಿಶಾಲೆಗೆ ಕಳುಹಿಸಲು 2 ಉದ್ದೇಶ- ಅವರಿಗೆ ಒಳ್ಳೆಯ ಶಿಕ್ಷಣ ಸಿಗಲಿ ಹಾಗೂ ಸಂಸ್ಕಾರ ಬರಲಿ ಅಂತ. 5-15ವರ್ಷದವರೆಗೆ, ಮಕ್ಕಳನ್ನು ಶಿಸ್ತಿನಿಂದ ಬೆಳೆಸಬೇಕು, ತಿದ್ದಿ, ತಿಳಿಸಿ, ಬುದ್ಧಿ ಕಲಿಸುವ, ಮೂರ್ತಿಮಾಡುವ ವಯಸ್ಸದು. 15 ವರ್ಷದೊಳಗೆ ನಾವು ಹೇಗೆ ಫೌಂಡೇಷನ್ ಹಾಕುತ್ತೇವೋ ಹಾಗೆ ಅವರ ಭವಿಷ್ಯ ನಿರ್ಮಾಣವಾಗತ್ತೆ.

• ಪ್ರ: ಇಂದಿನ ಶಿಕ್ಷಣ ವ್ಯವಸ್ಥೆಯ ಗುಣಮಟ್ಟ ಉತ್ತಮಗೊಳಿಸಲು ತಮ್ಮ ಸಲಹೆ

ಉ: ಇಂದಿನ ಶಿಕ್ಷಣವ್ಯವಸ್ಥೆಯ ಗುಣಮಟ್ಟ ಉತ್ತಮಗೊಳಿಸಲು ಪಠ್ಯದಲ್ಲಿರುವ ವಿಷಯ ಬದಲಾವಣೆಯಾಗಬೇಕು. ಅಪ್ರಾಯೋಗಿಕ ಪಠ್ಯವಿಷಯಗಳು ತುಂಬಿವೆ. ಅದರಿಂದ ಮಕ್ಕಳ ಭವಿಷ್ಯ ನಿರ್ಮಾಣ ವಾಗುತ್ತಿಲ್ಲ. ಮುಖ್ಯವಾಗಿ ನಾವು ಯಾವ ದೇಶದಲ್ಲಿರುತ್ತೇವೋ, ಎಲ್ಲಿ ಹುಟ್ಟಿದ್ದೇವೋ ಆ ದೇಶದ ಬಗ್ಗೆ ಗೌರವ ಮೂಡಿಸುವಂಥ ವಿಷಯ ನಮ್ಮ ಪಠ್ಯದಲ್ಲಿರಬೇಕು. ಜಗತ್ತೇ ಒಂದು ಮನೆಯಾದರೆ, ಭಾರತ ದೇವರ ಮನೆ ಇದ್ದಹಾಗೆ. ಇದು ಒಂದು ರೀತಿಯ ಅಧ್ಯಾತ್ಮಿಕ ಕೇಂದ್ರ. ಎಂತೆಂಥ ಮಹಾತ್ಮರು ಇಲ್ಲಿ ಜನ್ಮ ತಾಳಿದ್ದಾರೆ. ಈ ಮಣ್ಣಲ್ಲಿ ಅಂಥ ಶಕ್ತಿ ಇದೆ. ಈ ಮಣ್ಣಿನ ಗುಣದ ಪರಿಚಯವೇ ನಮ್ಮ ಮಕ್ಕಳಲ್ಲಿ ಇಲ್ಲದೇ ಇರುವಂಥ ಶಿಕ್ಷಣ ನಮ್ಮಲ್ಲಿದೆ. ಅದು ಮೊಟ್ಟಮೊದಲು ಬದಲಾವಣೆ ಆಗಬೇಕು. ಮುಖ್ಯವಾಗಿ ಶಿಕ್ಷಣದ ಪದ್ಧತಿಯೊಳಗೆ ಅಧ್ಯಾತ್ಮದ ಪಠ್ಯವಿಷಯಗಳನ್ನು ಇಡಬೇಕು. ದಿನಕ್ಕೆ ಒಂದು ಗಂಟೆಯಾದರೂ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ, ಸ್ಪಿರಿಚುಯಾಲಿಟಿ ಬಗ್ಗೆ ತಿಳಿವಳಿಕೆ ನೀಡುವಂತಿರಬೇಕು.

• ಪ್ರ: ವಸತಿಸಹಿತ ಶಾಲಾ ಮಕ್ಕಳ ಪೋಷಕರಿಗೆ ನಿಮ್ಮ ಕಿವಿಮಾತು

ಉ: ಇಂದಿನ ಮಕ್ಕಳು ಈ ಸ್ಥಿತಿಗೆ ಬರಲು ಪೋಷಕರೇ ಕಾರಣ. ಅತಿಯಾದ ವ್ಯಾಮೋಹ. ಅವರಿಗೆ ಬೇಡವಾದುದನ್ನೆಲ್ಲ ಕೊಡುತ್ತಾರೆ. ಅವರು ಕೇಳಿದ್ದನ್ನೆಲ್ಲ ಕೊಡುತ್ತಾರೆ. ಪ್ರತಿಯೊಬ್ಬ ಮನುಷ್ಯ ಹುಟ್ಟಿರುವುದೇ ಒಂದು ವಿಶೇಷವಾದ ಗುರಿಯನ್ನು ಮುಟ್ಟಲಿಕ್ಕೆ ಎಂಬುದನ್ನು ಮಕ್ಕಳಿಗೆ ತಿಳಿಹೇಳಬೇಕು. ಪ್ರೀತಿ ಒಳಗಿರಬೇಕು, ಆದರೆ ಮೇಲೆ ಮಕ್ಕಳನ್ನು ತಿದ್ದುವಂಥ ಮನೋಭಾವನೆ ಇರಬೇಕು.

• ಪ್ರ: ತಾವು ಮಠಾಧೀಶರಾದ ಬಳಿಕ ತಮ್ಮ ಮಠ ಕಂಡ ಅಭಿವೃದ್ಧಿ ಬಗ್ಗೆ ತಿಳಿಸಿ

ಉ: 'ಶ್ರೀ ಜಗದ್ಗುರು ಪಂಚಾಚಾರ್ಯ' ಸ್ಮಾರಕವಾಗಿ ಭವ್ಯ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಈ ಮಂಟಪದ ಆದಾಯವನ್ನು ಮಠದ ಉಚಿತ ವಸತಿ ಶಾಲೆಯ ನಿರ್ವಹಣೆಗೆ ಬಳಸಲಾಗುತ್ತಿದೆ. ಮೇಘಾಲಯ ರಾಜ್ಯದ ಬಡ ವಿದ್ಯಾರ್ಥಿಗಳನ್ನು ದತ್ತು ಪಡೆದು ಶಿಕ್ಷಣ ನೀಡಲಾಗುತ್ತಿದೆ. ಬಡವರ ಸೇವೆಗೆ 'ಸಂಧ್ಯಾಸುಖಧಾಮ', ಉಚಿತ ಡಯಾಲಿಸಿಸ್ ಕೇಂದ್ರ ಹಾಗೂ ವೃದ್ಧಾಶ್ರಮವನ್ನು ಸ್ಥಾಪಿಸಲಾಗಿದೆ. ಶ್ರೀ ವೀರಭದ್ರಸ್ವಾಮಿ ದೇವಾಲಯದ ಸಂಪೂರ್ಣ ನವೀಕರಣದ ಜತೆಗೆ ಸಂತೃಪ್ತಿ ಸದನ, ಗುರು ಸದನ, ಅತಿಥಿ ಸದನ, ಶಿವಯೋಗ ಸದನಗಳನ್ನು ನಿರ್ಮಿಸಲಾಗಿದೆ. ಮಠದ ಆವರಣದಲ್ಲಿಯೇ ವಸತಿ ನಿಲಯ, ವಾಣಿಜ್ಯ ಸಂಕೀರ್ಣ, ವೇದ ಮತ್ತು ಸಂಸ್ಕೃತ ಪಾಠಶಾಲೆ, ಕೈಗಾರಿಕಾ ತರಬೇತಿ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ.

ಬೆಂಗಳೂರು-ತುಮಕೂರು ಹೆದ್ದಾರಿಯ ಸಮೀಪ 12.5 ಎಕರೆ ಭೂಮಿಯನ್ನು ಮಠದ ಹೆಸರಿನಲ್ಲಿ ಖರೀದಿಸಲಾಗಿದೆ. ಎನ್.ಪಿ.ಎಸ್ ಫೌಂಡರ್ ಚೇರ್ಮನ್ ಡಾ. ಕೆ.ಪಿ.ಗೋಪಾಲಕೃಷ್ಣರವರು ಮಠದ ಚಟುವಟಿಕೆ ಮತ್ತು ಶಿಸ್ತನ್ನು ನೋಡಿ, ಖುಷಿಯಾಗಿ, ಒಂದು ಎನ್.ಪಿ.ಎಸ್ ಶಾಲೆಯನ್ನ ನಮಗೆ ಕೊಟ್ಟರು. ಲೋನ್ ಕೂಡ ಅವರೇ ಕೊಡಿಸಿದರು. ಆದುದರಿಂದ ಆ ಕೆಲಸವೂ ಆಗುತ್ತಿದೆ. ಅಯೋಧ್ಯೆಯಲ್ಲಿ ಒಂದು ಜಾಗ ತೆಗೆದುಕೊಳ್ಳುತ್ತಿದ್ದೇವೆ. ಇಲ್ಲಿ ನಾವು ಬಡ ಮಕ್ಕಳಿಗೆ ಏನು ಮಾಡುತ್ತಿರುವೆವೋ, ಉತ್ತರ ಭಾರತದಲ್ಲಿ ಇರುವಂಥ ಬಡ ಮಕ್ಕಳಿಗೂ ಇಂಥದೇ ಒಂದು ಒಳ್ಳೆಯ ವಸತಿ ಸಹಿತ ಶಾಲೆ ಕೊಡಬೇಕು.

• ಪ್ರ: ತಮ್ಮ ಮುಂದಿನ ಯೋಜನೆಗಳ ಬಗ್ಗೆ ತಿಳಿಸಿ

ಉ: ಮುಖ್ಯವಾಗಿ ನನ್ನ ಉದ್ದೇಶ 6-10ನೇ ತರಗತಿಯವರೆಗೂ ಬಡ ಮಕ್ಕಳಿಗೆ ಕ್ವಾಲಿಟಿ ಎಜುಕೇಷನ್ ಕೊಡಬೇಕು. ಇನ್ನೊಂದು ನನ್ನ ಗಮನದಲ್ಲಿ ವಿಚಾರ ಮಾಡುವುದು, ಉತ್ತರ ಭಾರತದೊಳಗೆ ಎಲ್ಲೆಲ್ಲಿ ಬಡತನದ ರಾಜ್ಯಗಳಿವೆ ಅಲ್ಲಿ ಎಲ್ಲ ಬಡತನ ನಿವಾರಣೆ ಮಾಡುವುದಕ್ಕಾಗಲ್ಲ. ನಮ್ಮಿಂದ ಒಂದು ಕುಟುಂಬದ ಬಡತನ ನೀಗಿದರೂ ಸಾಕು. ಆ ದೃಷ್ಟಿಯಿಂದ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಲ್ಲಿ ಈ ತರಹದ ಉಚಿತ ಆಶ್ರಯ ಕೊಟ್ಟು, ಮಕ್ಕಳಿಗೆ ಶಿಕ್ಷಣವಾಗಬೇಕು, ಒಳ್ಳೆಯ ಆಹಾರ ಕೊಡಬೇಕು, ಒಳ್ಳೆಯ ಸಂಸ್ಕಾರ ಕೊಡಬೇಕು, ನಮ್ಮ ಶಕ್ತಿ ಎಷ್ಟು ಇರುತ್ತೊ ಆ ರೀತಿಯಲ್ಲಿ ಮಾಡಬೇಕು ಅನ್ನುವ ಉದ್ದೇಶ ಇದೆ.

• ಪ್ರ: ಮನುಗುಳಿ ಮಠದಲ್ಲಿ ಆಗಿರುವ ಅಭಿವೃದ್ಧಿ, ಚಟುವಟಿಕೆಗಳ ಬಗ್ಗೆ ತಿಳಿಸಿ

ಉ: ಮನುಗುಳಿ ಮಠದ ಗುರುಗಳು ನನ್ನನ್ನು ಈ ಜೀವನಕ್ಕೆ ತಂದವರು. 1992ರಲ್ಲಿ ಪಟ್ಟಾಧಿಕಾರ ಮಾಡಿದ ಮೇಲೆ ನನ್ನ ಅಧ್ಯಯನಕ್ಕೆ ಊರ ಜನರು ಸೇರಿ ದುಡ್ಡನ್ನು ಕೊಟ್ಟರು. ಅಂದರೆ ಅವರಿಗೆ ನನ್ನ ಮೇಲೆ ಅಷ್ಟು ಭರವಸೆ. ನಮ್ಮ ಗುರುಗಳು ನನ್ನನ್ನು ಇಷ್ಟು ಬೆಳೆಸಿದರು, ಆ ಮಠದ ಅಭಿವೃದ್ಧಿ ಆಗಬೇಕು, ಆ ಮಠದಿಂದ ಆ ಭಾಗದ ಜನರಿಗೆ ಒಳ್ಳೆಯದಾಗಬೇಕು ಅಂತ ಹೇಳಿ, ಅಲ್ಲಿಯ ಮಠದ ರಿನೊವೇಶನ್ ಮಾಡಿದೆವು. ಒಂದು ಕಲ್ಯಾಣ ಮಂಟಪ ಕಟ್ಟಿದ್ದೇವೆ. ಈಗ ಅಲ್ಲೊಂದು ರೆಸಿಡೆನ್ಷಿಯಲ್ ಸ್ಕೂಲ್ ಮಾಡುತ್ತಿದ್ದೇವೆ. ಆ ಮಠದಿಂದ ನಾನು ಉಪಕೃತನಾದುದರಿಂದ ನಾನು ಇರುವವರೆಗೂ ಆ ಭಾಗದಲ್ಲಿ, ಇಲ್ಲಿ, ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಲೇ ಇರ್ತೀವಿ.

ಪ್ರ: ಓರ್ವ ವಿದ್ಯಾರ್ಥಿ ಉತ್ತಮ ಗುರಿ ಹೊಂದಲು ಬೇಕಾದ ಅಳತೆಗೋಲುಗಳಾವುವು?

ಉ: ಮೊಟ್ಟಮೊದಲಿಗೆ ಅವನಲ್ಲಿ ಸ್ಫೂರ್ತಿ ತುಂಬಬೇಕು. ಒಳ್ಳೆಯ ಗುರಿಯನ್ನು ಹೊಂದುವ ರೀತಿಯಲ್ಲಿ ಅವನನ್ನು ತಯಾರುಮಾಡಬೇಕು. ಗೊತ್ತು-ಗುರಿ ಇರುವುದಿಲ್ಲ ಮಕ್ಕಳಿಗೆ. ಚಿಕ್ಕ ವಯಸ್ಸಿನಲ್ಲಿ ಯಾವ ಗುರಿ ಇಟ್ಟುಕೊಳ್ಳುವುದರಿಂದ ಏನಾಗುತ್ತದೆ ಎಂಬುದನ್ನು ನಾವು ಮನವರಿಕೆ ಮಾಡಿಕೊಡಬೇಕು. ಆ ಗುರಿ ತಲುಪುವವರೆಗೂ ಕನಸು ಹೆಂಗೆ ಕಾಣಬೇಕು ಅಂದರೆ ಮಲಗಿಕೊಳ್ಳಲು ಬಿಡಬಾರದು ಅಂತ ಹೇಳಿದ್ದಾರೆ ಅಬ್ದುಲ್ ಕಲಾಮ್‌ರವರು. ಆ ರೀತಿಯ ಒಂದು ಪ್ರೇರಣೆಯನ್ನು ಮಕ್ಕಳಿಗೆ ಕೊಟ್ಟರೆ, ವಿವೇಕಾನಂದರು ಹೇಳಿರುವಂತೆ, 'ಉತ್ತಿಷ್ಠತ ಜಾಗ್ರತ, ಪ್ರಾಪ್ಯವರಾನ್ ನ ನಿಬೋಧತ'- ಅಂದರೆ ಗುರಿ ತಲುಪುವ ತನಕ ನಿಲ್ಲಬೇಡ ಎಂಬ ಪ್ರೇರಣೆಯನ್ನು ಮಕ್ಕಳಿಗೆ ಕೊಡಬೇಕು.

ಶ್ರೀ ವಾದಿರಾಜತೀರ್ಥರು...

• ಪುಷ್ಪಾ ಮೋಹನ ಮುದಕವಿ, ಬೆಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ಸೋದೆಯಲ್ಲಿ, ಫಾಲ್ಗುಣ ಮಾಸದ ಬಹುಳ ತೃತೀಯಾ ದಿನದಂದು (ಮಾರ್ಚ್ 6ರಂದು) ಶ್ರೀ ವಾದಿರಾಜತೀರ್ಥರ ಆರಾಧನೋತ್ಸವ ನಡೆಯಲಿದೆ. ತನ್ನಿಮಿತ್ತ ಈ ಅಕ್ಷರಾಂಜಲಿ...

ವೇದಾಂತ ಸಾಮ್ರಾಜ್ಯದ ಪ್ರತಿಭಾ ಸಂಪನ್ನರು, ಭಾಗವತ ಧರ್ಮವನ್ನು ಪ್ರಚುರ ಪಡಿಸಿದ ಯತೀಶ್ವರರು, ಪ್ರಕಾಂಡ ಪಂಡಿತರು, ಪ್ರತಿವಾದಿ ಭಯಂಕರರು, ಮಹಿಮಾನ್ವಿತರು, ದ್ವೈತ ವಾಙ್ಮಯ ತಪಸ್ವಿಗಳು, ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದೆ ಮಠದ ಯತಿಪರಂಪರೆಯಲ್ಲಿ ಹತ್ತೊಂಬತ್ತನೆಯವರಾದ ವಾಗೀಶತೀರ್ಥರಿಂದ ಆಶ್ರಮ ಸ್ವೀಕರಿಸಿದ ಯತಿವರ್ಯರು ಶ್ರೀ ವಾದಿರಾಜ ತೀರ್ಥರು. ವೈದಿಕ ಸಂಸ್ಕೃತಿಯ ಪುನರುತ್ಥಾನದಲ್ಲಿ ಅವರ ಸೇವೆ ಅಪ್ರತಿಮ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಕುಂಭಾಸಿಯ ಸನಿಹದ ಹೂವಿನಕೆರೆ ಶ್ರೀ ವಾದಿರಾಜರ ಜನ್ಮಸ್ಥಳ. ಪೂರ್ವಾಶ್ರಮದ ಹೆಸರು ಭೂವರಾಹ. ಭೂವರಾಹದೇವರ ಭಕ್ತರಾದ ಶ್ರೀ ರಾಮಾಚಾರ್ಯ ಹಾಗೂ



ಸರಸ್ವತಿದೇವಿ ದಂಪತಿಗಳಿಗೆ ಭೂವರಾಹದೇವರ ಅನುಗ್ರಹದಿಂದ ಜನಿಸಿದ ಮಗುವನ್ನು ಕೊಟ್ಟ ಮಾತಿನಂತೆ ಉಪನಯನಾನಂತರ ಶ್ರೀ ವಾಗೀಶತೀರ್ಥರಿಗೆ ತಂದೊಪ್ಪಿಸಿದರು ಹೆತ್ತವರು. ಆ ಹುಡುಗನಿಗೆ ಶ್ರೀ ವಾಗೀಶ ತೀರ್ಥರು ಎಂಟನೆಯ ವಯಸ್ಸಿಗೇ ಸನ್ಯಾಸ ದೀಕ್ಷೆ ನೀಡಿ ವಾದಿರಾಜತೀರ್ಥರೆಂದು ಕರೆದರು.

ಶ್ರೀ ವಿದ್ಯಾನಿಧಿತೀರ್ಥರು ಹಾಗೂ ಶ್ರೀ ವ್ಯಾಸತೀರ್ಥರಲ್ಲಿ ಶಾಸ್ತ್ರಾಭ್ಯಾಸ ನಡೆಯಿತು. ಶ್ರೀ ವಾಗೀಶತೀರ್ಥರ ಉತ್ತರಾಧಿಕಾರಿಗಳಾಗಿ ಅವರು ಪೀಠವೇರಿದರು. ಆರಾಧ್ಯ ದೈವ ಹಯಗ್ರೀವ ದೇವರಿಗೆ ಪ್ರತಿದಿನ ಹಯ ಗ್ರೀವವನ್ನು (ಕಡಲೆಬೇಳೆ ಮಡ್ಡಿ) ನೈವೇದ್ಯಮಾಡಿ (ಸಾಕ್ಷಾತ್ತಾಗಿ ಹಯಗ್ರೀವ ದೇವ ಭುಂಜಿಸುತ್ತಿದ್ದ), ಅದು ಉಳಿಸಿದ್ದನ್ನು ಪ್ರಸಾದವಾಗಿ ಸ್ವೀಕರಿಸುತ್ತಿದ್ದರು. ಹಯಗ್ರೀವ ಸ್ವಾಮಿಯ ಪೂರ್ಣಾನುಗ್ರಹಕ್ಕೆ ಅವರು ಪಾತ್ರರಾಗಿದ್ದರು. ''ಕುದುರೆ ಬಂದಿದೆ ಚೆಲ್ವ ಕುದುರೆ ಬಂದಿದೆ, ಮುದದಿ ವಾದಿರಾಜರಿಗೊಲಿದ ಕುದುರೆ ಜ್ಞಾನ ಭಕ್ತಿ ಕೊಡುವ ಕುದುರೆ'' ಎಂದು ಅವರು ಹಿಗ್ಗಿ ಹಾಡಿದ್ದಾರೆ.

ಶ್ರೀ ವಾದಿರಾಜರು ಪೀಠಕ್ಕೆ ಬಂದೊಡನೆಯೇ ಅನೇಕ ಸುಧಾರಣಾ ಕಾರ್ಯಗಳನ್ನು ಕೈಗೊಂಡರು. ಉಡುಪಿಯಲ್ಲಿ ಇಂದಿಗೂ ನಡೆದು ಬರುತ್ತಿರುವ ಪರ್ಯಾಯ ಪದ್ಧತಿ ಅವರ ಕೊಡುಗೆಯೇ. ಸ್ವಮತೀಯರು ಹಾಗೂ ಅನ್ಯಮತೀಯರೂ ವಾದಿರಾಜರಲ್ಲಿ ಗೌರವವನ್ನು ಇರಿಸಿದ್ದರು. ಕೋಟೇಶ್ವರದ ಬ್ರಾಹ್ಮಣರಿಗೆ, ಸಾರಸ್ವತರಿಗೆ ತಮ್ಮ ಮಠದ ದೀಕ್ಷೆಯಿತ್ತು ಪುರಸ್ಕರಿಸಿದ ವಾದಿರಾಜರು ಕುಡುಮ ತೀರ್ಥಕ್ಷೇತ್ರಕ್ಕೆ 'ಧರ್ಮಸ್ಥಳ' ಎಂಬ ಹೆಸರಿತ್ತು ಅಲ್ಲಿ ಶ್ರೀ ಮಂಜುನಾಥನ ಪ್ರತಿಷ್ಠಾಪನೆ ಮಾಡಿದರು. ಹಲವಾರು ರಾಜ-ಮಹಾರಾಜರುಗಳು, ಸಾಮಂತರು ವಾದಿರಾಜರ ಸೇವೆಗೆ ಸದಾ ಸಿದ್ಧರಿದ್ದರು. ಸೋದೆಯ ಅರಸಪ್ಪನಾಯಕನಿಗೆ ವಾದಿರಾಜರೇ ಸರ್ವಸ್ವ. ವಿಜಯನಗರದ ಅರಸ ವೆಂಕಟಪತಿರಾಯನು ವಾದಿರಾಜರಿಗೆ 'ಪ್ರಸಂಗಾಭರಣತೀರ್ಥ'ರೆಂಬ ಬಿರುದಿತ್ತು ಗೌರವಿಸಿದನು. ಅರಸಪ್ಪನಾಯಕ ದಾನವಾಗಿತ್ತ ತ್ರಿವಿಕ್ರಮದೇವರು, ಶ್ರೀ ವೇಣುಗೋಪಾಲ ದೇವರು, ಶ್ರೀ ಲಕ್ಷ್ಮೀದೇವಿ ಹಾಗೂ ಇತರ ದೇವತೆಗಳ ಗುಡಿಕಟ್ಟಿಸಿ, ಪಂಚವೃಂದಾವನಗಳನ್ನು, ಧವಳಗಂಗೆ ಮುಂತಾದ ಪವಿತ್ರ ತೀರ್ಥಗಳನ್ನು ನಿರ್ಮಿಸಿ ಸೋಂದಾವನ್ನು ಪವಿತ್ರತೀರ್ಥಕ್ಷೇತ್ರವನ್ನಾಗಿಸಿದ ವಾದಿರಾಜರು ತಮ್ಮ ಐದನೆಯ ಪರ್ಯಾಯವನ್ನು ಅಲ್ಲಿಯೇ ನೆರವೇರಿಸಿದರು, ಸೋದೆ ಕ್ಷೇತ್ರವನ್ನು ಕಿರು ಉಡುಪಿಯಾಗಿಸಿದರು. ತಿರುಪತಿ ಬೆಟ್ಟವು ವಾದಿರಾಜರ ಕಣ್ಣಿಗೆ ಸಾಲಿಗ್ರಾಮದಂತೆ ಕಂಡುಬರಲು ಮೊಣಕಾಲಿನಿಂದಲೇ ಅವರು ಬೆಟ್ಟವನ್ನು ಹತ್ತಿದರಂತೆ.

ಶ್ರೀ ವಾದಿರಾಜ ತೀರ್ಥರು ಸಂಸ್ಕೃತ, ತುಳು, ಕನ್ನಡ ಭಾಷೆಗಳಲ್ಲಿ ಅಪಾರ ಪಾಂಡಿತ್ಯವುಳ್ಳವರಾಗಿದ್ದರು. ಅವರು 'ಹಯವದನ' ಅಂಕಿತದಲ್ಲಿ ನೂರಾರು ಕೃತಿಗಳನ್ನು ಕನ್ನಡದಲ್ಲಿ, ಸುಮಾರು 70 ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ, 'ಯುಕ್ತಿಮಲ್ಲಿಕಾ' ಅವರ ಮೇರುಕೃತಿ. ತೀರ್ಥಪ್ರಬಂಧ, ಸರಸಭಾರತೀ ವಿಲಾಸ, ರುಕ್ಮಿಣೀಶ ವಿಜಯ, ಲಕ್ಷಾಲಂಕಾರ ಮುಂತಾದವು ಸೊಗಸಾದ ಕೃತಿಗಳು.

ವಾದಿರಾಜರು ತಮ್ಮ ತಪಃಶಕ್ತಿಯಿಂದ ಭೂತರಾಜರನ್ನು ಅಡಿಯಾಳನ್ನಾಗಿ ಮಾಡಿಕೊಂಡು ವಿಮತೀಯರ ಆಕ್ರಮಣವನ್ನು ತಡೆಯುವಲ್ಲಿ ಯಶಸ್ವಿಯಾದರು. ಸೋದೆಯ ವಾದಿರಾಜರ ಮಠದಲ್ಲಿ ಭೂತರಾಜರಿಗಾಗಿಯೇ ಪ್ರತ್ಯೇಕ ಗುಡಿ ಇದೆ. ವಾದಿರಾಜರು ತಮ್ಮ ಕೊನೆಗಾಲವನ್ನು ಸೋದೆಯಲ್ಲಿಯೇ ಕಳೆದರು. ಶಿಷ್ಯರನ್ನು ತಯಾರುಮಾಡಿ ಅವರಿಗೆ ಮಠವನ್ನೊಪ್ಪಿಸಿ ಕ್ರಿ.ಶ 1480ರಿಂದ 1600ರ ವರೆಗಿನ 120 ವರ್ಷಗಳ ತಮ್ಮ ಜೀವಿತಾವಧಿಯಲ್ಲಿ ಅದ್ಭುತ ಕಾರ್ಯಗಳನ್ನು ಮಾಡಿ ಶಾರ್ವರಿ ಸಂವತ್ಸರ ಫಾಲ್ಗುಣ ವದ್ಯ ತೃತೀಯಾ ದಿನದಂದು ತಾವೇ ಕಟ್ಟಿಸಿದ ವೃಂದಾವನದಲ್ಲಿ ಸಶರೀರರಾಗಿ ಪ್ರವೇಶಿಸಿದರು. ಅವರು ಹೀಗೆ ಸಶರೀರರಾಗಿ ವೃಂದಾವನ ಪ್ರವೇಶ ಮಾಡಿದ ಪ್ರಥಮರು, ಪಂಚ ವೃಂದಾವನಗಳಲ್ಲಿ ಸನ್ನಿಹಿತರಾದವರು. ಇಂಥ ಶ್ರೀ ವಾದಿರಾಜರು ವೃಂದಾವನ ದಲ್ಲಿದ್ದುಕೊಂಡೇ ಭಕ್ತಾನುಕಂಪಿಯಾಗಿ ಇಂದಿಗೂ ಇಷ್ಟಾರ್ಥಗಳನ್ನು ನೆರವೇರಿಸುತ್ತಿರುವರು. ಸೋದೆಯಲ್ಲಿ ಜರುಗುತ್ತಿರುವ ಆರಾಧನೋತ್ಸವದ ಈ ಸಂದರ್ಭದಲ್ಲಿ ಶ್ರೀ ವಾದಿರಾಜತೀರ್ಥರನ್ನು ನೆನೆದು ಅವರ ಅನುಗ್ರಹಕ್ಕೆ ಪಾತ್ರರಾಗೋಣ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಇದೊಂದು ಬಗೆಯ ದ್ವಿದಳ ಧಾನ್ಯ (3)
3. ಧಾನ್ಯವನ್ನು ಸಂಗ್ರಹಿಸುವ ಸ್ಥಳ (3)
5. ಪಿಂಗಾಣಿ ಬಟ್ಟಲುಗಳಲ್ಲಿ ನೀರು ತುಂಬಿಟ್ಟು ಕಡ್ಡಿಯಿಂದ ಬಡಿದು ನುಡಿಸುವ ವಾದ್ಯ (5)
7. ನೀರಿನಲ್ಲಿ ಉಂಟಾದ ಅಲೆ (3)
9. ಮೂರೆಳೆಯ ಹಾರ (3)
11. ಕೆಸರಿನಲ್ಲಿ ಹುಟ್ಟಿದುದು ಎಂದರ್ಥದಲ್ಲಿ ತಾವರೆ (3)
14. ಮೇಲಿನಿಂದ ನೋಡಿದಾಗ ಕಂಡ ಭೂಮಿ (3)
16. ವರ್ತನೆಯಲ್ಲಿ ಕಂಡುಬಂದ ಬದಲಾವಣೆ (5)
17. ತರುವಿನೊಂದಿಗೆ ಬಂದಿರುವ ಸಾವು (3)
18. ಅಡುಗೆಯಲ್ಲಿ ಖಾರದ ರುಚಿ ಕೊಡುವ ವಸ್ತು (3)

ಮೇಲಿಂದ ಕೆಳಕ್ಕೆ

1. ನಿರಂತರವನ್ನು ಹೀಗೂ ಕರೆಯಬಹುದು (4)
2. ಧೈರ್ಯ, ಸಾಹಸಕ್ಕೆ ಮತ್ತೊಂದು ಹೆಸರು (4)
4. ಜಾಡಮಾಲಿಗೆ ಮತ್ತೊಂದು ಹೆಸರು (4)
5. ಎರಡಕ್ಷರದ ಮತ್ತೊಂದು ವಿಶ್ವ (2)
6. ಮತ್ತೊಂದು ಅವಸ್ಥೆ (2)
8. ಅಲೋಹ ಧಾತುವೊಂದು ಫಿರಂಗಿ ಮದ್ದು ಕೂಡಾ ಆದೀತು (3)
10. ಅಪ್ಪಣ್ಣ ನುಡಿಸುತ್ತಿದ್ದ ವಾದ್ಯ (3)
11. ಮೋಸ ಮಾಡುವುದನ್ನು ಹೇಳುವ ರೀತಿಯಲ್ಲಿ ಹಣೆಯಲ್ಲಿ ಹಾಕುವ ನಾಮವಿದೆ (4)
12. ಮಂತ್ರವನ್ನು ಮತ್ತೆಮತ್ತೆ ಉಚ್ಚರಿಸುವುದು (2)
13. ಅವನ ಮಾನ ಕಳೆದು ಮಾಡಿದ ಅಗೌರವ (4)
14. ಹಿಂದಿನ ಕಾಲದಲ್ಲಿ ಕಾಣಲು ಸಿಗುತ್ತಿದ್ದ ಪಲ್ಲಕ್ಕಿ (2)
15. ಕೆಲಸವೊಂದಕ್ಕೆ ನೇಮಕ ಮಾಡು (4)

ಆತ್ಮವಿಶ್ವಾಸವನ್ನು ಹೆಚ್ಚಿಸುವ ಮಂತ್ರವೆಂಬ ಮನದ ರಕ್ಷಾಕವಚ

ಒಬ್ಬ ಯುವ ಶಿಷ್ಯ, ಮಾನಸಿಕ ಒತ್ತಡ ಮತ್ತು ಉದ್ವೇಗದಿಂದ ಬಳಲುತ್ತಿದ್ದನು. ಅವನಿಗೆ ಕಲಿಯುವಿಕೆಯಲ್ಲಿ ಏಕಾಗ್ರತೆ ಸಿದ್ಧಿಸುತ್ತಿರಲಿಲ್ಲ, ಸಣ್ಣಪುಟ್ಟ ಸೋಲುಗಳಿಗೂ ಖಿನ್ನತೆ ಮೂಡುತ್ತಿತ್ತು. ಇದರಿಂದ ದೈಹಿಕವಾಗಿಯೂ ಆತ ಬಳಲಿದ್ದನು. ಈ ಎಲ್ಲ ಸಂಕಷ್ಟಗಳಿಗೆ ಪರಿಹಾರ ಹುಡುಕುತ್ತಾ ತನ್ನ ಆಶ್ರಮದ ಗುರುಗಳ ಬಳಿ ಬಂದು ಅಳಲು ತೋಡಿಕೊಂಡ. ''ಗುರುಗಳೇ, ನನಗೆ ಏಕಾಗ್ರತೆಯೇ ಇಲ್ಲ, ಸದಾ ಆತಂಕ. ನನ್ನ ಶರೀರದ ತೇಜಸ್ಸೇ ಮಾಸಿಹೋಗಿದೆ. ನೀವು ಮಂತ್ರ ಜಪಿಸಲು ಹೇಳುತ್ತೀರಿ. ಆದರೆ ಕೇವಲ ಶಬ್ದಗಳ ಪಠಣದಿಂದ ಇಷ್ಟೆಲ್ಲಾ ಸಮಸ್ಯೆಗಳು ಹೇಗೆ ಬಗೆಹರಿಯುತ್ತವೆ?'' ಎಂದು ಕೇಳಿದ.

ಗುರುಗಳು ನಸುನಕ್ಕು, ಅವನಿಗೆ ಒಂದು ಲೋಟದಲ್ಲಿ ನೀರನ್ನು ತರಲು ಹೇಳಿದರು. ನಂತರ ಆ ನೀರಿಗೆ ಸ್ವಲ್ಪ ಉಪ್ಪನ್ನು ಬೆರೆಸಿ, ''ಈಗ ಇದನ್ನು ಕುಡಿ'' ಎಂದರು. ಶಿಷ್ಯ ಕುಡಿದು ಮುಖ ಸಿಂಡರಿಸಿದ. ಗುರುಗಳು ಹೇಳಿದರು, ''ನೋಡು, ನೀರಿನಲ್ಲಿ ಕರಗಿದ ಉಪ್ಪು ಕಣ್ಣಿಗೆ ಕಾಣುತ್ತಿಲ್ಲ, ಆದರೆ ಅದರ ಪ್ರಭಾವ ನೀರಿನ ರುಚಿಯ ಮೇಲೆ ಆಗಿದೆ. ಹಾಗೆಯೇ ಮಂತ್ರದ ಶಬ್ದಗಳು ಕಣ್ಣಿಗೆ ಕಾಣದಿದ್ದರೂ, ಅದರ ಧ್ವನಿ, ಶ್ವಾಸ ಮತ್ತು ಲಯಬದ್ಧವಾದ ಕಂಪನಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನಮ್ಮ ದೇಹದ ಚೈತನ್ಯ ಮತ್ತು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುವ ಶಕ್ತಿಯ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ''.

ಶಿಷ್ಯನ ಆಸಕ್ತಿ ಹೆಚ್ಚಿತು. ಗುರುಗಳು ವಿವರಿಸಲು ಶುರುಮಾಡಿದರು: ''ನೋಡು, ಪ್ರತಿ ಸ್ತೋತ್ರ, ಮಂತ್ರದ ಉಚ್ಚಾರವೂ ಕೇವಲ ಪದಗಳಲ್ಲ. ಇದನ್ನು ಪಠಿಸಲು ನಾಲಿಗೆಗೆ ಹೆಚ್ಚಿನ ಒತ್ತಡ ನೀಡಬೇಕಾಗುತ್ತದೆ. ಇದು ಧ್ವನಿಪೆಟ್ಟಿಗೆ, ತುಟಿಗಳು ಮತ್ತು ಧ್ವನಿ ಹೊರಡಿಸುವ ಅಂಗಗಳನ್ನು ಸಕ್ರಿಯಗೊಳಿಸುತ್ತದೆ. ಈ ಕ್ರಿಯೆಯಿಂದ ಉಂಟಾಗುವ ಕಂಪನವು ಮಿದುಳಿನ ಅಧೋಮಸ್ತಿಷ್ಕ ಗ್ರಂಥಿಯನ್ನು (Hypothalamus) ಪ್ರಚೋದಿಸುತ್ತದೆ. ಈ ಗ್ರಂಥಿಯಿಂದ ಬಿಡುಗಡೆಯಾಗುವ ಅಂತಃಸ್ರಾವಗಳು (Hormones) ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ, ಮನಸ್ಸನ್ನು ಸಂತೋಷದಿಂದ ಇಡುತ್ತವೆ. ಆದ್ದರಿಂದಲೇ ಮಂತ್ರೋಚ್ಚಾರಣೆಯ ಬಳಿಕ ನಿನಗೊಂದು ರೀತಿಯ ಆಹ್ಲಾದತೆ ಮತ್ತು ಪರವಶತೆ ಅನುಭವಕ್ಕೆ ಬರುತ್ತವೆ. ಇದು ನಿನ್ನ ಮನಸ್ಸನ್ನು ನಿರಾಳವಾಗಿಸಿ, ಒಂದು ಅದ್ಭುತ ಶಮನಕಾರಿಯಂತೆ ಕೆಲಸ ಮಾಡುತ್ತದೆ. ನಿನ್ನ ಮನಸ್ಸು ಉದ್ವೇಗಗೊಂಡಿದ್ದಾಗ, ಮಂತ್ರಪಠಣವು ಚಿತ್ತವನ್ನು ಬೇರೆಡೆಗೆ ಹರಿಸಿ, ಸಮಸ್ಯೆಯನ್ನು ತಣ್ಣಗಿನ ಮನಸ್ಸಿನಿಂದ ಅವಲೋಕಿಸಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ನೆರವಾಗುತ್ತದೆ''.

ಶಿಷ್ಯ ಎಲ್ಲವನ್ನೂ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದ. ಇದೇ ಸಮಯವೆಂದು ಗುರುಗಳು ಮುಂದುವರಿಸುತ್ತಾ, ''ನಮ್ಮ ದೇಹದಲ್ಲಿರುವ, ಚಕ್ರಗಳೆಂದು ಕರೆಯಲ್ಪಡುವ ಶಕ್ತಿಕೇಂದ್ರಗಳನ್ನು ಸಮತೋಲನದಲ್ಲಿರಿಸಲು ಮಂತ್ರಗಳು ಸಹಕಾರಿ. ಶಕ್ತಿಯ ಏರುಪೇರಾದಾಗ ದೇಹದಲ್ಲಿ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ಮಂತ್ರಪಠಣ ಈ ಶಕ್ತಿಗಳನ್ನು ಮೊದಲಿನ ಸ್ಥಿತಿಗೆ ತಂದು, ಹೃದಯದ ಕ್ಷಮತೆ ಹೆಚ್ಚಿಸಿ, ಮಿದುಳನ್ನು ನಿರಾಳವಾಗಿಸುತ್ತದೆ. ಉಸಿರಾಟವನ್ನು ಸರಾಗಗೊಳಿಸುತ್ತದೆ. ಇದು ನಿನ್ನ ಕಲಿಯುವಿಕೆಯನ್ನು ಸಹ ಸುಲಭವಾಗಿಸುತ್ತದೆ, ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಬದುಕಿನ ಸೋಲಿನಿಂದ ಉಂಟಾದ ಖಿನ್ನತೆ ಮತ್ತು ನಿರುತ್ಸಾಹವನ್ನು ಹೋಗಲಾಡಿಸಲು ಮಿದುಳಿಗೆ ಸಕಾರಾತ್ಮಕ ಭಾವನೆ ಮೂಡಿಸುವ ಕಂಪನಗಳು ಬಿಡುಗಡೆಯಾಗುತ್ತವೆ. ನಿನ್ನ ಮೊಗದಲ್ಲಿ ರಕ್ತಪರಿಚಲನೆ ಹೆಚ್ಚಿ, ವಿಷಕಾರಿ ವಸ್ತುಗಳು ನಿವಾರಣೆಯಾಗಿ, ಹೊಸರಕ್ತ ತುಂಬಿಕೊಳ್ಳುವುದರಿಂದ ತೇಜಸ್ಸು ಸಹ ಹೆಚ್ಚುತ್ತದೆ'' ಎಂದರು. ಶಿಷ್ಯನಿಗೆ ಅರಿವಾಯಿತು- ಮಂತ್ರ ಕೇವಲ ಶಬ್ದವಲ್ಲ, ಅದು ದೇಹ ಮತ್ತು ಮನಸ್ಸನ್ನು ಬೆಸೆಯುವ ಮಹತ್ವದ ವಿಜ್ಞಾನ ಎಂದು.

''ಮನನಾತ್ ತ್ರಾಯತೇ ಇತಿ ಮಂತ್ರಃ ಅಂದರೆ, ಮನಸ್ಸಿನಿಂದ ಪದೇ ಪದೆ ನೆನೆಯುತ್ತಾ, ಜಪಿಸುವುದರಿಂದ ಯಾವುದು ನಮಗೆ ರಕ್ಷಣೆ ಕೊಡುತ್ತದೆಯೋ ಅದೇ ಮಂತ್ರ'' ಎಂದು ಹೇಳಿದ ಗುರುಗಳು ಕಣ್ಣು ಮುಚ್ಚಿ ಮತ್ತೆ ಧ್ಯಾನಕ್ಕೆ ಕುಳಿತರು. ಈಗ ಶಿಷ್ಯನ ಅನುಮಾನ-ಆತಂಕಗಳೆಲ್ಲವೂ ನಿವಾರಣೆಯಾಗಿ ಗುರುಗಳು ಹೇಳಿದ ಮಂತ್ರವನ್ನು ಪಠಿಸಲು ಅವನು ಕೂಡ ಧ್ಯಾನಸ್ಥನಾಗಿ ಏಕಾಗ್ರತೆಯಿಂದ ಕುಳಿತನು.

ಅತಿಯಾದ ಒತ್ತಡದ ಈ ಜೀವನದಲ್ಲಿ, ದಿನಕ್ಕೆ ಹತ್ತು ನಿಮಿಷಗಳ ಕಾಲ ಯಾವುದಾದರೊಂದು ಮಂತ್ರ ಅಥವಾ ಸ್ತೋತ್ರವನ್ನು ಏಕಾಗ್ರತೆಯಿಂದ ಪಠಿಸಿ ನೋಡಿ. ಅದು ನಿಮ್ಮ ಮಿದುಳಿಗೆ ವಿಶ್ರಾಂತಿ ನೀಡುವುದಲ್ಲದೆ, ಆತ್ಮವಿಶ್ವಾಸವನ್ನು ಹೆಚ್ಚಿಸಿ ಬದುಕಿನ ಸೋಲುಗಳನ್ನು ಎದುರಿಸುವ ಶಕ್ತಿಯನ್ನು ನೀಡುತ್ತದೆ. ನಮ್ಮ ಸನಾತನ ಧರ್ಮ ಮತ್ತು ಹಿರಿಯರು ನೀಡಿದ ಈ ವರವನ್ನು ಉಪಯೋಗಿಸಿ ಕೊಳ್ಳುವ ಜಾಣ್ಮೆ ನಮಗಿರಬೇಕು.

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ ಶ್ರೀಲಂಕಾ ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಮತ್ತೆ ಮಿಂಚಿದ ಸಂಜು | ಶಿವಂ ದುಬೆ ಆಕರ್ಷಕ ಬ್ಯಾಟಿಂಗ್ | ಜೇಕಬ್ ಬೆಥೆಲ್ ಶತಕ ವಿಫಲ

ಆಂಗ್ಲರನ್ನು ಹೊರದಬ್ಬಿ ಭಾರತ ಫೈನಲ್‌ಗೆ

ಮುಂಬೈ: ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಸಂಜು ಸ್ಯಾಮ್ಸನ್ ಮತ್ತು ಶಿವಂ ದುಬೆಯ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಇಂಗ್ಲೆಂಡ್ ವಿರುದ್ಧದ ಟಿ20 ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಭಾರತವು ಗುರುವಾರ ಇಂಗ್ಲೆಂಡ್ ತಂಡವನ್ನು 7 ರನ್‌ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದೆ.

ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಟಾಸ್ ಗೆದ್ದ ಇಂಗ್ಲೆಂಡ್ ನಾಯಕ ಹ್ಯಾರಿ ಬ್ರೂಕ್ ಬೌಲಿಂಗ್ ಮಾಡಲು ನಿರ್ಧರಿಸಿದರು. ಹೀಗಾಗಿ ಭಾರತ ತಂಡ ಮೊದಲು ಇನ್ನಿಂಗ್ಸ್ ಆರಂಭಿಸಿತು. ಟೀಮ್ ಇಂಡಿಯಾ ಪರವಾಗಿ ಸಂಜು ಸ್ಯಾಮ್ಸನ್ ಮತ್ತು ಅಭಿಷೇಕ್ ಶರ್ಮಾ ಇನ್ನಿಂಗ್ಸ್ ಆರಂಭಿಸಿದರು. ಅಭಿಷೇಕ್ ಶರ್ಮಾ (9) ವಿಲ್ ಜ್ಯಾಕ್ ಎಸೆತದಲ್ಲಿ ಸಿಕ್ಸರ್ ಹೊಡೆಯುವ ಭರದಲ್ಲಿ ಔಟಾದರು. ಅಭಿಷೇಕ್ ಶರ್ಮಾ ವಿಕೆಟ್ ಪತನದ ನಂತರ ಸಂಜು ಜತೆಗೆ ಇಶಾನ್ ಕಿಶನ್ ಸೇರಿಕೊಂಡರು. ಆ ಜೋಡಿ ಭಾರತ ತಂಡದ ಇನ್ನಿಂಗ್ಸ್ ಅನ್ನು ಸ್ಥಿರಗೊಳಿಸಿ, 2ನೇ ವಿಕೆಟ್‌ಗೆ 45 ಎಸೆತಗಳಲ್ಲಿ 97 ರನ್‌ಗಳ ಜತೆಯಾಟ ಪ್ರದರ್ಶಿಸಿತು.

ಸ್ಯಾಮ್ಸನ್-ದುಬೆ ಅಬ್ಬರ: ಅದ್ಭುತ ಬ್ಯಾಟಿಂಗ್ ಮಾಡುತ್ತಿದ್ದ ಇಶಾನ್ ಕಿಶನ್ 18 ಎಸೆತಗಳಲ್ಲಿ 4 ಬೌಂಡರಿ ಮತ್ತು 2 ಸಿಕ್ಸರ್ ನೆರವಿನಿಂದ 39 ರನ್ ಗಳಿಸಿ ಔಟಾದರು. ಬಳಿಕ ಬಂದ ಶಿವಂ ದುಬೆ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಒಂದೆಡೆ ಸಂಜು ತಮ್ಮ ಬ್ಯಾಟಿಂಗ್ ಅರ್ಭಟವನ್ನು ಮುಂದುವರೆಸಿದರು. ಶಿವಂ ದುಬೆ ಮತ್ತು ಸಂಜು ಸ್ಯಾಮ್ಸನ್ 22 ಎಸೆತಗಳಲ್ಲಿ 43 ರನ್ ಜತೆಯಾಟ ಆಡಿದರು. ಶತಕದತ್ತ ಮುನ್ನುಗ್ಗುತ್ತಿದ್ದ ಸಂಜು (89) ವಿಲ್ ಜ್ಯಾಕ್ ಅವರ ಸ್ಪಿನ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಬಿರುಸಿನ ಬ್ಯಾಟಿಂಗ್ ಮಾಡಿದ ಸಂಜು ಸ್ಯಾಮ್ಸನ್ 42 ಎಸೆತಗಳಲ್ಲಿ 8 ಬೌಂಡರಿ ಮತ್ತು 7 ಸಿಕ್ಸರ್ ನೆರವಿನಿಂದ 89 ರನ್ ಗಳಿಸಿ ಭಾರತ ತಂಡದ ಪರ ಗರಿಷ್ಠ ಸ್ಕೋರ್ ಎನಿಸಿಕೊಂಡರು. ಸಂಜು ಸ್ಯಾಮ್ಸನ್ ಔಟ್ ಆದ ನಂತರ ಕ್ರೀಸ್‌ಗೆ ಬಂದ ನಾಯಕ ಸೂರ್ಯಕುಮಾರ್ ಯಾದವ್ (11) ಉತ್ತಮ ಪ್ರದರ್ಶನ ನೀಡಲಿಲ್ಲ. ಇದರ ನಡುವೆ ಶಿವಂ ದುಬೆ 25 ಎಸೆತಗಳಲ್ಲಿ 1 ಬೌಂಡರಿ ಮತ್ತು 4 ಸಿಕ್ಸರ್ ನೆರವನಿಂದ 43 ರನ್ ಗಳಿಸಿ ರನೌಟ್‌ಗೆ ಬಲಿಯಾದರು. ತಿಲಕ್ ವರ್ಮಾ ಕೇವಲ 7 ಎಸೆತಗಳಲ್ಲಿ 21 ರನ್ ಗಳಿಸಿ ಔಟಾದರು. ಕೊನೆಯಲ್ಲಿ ಅಬ್ಬರಿಸಿದ ಹ್ಯಾರ್ದಿಕ್ ಪಾಂಡ್ಯ 12 ಎಸೆತಗಳಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ನೆರವಿನಿಂದ 27 ರನ್ ಗಳಿಸಿ ಔಟಾದರೆ, ಅಕ್ಷರ್ ಪಟೇಲ್ ಅಜೇಯ 2 ರನ್ ಗಳಿಸಿದರು.

ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್.

ಶಿವಂ ದುಬೆ ಭರ್ಜರಿ ಪ್ರದರ್ಶನ.

ಇಂಗ್ಲೆಂಡ್ ಪರ ಜೋಫ್ರಾ ಆರ್ಚರ್ 4 ಓವರ್‌ಗಳಲ್ಲಿ 61 ರನ್ ಕೊಟ್ಟು ದುಬಾರಿ ಬೌಲರ್ ಎನಿಸಿಕೊಂಡರು. ಜೋಫ್ರಾ ಆರ್ಚರ್ ಕೇವಲ ಒಂದು ವಿಕೆಟ್ ಪಡೆದರು. ವಿಲ್ ಜ್ಯಾಕ್ 4 ಓವರ್‌ಗಳಲ್ಲಿ 40 ರನ್ ನೀಡಿ 2 ವಿಕೆಟ್ ಪಡೆದರೆ, ಅದಿಲ್ ರಶೀದ್ 4 ಓವರ್‌ಗಳಲ್ಲಿ 41 ರನ್ ಕೊಟ್ಟು 2 ವಿಕೆಟ್ ಪಡೆದರು. 254 ರನ್‌ಗಳ ಗೆಲುವಿನ ಗುರಿ ಪಡೆದ ಇಂಗ್ಲೆಂಡ್‌ನ ಆರಂಭ ಉತ್ತಮವಾಗಿರಲಿಲ್ಲ. ಕೇವಲ 13 ರನ್ ಆಗುವಷ್ಟರಲ್ಲಿ ಅದು ತನ್ನ ಮೊದಲ ವಿಕೆಟ್ ಕಳೆದುಕೊಂಡಿತು. ಫಿಲ್ ಸಾಲ್ಟ್ ಕೇವಲ 5 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ತಂಡದ ನಾಯಕ ಬ್ರೂಕ್ ಕೇವಲ 7 ರನ್ ಗಳಿಸಿ ಬುಮ್ರಾ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಆ ಬಳಿಕ ಜೇಕಬ್ ಬೆಥೆಲ್ ಮತ್ತು ಜೋಸ್ ಬಟ್ಲರ್ ನಡುವೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು.

ಬಟ್ಲರ್ 17 ಬಾಲ್‌ಗಳನ್ನು ಎದುರಿಸಿ 25 ರನ್ ಗಳಿಸಿ ಔಟ್ ಆದರು. ನಂತರ ಬಂದ ಬ್ಯಾಂಟನ್ 5 ಬಾಲ್‌ಗಳಲ್ಲಿ 17 ರನ್ ಗಳಿಸಿದ್ದ ವೇಳೆ ಅಕ್ಷರ್ ಪಟೇಲ್ ಬಾಲ್‌ನಲ್ಲಿ ಬೌಲ್ಡ್ ಆದರು. ವಿಲ್ ಜ್ಯಾಕ್ಸ್ 20 ಬಾಲ್‌ಗಳನ್ನು ಎದುರಿಸಿ 35 ರನ್ ಗಳಿಸಿ ತಮ್ಮ ವಿಕೆಟ್ ಕಳೆದುಕೊಂಡರು. ಜೇಕಬ್ ಬೆಥೆಲ್-ಸ್ಯಾಮ್ ಕರನ್ ಜೋಡಿ 6ನೇ ವಿಕೆಟ್‌ಗೆ ಇಂಗ್ಲೆಂಡ್‌ನ ಗೆಲುವಿನ ಆಸೆ ಚಿಗುರಿಸಿದರು. ಆದರೆ 18 ರನ್ ಗಳಿಸಿದ್ದ ಸ್ಯಾಮ್ ಕರನ್ ಪಾಂಡ್ಯ ಬಾಲ್‌ನಲ್ಲಿ ವಿಕೆಟ್ ಕಳೆದುಕೊಂಡರು. ಜೇಕಬ್ ಬೆಥೆಲ್ 47 ಬಾಲ್‌ಗಳಲ್ಲಿ ಶತಕ ಗಳಿಸಿ (105) ಕೊನೆಯ ಓವರ್‌ನಲ್ಲಿ ರನೌಟ್ ಆದರು. ಆ ಮೂಲಕ ಪಂದ್ಯದಲ್ಲಿ ಇಂಗ್ಲೆಂಡ್‌ನ ಗೆಲುವಿನ ಕನಸು ಮರೀಚಿಕೆಯಾಯಿತು.

ಜೋಸ್ ಬಟ್ಲರ್ ದಾಖಲೆ



ಮುಂಬೈ: ಭಾರತ ಹಾಗೂ ಇಂಗ್ಲೆಂಡ್ ನಡುವಿನ ಸೆಮಿಫೈನಲ್ ಪಂದ್ಯದ ಮೂಲಕ ಇಂಗ್ಲೆಂಡ್ ತಂಡದ ಜೋಸ್ ಬಟ್ಲರ್ ಹೊಸತೊಂದು ದಾಖಲೆ ಬರೆದರು. ಟಿ20 ವಿಶ್ವಕಪ್‌ನಲ್ಲಿ ಅತೀ ಹೆಚ್ಚು ಪಂದ್ಯಾವಳಿಗಳನ್ನು ಆಡಿದ ಆಟಗಾರರ ಸಾಲಿನಲ್ಲಿ ಬಾಂಗ್ಲಾದೇಶದ ಸಕಿಬ್ ಅಲ್ ಹಸನ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಗುರುವಾರದ ಪಂದ್ಯವು ಟಿ20 ವಿಶ್ವಕಪ್‌ನಲ್ಲಿ ಅವರ 43ನೇ ಪಂದ್ಯವಾಗಿತ್ತು. ಅಷ್ಟೇ ಪಂದ್ಯಗಳನ್ನು ಆಡಿರುವ ಸಕಿಬ್ ಅಲ್ ಹಸನ್ ಅವರ ದಾಖಲೆ ಸರಿಗಟ್ಟಿ ಬಟ್ಲರ್ ಜಂಟಿಯಾಗಿ ಎರಡನೇ ಸ್ಥಾನಕ್ಕೇರಿದ್ದಾರೆ. ಅಗ್ರಸ್ಥಾನದಲ್ಲಿ 47 ಟಿ20 ವಿಶ್ವಕಪ್ ಪಂದ್ಯಗಳನ್ನು ಆಡಿರುವ ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಮೊದಲಿಗರಾಗಿದ್ದಾರೆ. ಅತೀ ಹೆಚ್ಚು ಪಂದ್ಯಗಳ ಜತೆಗೆ, ಟಿ20 ವಿಶ್ವಕಪ್‌ನಲ್ಲಿ ಅತೀ ಹೆಚ್ಚು ಬಾರಿ ನಾಕೌಟ್ ಪಂದ್ಯಗಳನ್ನು ಆಡಿದ ಆಟಗಾರರ ಪಟ್ಟಿಯಲ್ಲೂ ಜೋಸ್ ಬಟ್ಲರ್ ಅವರು ಜಂಟಿಯಾಗಿ ಎರಡನೇ ಸ್ಥಾನಕ್ಕೇರಿದ್ದಾರೆ. ಈ ಸಾಧನೆಯನ್ನು 8 ಬಾರಿ ಮಾಡಿರುವ ರೋಹಿತ್ ಶರ್ಮಾ ಅಗ್ರಸ್ಥಾನದಲ್ಲಿದ್ದರೆ, 7 ಬಾರಿ ಈ ಸಾಧನೆ ಮಾಡಿರುವ ಕುಮಾರ ಸಂಗಾಕ್ಕರ, ಮಹೇಲಾ ಜಯವರ್ಧನೆ, ತಿಲಕರತ್ನ ದಿಲ್ಶಾನ್, ಲಸಿತ್ ಮಲಿಂಗ, ಅಂಜೆಲೊ ಮ್ಯಾಥ್ಯೂಸ್ ಸಾಲಿಗೆ ಜೋಸ್ ಬಟ್ಲರ್ ಗುರುವಾರ ಸೇರಿದ್ದಾರೆ.

ಅಭಿಷೇಕ್ ಮತ್ತೆ ವೈಫಲ್ಯ

ಮುಂಬೈ: ಇಂಗ್ಲೆಂಡ್ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿಯೂ ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಆ ಮೂಲಕ ಈ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರ ಬ್ಯಾಟಿಂಗ್ ವೈಫಲ್ಯ ಮುಂದುವರಿದಿದ್ದು, ಕ್ರಿಕೆಟ್ ಅಭಿಮಾನಿಗಳು ಅಸಮಾಧಾನಕ್ಕೆ ಕಾರಣರಾಗಿದ್ದಾರೆ. ಅವರು ಗುರುವಾರದ ಇನ್ನಿಂಗ್ಸ್‌ನಲ್ಲಿ ಆಡಿದ 7 ಎಸೆತಗಳಲ್ಲಿ 9 ರನ್ ಗಳಿಸಿದ ಬಳಿಕ ವಿಲ್ ಜ್ಯಾಕ್ಸ್‌ಗೆ ವಿಕೆಟ್ ಒಪ್ಪಿಸಿ ತಮ್ಮ ವಿಕೆಟ್ ಕೈ ಚೆಲ್ಲಿದರು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ 7 ಪಂದ್ಯ ಗಳಿಂದ ಅಭಿಷೇಕ್ ಶರ್ಮಾ ಕಲೆ ಹಾಕಿದ್ದು ಕೇವಲ 85 ರನ್‌ಗಳು ಮಾತ್ರ. ಅವರು ಕೇವಲ 14.16ರ ಸರಾಸರಿ ಹಾಗೂ 132.81ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ. ಅದರಲ್ಲಿ ಅವರು ಒಂದು ಅರ್ಧಶತಕವನ್ನು ಬಾರಿಸಿದ್ದಾರೆ. ಅಂದ ಹಾಗೆ ಟೂರ್ನಿಯ ಆರಂಭಿಕ ಮೂರು ಪಂದ್ಯಗಳಲ್ಲಿ ಕ್ರಮವಾಗಿ ಅಮೆರಿಕ, ಪಾಕಿಸ್ತಾನ ಹಾಗೂ ನೆದರ್ಲೆಂಡ್ ವಿರುದ್ಧ ಹ್ಯಾಟ್ರಿಕ್ ಬಾರಿ ಶೂನ್ಯಕ್ಕೆ ಔಟ್ ಆಗಿದ್ದರು.

ಒಂದ್ ಕಪ್ ಮಾತು

ಆಫ್ಘಾನ್‌ನಿಂದ ರಶೀದ್ ವಜಾ

ಕಾಬೂಲ್: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಫಘಾನಿಸ್ತಾನ ತಂಡ ಸೂಪರ್ 8 ಹಂತಕ್ಕೆ ಅರ್ಹತೆ ಪಡೆಯಲು ವಿಫಲವಾದ ಹಿನ್ನಲೆಯಲ್ಲಿ ಟಿ20 ತಂಡದ ನಾಯಕತ್ವದಿಂದ ರಶೀದ್ ಖಾನ್ ಅವರನ್ನು ವಜಾಗೊಳಿಸಲಾಗಿದೆ. ಯುಎಇಯಲ್ಲಿ ನಡೆಯಲಿರುವ ಶ್ರೀಲಂಕಾ ವಿರುದ್ಧದ ಸರಣಿಗಾಗಿ ಅಫಘಾನಿಸ್ತಾನ ಕ್ರಿಕೆಟ್ ಮಂಡಳಿಯು ಏಕದಿನ ಮತ್ತು ಟಿ20 ತಂಡಗಳನ್ನು ಪ್ರಕಟಿಸಿದೆ. ಟಿ20 ತಂಡದ ಹೊಸ ನಾಯಕರಾಗಿ ಇಬ್ರಾಹಿಂ ಝರ್ದಾನ್ ಅವರನ್ನು ನೇಮಕ ಮಾಡಲಾಗಿದೆ. ಟಿ20 ವಿಶ್ವಕಪ್‌ನ ಹೀನಾಯ ಸೋಲಿನ ಬಳಿಕ ಎಸಿಬಿ ಮುಖ್ಯ ಕಾರ್ಯನಿರ್ವಾಹಕ ನಸೀಬ್ ಖಾನ್, ತಂಡದೊಳಗಿನ ರಚನೆ ಮತ್ತು ನಾಯಕತ್ವದಲ್ಲಿ ಬದಲಾವಣೆಗಳ ಕುರಿತು ಚರ್ಚೆಗಳು ನಡೆಯುತ್ತಿವೆ ಎಂದು ಕೆಲ ದಿನಗಳ ಹಿಂದೆಯಷ್ಟೇ ದೃಢಪಡಿಸಿದ್ದರು.

ಸೆ.ಫೈನಲ್ ಸೋಲು: ಮಾರ್ಕ್ರಮ್ ಬೇಸರ

ಕೋಲ್ಕತಾ: ಬುಧವಾರ ಇಲ್ಲಿನ ಈಡೆನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ನ್ಯೂಜಿಲೆಂಡ್ ವಿರುದ್ಧದ ಸೆಮಿಫೈನಲ್ ಸೋಲು 'ನಿಜಕ್ಕೂ ದುರದೃಷ್ಟಕರ' ಎಂದು ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡೆನ್ ಮಾರ್ಕ್ರಮ್ ತಮ್ಮ ಬೇಸರ ಹೊರ ಹಾಕಿದ್ದಾರೆ. ನಾವೆಲ್ಲರೂ ನಿರಾಶೆಗೊಂಡಿದ್ದು, ನಮ್ಮ ಪರಾಭವದ ಬಗ್ಗೆ ಗುಂಪಾಗಿ ಚರ್ಚಿಸುತ್ತೇವೆ. ಪಂದ್ಯದ ಫಲಿತಾಂಶದಿಂದ ನಿಜಕ್ಕೂ ನಮಗೆ ಆಘಾತವಾಗಿದೆ. ನಮ್ಮ ತಂಡವು ಸೆಮಿಫೈನಲ್ ವರೆಗೂ ಅಜೇಯ ತಂಡವಾಗಿ ಆಡಿದ ಬಗ್ಗೆ ನಮಗೆ ಹೆಮ್ಮೆ ಇದೆ. ಬುಧವಾರದ ಸಂಜೆಯು ನಮ್ಮೆಲ್ಲರ ಪಾಲಿಗೆ ನಿಜಕ್ಕೂ ದುರದೃಷ್ಟವಾಗಿತ್ತು ಎಂದೂ ಅವರು ಹೇಳಿದರು.

ಮೈಕ್ ಹೇಸನ್ ವಿರುದ್ಧ ದೂರು

ಲಾಹೋರ್: ಟಿ20 ವಿಶ್ವಕಪ್‌ನಿಂದ ಪಾಕ್ ತಂಡ ಹೊರಬಿದ್ದ ನಂತರ, ಪಾಕ್ ಕ್ರಿಕೆಟ್ ಆಟಗಾರರು ತಂಡದ ಮುಖ್ಯ ಕೋಚ್ ಮೈಕ್ ಹೇಸನ್ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ. ಪಾಕ್ ತಂಡದ ನಾಯಕ ಸಲ್ಮಾನ್ ಅಲಿ ಅಘಾ ನೇತೃತ್ವದ ತಂಡದ ಆಟಗಾರರು ಮೈಕ್ ಹೇಸನ್ ಅವರ ಕಾರ್ಯ ವೈಖರಿಯ ಬಗ್ಗೆ ಪಿಸಿಬಿಗೆ ಅಧಿಕೃತವಾಗಿ ದೂರು ನೀಡಿದ್ದಾರೆ. ಹೆಸ್ಸನ್‌ರವರು ತಂಡದ ನಾಯಕ ಅಥವಾ ಆಯ್ಕೆ ಸಮಿತಿಯ ಯಾರನ್ನೂ ಸಂಪರ್ಕಿಸದೆ ತಾವೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು, ಅವರ ಆ ನಡವಳಿಕೆ ತುಂಬಾ ಕಠಿಣ ವಾಗಿತ್ತು ಎಂದು ಆಟಗಾರರು ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಟಿ20 ವಿಶ್ವಕಪ್‌ನ ಸೋಲಿಗೆ ಆಟಗಾರರು ಕಾರಣ ಅಲ್ಲ, ಅದಕ್ಕೆ ಮುಖ್ಯ ಕಾರಣ ಕೋಚ್ ಮೈಕ್ ಹೇಸನ್ ಎಂದು ಪಾಕ್ ಆಟಗಾರರು ಆರೋಪಿಸಿದ್ದಾರೆ.

ದಾಂಪತ್ಯ ಜೀವನಕ್ಕೆ ಕಾಲಿರಿಸಿದ ವೈಶಾಖ್

ಬೆಂಗಳೂರು: ಟೀಮ್ ಇಂಡಿಯಾ ಮತ್ತು ಕರ್ನಾಟಕದ ವೇಗದ ಬೌಲರ್ ವೈಶಾಖ್ ವಿಜಯ್ ಕುಮಾರ್ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಗುರುವಾರ ಬೆಂಗಳೂರಿನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಅವರು ತಮ್ಮ ದೀರ್ಘ ಕಾಲದ ಗೆಳತಿ ಸಾಗರಿಕಾ ಅವರನ್ನು ವಿವಾಹವಾದರು. ಆಪ್ತ ಕುಟುಂಬ ಸದಸ್ಯರು, ಸ್ನೇಹಿತರು ಮತ್ತು ಕ್ರಿಕೆಟ್ ಗಣ್ಯರ ಸಮ್ಮುಖದಲ್ಲಿ ವಿವಾಹ ಕಾರ್ಯಕ್ರಮ ನಡೆಯಿತು. ಸ್ಯಾಂಡಲ್‌ವುಡ್ ಸ್ಟಾರ್ ನಟ ಕಿಚ್ಚ ಸುದೀಪ್ ಸಮಾರಂಭದಲ್ಲಿ ಭಾಗವಹಿಸಿ ನವವಿವಾಹಿತರಿಗೆ ಶುಭ ಹಾರೈಸಿದರು. ಕರ್ನಾಟಕ ರಣಜಿ ಕ್ರಿಕೆಟ್ ತಂಡದ ನಾಯಕ ದೇವದತ್ ಪಡಿಕ್ಕಲ್ ಮತ್ತು ಪ್ರಸಿದ್ಧ್ ಕೃಷ್ಣ ಕೂಡಾ ಪಾಲ್ಗೊಂಡು ನವಜೋಡಿಗೆ ಶುಭ ಹಾರೈಸಿದರು.

ಅರ್ಜುನ್-ಚಾಂದೋಕ್ ಅದ್ದೂರಿ ವಿವಾಹ

ಮುಂಬೈ: ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಮತ್ತು ಸಾನಿಯಾ ಚಾಂದೋಕ್ ಅವರ ವಿವಾಹ ಸಮಾರಂಭ ಅದ್ದೂರಿಯಾಗಿ ನಡೆದಿದ್ದು ಅದರ ವಿಡಿಯೋ ಹೊರಬಿದ್ದಿದೆ.

ಅರ್ಜುನ್ ಮತ್ತು ಸಾನಿಯಾ ಪರಸ್ಪರ ಹಾರ ಹಾಕುತ್ತಿ ರುವ ವಿಡಿಯೊ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ. ಹಲವು ಕ್ರಿಕೆಟಿಗರು ಮತ್ತು ಸೆಲೆಬ್ರಿಟಿಗಳೂ ಸೇರಿ ದಂತೆ ಅನೇಕ ಗಣ್ಯರು ವಿವಾಹ ಸಮಾ ರಂಭದಲ್ಲಿ ಭಾಗವಹಿಸಿದ್ದರು. ವಿಡಿಯೊ ದಲ್ಲಿ ಅರ್ಜುನ್ ಮತ್ತು ಸಾನಿಯಾ ಕೆಂಪು ಬಣ್ಣದ ಉಡುಪುಗಳನ್ನು ಧರಿಸಿದ್ದಾರೆ. ಅರ್ಜುನ್ ಕೆಂಪು ಬಣ್ಣದ ಕುರ್ತಾ ಧರಿಸಿ ದ್ದರೆ, ಸಾನಿಯಾ ಸುಂದರವಾದ ಕೆಂಪು ಬಣ್ಣದ ಸೀರೆಯನ್ನು ಧರಿಸಿದ್ದಾರೆ. ತೆಂಡೂ ಲ್ಕರ್ ಕುಟುಂಬವಿಡೀ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿದೆ. ಮಾರ್ಚ್ 3ರಂದು ಮುಂಬೈನ ಮಹಾಲಕ್ಷ್ಮೀ ರೇಸ್ ಕೋರ್ಸ್‌ನಲ್ಲಿ ಮೆಹಂದಿ ಸಮಾರಂಭ ನಡೆದಿತ್ತು, ಅಲ್ಲಿಯೂ ಅನೇಕ ಕ್ರಿಕೆಟ್ ದಿಗ್ಗಜರು ಉಪಸ್ಥಿತರಿದ್ದರು. ಸಚಿನ್ ಅವರ ಆಪ್ತರು, ಇತರ ಕ್ರಿಕೆಟಿಗರು ಮತ್ತು ಸೆಲೆಬ್ರಿಟಿಗಳೂ ಮೆಹಂದಿ ಸಮಾರಂಭದಲ್ಲಿ ಭಾಗವಹಿಸಿದ್ದರು. ರವಿಶಾಸ್ತ್ರಿ, ಯುವ ರಾಜ್ ಸಿಂಗ್, ಹರ್ಭಜನ್ ಸಿಂಗ್, ಜಹೀರ್ ಖಾನ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಸುನಿಲ್ ಗವಾಸ್ಕರ್, ಎಂಎಸ್ ಧೋನಿ, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್ ಮತ್ತು ಅಜಿತ್ ಅಗರ್ಕರ್ ಸೇರಿದಂತೆ ಹಲವರು ವಿವಾಹ ಮತ್ತು ಮೆಹಂದಿ ಸಮಾರಂಭದಲ್ಲಿ ಭಾಗವಹಿಸಿದ್ದಾರೆ.

ಸಚಿನ್ ದಂಪತಿ ಜತೆ ವಧುಮಕ್ಕಳು.

ಪಾಕ್ ಆಟಗಾರರಿಗೆ ದಂಡ

ಕರಾಚಿ: ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ತಂಡದ ನಿರಾಶಾದಾಯಕ ಅಭಿಯಾನದ ನಂತರ ಹೊಸ ವಿವಾದಕ್ಕೆ ತಂಡ ಸಿಲುಕಿದೆ. ಲಂಕಾದಲ್ಲಿ ತಂಡ ತಂಗಿದ್ದಾಗ ಹೋಟೆಲ್‌ನ ಮಹಿಳಾ ಸಿಬ್ಬಂದಿಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಪಾಕಿಸ್ತಾನ ಆಟಗಾರನಿಗೆ ದಂಡ ವಿಧಿಸಲಾಗಿದೆ.

ಪಾಕಿಸ್ತಾನ ಮತ್ತು ಶ್ರೀಲಂಕಾ ನಡುವಿನ ಅಂತಿಮ ಸೂಪರ್ ಎಂಟರ ಪಂದ್ಯದ ಸ್ವಲ್ಪ ಮೊದಲು ಕ್ಯಾಂಡಿಯಲ್ಲಿ ಈ ಘಟನೆ ನಡೆದಿದೆ ಎಂದು ತಿಳಿದುಬಂದಿದೆ. ವರದಿಯ ಪ್ರಕಾರ, ಪಾಕಿಸ್ತಾನ ತಂಡವು ತಂಗಿದ್ದ ಗೋಲ್ಡನ್ ಕ್ರೌನ್ ಹೋಟೆಲ್‌ನಲ್ಲಿ ಈ ಘಟನೆ ನಡೆದಿತ್ತು. ಪಾಕಿಸ್ತಾನ ವಿಶ್ವಕಪ್ ತಂಡದ ಆಟಗಾರ ಹೋಟೆಲ್‌ನಲ್ಲಿ ಮಹಿಳಾ ಸಿಬ್ಬಂದಿಯೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ. ಸಿಬ್ಬಂದಿ ಎಚ್ಚರಿಕೆ ನೀಡಿ ಸಹಾಯಕ್ಕಾಗಿ ಕರೆ ಮಾಡಿದಾಗ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಹೋಟೆಲ್‌ನ ಇತರ ಉದ್ಯೋಗಿಗಳು ಮಧ್ಯಪ್ರವೇಶಿಸಿ ಈ ವಿಷಯವನ್ನು ಪಾಕಿಸ್ತಾನ ತಂಡದ ವ್ಯವಸ್ಥಾಪಕ ನವೀದ್ ಚೀಮಾ ಅವರಿಗೆ ವರದಿ ಮಾಡಲಾಯಿತು.

ತವರಿಗೆ ಮರಳಿದ ಜಿಂಬಾಬ್ವೆ

ದೆಹಲಿ: ಕೆಲವು ವಿದೇಶ ವಾಯುನೆಲೆಗಳು ಮುಚ್ಚಿದ ಕಾರಣಕ್ಕಾಗಿ ಭಾರತದಲ್ಲಿ ಸಿಲುಕಿ ಕೊಂಡಿದ್ದ ಜಿಂಬಾಬ್ವೆ ಕ್ರಿಕೆಟಿಗರ ಒಂದು ಗುಂಪು ತವರಿಗೆ ತೆರಳಿತು. ಐಸಿಸಿ ವಿಶೇಷ ಪ್ರಯಾಣ ವ್ಯವಸ್ಥೆಗಳನ್ನು ಪುನರ್ರಚಿಸಿದ ನಂತರ ಜಿಂಬಾಬ್ವೆ ತಂಡದ ಕೆಲ ಆಟಗಾರರಿಗೆ ತಮ್ಮ ದೇಶಕ್ಕೆ ತೆರಳಲು ಸಾಧ್ಯವಾಗಿದೆ. ಆದರೆ ವೆಸ್ಟ್ ಇಂಡೀಸ್ ತಂಡದ ಆಟಗಾರರು ಇನ್ನೂ ಕೆಲ ದಿನಗಳ ಕಾಲ ಭಾರತದಲ್ಲೇ ಉಳಿಯಬೇಕಿದೆ.

ಜಿಂಬಾಬ್ವೆ ತಂಡವು ಮಾರ್ಚ್ 2ರಂದು ಭಾರತದಿಂದ ಹೊರಡಬೇಕಿತ್ತು, ಆದರೆ ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಯ ನಂತರ ಗಲ್ಫ್ ಪ್ರದೇಶದಲ್ಲಿ ವಾಯುಪ್ರದೇಶ ಮುಚ್ಚಲ್ಪಟ್ಟ ಕಾರಣ ದೆಹಲಿಯಲ್ಲಿ ಸಿಲುಕಿಕೊಂಡಿತ್ತು. ಮೊದಲ ಬ್ಯಾಚ್‌ನ ಆಟಗಾರರು ಅಂತಿಮವಾಗಿ ಬುಧವಾರ ಪರ್ಯಾಯ ವಿಮಾನಗಳಲ್ಲಿ ಮನೆಗೆ ತೆರಳಿದರು. ಈ ವಿಚಾರವನ್ನು ಜಿಂಬಾಬ್ವೆ ಕ್ರಿಕೆಟ್ ಮಂಡಳಿ ತನ್ನ ಅಧಿಕೃತ ಟ್ವಿಟರ್ ಎಕ್ಸ್ ಖಾತೆಯಲ್ಲಿ ತಿಳಿಸಿದೆ.

ಇತ್ತೀಚಿನ ವಿಮಾನ ಸಾರಿಗೆ ಅಡಚಣೆಗಳ ನಂತರ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಪರ್ಯಾಯ ಪ್ರಯಾಣ ವ್ಯವಸ್ಥೆಗಳನ್ನು ಏರ್ಪಡಿಸಿದ ಕಾರಣ, ತಂಡವು ಭಾರತದಿಂದ ತವರಿಗೆ ತೆರಳುತ್ತಿದೆ ಎಂದು ಜಿಂಬಾಬ್ವೆ ಕ್ರಿಕೆಟ್ ದೃಢಪಡಿಸಿದೆ. ವಿಮಾನ ಲಭ್ಯತೆ ಮತ್ತು ಪರಿಷ್ಕೃತ ಮಾರ್ಗ ನಿರ್ದೇಶನದಿಂದಾಗಿ, ತಂಡವು ಬ್ಯಾಚ್‌ಗಳಲ್ಲಿ ಹರಾರೆಗೆ ಹಿಂತಿರುಗಲಿದೆ. ಮೊದಲ ಗುಂಪಿನ ಆಟಗಾರರು ಬುಧವಾರ ಭಾರತದಿಂದ ಹೊರಟಿದ್ದರೂ, ಅಂತಿಮ ಗುಂಪು ಶುಕ್ರವಾರ ಮಧ್ಯಾಹ್ನ ಹೊರಡಲಿದೆ ಎಂದು ಅದು ಹೇಳಿದೆ. ಜಿಂಬಾಬ್ವೆಯ ಮೂಲ ಪ್ರಯಾಣ ಮಾರ್ಗವು ದುಬೈ ಮೂಲಕ ನಿಗದಿಯಾಗಿತ್ತು, ಆದರೆ ಅದನ್ನು ಬದಲಾಯಿಸಬೇಕಾಯಿತು. ಅದು ಈಗ ಇಥಿಯೋಪಿಯಾದ ಅಡಿಸ್ ಅಬಾಬಾ ಮೂಲಕ ಹರಾರೆಗೆ ಪ್ರಯಾಣಿಸಿದೆ.

ಐಟಿಎಫ್‌ಡಬ್ಲ್ಯೂ 35 ಕಲಬುರಗಿ | ಭಾರತದ ಪ್ರಶಸ್ತಿ ಆಸೆ ಜೀವಂತ | ಹೋರಾಡಿ ಸೋತ ಜೀಲ್ ದೇಸಾಯಿ

ಅಂಕಿತ ರೈನಾ, ವೈಷ್ಣವಿ ಅಡ್ಕರ್ ಕ್ವಾ.ಫೈನಲ್‌ಗೆ

ದೇವೇಂದ್ರ ಜಾಡಿ ಕಲಬುರಗಿ

ಇಲ್ಲಿನ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್‌ಡಬ್ಲ್ಯೂ35 ಕಲಬುರಗಿ ಮಹಿಳಾ ಸಿಂಗಲ್ಸ್ ಟೆನಿಸ್ ಟೂರ್ನಿಯಲ್ಲಿ ಭಾರತದ ಆಟಗಾರ್ತಿಯರು ಗುರುವಾರ ಅಮೋಘ ಪ್ರದರ್ಶನ ನೀಡಿದ್ದು, ಪ್ರೀ-ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಅಂಕಿತ ರೈನಾ ಹಾಗೂ ಉದಯೋನ್ಮುಖ ತಾರೆ ವೈಷ್ಣವಿ ಅಡ್ಕರ್ ಎದುರಾಳಿಗಳನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮೊರೆಹೋದ ವೈಷ್ಣವಿ, 6-2, 6-0 ಅಂತರದಲ್ಲಿ ಜಯ ಸಾಧಿಸಿದರು. ವಿಶೇಷವಾಗಿ 2ನೇ ಸೆಟ್‌ನಲ್ಲಿ ಎದುರಾಳಿಗೆ ಒಂದೂ ಅಂಕ ಬಿಟ್ಟುಕೊಡದೆ ವೈಷ್ಣವಿ ಅನ್ನಾ ಸೆಡಿಶೇವಾ ವಿರುದ್ಧ ಕೇವಲ 55 ನಿಮಿಷಗಳಲ್ಲಿ ಪಂದ್ಯ ಮುಗಿಸಿ ಭಾರತದ ಟ್ರೋಫಿ ಗೆಲ್ಲುವ ಆಸೆಯನ್ನು ಜೀವಂತವಾಗಿರಿಸಿದ್ದಾರೆ.

ಅಂಕಿತ ಪಾರಮ್ಯ: ಟೂರ್ನಿಯ 8ನೇ ಶ್ರೇಯಾಂಕಿತೆ ಅಂಕಿತ ರೈನಾ, ಉಜ್ಬೇಕಿಸ್ತಾನದ ಮಿಲಾನಾ ಮಸ್ಲೆಂಕೋವಾ ವಿರುದ್ಧ ಸುಮಾರು 1 ಗಂಟೆ 21 ನಿಮಿಷಗಳ ಕಾಲ ಬೆವರು ಹರಿಸಿ 6-2, 6-1 ನೇರ ಸೆಟ್‌ಗಳಿಂದ ಜಯಭೇರಿ ಬಾರಿಸಿದರು. ಶಿಸ್ತಿನ ಸರ್ವ್ ಹಾಗೂ ಚಾಣಾಕ್ಷ ರಿಟರ್ನ್ಸ್‌ಗಳ ಮೂಲಕ ಅಂಕಿತ ಎದುರಾಳಿಗೆ ಯಾವುದೇ ಹಂತದಲ್ಲೂ ತಿರುಗಿಬೀಳಲು ಅವಕಾಶ ನೀಡಲಿಲ್ಲ.

ಜೀಲ್ ದೇಸಾಯಿಗೆ ನಿರಾಸೆ: ಇದೇ ವೇಳೆ ನಡೆದ ಮತ್ತೊಂದು ಜಿದ್ದಾಜಿದ್ದಿನ ಪಂದ್ಯದಲ್ಲಿ ಭಾರತದ ಜೀಲ್ ದೇಸಾಯಿ ಅವರು ಎಲಿನಾ ನೆಪ್ಲಿ ವಿರುದ್ಧ ತೀವ್ರ ಹೋರಾಟ ನೀಡಿ ಸೋಲೊಪ್ಪಿಕೊಂಡರು. ಸುಮಾರು 1 ಗಂಟೆ 49 ನಿಮಿಷ ನಡೆದ ಈ ಪಂದ್ಯದಲ್ಲಿ, ಒಂದು ಪಾಯಿಂಟ್‌ಗಾಗಿ ಇಬ್ಬರೂ ಆಟಗಾರ್ತಿಯರು 15 ನಿಮಿಷಗಳ ಕಾಲ ಸೆಣಸಾಡಿದ್ದು ಟೂರ್ನಿಯ ಕಾವನ್ನು ಹೆಚ್ಚಿಸಿತ್ತು.

ಸಿಂಗಲ್ಸ್ ಪ್ರೀ ಕ್ವಾಟರ್ ಪಂದ್ಯದಲ್ಲಿ ಅಂಕಿತಾ ಹಾಗೂ ವೈಷ್ಣವಿ ಆಟ.

ಚಿತ್ರ: ದೀಪ್ತಿ ಇಂದುಕುರಿ

ಐಟಿಎಫ್ ಟೂರ್ನಿಯಲ್ಲಿ ಫೈನಲ್ ಬಗ್ಗೆ ಈಗಲೇ ಯೋಚಿಸದೆ, ಒಂದೊಂದು ಪಂದ್ಯವನ್ನೇ ಸವಾಲಾಗಿ ಸ್ವೀಕರಿಸುತ್ತಿರುವುದು ಯಶಸ್ಸು ತಂದಿದೆ. ಕಲಬುರಗಿಯ ತಾಪಮಾನಕ್ಕೆ ಭಾರತೀಯಳಾಗಿ ನಾನು ಹೊಂದಿಕೊಂಡಿದ್ದೇನೆ, ಹೈಡ್ರೇಟ್ ಆಗಿರುವುದು ಇಲ್ಲಿ ಮುಖ್ಯ. ಎದುರಾಳಿಯ ಶಕ್ತಿ ಅರಿತು ಆಡುತ್ತಿದ್ದು, ಬೆಂಬಲಿಗರು ಮತ್ತು ಪೋಷಕರನ್ನು ಖುಷಿಪಡಿಸಲು ಉತ್ತಮ ಪ್ರದರ್ಶನ ನೀಡುವತ್ತ ನನ್ನ ಗಮನವಿದೆ.

-ವೈಷ್ಣವಿ ಅಡ್ಕರ್,
ಭಾರತೀಯ ಟೆನಿಸ್ ಆಟಗಾರ್ತಿ

ಕಲಬುರಗಿಯಂತಹ ಸಣ್ಣ ನಗರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿ ಆಯೋಜಿಸುತ್ತಿರುವುದು ಮಹಿಳಾ ಕ್ರೀಡೆಗೆ ನೀಡುತ್ತಿರುವ ದೊಡ್ಡ ಪ್ರೋತ್ಸಾಹ. ಇದು ಅತ್ಯಂತ ಉತ್ತಮ ಬೆಳವಣಿಗೆಯಾಗಿದ್ದು, ಸ್ಥಳೀಯ ಪ್ರತಿಭೆಗಳಿಗೆ ಸ್ಫೂರ್ತಿ ನೀಡಲಿದೆ. ಪಂದ್ಯದ ವೇಳೆ ಬಿಸಿಲಿದ್ದರೂ ಪ್ಲಾನ್ 'ಎ' ಮತ್ತು 'ಬಿ' ಸಿದ್ಧವಿದ್ದ ಕಾರಣ ಗೆಲುವು ಸುಲಭವಾಯಿತು.

-ಅಂಕಿತಾ ರೈನಾ,
ಭಾರತೀಯ ಟೆನಿಸ್ ಆಟಗಾರ್ತಿ

ರೋಹಿತ್-ಕೊಹ್ಲಿಗಾಗಿ ಕೆಲ ಬದಲಾವಣೆ | ವರ್ಷ ಪೂರ್ತಿ ಸಕ್ರಿಯರಾಗಲಿರುವ ರೋಕೊ ಜೋಡಿ

ಏಕದಿನ ಪಂದ್ಯ ಹೆಚ್ಚಿಸಲು ಬಿಸಿಸಿಐ ಚಿಂತನೆ

ದೆಹಲಿ: ಭಾರತದ ಸ್ಟಾರ್ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಟಿ20 ಮತ್ತು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಹೇಳಿದ ಬಳಿಕ ಇಬ್ಬರನ್ನೂ ಟೀಮ್ ಇಂಡಿಯಾದಲ್ಲಿ ಕಾಣುವುದೇ ಅಪರೂಪವಾಗಿಬಿಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತ ಕಡಿಮೆ ಸಂಖ್ಯೆಯ ಏಕದಿನ ಪಂದ್ಯಗಳನ್ನು ಆಡುತ್ತಿರುವುದರಿಂದ ವರ್ಷದಲ್ಲಿ ಕೆಲವೇ ಪಂದ್ಯಗಳಷ್ಟೇ ಅವರಿಬ್ಬರೂ ಸೀಮಿತರಾಗಿದ್ದಾರೆ.

ಆ ಕೊರತೆಯನ್ನು ಹೋಗಲಾಡಿಸಲು ಮತ್ತು 2027ರ ಏಕದಿನ ವಿಶ್ವಕಪ್‌ಗೆ ಮುಂಚಿತವಾಗಿ ಭಾರತ ತಂಡ ಹೆಚ್ಚು ಏಕದಿನ ಪಂದ್ಯಗಳನ್ನು ಆಡಿ ಅಭ್ಯಾಸ ಆಗಬೇಕೆಂಬ ಕಾರಣಕ್ಕೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಇದೀಗ ತನ್ನ ಮುಂದಿನ ವೇಳಾಪಟ್ಟಿಯಲ್ಲಿ ಕೆಲ ಬದಲಾವಣೆಯನ್ನು ಮಾಡಲು ಹೊರಟಿದ್ದು, ಟಿ20 ಪಂದ್ಯಗಳ ಬದಲಾಗಿ ಏಕದಿನ ಪಂದ್ಯಗಳ ಸಂಖ್ಯೆಯನ್ನು ಹೆಚ್ಚಿಸಲು ಚಿಂತನೆ ನಡೆಸಿದೆ.

ಇದರ ಮೊದಲ ನಡೆಯಾಗಿ ಬಿಸಿಸಿಐಯು ಈಗಾಗಲೇ ಭಾರತ ಮತ್ತು ಅಫಘಾಸ್ತಾನ ಸರಣಿಯಲ್ಲಿ ತನ್ನ ಕಾರ್ಯಯೋಜನೆಯನ್ನು ಜಾರಿಗೆ ತಂದಿದೆ. ಅಫಘಾನಿಸ್ತಾನ ತಂಡವು ಭಾರತದಲ್ಲಿ ಈ ಜೂನ್‌ನಲ್ಲಿ ಏಕೈಕ ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಹೀಗಾಗಿ ಐಪಿಎಲ್ ಮುಗಿದೊಡನೆ ಭಾರತದ ಕ್ರಿಕೆಟ್‌ಪ್ರೇಮಿಗಳು ತಮ್ಮ ನೆಚ್ಚಿನ ತಾರೆಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿಯನ್ನು ಆ ಸರಣಿಯಲ್ಲಿ ಭಾರತ ತಂಡದ ಜೆರ್ಸಿಯಲ್ಲಿ ನೋಡಬಹುದಾಗಿದೆ. ನಂತರ ಭಾರತವು ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಯನ್ನು ಆಡಲಿದ್ದು, ಅಲ್ಲೂ ರೋಕೊ ಜೋಡಿ ಕ್ರಿಕೆಟ್‌ಪ್ರೇಮಿಗಳ ಅಭಿಮಾನಕ್ಕೆ ಪಾತ್ರರಾಗಲಿದ್ದಾರೆ.

ವರ್ಷಾಂತ್ಯದಲ್ಲಿ ಕಿವೀಸ್ ಪ್ರವಾಸ: ಈ ವರ್ಷದ ಕೊನೆಯಲ್ಲಿ ಭಾರತ ತಂಡ ನ್ಯೂಜಿಲೆಂಡ್ ಪ್ರವಾಸವನ್ನು ಕೈಗೊಳ್ಳಲಿದೆ. ಅಲ್ಲಿ ಐದು ಟಿ20 ಪಂದ್ಯ, ಎರಡು ಏಕದಿನ ಮತ್ತು ಎರಡು ಟೆಸ್ಟ್‌ಗಳನ್ನು ಆಡುವುದೆಂದು ಈ ಹಿಂದೆ ನಿಗದಿಯಾಗಿತ್ತು. ಆದರೆ ಇದೀಗ ಬಿಸಿಸಿಐಯು ಟಿ20 ಸರಣಿಯನ್ನು 5ರಿಂದ 3 ಪಂದ್ಯಕ್ಕೆ ಇಳಿಸಿ, ಏಕದಿನ ಸರಣಿಯಲ್ಲಿನ ಪಂದ್ಯಗಳನ್ನು ಎರಡರಿಂದ 4ಕ್ಕೇರಿಸುವ ಬಗ್ಗೆ ಚಿಂತನೆ ನಡೆಸುತ್ತಿದೆ. ಈ ಬಗ್ಗೆ ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿಯ ಜತೆಗೆ ಮಾತುಕತೆ ನಡೆಸಿದೆ. ಈ ಬಗ್ಗೆ ಬಿಸಿಸಿಐ ಆಗಲಿ, ನ್ಯೂಜಿಲೆಂಡ್ ಕ್ರಿಕೆಟ್ ಮಂಡಲಿಯಾಗಲಿ ಈವರೆಗೂ ಅಧಿಕೃತವಾಗಿ ಘೋಷಣೆ ಮಾಡಿಲ್ಲ, ಆದರೂ ಶೀಘ್ರವಾಗಿ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಬರುವ ಸಾಧ್ಯತೆ ಇದೆ.

ರೋಕೊಗೆ 2027ರ ವಿಶ್ವಕಪ್ ಆಡುವ ಇರಾದೆ

ಭಾರತ ಕ್ರಿಕೆಟ್‌ನ ದಿಗ್ಗಜ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ 2024ರಲ್ಲಿ ಟಿ20 ವಿಶ್ವಕಪ್ ಗೆದ್ದ ಬಳಿಕ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಭಾರತ ತಂಡ ಕಳೆದ ವರ್ಷ ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿ 3-1 ಅಂತರದಿಂದ ಹೀನಾಯವಾಗಿ ಪರಾಭವಗೊಂಡ ಬಳಿಕ ಟೆಸ್ಟ್ ಕ್ರಿಕೆಟ್‌ನಿಂದಲೂ ಅವರಿಬ್ಬರೂ ನಿವೃತ್ತಿಯಾಗಿದ್ದಾರೆ. ಇದೀಗ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಭಾರತ ತಂಡವನ್ನು ಪ್ರತಿನಿಧಿಸುತ್ತಿದ್ದು 2027ರ ಏಕದಿನ ವಿಶ್ವಕಪ್ ವರೆಗೂ ಆಡುವ ಬಯಕೆ ಹೊಂದಿದ್ದಾರೆ. ಹಾಗಾಗಿ ಭಾರತ ತಂಡವು ಇನ್ನೂ ಒಂದು ವರ್ಷ ಕಾಲ ಏಕದಿನ ವಿಶ್ವಕಪ್‌ಗೆ ಪೂರಕವಾಗಿ ಹೆಚ್ಚಿನ ಸರಣಿಗಳಲ್ಲಿ ಏಕದಿನ ಪಂದ್ಯಗಳನ್ನು ಹೆಚ್ಚಿಸುವ ಉಮೇದಿನಲ್ಲಿದೆ.